ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಬುಧವಾರ ದಿನಾಂಕ ೨೫ನೇ ಮೇ ೧೯೮೮ ಜೇಷ್ಠ. ೪, ೧೯೧೦, ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೦-೧೦ ಗಂಟೆಗೆ ಸಮಾವೇಶಗೊಂಡಿತು.

[**ಅಧ್ಯಕ್ಷರು** (ಶ್ರೀ ಬಿ. ಜಿ. ಬಣಕಾರ್) ಅವರು ಪೀಠವನ್ನು ಅಲಂಕರಿಸಿದರು].

ವಿತ್ತೀಯ ಕಾರ್ಯಕಲಾಪಗಳು

೧೯೮೮-೮೯ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ

ಬೇಡಿಕೆಗಳ ಕ್ರ.ಸಂ. ೩೫, ೩೬, ೪೪, ೫೦, ೫೧, ೫೨, ಮತ್ತು ೫೩ (ಕಂದಾಯ, ಯೋಜನೆ ಮತ್ತು ನೀರಾವರಿ ಇಲಾಖೆಗಳು)

ಶ್ರೀ ಆರ್. ಧರ್ಮಸಿಂಗ್ (ಜೇವರ್ಗಿ),—ಮಾನ್ಯ ಅಧ್ಯಕ್ಷರೇ, ಈ ದಿನ ಸದನದಲ್ಲಿ ಕಂದಾಯ ಪ್ಲಾನಿಂಗ್ ಮತ್ತು ಇರಿಗೇಷನ್ ಇಲಾಖೆಗಳಿಗೆ ಸಂಬಂಧಪಟ್ಟ ಬೇಡಿಕೆಗಳನ್ನು ಶ್ರೀಮಾನ್ ಎಸ್. ಆರ್. ಬೊಮ್ಮಾಯಿಯವರು ಮಂಡಿಸಿದ್ದಾರೆ. ಈ ಬೇಡಿಕೆಗಳನ್ನು ನಾನು ವಿರೋಧಿಸಿ ಕೆಲವು ಸಲಹೆ ಸೂಚನೆಗಳನ್ನು ಕೊಡಬಯಸುತ್ತಿದ್ದೇನೆ. ಇವೊತ್ತು ನಾನು ಇರಿಗೇಷನ್ ಮತ್ತು ಕಂದಾಯ ಬೇಡಿಕೆಯ ಮೇಲೆ ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ಏಕೆಂದರೆ ಈಗಾಗಲೇ ನಮ್ಮ ಖರ್ಗೆಯವರು, ಮಾನ್ಯ ಶ್ರೀನಿವಾಸ್‌ರವರು ಹಾಗೂ ಬಹಳಷ್ಟು ಸದಸ್ಯರು ಮಾತನಾಡಿದ್ದಾರೆ. ಇವೊತ್ತು ಪ್ಲಾನಿಂಗ್ ಇಲಾಖೆ ಕೂಡ ತಮ್ಮ ಕಡೆ ಇದೆ. You are the experienced Minister in the Cabinet. ಕ್ಯಾಬಿನೆಟ್ ಸಚಿವರಾಗಿ ಹಾಗೂ ರಾಜ್ಯದಲ್ಲಿ ಹಿಂದೆ ವಿರೋಧ ಪಕ್ಷದ ನಾಯಕರಾಗಿ ಎಲ್ಲಾ ವಿಷಯಗಳ ಬಗ್ಗೆ ತಮಗೆ ಮಾಹಿತಿ ಇದೆ. ನಾನು ಪ್ಲಾನಿಂಗ್ ಡಿಪಾರ್ಟ್‌ಮೆಂಟ್ ಬಗ್ಗೆ ನಿಮ್ಮಿಂದ expected a lot from you. ನಮ್ಮ ರಾಜ್ಯದ ಎಲ್ಲಾ ಡಿಪಾರ್ಟ್‌ಮೆಂಟ್‌ಗಳ ಪ್ಲಾನಿಂಗ್ ಮಾಡತಕ್ಕ ವೇಳೆಯಲ್ಲಿ ಸಮಗ್ರವಾಗಿ ಈ ಒಂದು ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಜನಸಾಮಾನ್ಯರ, ಜನರ ಸಮಸ್ಯೆಗಳು ಏನಿವೆ, ಆ ಸಮಸ್ಯೆಗಳನ್ನು ಬಗೆಹರಿಸತಕ್ಕ ರೀತಿಯಲ್ಲಿ ನಾನು ದೀರ್ಘವಾಗಿ ೧೯೮೩-೮೫ರಲ್ಲಿ ಎಲ್ಲಾ ಕಡೆ ತಮ್ಮ ಭಾಷಣವನ್ನು ಕೇಳಿದ್ದೇನೆ. You had that opportunity. ಈ ಪ್ಲಾನಿಂಗ್ ಇಲಾಖೆಯಲ್ಲಿ ಆಫೀಸರ್ಸ್‌ಗಳು ಏನು ಇದ್ದಾರೆ, ಅವರುಗಳು, ತಮ್ಮ ಇರುವಿಕೆಯನ್ನು ಜಸ್ಟಿಫೈ ಮಾಡುವುದಕ್ಕೋಸ್ಕರ ಹಾಗೆ ಹೀಗೆ ಎಂದು ಅನೇಕ ಸ್ಕೀಮ್‌ಗಳನ್ನು ಮಾಡಿದ್ದಾರೆ ಪಂಡಿತ್ ಜವಾಹರ್‌ಲಾಲ್ ಕಾಲದಲ್ಲಿ ಈ ಫೈವ್ ಇಯರ್ ಪ್ಲಾನ್ಸ್ ಪ್ರಾರಂಭ ಆಗಿದ್ದು. ಇವೊತ್ತು ೭ನೇ ಪಂಚ ವಾರ್ಷಿಕ ಯೋಜನೆ ೯೦ ರೊಳಗ ಮುಗಿಯುವುದಕ್ಕೆ ಬಂದಿದೆ. ೮ನೇ ಪಂಚ ವಾರ್ಷಿಕ ಯೋಜನೆ ಬಗ್ಗೆ ಸಹ ಮಾನ್ಯ ಪ್ರಧಾನ ಮಂತ್ರಿಯವರು ನಿನ್ನೆ ಸಮಾಲೋಚನೆ ಮಾಡಿದ್ದಾರೆ. ಅದಕ್ಕೇ ನೀವು ನಮ್ಮ ರಾಜ್ಯದ ಹಿತದೃಷ್ಟಿಯಿಂದ ರಾಷ್ಟ್ರೀಯ ಅಭಿವೃದ್ಧಿ ಮಂಡಲಿಯಲ್ಲಿ ಪ್ರತಿಪಾದನೆ ಮಾಡಿ ೯೦೦ ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿಸಿಕೊಂಡು ಬಂದಿದ್ದೀರಿ. ಈ ಕೆಲವು ವಿವರಗಳನ್ನು ನೀವು ಅಂಕಿ ಅಂಶಗಳ ಸಮೇತ ನಿಮ್ಮ ವಾರ್ಷಿಕ ವರದಿಯಲ್ಲಿ ಪ್ರಸ್ತಾಪ ಮಾಡಬೇಕಾಗಿತ್ತು. ಆದರೆ ಆ ಕೆಲಸವನ್ನು ನೀವು ಮಾಡಲಿಲ್ಲ. ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯ ಮಂತ್ರಿಗಳಾದ ಮೇಲೆ ನಮ್ಮ ಕರ್ನಾಟಕ ರಾಜ್ಯ

ದಲ್ಲಿರುವಂತಹ ಎಲ್ಲಾ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಹಿಡಿಯುವ ಸಲುವಾಗಿ ಒಂದು ಚಿಂತಕರ ಚಾವಡಿಯನ್ನು ಅಂದರೆ ಚಿಂತನ ಚಿಲುಮೆಯನ್ನು ಪ್ರಾರಂಭ ಮಾಡಿದರು. ಈ ಚಿಂತನ ಚಿಲುಮೆಯಲ್ಲಿರುವಂತಹ ತಜ್ಞರುಗಳು ಯಾವ ಯಾವ ಸಮಸ್ಯೆಗಳಿಗೆ ಯಾವ ಯಾವ ರೀತಿಯಾಗಿ ಸಲಹೆ ಮತ್ತು ಸೂಚನೆಗಳನ್ನು ಕೊಟ್ಟಿದ್ದಾರೆಂಬ ಬಗ್ಗೆ ಸ್ಪಷ್ಟವಾದಂಥ ಮಾಹಿತಿ ಇದರಲ್ಲಿ ಇಲ್ಲ, ೧೯೮೮-೮೯ನೇ ಸಾಲಿಗೆ ಸಂಬಂಧಪಟ್ಟಂತೆ ಅವರು ನೀಡಿರುವಂತಹ ಸಲಹೆಗಳು ಇನ್ನೂ ನಮ್ಮ ಕೈಸೇರಿಲ್ಲ. ನಾನು ನಿನ್ನೆ 'ಎ ಪಿಕ್ಚರ್ ಆಫ್ ಕರ್ನಾಟಕ ಬಡ್ಜೆಟ್' ಎಂಬ ಪುಸ್ತಕದಲ್ಲಿರುವ ಕೆಲವು ಅಂಕಿ ಅಂಶಗಳನ್ನು ಗಮನಿಸಿದೆ. ಈ ಪುಸ್ತಕದಲ್ಲಿ ನೀವು ಸರ್ಕಾರದ ವತಿಯಿಂದ ಪ್ಲಾನಿಂಗ್ ಬಗ್ಗೆ ಏನು ಕೆಲವು ಅಂಕಿ ಅಂಶಗಳನ್ನು ೧೯೮೮-೮೯ನೇ ಸಾಲಿಗೆ ಸಂಬಂಧಪಟ್ಟಂತೆ ಪ್ರಸ್ತಾಪ ಮಾಡಬೇಕಾಗಿತ್ತು, ಅದನ್ನು ಪ್ರಸ್ತಾಪ ಮಾಡಿಲ್ಲ.

ಈ ಪುಸ್ತಕದಲ್ಲಿರುವ ಕೆಲವು ಅಂಕಿ ಅಂಶಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ನಮ್ಮ ರಾಜ್ಯದ ಜನಸಂಖ್ಯೆ ೧೯೮೧ ರಲ್ಲಿ ೩೭.೧೩ ಮಿಲಿಯನ್ ಇದ್ದರೆ, ೧೯೮೮ ರಲ್ಲಿ ೪೨.೯೦ ಮಿಲಿಯನ್‌ಗೆ ಹೆಚ್ಚಿದೆ. ರಾಜ್ಯದ ಒಟ್ಟು ಆದಾಯ ೧೯೮೨-೮೩ ರಲ್ಲಿ ೧೨೮೦.೩೬ ಕೋಟಿ ರೂಪಾಯಿಗಳಿದ್ದರೆ ೧೯೮೮-೮೯ಕ್ಕೆ ೨೯೨೧.೭೧ ಕೋಟಿಗೆ ಹೆಚ್ಚಿದೆ. ಈ ರಾಜ್ಯದ ವೆಚ್ಚ ೧೯೮೨-೮೩ ರಲ್ಲಿ ೧೨೩೮.೭೬ ಕೋಟಿ ರೂಪಾಯಿಗಳಾಗಿದ್ದರೆ ೧೯೮೮-೮೯ರ ಹೊತ್ತಿಗೆ ಇದು ೩೧೧೬ ಕೋಟಿ ೩೨ ಲಕ್ಷಕ್ಕೆ ಹೆಚ್ಚಿದೆ. ಮತ್ತೆ ಬಡ್ಜೆಟ್ ಕೊರತೆ ೧೯೮೫-೮೬ ರಲ್ಲಿ ೧೪೩ ಕೋಟಿ ರೂಪಾಯಿಗಳಿದ್ದರೆ, ೧೯೮೬-೮೭ ರಲ್ಲಿ ೮೪ ಕೋಟಿ ರೂಪಾಯಿಗಳು, ೧೯೮೮-೮೯ ರಲ್ಲಿ ೧೮೪ ಕೋಟಿ ರೂಪಾಯಿಗಳ ಕೊರತೆ ಇದೆ. ಈ ಕೊರತೆಯನ್ನು ನೀಗಿಸಲು ಎಲ್ಲಾ ರೀತಿಯಿಂದಲೂ ಸಂಪನ್ಮೂಲವನ್ನು ಕ್ರೋಢೀಕರಣ ಮಾಡುತ್ತೇವೆಂದು ತಾವು ಹೇಳುತ್ತಿದ್ದರೂ ಸಹ ತಾವು ಸರಿಯಾಗಿ ತೆರಿಗೆಗಳನ್ನು ವಸೂಲಿ ಮಾಡುತ್ತಿಲ್ಲ. ನೀವು ತೆರಿಗೆಗಳನ್ನು ಸರಿಯಾಗಿ ವಸೂಲಿ ಮಾಡಬೇಕಾಗುತ್ತದೆ. ಆದರೆ ಇದರಲ್ಲಿ ನೀವು ಫೇಲ್ ಆಗಿದ್ದೀರಿ. ನೀವು ಯಾವಾಗಲೂ ಇಲ್ಲಿ ಏನು ಹೇಳುತ್ತೀರಿ ಎಂದರೆ, ಈ ರಾಜ್ಯದ ಪ್ರಗತಿಗೆ ಕೇಂದ್ರದಿಂದ ನಮಗೆ ಸಾಕಷ್ಟು ಹಣ ಬರಬೇಕು, ಸಹಾಯ ಬರಬೇಕು ಎಂದು ಪ್ರಸ್ತಾಪ ಮಾಡುತ್ತೀರಿ. ಈ ದಿಸೆಯಲ್ಲಿ ಕೇಂದ್ರದಿಂದ ರಾಜ್ಯಕ್ಕೆ ೧೯೮೩-೮೪ ರಲ್ಲಿ ೪೧೩ ಕೋಟಿ ೫೬ ಲಕ್ಷ ರೂಪಾಯಿಗಳಷ್ಟು ಹಣದ ನೆರವು ಸಿಕ್ಕಿದ್ದರೆ ೧೯೮೮-೮೯ ರಲ್ಲಿ ಕೇಂದ್ರದ ಬೇರೆ ಬೇರೆ ಯೋಜನೆಗಳ ಕೆಳಗೆ ಅಂದರೆ ಆರ್.ಎಲ್.ಇ.ಜಿ.ಪಿ., ಡಿ.ಪಿ.ಎ.ಪಿ. ಮುಂತಾದ ಯೋಜನೆಗಳ ಕೆಳಗೆ ೭೯೩.೫೭ ಕೋಟಿ ರೂಪಾಯಿಗಳಷ್ಟು ನೆರವು ಸಿಕ್ಕಿದೆ. ಆದರೂ ಸಹ ಈ ರಾಜ್ಯದ ಸಾಲದಭಾರ ಹೆಚ್ಚಿದೆ. ೧೯೮೩ ರಲ್ಲಿ ೧೭೪೯ ಕೋಟಿ ರೂಪಾಯಿಗಳಷ್ಟು ಸಾಲದ ಭಾರವಿದ್ದರೆ, ೧೯೮೮-೮೯ರ ಹೊತ್ತಿಗೆ ಇದು ೪೦೦೩ ಕೋಟಿ ರೂಪಾಯಿಗಳಿಗೆ ಹೆಚ್ಚಿದೆ. ನೀವು ಯೋಜನಾ ಮಂತ್ರಿಗಳಾಗಿರುವುದರಿಂದ ಈ ಸಭೆಯ ಎಲ್ಲಾ ಮಾನ್ಯ ಸದಸ್ಯರಿಗೂ ಕೂಡ ಇಂತಹ ಎಲ್ಲಾ ಅಂಕಿ ಅಂಶಗಳನ್ನು ಒದಗಿಸಬೇಕಾಗುತ್ತದೆ.

ಇವತ್ತು ಪ್ಲಾನಿಂಗ್ ದೃಷ್ಟಿಯಿಂದ ಏನೇನು ಕೆಲಸ ಕಾರ್ಯಗಳನ್ನು ಮಾಡುತ್ತಿದ್ದೀರಿ, ಯಾವ ಯಾವ ಬಾಬತ್ತಿನಲ್ಲಿ ಎಷ್ಟೆಷ್ಟು ಬರುತ್ತದೆ ಅದರ ಪರಿಣಾಮವಾಗಿ ಏನೇನು ಕೆಲಸಕಾರ್ಯಗಳನ್ನು ಮಾಡುತ್ತೀರಿ ಎನ್ನುವುದನ್ನು ಸದನಕ್ಕೆ ಮಾನ್ಯ ಸದಸ್ಯರಿಗೆ ಮನವರಿಕೆ ಮಾಡಿಕೊಡಬೇಕಾಗುತ್ತದೆ. ಪ್ಲಾನಿಂಗ್ ದೃಷ್ಟಿಯಿಂದ ಸದಸ್ಯರ ಮನಸ್ಸಿನಲ್ಲಿ ಏನು ಭಾವನೆ ಇದೆ ಅದಕ್ಕೆ ಸಮಜಾಯಿಷಿ ಹೇಳತಕ್ಕಂಥ ಅವಕಾಶ ಇದೆ ಅದನ್ನೂ ಕೂಡ ತಾವು ಹೇಳಲಿಲ್ಲ. ಯಾವಾಗಲೂ ವಾರ್ಷಿಕ ವರದಿಯನ್ನು ಸರ್ಕಾರದ ಕಡೆಯಿಂದ ಕೊಡುವಾಗ ಏನು ಕೆಲಸಕಾರ್ಯಗಳು ಆಗಬೇಕಾಗಿದೆ ಎನ್ನುವುದರ ಬಗ್ಗೆ, ಪ್ಲಾನಿಂಗ್ ಡಿಪಾರ್ಟ್‌ಮೆಂಟ್ ಬಗ್ಗೆ As a Planning Minister, you must provide a complete picture of performance to all the members. ಅದನ್ನು ತಾವು ಕೊಟ್ಟಿಲ್ಲ.

ಶ್ರೀ ಎಸ್.ಆರ್. ಬೊಮ್ಮಾಯಿ.—ಎಕನಾಮಿಕ್ ಸರ್ವೆಯಲ್ಲಿ ಎಲ್ಲಾ ಚಿತ್ರ ಇದೆ, ಎಕನಾಮಿಕ್ ಸರ್ವೆಯಲ್ಲಿ ಎಲ್ಲ ಇದೆ, ಎಷ್ಟು ಬರುತ್ತದೆ, ಪರ್ಸೆಂಟೇಜ್ ಏನು ಎಂದು ಮತ್ತು ಬೇರೆ ರಾಜ್ಯಗಳಿಗೆ ಕಂಪೇರ್ ಮಾಡಿರುವುದು, ಪ್ಲಾನಿಂಗ್ ಡಿಪಾರ್ಟ್‌ಮೆಂಟ್ ಬಗ್ಗೆ ಎಲ್ಲಾ ಅದರಲ್ಲಿ ಕಂಪ್ಲೀಟ್ ಪಿಕ್ಚರ್ ಇರುತ್ತದೆ.

ಶ್ರೀ ಧರ್ಮಸಿಂಗ್.—ತಾವು ಎಲ್ಲಾ ಕಡೆಗೆ ಸಂಬಂಧಪಟ್ಟಹಾಗೆ ಕೊಟ್ಟಿದ್ದೀರಿ. ಪ್ಲಾನಿಂಗ್ ಬಗ್ಗೆ ಕೂಡ ವಾರ್ಷಿಕ ವರದಿಯಲ್ಲಿ ಬರಬೇಕು, ಪ್ಲಾನಿಂಗ್ ಡಿಪಾರ್ಟ್‌ಮೆಂಟ್ 'ವೆರಿ ನೆಗ್ಲಿಜಬಲ್' ಎಂದು ತಿಳಿದುಕೊಂಡುಬಿಟ್ಟಿದ್ದಾರೆ. Planning department is most important depart-

ment ನಾನು ಈಗ ಬರೀ ಸೋಷಿಯಲ್ ಮೆಷರ್ಸ್ ಬಗ್ಗೆ ಹೇಳುತ್ತಾ ಇದ್ದೇನೆ. ಕೋರ್ ಸೆಕ್ಟರ್ ಅಂದರೆ ಅಗ್ರಿಕಲ್ಚರಲ್ ಅಂಡ್ ಅಲೈಡ್ ಸರ್ವೀಸಸ್. ೧೯೮೩–೮೪ರಲ್ಲಿ ಗವರ್ನಮೆಂಟ್ ಸ್ಪೆಂಟ್ ೧೮.೩೮ ಪರ್ಸೆಂಟ್. ೧೯೮೭–೮೮ರಲ್ಲಿ ೭.೮೧ ಪರ್ಸೆಂಟ್, ೧೯೮೮–೮೯ರಲ್ಲಿ ೮.೭೪ ಪರ್ಸೆಂಟ್. ರೈತರ ಬಗ್ಗೆ ನಾವು ಬಹಳ ಹೇಳುತ್ತೇವೆ. ಅಗ್ರಿಕಲ್ಚರಲ್ ಸೆಕ್ಟರ್‌ದು ಹೇಳುತ್ತಾ ಇದ್ದೇನೆ, ೧೯೮೩–೮೪ರಲ್ಲಿ ಅಟ್ ದಟ್ ಟೈಂ ಪ್ರೀವಿಯಸ್ ಗವರ್ನಮೆಂಟ್ ಕೂಡ ಎಷ್ಟು ಸ್ಪೆಂಟ್ ಮಾಡಿತ್ತು ಅದು ಬರುತ್ತಾ ಬರುತ್ತಾ ಡಿಕ್ರೀಸ್ ಆಗುತ್ತಿದೆ. ಇಂಡಸ್ಟ್ರೀಸ್‌ನಲ್ಲಿ ತೆಗೆದುಕೊಂಡರೆ, ಕೈಗಾರಿಕೋದ್ಯಮಿಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕು ಎನ್ನತಕ್ಕಂಥ ಮಾತನ್ನು ಪದೇ ಪದೇ ಮಾನ್ಯ ಜೆ.ಹೆಚ್. ಪಟೇಲರು ಹೇಳುತ್ತಾರೆ. ಅಂಕಿಅಂಶಗಳ ಮುಖಾಂತರ ಅದನ್ನು ನಾವು ಪರಿಶೀಲನೆ ಮಾಡಿದರೆ ಸರ್ಕಾರಕ್ಕೆ ಇದರ ಬಗ್ಗೆ ಎಷ್ಟು ಅನುಕಂಪ ಇದೆ, ಆಸಕ್ತಿ ವಹಿಸಿದೆ ಎನ್ನುವುದು ಗೊತ್ತಾಗುತ್ತದೆ. ೧೯೮೩–೮೪ರಲ್ಲಿ ೩.೩೨ ಪರ್ಸೆಂಟ್, ೧೯೮೬–೮೭ರಲ್ಲಿ ೨.೩೪ ಪರ್ಸೆಂಟ್, ೧೯೮೮–೮೯ರಲ್ಲಿ ೨ ೭೭ ಪರ್ಸೆಂಟ್. ಇದು ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್‌ನದು. ಇನ್ನು ಇರಿಗೇಷನ್ ಡಿಪಾರ್ಟ್‌ಮೆಂಟ್. ಇದರಲ್ಲಿ ೧೯೮೩–೮೪ರಲ್ಲಿ ೬.೯೩ ಪರ್ಸೆಂಟ್, ೧೯೮೭–೮೮ರಲ್ಲಿ ೬.೮೨ ಪರ್ಸೆಂಟ್. ೧೯೮೮–೮೯ರಲ್ಲಿ ೬.೩೬ ಪರ್ಸೆಂಟ್ ಇರಿಗೇಷನ್ ಖಾತೆ ಕೂಡ ತಮಗೆ ಸಿಕ್ಕಿದೆ. ನಾನು ಪ್ರಗತಿಯ ಬಗ್ಗೆ ಮಾತ್ರ ಹೇಳುತ್ತಾ ಇದ್ದೇನೆ. ಇವತ್ತು ಪ್ಲಾನಿಂಗ್ ಇದ್ದು ರಾಜ್ಯದ ಎಲ್ಲಾ ಕಡೆಗೂ ನೀರಾವರಿ ಸೌಲಭ್ಯ ಕೊಡತಕ್ಕದ್ದು ಇದೆ. ಬಚಾವತ್ ಅವಾರ್ಡ್ ಇದೆ, ತೆಲುಗುಗಂಗಾ ಪ್ರಾಜೆಕ್ಟ್ ಇದೆ. ಇವನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಇವತ್ತು ಎಲ್ಲಾ ಕಡೆ ಖರ್ಚು ಮಾಡಬೇಕು, ಇದರಲ್ಲಿ ಯು ಹ್ಯಾವ್ ಫೇಲ್ಡ್ ಅಟ್ಟರ್ಲಿ ಎಂದು ಹೇಳುತ್ತಾ ಇದ್ದೇನೆ. ಸೋಷಿಯಲ್ ಸೆಕ್ಯೂರಿಟಿ ಮೆಷರ್ಸ್, ಮತ್ತು ವೆಲ್‌ಫೇರ್ ಮೆಷರ್ಸ್ ಇದೆ. ಎಸ್.ಸಿ.ಎಸ್.ಟಿ. ಗಳಾಗಲಿ, ಬೇರೆಯವರಿಗಾಗಲಿ ಅವರ ಸಾಮಾಜಿಕವಾಗಿ ನಿಜ ಜೀವನದ ಸಮಸ್ಯೆಗಳನ್ನು ಬಗೆಹರಿಸತಕ್ಕದ್ದರಲ್ಲಿ, ನಿವಾರಣೆ ಮಾಡತಕ್ಕದ್ದರಲ್ಲಿ ಸರ್ಕಾರ ಸ್ಕೀಂ ಮಾಡಬೇಕು. ಅದರಲ್ಲಿ ಎಷ್ಟು ಆಸಕ್ತಿ ವಹಿಸಿದೆ ಎನ್ನುವುದನ್ನು ಹೇಳುತ್ತಾ ಇದ್ದೇನೆ. ವೆಲ್‌ಫೇರ್ ಆಫ್ ಎಸ್ಸೀಸ್ ಅಂಡ್ ಎಸ್‌ಟೀಸ್ ೧೯೮೩–೮೪ರಲ್ಲಿ ೩.೪೬ ಪರ್ಸೆಂಟ್, ೧೯೮೭–೮೮ರಲ್ಲಿ ೦.೫೩ ಪರ್ಸೆಂಟ್, ೧೯೮೮–೮೯ರಲ್ಲಿ ೦ ೪೬ ಪರ್ಸೆಂಟ್ ಇದೆ. ವೆಲ್‌ಫೇರ್ ಆಫ್ ಬ್ಯಾಕ್‌ವರ್ಡ್ ಕ್ಲಾಸಸ್. ಹಿಂದುಳಿದ ವರ್ಗಗಳ ಬಗ್ಗೆ ಎಷ್ಟು ಆಸಕ್ತಿ ವಹಿಸಿದೆ ಎನ್ನುವುದನ್ನು ಹೇಳುತ್ತಾ ಇದ್ದೇನೆ. ಬಡತನದ ರೇಖೆಗೆ ಒಳಗಾಗಿರತಕ್ಕ ಜನರಾಗಲಿ, ಹಿಂದುಳಿದ ವರ್ಗಗಳಿಗೆ ಸಂಬಂಧಪಟ್ಟಂಥವರಾಗಲಿ ಅವರ ಬಗ್ಗೆ ಸರ್ಕಾರ ಎಷ್ಟು ಆಸಕ್ತಿ ವಹಿಸಿದೆ ಎನ್ನುವುದನ್ನು ಹೇಳುತ್ತಾ ಇದ್ದೇನೆ. ೧೯೮೩–೮೪ರಲ್ಲಿ ೧.೭೩ ಪರ್ಸೆಂಟ್, ೧೯೮೭–೮೮ರಲ್ಲಿ ೦.೧೬ ಪರ್ಸೆಂಟ್, ೧೯೮೮–೮೯ರಲ್ಲಿ ೦.೫೧ ಪರ್ಸೆಂಟ್, this years progress this is the achievement. Total for social security measure in 1983-84 is 15.75% 17.42% ಇವತ್ತು ಆಗಿದೆ. ರೂರಲ್ ಡೆವಲಪ್‌ಮೆಂಟ್ ವಿಚಾರದಲ್ಲಿ ಹೇಳುವುದಾದರೆ ಮಾನ್ಯ ನಜೀರ್ ಸಾಬ್‌ರವರು ಇಲ್ಲಿ ಇಲ್ಲ. ಅವರು ಪದೇ ಪದೇ ಹೇಳುವುದು ಪ್ರದೇಶ ಸಮಾಚಾರದಲ್ಲಿ ಬರುತ್ತದೆ. ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳಿಗೆ ೯೦೦ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆಂದು ಹೇಳುತ್ತಿರುತ್ತಾರೆ. ಪ್ರಾಕ್ಟಿಕಲ್ ಆಗಿ ಇವತ್ತಿನ ದಿವಸ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತಿಗಳಿಗೆ ಅಷ್ಟು ಪ್ರಮಾಣದಲ್ಲಿ ಹಣವನ್ನು ಬಿಡುಗಡೆ ಮಾಡಿಲ್ಲ. ಬರೀ ಮಾತಿನಲ್ಲಿ ಹೇಳುತ್ತಿದ್ದಾರೆ. ೧೨ ಸಾವಿರ ಜನಸಂಖ್ಯೆ ಇರತಕ್ಕ ಅವರ ಸಮಸ್ಯೆಗಳನ್ನು ಬಗೆಹರಿಸತಕ್ಕ ಜವಾಬ್ದಾರಿ ಅವರ ಮೇಲಿದೆ ಎಂದು ಹೇಳಿದ್ದಾರೆ. ಇವತ್ತು ಜಿಲ್ಲಾ ಪರಿಷತ್ತು ಡೆವಲಪ್‌ಮೆಂಟ್ ಸ್ಕೀಮುಗಳನ್ನು ಅವರೇ ಮಾಡುತ್ತಾರೆಂದು ಹೇಳುತ್ತೀರಿ, ಆದರೆ ಟೋಟಲ್ ಹಣ ಎಷ್ಟು ಇಟ್ಟಿದ್ದೀರಿ ಟೋಟಲ್ ಎಕ್ಸ್‌ಪೆಂಡೀಚರ್ ರೂರಲ್ ಡೆವಲಪ್‌ಮೆಂಟ್ ಬಗ್ಗೆ ೧೯೮೫–೮೬ರಲ್ಲಿ ೧೩ .೮೧ ಕೋಟಿ ರೂಪಾಯಿಗಳು, ೧೯೮೬–೮೭ರಲ್ಲಿ ೧೪೪.೪೬ ಕೋಟಿ ರೂಪಾಯಿಗಳು ೧೯೮೭–೮೮ರಲ್ಲಿ ೧೯೯.೩೪ ಕೋಟಿ ರೂಪಾಯಿಗಳನ್ನು ೧೯೮೮–೮೯ರಲ್ಲಿ ೧೩೩.೭೪ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಪ್ರತಿ ವರ್ಷ ಇದರ ಶೇಕಡಾವಾರು ಪ್ರಮಾಣ ಕಡಿಮೆಯಾಗುತ್ತಾ ಬಂದಿದೆ. ಒಟ್ಟು ೯೨೦ ಕೋಟಿ ರೂಪಾಯಿಗಳಲ್ಲಿ ಸಿಬ್ಬಂದಿ ಖರ್ಚು ೪.೭೦ ಕೋಟಿ ರೂಪಾಯಿಗಳು ಹೋದರೆ ಇನ್ನು ೪೫೦ ಕೋಟಿ ರೂಪಾಯಿಗಳ ಹಣದಲ್ಲಿ ಕರ್ನಾಟಕದ ನಾಲ್ಕು ಕೋಟಿ ಜನರ ಜೀವನದ ಸಮಸ್ಯೆಗಳನ್ನು ಬಗೆಹರಿಸತಕ್ಕ ಜವಾಬ್ದಾರಿಯನ್ನು ಜಿಲ್ಲಾ ಪರಿಷತ್ತು, ಮತ್ತು ಮಂಡಲ ಪಂಚಾಯತಿಗೆ ವಹಿಸಿದ್ದೀರಿ. ನೀವು ಇಟ್ಟಿರತಕ್ಕ ಹಣ ಏನೇನೂ ಸಾಲದು. ಅಧಿಕಾರ ವಿಕೇಂದ್ರೀಕರಣ ಮಾಡಿದ್ದೇವೆ, ಹಳ್ಳಿಯವರ ಕೈಯಲ್ಲಿ ಅಧಿಕಾರವನ್ನು ಕೊಟ್ಟಿದ್ದೇವೆಂದು ಹೇಳುತ್ತಿದ್ದೀರಿ. ತಮಗೆ ಸಾಕಷ್ಟು ಅನುಭವ ಇದೆ.

ಇವೊತ್ತು ಮಂಡಲ ಪಂಚಾಯಿತಿ ಛೇರ್‌ಮನ್, ಸದಸ್ಯರ, ಗತಿ ಏನಾಗಿದೆ ? ಯಾವ ರೀತಿ ಆಗಿದೆ ಎನ್ನುವುದು ನಮಗೆಲ್ಲಾ ಗೊತ್ತಿದೆ. ನೀವು ಕೊಟ್ಟಿರತಕ್ಕ ಹಣ ಪ್ರತಿ ಮಂಡಲ ಪಂಚಾಯತಿಗೆ ೧೫ ಸಾವಿರ ರೂಪಾಯಿಗಳು ಕೂಡ ಬರುತ್ತಿಲ್ಲ. ಅದರಲ್ಲಿ ಆರ್.ಎಲ್.ಇ.ಜಿ.ಪಿ., ಎನ್.ಆರ್.ಇ.ಪಿ. ಮತ್ತು ಡಿ.ಪಿ.ಎ.ಪಿ. ಕಾರ್ಯಕ್ರಮಗಳಿಗೆ ಸೆಂಟ್ರಲ್ ಗೌರ್ನಮೆಂಟಿನಿಂದ ಹಣ ಬರುತ್ತದೆ. ಗುಲ್ಬರ್ಗ ಜಿಲ್ಲೆಯ ಬಗ್ಗೆ ಹೇಳುವುದಾದರೆ, ಜಿಲ್ಲಾ ಪರಿಷತ್ತಿನ ಅಧ್ಯಕ್ಷರಿಗೆ ಮೆಥಾಡಿಕಲ್ ಆಗಿ ರಿವ್ಯೂ ಮಾಡತಕ್ಕ ಪದ್ಧತಿ ಅವರಿಗೆ ಗೊತ್ತಿಲ್ಲ. ಸುಮಾರು ೨ ಕೋಟಿ ರೂಪಾಯಿ ಹಣ ಗುಲ್ಬರ್ಗ ಜಿಲ್ಲಾ ಪರಿಷತ್ತಿನಲ್ಲಿ ಲ್ಯಾಪ್ಸ್ ಆಗಿದೆ. ಪದೇ ಪದೇ ಕೇಂದ್ರದಿಂದ ಬಂದಂತಹ ಆರ್.ಎಲ್.ಇ.ಜಿ.ಪಿ., ಡಿ.ಪಿ.ಎ.ಪಿ. ಮತ್ತು ಎನ್.ಆರ್.ಇ.ಪಿ. ಎಲ್ಲಾ ಕಡೆ ಖರ್ಚು ಮಾಡುತ್ತಿದ್ದಾರೆ. ನೀವು ಕೊಡಬೇಕಾದ ಶೇಕಡ ೫೦ ಭಾಗದ ಹಣವನ್ನು ಕೂಡ ಕೊಡಲಿಕ್ಕಾಗುವುದಿಲ್ಲ. ಸೆಂಟ್ರಲ್‌ನಿಂದ ಬಂದಂತಹ ಹಣವನ್ನು ಬರಗಾಲ ಕೆಲಸಗಳಿಗೆ ಬಿಡುಗಡೆ ಮಾಡುತ್ತೀರಿ.

ಅಧ್ಯಕ್ಷರು.—೧೫ ನಿಮಿಷ ಆಯಿತು,

ಶ್ರೀ ಧರ್ಮಸಿಂಗ್.—ಇನ್ನು ಸ್ವಲ್ಪ ಜಾಸ್ತಿ ಕಾಲ ಕೊಡಿ.

ಅಧ್ಯಕ್ಷರು.—ಈಗಾಗಲೇ ೪೯೧ ನಿಮಿಷಗಳ ಕಾಲ ಇದರ ಬಗ್ಗೆ ಚರ್ಚೆಯಾಗಿದೆ.

ಶ್ರೀ ಎಸ್. ಪುಟ್ಟಸ್ವಾಮಿ.—ಅರ್ಧ ಡಜನ್ ಡಿಮ್ಯಾಂಡ್‌ಗಳನ್ನು ಇಟ್ಟು ೧೦-೧೫ ನಿಮಿಷದಲ್ಲಿ ಮುಗಿಸಿ ಎಂದು ಹೇಳಿದರೆ ಹೇಗಾಗುತ್ತದೆ.

ಅಧ್ಯಕ್ಷರು.—ಗಿಲಿಟಿನ್ ಅಂದರೆ ಗೊತ್ತಿದೆಯಲ್ಲಾ, ಚರ್ಚೆ ಮಾಡದೆ ಓಟಿಗೆ ಹಾಕುವುದು.

ಶ್ರೀ ಧರ್ಮಸಿಂಗ್.—ರಿಸೋರ್ಸಸ್ ಮೊಬಿಲೈಜೇಷನ್ನಿನಲ್ಲಿ ಟ್ಯಾಕ್ಸನ್ನು ಹಾಕಲೇಬೇಕಾಗುತ್ತದೆ, ೮೩-೮೪ರಲ್ಲಿ ಟ್ಯಾಕ್ಸ್‌ನಲ್ಲಿ ಕೇಂದ್ರ ಸರ್ಕಾರದಿಂದ ೨೭೨ ಕೋಟಿ ರೂಪಾಯಿಗಳು ರಾಜ್ಯಕ್ಕೆ ಬಂದಿದೆ, ೧೯೮೩-೮೪ರಲ್ಲಿ ೨೭೨ ಕೋಟಿ ರೂಪಾಯಿ ಕೇಂದ್ರದಿಂದ ಬಂದರೆ ೮೮-೮೯ರಲ್ಲಿ ೫೦೦ ಕೋಟಿ ಬಂದಿದೆ. ಕೇಂದ್ರಸರ್ಕಾರದಿಂದ ಗ್ರ್ಯಾಂಟ್ ಇನ್ ಏಯ್ಡ್ ೮೩-೮೪ರಲ್ಲಿ ೧೫೭ ಕೋಟಿ ರೂಪಾಯಿ ಬಂದರೆ ೮೮-೮೯ರಲ್ಲಿ ೨೮೩ ಕೋಟಿ ರೂಪಾಯಿ ಬಂದಿದೆ. ಇವತ್ತು ಸೆಂಟ್ರಲ್‌ನಿಂದ ೮೩-೮೪ರಲ್ಲಿ ಟೋಟಲ್ ಟ್ಯಾಕ್ಸ್, ಷೇರು, ಗ್ರ್ಯಾಂಟ್ ಇನ್ ಏಯ್ಡ್ ಎಲ್ಲಾ ಸೇರಿ ಒಟ್ಟು ೪೧೩ ಕೋಟಿ ರೂಪಾಯಿ ಬಂದಿದ್ದರೆ ೮೮-೮೯ರಲ್ಲಿ ೭೯೩ ಕೋಟಿ ರೂಪಾಯಿ ಬಂದಿದೆ. ಆದರೆ ಕೇಂದ್ರದಿಂದ ನಮಗೆ ಹಣ ಬರುತ್ತಿಲ್ಲವೆಂದು ಇವರು ಹೇಳುತ್ತಿದ್ದಾರೆ. ಕೇಂದ್ರದಿಂದ ಹಣ ಇವರಿಗೆ ಬರುತ್ತಿದೆ. ಇವತ್ತು ಸರ್ಕಾರದ ಪ್ಲಾನಿಂಗ್ ಮಂತ್ರಿಗಳು ತಮ್ಮ ವಾರ್ಷಿಕ ವರದಿಯಲ್ಲಿ ಇಷ್ಟು ಹಣ ಇದೆ, ನಮ್ಮ ಬಜೆಟ್ ಇಷ್ಟಿದೆ ಎಂದು ಡಿಪಾರ್ಟ್‌ಮೆಂಟ್‌ವೈಸ್ ಪ್ಲಾನಿಂಗ್ ಮಾಡಿ ಸದನದ ಮುಂದಿಟ್ಟು ಸರಿಯಾದ ರೀತಿಯಲ್ಲಿ ಮಾಹಿತಿಗಳನ್ನು ಒದಗಿಸಿ ಮಾನ್ಯ ಸದಸ್ಯರು ಈ ಚರ್ಚೆಯಲ್ಲಿ ಭಾಗವಹಿಸಿ ತಮ್ಮ ಅನಿಸಿಕೆಗಳನ್ನು ಹೇಳುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿಲ್ಲ. ವಾರ್ಷಿಕ ವರದಿಯಲ್ಲಿ ಅವರು ಸರಿಯಾದ ಅಂಕಿಅಂಶಗಳನ್ನು ಹೇಳಿಲ್ಲ ಎನ್ನತಕ್ಕ ಮಾತನ್ನು ನಾನು ಹೇಳುತ್ತಿದ್ದೇನೆ.

ಮಾನ್ಯ ಅಧ್ಯಕ್ಷರೇ, ಕೊನೆಯದಾಗಿ ಹೇಳುವುದಾದರೆ, ಮಾನ್ಯ ಸದಸ್ಯರಾದ ಬಾಬುರೆಡ್ಡಿ ತುಂಗಳ್‌ರವರು ಪ್ಲಾನಿಂಗ್‌ಗೆ ಸಂಬಂಧಪಟ್ಟಂತೆ ಪ್ರಶ್ನೆಯನ್ನು ಕೇಳಿದ್ದರು. ನಾನೂ ಕೂಡ ಒಂದು ಪ್ರಶ್ನೆಯನ್ನು ಕೇಳಿದ್ದೆ. ಇವತ್ತು ಕರ್ನಾಟಕದಲ್ಲಿರತಕ್ಕ ಎಲ್ಲ ಭಾಗಕ್ಕೂ ಸರಿಯಾದ ಪ್ಲಾನಿಂಗ್ ಇಲ್ಲ. ೫ನೇ ಪಂಚವಾರ್ಷಿಕ ಯೋಜನೆಯಲ್ಲಿ ರೀಜನಲ್ ಇಂಬ್ಯಾಲೆನ್ಸ್ ಏನಿದೆ ಡೆವಲಪ್‌ಮೆಂಟ್ ಇನ್ ದಿ ಡಿಸ್ಟ್ರಿಕ್ಟ್ ಇದರ ಡ್ರಾಫ್ಟ್ ಪ್ಲಾನನ್ನು ಅವರಿಗೆ ತೋರಿಸಿ ನಾನು ಹೇಳುತ್ತಿದ್ದೇನೆ.

> " Reduction of regional imbalance by promoting the required social and economic infra-structure is one of the important objectives of the Five Year Plans. '

ಇವತ್ತು ೫ನೇ ಪಂಚವಾರ್ಷಿಕ ಯೋಜನೆಯ ಎಕ್ಸಟ್ರಾಕ್ಟ್ ಇಲ್ಲಿದೆ, ನಿನ್ನೆಯ ದಿವಸ ಮಾನ್ಯ ವಿಶ್ವನಾಥ ಪಾಟೀಲ್‌ರವರೂ ಇದರ ಬಗ್ಗೆ ಹೇಳಿದ್ದಾರೆ. ಬಹಳಷ್ಟು ಚರ್ಚೆಯಾಗಿದೆ. ನಾನೂ ಕೂಡ ಹೇಳಿದ್ದೇನೆ. ಈ ಕರ್ನಾಟಕ ರಾಜ್ಯದಲ್ಲಿ ಅತ್ಯಂತ ಅಭಿವೃದ್ಧಿ ಹೊಂದಿದ ಜಿಲ್ಲೆಗಳು

ಯಾವುವು ಇವೆ. ಅಭಿವೃದ್ಧಿ ಹೊಂದದ ಜಿಲ್ಲೆಗಳು ಯಾವುವು ಇವೆ, ಹಿಂದುಳಿದ ಜಿಲ್ಲೆಗಳು ಯಾವುವು ಇವೆ. ಅತ್ಯಂತ ಹಿಂದುಳಿದ ಜಿಲ್ಲೆಗಳು ಯಾವುವು ಇವೆ. ಇವುಗಳ ಬಗ್ಗೆ ನಿಮ್ಮ ಸರ್ಕಾರ ಏನು ಚಿಂತನೆಯನ್ನು ಮಾಡುತ್ತಿದೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದೆ ಎಂಬುದನ್ನು ನಾವು ಕೇಳುತ್ತಿರುತ್ತೇವೆ. ತಾವು ಪದೇ ಪದೇ ಏನು ಹೇಳಿದ್ದೀರೆಂದರೆ, ಬ್ಯಾಕ್‌ವರ್ಡ್ ಏರಿಯಾಕ್ಕೆ ಹೆಚ್ಚಿನ ಫಂಡ್ ಕೊಡಬೇಕೆಂದು ಸೆಂಟ್ರಲ್ ಗೌರ್ನಮೆಂಟ್‌ಗೆ ಬರೆದಿದ್ದೇವೆಂದು ಹೇಳುತ್ತಿದ್ದೀರಿ. ಇದು ಹಾಗಲ್ಲ, ತಾವು ಪ್ಲಾನ್ ಪ್ರಿಪೇರ್ ಮಾಡತಕ್ಕ ಸಂದರ್ಭದಲ್ಲಿ ರೀಜನಲ್ ಇಂಬ್ಯಾಲೆನ್ಸ್ ಏನಿದೆ ಅದಕ್ಕೆ ತಾವು ಮೊದಲು ಇಷ್ಟು ಕೋಟಿ ರೂಪಾಯಿ ಎಂದು ತೆಗೆದು ಇಡಬೇಕು. ಇದು ನಮ್ಮ ಕಾಲದಿಂದಲೂ ನಡೆದುಕೊಂಡು ಬಂದಿದೆ. ಇದು ಕೇವಲ ಇವತ್ತು ಬಂದಿರತಕ್ಕದ್ದಲ್ಲ. ನಮ್ಮ ಕರ್ನಾಟಕಕ್ಕೆ ಬೊಂಬಾಯಿ ಕರ್ನಾಟಕ ಭಾಗದ ಜನರೂ ಬಂದಿದ್ದಾರೆ, ಮದ್ರಾಸ್ ಭಾಗದ ಜನರೂ ಬಂದಿದ್ದಾರೆ, ಹೈದರಾಬಾದ್ ಭಾಗದ ಜನರೂ ಬಂದಿದ್ದಾರೆ. ಇದನ್ನೆಲ್ಲಾ ನೀವು ಪರಿಗಣನೆಗೆ ತೆಗೆದುಕೊಂಡು ೧೦ಜಿಳರ ಫ್ಯಾಕ್ಟ್ ಫೈಂಡಿಂಗ್ ರಿಪೋರ್ಟ್ ಆಧಾರದಮೇಲೆ, ಆ ಅಂಕಿಅಂಶಗಳ ಆಧಾರದ ಮೇಲೆ ಯಾವಯಾವ ಭಾಗಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂಬುದನ್ನು ನೋಡಬೇಕು. ಇವತ್ತು ನಮ್ಮ ಎದುರಿಗೆ ಅಂಕಿಅಂಶಗಳಿವೆ. ಈ ಅಂಕಿಅಂಶಗಳ ಆಧಾರದ ಮೇಲೆ ಹೆಚ್ಚಿನ ಟಾಪ್ ಪ್ರಿಯಾರಿಟಿಯನ್ನು ನೀವು ಕೊಡಬೇಕಾಗುತ್ತದೆ, ಹಿಂದೆ ತಾ ೨೦-೩-೮೩ರಲ್ಲಿ ನಾನು ಈ ಬಗ್ಗೆ ಒಂದು ಪ್ರಶ್ನೆಯನ್ನು ಹಾಕಿದಾಗ ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದರೆಂದರೆ ೪ ಅಭಿವೃದ್ಧಿ ಮಂಡಲಿಗಳನ್ನು ನಾವು ರಚಿಸಿದ್ದೇವೆ, ನಾವೂ ಕೂಡ ಹೆಚ್ಚಿನ ಹಣವನ್ನು ಕೊಡುತ್ತೇವೆ, ಆ ಭಾಗದಲ್ಲಿರತಕ್ಕ ಎಲ್ಲಾ ವಿಧಾನ ಸಭಾ ಸದಸ್ಯರ ಜೊತೆಯಲ್ಲೂ ಚರ್ಚೆಮಾಡುತ್ತೇನೆಂದು ಹೇಳಿದ್ದರು. ಆದರೆ ಅದನ್ನು ಮಾಡಲಿಲ್ಲ, ಇವತ್ತು ಗುಲ್ಬರ್ಗಾ ಜಿಲ್ಲೆಯಲ್ಲಿ ಒಂದು ಪಬ್ಲಿಕ್ ಒಪಿನಿಯನ್ ಕ್ರಿಯೇಟ್ ಆಗುತ್ತಿದೆ. ಈಗಾಗಲೇ ಅಲ್ಲಿ ಹೈದರಾಬಾದ್ ಕರ್ನಾಟಕ ಸಂಘರ್ಷ ಸಮಿತಿ ರಚನೆ ಆಗಿದೆ. ವಿಚಾರ ಸಂಕೀರ್ಣ ನಡೆಯುತ್ತಿದೆ. ಈ ಭಾಗಕ್ಕೆ ಏತಕ್ಕೆ ಅಲಕ್ಷ್ಯತನ ಮಾಡುತ್ತಿದ್ದಾರೆಂದು ಕೇಳುತ್ತಿದ್ದಾರೆ. ಮೊನ್ನೆ ಬಜೆಟ್ ಮಂಡನೆ ಮಾಡಿದಾಗ ಮಾನ್ಯ ಮುಖ್ಯಮಂತ್ರಿಗಳು ಎಷ್ಟೋ ಮೇಜರ್ ಸ್ಕೀಂಗಳನ್ನು ತೆಗೆದುಕೊಂಡಾಗ ೪ ಜಿಲ್ಲೆಗಳಿಗೆ ಆ ಭಾಗದಲ್ಲಿರತಕ್ಕ, ಆ ಪ್ರದೇಶದಲ್ಲಿರತಕ್ಕ ಜನರಿಗೆ ಅನುಕೂಲವಾಗುವಂತೆ ಒಂದು ಸ್ಕೀಂನ್ನೂ ಕೂಡ ಇವರು ಕ್ರಿಯೇಟ್ ಮಾಡಲಿಲ್ಲ. ಅಲ್ಲಿಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟಿಲ್ಲ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ೧೯೮೦ರಲ್ಲಿ ರೀಜನಲ್ ಇಂಬ್ಯಾಲೆನ್ಸ್ ಪ್ರಕಾರ ಆ ಭಾಗದ ಜನರಿಗೆ ಬಹಳ ತೊಂದರೆಯಾಗುತ್ತದೆಂದು ಆಗಿನ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಗುಂಡೂರಾಯರ ಕಾಲದಲ್ಲಿ ನಾನು ಮಂತ್ರಿಯಾಗಿದ್ದೆ, ಮಾನ್ಯ ಖರ್ಗೆಯವರೂ ಹಾಗೂ ಮಾನ್ಯ ಮಾಣಿಕ್‌ರಾವ್ ಪಾಟೀಲ್‌ರವರೂ ಇದ್ದರು. ಈ ಎಲ್ಲರೂ ಆಗ್ರಹ ಮಾಡಿದಾಗ ಪ್ರಪ್ರಥಮವಾಗಿ ಹೈದರಾಬಾದ್ ಡೆವಲಪ್‌ಮೆಂಟ್ ಕಮಿಟಿ ಎಂದು ಮಾಡಿದರು. ಆ ಕಮಿಟಿಗೆ ನಾನೇ ಅಧ್ಯಕ್ಷನಾಗಿದ್ದೆ, ಅದಾದನಂತರ ನಾವು ಒಂದು ಉಪ ಸಮಿತಿಯನ್ನು ಮಾಡಿ ೪ ರಾಜ್ಯಗಳಲ್ಲಿ ಅಧ್ಯಯನ ಪ್ರವಾಸ ಮಾಡಿದ್ದೇವೆ. ಪಶ್ಚಿಮ ಬಂಗಾಳ, ಆಂಧ್ರ, ಮಹಾರಾಷ್ಟ್ರಗಳಿಗೆ ನಾವು ಹೋಗಿ ಬಂದಿದ್ದೇವೆ, ಪಶ್ಚಿಮಬಂಗಾಳದಲ್ಲಿ ಸುಂದರ್ ಬಿನ್ ಬೋರ್ಡ್ ಎಂದು ಇದೆ. ಆ ಬೋರ್ಡ್‌ಗೆ ಪ್ರತಿವರ್ಷ ಸುಮಾರು ೩೦-೩೫ ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಇದೇರೀತಿ ತೆಲಂಗಾಣದಲ್ಲಿ ರೀಜನಲ್ ಡೆವಲಪ್‌ಮೆಂಟ್ ಬೋರ್ಡ್ ಎಂದು ಇದೆ.

We have toured all the Four States. We had been to West Bengal, Andhra Pradesh and Maharashtra. In the case of Sunderban Board, for every year, they have provided Rs. 30-35 Crores. What have you done here ? There is a Board Called "Telangana Regional Development Board"

ಶ್ರೀ ಎಸ್.ಆರ್. ಬೊಮ್ಮಾಯಿ.—೫೦ ಪರ್ಸೆಂಟ್ ಹಣವನ್ನು ಸುಂದರ್ ಬಾನ್ ಬೋರ್ಡಿಗೆ ಕೇಂದ್ರದವರು ಕೊಡುತ್ತಾರೆ.

ಶ್ರೀ ಧರ್ಮಸಿಂಗ್.—ನೀವು ಇಲ್ಲಿ ಪ್ರಾವಿಜನ್ ಮಾಡಿ ನಂತರ ಕೇಂದ್ರದವರನ್ನು ಹಣ ಕೇಳಬೇಕು. ಆ ಭಾಗಕ್ಕೆ ಆದ್ಯತೆ ಕೊಡಬೇಕು. ಸಪರೇಟ್ ಅಡ್ಮಿನಿಸ್ಟ್ರೇಷನ್ ಏಜೆನ್ಸಿಯನ್ನು ಮಾಡಲೇ

ಬೇಕು. ಆ ಭಾಗಕ್ಕೆ ಆಡಳಿತ ದೃಷ್ಟಿಯಿಂದ ಹೆಚ್ಚಿನ ಹಣವನ್ನು ಅಂಕಿಅಂಶಗಳ ಮುಖಾಂತರ ಕೊಡಬೇಕು. ಇದು ನಿಮ್ಮ ಮನಸ್ಸಿನಲ್ಲಿ ಮೊದಲು ಬರಬೇಕು. In 1980, we had a meeting with the Planning Commission members. ಈ ರಿಪೋರ್ಟ್ ಸರ್ಕಾರದಲ್ಲಿದೆ. ಇದನ್ನು ಪ್ಲಾನಿಂಗ್ ಡಿಪಾರ್ಟ್‌ಮೆಂಟಿನವರು ಪ್ರಿಪೇರ್ ಮಾಡಿ ಕೊಟ್ಟಿದ್ದಾರೆ. ನಮ್ಮ ಸ್ಟೇಟ್‌ನಲ್ಲಿ ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್ ಆಗಲೇ ಬೇಕಾಗಿದೆ. ನಾಗಪುರದಲ್ಲಿ ವಿದರ್ಭ ಬೋರ್ಡ್ ಎಂದು ಮಾಡಿದ್ದಾರೆ. ಇವತ್ತು ನಮ್ಮ ಭಾಗದ ಜನಗಳ ಸಮಸ್ಯೆಯನ್ನು ಬಗೆಹರಿಸಬೇಕಾದರೆ, ಹೈದರಾಬಾದ್ ಡೆವಲಪ್‌ಮೆಂಟ್ ಬೋರ್ಡಿಗೆ ಸರ್ಕಾರ ಒಪ್ಪಲೇಬೇಕು. ಈ ವಿಚಾರದಲ್ಲಿ ನಾವು ಪ್ರಧಾನ ಮಂತ್ರಿಗಳನ್ನು ಕೂಡ ಭೇಟಿ ಮಾಡಿದ್ದೆವು. ಇದನ್ನು ಮಾಡದೆ ಹೋದರೆ, ನಮ್ಮ ಭಾಗದಲ್ಲಿ ಒಂದು ರೀತಿಯ ಪಬ್ಲಿಕ್ ಓಪಿನಿಯನ್ ಕ್ರಿಯೇಟ್ ಆಗುತ್ತದೆ. ೧೯೬೯ರಲ್ಲಿ ಡಾ॥ ಚೆನ್ನಾರೆಡ್ಡಿಯವರು ಮುಖ್ಯ ಮಂತ್ರಿಗಳಾಗಿದ್ದಾಗ, ತೆಲಂಗಾಣ ವಿಚಾರದಲ್ಲಿ ೬ ತಿಂಗಳುಗಳ ಕಾಲ ದೊಡ್ಡ ಅಜಿಟೇಷನ್ ಮಾಡಲಾಯಿತು. ಇದು ತಮಗೆ ಗೊತ್ತಿದೆ. ಜಗತ್ತಿನಲ್ಲಿ ಫ್ರಾನ್ಸ್ ಅಜಿಟೇಷನ್ ಆದಮೇಲೆ ಮತ್ತೆ ಯಾವುದೇ ಅಜಿಟೇಷನ್ ಆ ಕಾಲದಲ್ಲಿ ಆಗಿರಲಿಲ್ಲ. ಆದ್ದರಿಂದ ಸರ್ಕಾರ ನಮ್ಮ ಭಾಗದ ಜನಗಳ ಸಮಸ್ಯೆಗಳನ್ನು ತೀವ್ರಗತಿಯಲ್ಲಿ ಮನ: ಪೂರ್ವಕವಾಗಿ, ಬಗೆಹರಿಸದೇ ಹೋದರೆ ಒಂದು ರೀತಿಯ ಭಾವನೆ ಆ ಭಾಗದ ಜನರ ಮನಸ್ಸಿನಲ್ಲಿ ಉಂಟಾಗುತ್ತದೆ. ಇವತ್ತು ಕೃಷ್ಣ ಮೇಲ್ದಂಡೆ ಯೋಜನೆಗೆ ರಿವೈಸ್ಡ್ ಎಸ್ಟಿಮೇಟ್ ಪ್ರಕಾರ ೭೫-೭೬ರಲ್ಲಿ ೧೦೭೧ ಕೋಟಿ ರೂಪಾಯಿ ಆಗಿದ್ದರೆ, ಇವತ್ತು ೨೦೦೦ ಕೋಟಿ ರೂಪಾಯಿಗೆ ಆಗಿದೆ. ಆದರೆ ನೀವು ೫೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕಾಗಲಿಲ್ಲ. ಬಛಾವತ್ ಅವಾರ್ಡ್ ಪ್ರಕಾರ ಇನ್ನು ೫೦ ವರ್ಷಗಳಾದರೂ ಕೃಷ್ಣ ಮೇಲ್ದಂಡೆ ಯೋಜನೆಯನ್ನು ಮುಗಿಸುವುದಕ್ಕಾಗುವುದಿಲ್ಲ. ವಿಶ್ವಬ್ಯಾಂಕ್ ನೆರವಿನಿಂದ ಬಂದಂತಹ ಈ ಪ್ರಾಜೆಕ್ಟ್ ನ್ಯಾಷನಲ್ ಪ್ರಾಜೆಕ್ಟ್ ಆಗಿದೆ. ಹೇಮಾವತಿ ಮತ್ತು ಹಾರಂಗಿ ಪ್ರಾಜೆಕ್ಟ್‌ಗಳಿಗೆ ಎಷ್ಟು ಹಣವನ್ನು ಪ್ರೊವೈಡ್ ಮಾಡಿದ್ದೀರಿ, ಅದನ್ನು ಕೂಡ ತಾವು ಹೇಳಬೇಕಾಗುತ್ತದೆ. ನಮ್ಮ ಭಾಗದಲ್ಲಿ ಗುಲ್ಬರ್ಗ, ಬೀದರ್ ರಾಯಚೂರು. ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ೭೩-೭೪ರಲ್ಲಿ ಸ್ಟೇಟ್ ಅವರೇಜ್ ೧೪% and in 1987-88, it is 21% but in our area, it is only 1.6%. In the case of Agricultural Income per hectare of agriculture land, the State average is 1826 but in our area, it is 876. Agricultural income per agricultural labourer, the State average is 843 but in our area, it is 735. In the case of industrial units, large and medium, in 1973-74, it was 282 but in 1985-86, it was 474 (i.e., State average) but in our area, in 1973-74, it was only 5 and in 1985-86, it was 7. Small scale industries, the State average was 13,342 in 1973-74, in 1985-86, it was 56,513 but in our area, in 1973-74, it was 138 and in 1985-96, it was 1480. In the case of communication of roads, in 1973-74, the State average (per 100 sq. kms) was 42 miles but in 1985-86, it was 59 but in our area, in 1973-74, it was 24 miles and in 1985-86, it was 33. In the case of education, i.e., literacy, the State average was 38.4 but in our area it was 26.5. You have constituted a Dry Land Development Board. You have provided very meagre amount. How can you improve our area with this meagre amount ? ಅದಕ್ಕೆ ಇವತ್ತಿನ ದಿವಸ ಎಲ್ಲಾ ಕಡೆಯಿಂದಲೂ ಕೂಗು ಕೇಳಿ ಬರುತ್ತಿದೆ. ಈ ಬಗ್ಗೆ ಒಂದು ಹೈದರಾಬಾದ್ ಡೆವಲಪ್‌ಮೆಂಟ್ ಬೋರ್ಡ್ ಆಗಬೇಕೆಂದು ಕೇಳುತ್ತಿದ್ದಾರೆ. ಪ್ಲಾನಿಂಗ್ ಮಿನಿಸ್ಟರ್‌ರವರು ಕೂಡ ಅಷ್ಯುರೆನ್ಸ್ ಕೊಟ್ಟಿದ್ದಾರೆ. ಕೇಂದ್ರ ಸರ್ಕಾರವನ್ನು ಹೆಚ್ಚಿನ ರೀತಿಯಲ್ಲಿ ನೀರನ್ನು ಬಿಡಬೇಕೆಂದು ಕೇಳಿಕೊಂಡಿದ್ದೇವೆಂದು ತಾವೂ ಕೂಡ ಹೇಳಿದ್ದೀರಿ. ತಾವು ಹೇಗಾದರೂ ಸರಿ ಆ ಕೂಗಿಗೆ ಓಗೊಟ್ಟು ಆ ಭಾಗದ ಜನರಿಗೆ ಎಲ್ಲಾ ರೀತಿಯ ಸೌಲಭ್ಯಗಳನ್ನು ಒದಗಿಸುವ ಸಲುವಾಗಿ ಮತ್ತು ಒಂದು ಪ್ರತ್ಯೇಕ

ಎಸ್ಟಾಬ್ಲಿಷ್‌ಮೆಂಟ್ ಮಾಡುವ ಸಲುವಾಗಿ ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್ ಎಂದು ಒಂದು ಬೋರ್ಡನ್ನು ಮಾಡಬೇಕೆಂದು ಹೇಳಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪಿ.ಎಸ್. ರಾಣೆ (ಕಾರವಾರ್).—ಸನ್ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ಮಂಡಿಸಿರುವ ನೀರಾವರಿ ಮತ್ತು ಕಂದಾಯ ಇಲಾಖೆಯ ಬೇಡಿಕೆಗಳನ್ನು ನಾನು ವಿರೋಧಿಸುತ್ತಾ, ಈ ವಿಷಯಕ್ಕೆ ಸಂಬಂಧಪಟ್ಟ ಹಾಗೆ ನನ್ನ ಎರಡು ಅನಿಸಿಕೆಗಳನ್ನು ತಮ್ಮ ಮುಂದಿಡಲು ಇಚ್ಛಿಸುತ್ತೇನೆ. ಪ್ರಥಮವಾಗಿ ನೀರಾವರಿ ವಿಷಯದಲ್ಲಿ ಹೇಳಬೇಕಾದರೆ, ಈಗಾಗಲೇ ಅನೇಕ ಜನ ಮಾನ್ಯ ಸದಸ್ಯರು ಕರ್ನಾಟಕದಲ್ಲಿ ಜನತಾ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ನೀರಾವರಿ ಬಗ್ಗೆ ಯಾವ ಪ್ರಮಾಣದಲ್ಲಿ ಆದ್ಯತೆಯನ್ನು ಕೊಡಬೇಕಾಗಿತ್ತೋ ಆ ಪ್ರಮಾಣದಲ್ಲಿ ಆದ್ಯತೆಯನ್ನು ಕೊಟ್ಟಿಲ್ಲವೆಂದು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ನನ್ನ ಜಿಲ್ಲೆಯಮಟ್ಟಿಗೆ ಹೇಳುವುದಾದರೆ, ನೀರಾವರಿ ವಿಷಯದಲ್ಲಿ ನಮ್ಮಲ್ಲಿರತಕ್ಕಂಥ ಚಿಕ್ಕ ನೀರಾವರಿ ವಲಯಕ್ಕೆ ಒಳಪಡುವಂಥ ಒಂದೇ ಒಂದು ಯೋಜನೆ ಎಂದರೆ ಹಳಿಯಾಳದಲ್ಲಿನ ದುರ್ಗಹಳ್ಳವನ್ನು ಒಂದು ಬಿಟ್ಟರೆ ಯಾವುದೇ ನೀರಾವರಿ ಅಥವಾ ಚಿಕ್ಕ ನೀರಾವರಿ ಯೋಜನೆಯೂ ನಮ್ಮ ಭಾಗದಲ್ಲಿ ಬರುವುದಿಲ್ಲ. ಆದರೆ ಈವತ್ತು ಉತ್ತರ ಕನ್ನಡಜಿಲ್ಲೆ, ದಕ್ಷಿಣ ಕನ್ನಡಜಿಲ್ಲೆ ಹಾಗೂ ಕರಾವಳಿ ಪ್ರದೇಶಗಳಲ್ಲಿ ಸಾವಿರಾರು ಎಕರೆ ಜಮೀನಿಗೆ ಸಮುದ್ರದ ನೀರು ನುಗ್ಗಿ ಕೃಷಿಗೆ ಅಯೋಗ್ಯವಾಗಿ ಮಾರ್ಪಾಡಾಗಿದೆ. ಇಂಥ ಭೂಮಿಯನ್ನು ಅಭಿವೃದ್ಧಿಗೊಳಿಸಲು ಘಜನಿ ಭೂಮಿ ಎಂದು ಒಂದು ಯೋಜನೆಯನ್ನು ಮಾಡಿ ಸರ್ಕಾರ ಅನೇಕ ಕಡೆ ತೆಗೆದುಕೊಂಡರೂ ಸಹ ಇನ್ನೂ ಅನೇಕ ಕಡೆ ಕಾಮಗಾರಿಗಳು ಪೂರ್ಣವಾಗದೆ ಇರುತ್ತವೆ. ಈ ಘಜನಿ ಭೂಮಿಗಳಿಗೆ ಯಾವರೀತಿ ಮಹತ್ವವನ್ನು ಕೊಡಬೇಕಾಗಿತ್ತೋ ಅಷ್ಟು ಮಹತ್ವವನ್ನು ಕೊಡಲಿಕ್ಕೆ ಆಗದೆ ಸರ್ಕಾರ ವಿಫಲವಾಗಿದೆ ಎಂದು ವಿಷಾದದಿಂದ ಹೇಳಬೇಕಾಗಿದೆ. ಘಜನಿ ಭೂಮಿ ಹಾಗೂ ಈ ಕ್ಷಾರ ಭೂಮಿ ಯೋಜನೆಯ ಸಂಬಂಧದಲ್ಲಿ ಮಹಾರಾಷ್ಟ್ರದಲ್ಲಿ ಒಂದು ಮಾದರಿಯಾದ ರೀತಿಯಲ್ಲಿ ಯೋಜನೆಯನ್ನು ಮಾಡಿದ್ದಾರೆ. ಆ ಬಗ್ಗೆ ನಮ್ಮ ಸರ್ಕಾರಕ್ಕೂ ಅನೇಕ ಸಲ ವಿನಂತಿ ಮಾಡಿಕೊಂಡಿದ್ದೇವೆ. ಘಜನಿ ಭೂಮಿ ಯೋಜನೆಯನ್ನು ಮಾದರಿಯಾಗಿ ತೆಗೆದುಕೊಂಡು ಕೆಲ ಪ್ರದೇಶಗಳಲ್ಲಿ ಭೂಮಿಯ ಮಣ್ಣನ್ನು ಕೃಷಿ ಮಾಡಲಿಕ್ಕೆ ಮತ್ತು ಸುಧಾರಿತ ಭೂಮಿಯಲ್ಲಿ ಬತ್ತವನ್ನು ಬೆಳೆಯಲಿಕ್ಕೆ ಯೋಗ್ಯವನ್ನಾಗಿ ಮಾಡಬೇಕು. ಬಂಜರಾಗಿ ಯಾವ ಭೂಮಿ ಘಜನಿ ವ್ಯಾಪ್ತಿಗೆ ಒಳ ಪಡುತ್ತದೆ ಅಂಥ ಭೂಮಿಯನ್ನು ಸರ್ಕಾರದವರು ಸರಿಯಾದ ರೀತಿಯಲ್ಲಿ ವ್ಯವಸಾಯ ಮಾಡಲು ಅನುಕೂಲವಾಗುವಂತೆ ಯೋಗ್ಯ ಭೂಮಿಗಳನ್ನಾಗಿ ಮಾರ್ಪಾಡು ಮಾಡಬೇಕು. ನಮ್ಮ ಕಾರವಾರದಲ್ಲಿರತಕ್ಕಂಥ ಕಡುವಾಣ ಕಿನ್ನರಿ ಘಜನಿ, ಮತ್ತು ಚಿತ್ತಾಪುರ ಘಜನಿ ಯೋಜನೆಯಲ್ಲಿ ಕೃಷಿಕರು ಅಲ್ಪಸ್ವಲ್ಪ ಭೂಮಿಯಲ್ಲಿ ಕೃಷಿ ಮಾಡತಕ್ಕಂಥ ಅವಕಾಶವನ್ನು ತೆಗೆದುಕೊಂಡಿದ್ದರೂ ಅದಕ್ಕೂ ಸಹ ಸಂಚಕಾರ ಬಂದಿದೆ. ನೀರಾವರಿ ಇಲಾಖೆಯಿಂದ ಸರಿಯಾದ ಸೌಲಭ್ಯಗಳು ಸಿಗುತ್ತಿಲ್ಲ. ಹಿಂದೆ ಕಾರ್‌ಲ್ಯಾಂಡ್ ಡೆವಲಪ್‌ಮೆಂಟ್ ಬೋರ್ಡ್ ಮಾಡುತ್ತೇವೆಂದು ಹೇಳಿದ್ದರು. ಅದು ಕೇವಲ ಪತ್ರಿಕೆಗಳಲ್ಲಿ ಬಂದಿತೇ ಹೊರತಾಗಿ ಕಾರ್ಯರೂಪಕ್ಕೆ ಬರಲಿಲ್ಲ. ನನಗೆ ತಿಳಿದಮಟ್ಟಿಗೆ ಜಿಲ್ಲಾ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಒಂದು ಬೋರ್ಡ್ ಮಾಡಿದ್ದಾರೆಂದು ತಿಳಿದುಬಂದಿತ್ತು. ಆದರೆ ಆ ಬೋರ್ಡ್ ಒಂದು ಸಭೆಯನ್ನು ಕರೆಯಲಿಲ್ಲ. ಒಂದು ಕಾರ್ಯಕ್ರಮವನ್ನೂ ಕೂಡ ಹಾಕಿಕೊಂಡದ್ದು ಕಂಡುಬರಲಿಲ್ಲ. ಇಂಥ ಒಂದು ಒಳ್ಳೆಯ ಕಾರ್ಯಕ್ರಮವನ್ನು ಮಾಡಲು ಯೋಜನೆಯನ್ನು ಹಾಕಿಕೊಂಡು ಸರ್ಕಾರದವರು ಕೂಡಲೇ ಕ್ರಮ ತೆಗೆದುಕೊಳ್ಳಬೇಕು. ಇದರಿಂದ ಲಕ್ಷಾಂತರ ಎಕರೆಗಳಷ್ಟು ಭೂಮಿಯಲ್ಲಿ ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯೋಗ್ಯರೀತಿಯಲ್ಲಿ ಬೆಳೆ ಬೆಳೆಯಲು ಅವಕಾಶವನ್ನು ಕಲ್ಪಿಸಿ ಕೊಟ್ಟರೆ ಹೆಚ್ಚಿನ ಬೆಳೆಯನ್ನು ಬೆಳೆಯಲು ಸಾಧ್ಯವಾಗುತ್ತದೆಂದು ಹೇಳಬಯಸುತ್ತೇನೆ.

ಇನ್ನು ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್ ಎಂಬುದನ್ನು ಸರ್ಕಾರ ಹೊಸದಾಗಿ ಯೋಜಿಸಿದೆ. ಇದು ಉತ್ತರ ಕನ್ನಡ ಜಿಲ್ಲೆಯ ಜನರಿಗೆ ಶಾಪವಾಗಿ ಪರಿಣಮಿಸಿದೆ ಎಂದು ಹೇಳಬೇಕಾಗುತ್ತದೆ. ಏಕೆಂದರೆ ೧೯೮೦–೮೨ ಮತ್ತು ೮೨–೮೮ರ ಅವಧಿಯಲ್ಲಿ ನಮ್ಮ ಕ್ಷೇತ್ರದಲ್ಲಿ ಅನೇಕ ಕಡೆ ಲಿಫ್ಟ್ ಇರಿಗೇಷನ್ ಸ್ಕೀಮನ್ನು ಬಜೆಟ್ಟಿನಲ್ಲಿ ಸೇರಿಸಿದ್ದರು. ಕಾಳಿ ಜಲ ವಿದ್ಯುತ್ ಯೋಜನೆಯಿಂದ ನಿರ್ವಸಿತರಾದವರಿಗೆ ರಾಮನಗರ ಕ್ಷೇತ್ರದಲ್ಲಿ ೪ ಲಿಫ್ಟ್ ಇರಿಗೇಷನ್ ಸ್ಕೀಮನ್ನು ತೆಗೆದುಕೊಂಡು ಅವುಗಳ ಸಂಪೂರ್ಣ ಯೋಜನೆಯನ್ನು ಮಾಡಬೇಕೆಂದು ಟೆಂಡರ್ ಹಾಕುವಂಥ ಸಂದರ್ಭದಲ್ಲಿ ಈ ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್ ಆದುದರಿಂದ ಎಲ್ಲಾ ಕಾಮಗಾರಿಗಳನ್ನು ಲಿಫ್ಟ್ ಇರಿಗೇಷನ್ ಕಾರ್ಪೊ

ರೇಷನ್ನಿಗೆ ವಹಿಸಿಕೊಟ್ಟನಂತರ ಇವತ್ತಿನವರೆಗೆ ಯಾವುದೇ ಕಾರ್ಯ ಪ್ರಾರಂಭವಾಗಿಲ್ಲ. ಕಾರಣವೇನೆಂದರೆ ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್ ಯಾವುದೇ ಕೆಲಸವನ್ನು ತೆಗೆದುಕೊಳ್ಳಬೇಕಾದರೆ ಅಲ್ಲಿ ಶೇಕಡ ೨೦ರಷ್ಟು ಹಣವನ್ನು ಸಂಬಂಧಪಟ್ಟ ರೈತರು ವಂತಿಗೆ ರೂಪದಲ್ಲಿ ತಂದು ಕಾರ್ಪೊರೇಷನ್ನಿಗೆ ತುಂಬ ಬೇಕು. ಇಲ್ಲದಿದ್ದರೆ ಕೆಲಸವನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲವೆಂಬ ನಿಲುವನ್ನು ಸರ್ಕಾರ ತೆಗೆದು ಕೊಂಡಿರುವುದರಿಂದ ಅಷ್ಟು ಹಣವನ್ನು ಚಿಕ್ಕಪುಟ್ಟ ರೈತರು ಇರತಕ್ಕ ಉತ್ತರ ಕನ್ನಡ ಜಿಲ್ಲೆಯಲ್ಲಿ ಸರ್ಕಾರಕ್ಕೆ ವಂತಿಗೆ ರೂಪದಲ್ಲಿ ಕೊಡಲಿಕ್ಕೆ ಸಾಧ್ಯವಿಲ್ಲ. ಮೊದಲೇ ಅಲ್ಲಿನ ಜನರು ಕಾಳಿ ನದಿ ಜಲ ವಿದ್ಯುತ್ ಯೋಜನೆಗೆ ತಮ್ಮ ಭೂಮಿ ಆಸ್ತಿ-ಪಾಸ್ತಿಗಳನ್ನು ಎರವಲಾಗಿ ಕೊಟ್ಟಿದ್ದು ಪುನರ್ವಸತಿ ಕಲ್ಪಿಸಿಕೊಡಿ ಎಂದು ಕೇಳುತ್ತಿದ್ದಾರೆ. ಅಂಥವರಿಗೆ ಹೆಚ್ಚಿನ ಅನುಕೂಲ ಮಾಡಿಕೊಡುವುದು ಬಿಟ್ಟು ಪ್ರತಿಕೂಲ ಧೋರಣೆ ತಾಳಿದರೆ ನಿಜವಾಗಿ ಅವರಿಗೆ ಅನ್ಯಾಯ ಮಾಡಿ ದಂತಾಗುತ್ತದೆ. ಆದ್ದರಿಂದ ಸರ್ಕಾರಕ್ಕೆ ಆಗ್ರಹಪಡಿಸುತ್ತೇನೆ, ರಾಜ್ಯಮಟ್ಟದಲ್ಲಿ ಯಾವುದೇ ಪಾಲಿಸಿ ಮಾಡಿ, ಆದರೆ ಉತ್ತರ ಕನ್ನಡ ಜಿಲ್ಲೆಯ ಮಟ್ಟಿಗೆ ಮಾತ್ರ ರೈತರಿಂದ ವಂತಿಗೆ ಪಡೆಯುವ ಕಾರ್ಯಕ್ರಮ ಏನಿದೆ ಅದನ್ನು ಕೈಬಿಡಬೇಕು. ಇಲ್ಲದಿದ್ದರೆ ಆ ಭಾಗದ ಜನರು ಚಳುವಳಿ ಮಾಡದೆ ವಿಧಿಇಲ್ಲವೆಂದು ಹೇಳಬೇಕಾಗುತ್ತದೆ. ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್ ಬಗ್ಗೆ ಇನ್ನೊಂದು ಮಾತನ್ನು ಹೇಳ ಬೇಕಾಗುತ್ತದೆ. ಈ ಕಾರ್ಪೊರೇಷನ್ ತನಗೆ ಬೇಕಾದ ಜನರನ್ನು ತುಂಬಿಕೊಳ್ಳುವುದಕ್ಕೆ ಅಥವಾ ನೌಕರಿ ಕೊಡಲಿಕ್ಕೆ ಅಥವಾ ಸಾಕುವುದಕ್ಕೆ ನಿರ್ಮಿಸಿದ ಸಂಸ್ಥೆ ಏನೋ ಎಂಬ ಅನುಮಾನ ಬರುತ್ತದೆ. ೬೦ ಜನ ಇಂಜಿನಿಯರ್‌ಗಳನ್ನು ಹೊಸದಾಗಿ ನೇಮಿಸಿಕೊಂಡಿದ್ದಾರೆ. ಅವರನ್ನು ನೇಮಿಸಿಕೊಳ್ಳುವಾಗ ಯಾವುದೇ ರೋಸ್ಟರ್ ಸಿಸ್ಟಂ ಆಗಲಿ ಯಾವುದೇ ಸರ್ಕಾರಿ ಕ್ರಮವನ್ನು ಅನುಸರಿಸಿಲ್ಲ. ಅಲ್ಲಿ ಈಗಾಗಲೇ ಏನು ಹುದ್ದೆಗಳಿಗೆ ತಮಗೆ ಬೇಕಾದವರನ್ನು ನೇಮಿಸಿಕೊಂಡಿದ್ದಾರೆ ಅವರು ಯಾರನ್ನೂ ರೆಗ್ಯುಲರೈಸ್ ಮಾಡಬಾರದೆಂದು ಸರ್ಕಾರಕ್ಕೆ ವಿನಂತಿಸಿಕೊಳ್ಳುತ್ತೇನೆ. ರೆಗ್ಯುಲರೈಸ್ ಮಾಡುವಾಗ ರೋಸ್ಟರ್ ಸಿಸ್ಟಂ ಅನ್ನು ಅಳವಡಿಸಿ ಮಾಡಬೇಕೆಂದು ಒತ್ತಾಯಿಸುತ್ತೇನೆ. ಕಂದಾಯ ಇಲಾಖೆಯಲ್ಲಿ ಪುನರ್ವಸತಿ ಬಗ್ಗೆ ಹೇಳುವುದಾದರೆ, ಸಾಮಾನ್ಯವಾಗಿ ಸರ್ಕಾರ ಬೃಹತ್ ಯೋಜನೆಗಳನ್ನು ಕೈಗೊಳ್ಳಬೇಕಾದರೆ ಯಾವ ಭಾಗದಲ್ಲಿ ಆ ಯೋಜನೆಯನ್ನು ಕಾರ್ಯರೂಪದಲ್ಲಿ ತರಬೇಕಾಗುತ್ತದೆ ಆ ಭಾಗದ ಜನರಿಗೆ ಆ ಯೋಜನೆಯನ್ನು ಕಾರ್ಯರೂಪದಲ್ಲಿ ತರುವ ಪ್ರಾರಂಭದಲ್ಲಿ ಅನೇಕ ಆಸೆ ಆಮಿಷಗಳನ್ನು ಒಡ್ಡುತ್ತದೆ, ಅನೇಕ ಭರವಸೆಗಳನ್ನು ಕೊಡುತ್ತದೆ. ಸ್ವರ್ಗವನ್ನೇ ಬಾಗಿಲಿಗೆ ತರುತ್ತದೆ. ರಾಷ್ಟ್ರದ ಸಲುವಾಗಿ ತ್ಯಾಗ ಮಾಡಬೇಕು, ಆಸ್ತಿ-ಪಾಸ್ತಿಗಳನ್ನು ಸರ್ಕಾರಕ್ಕೆ ವಹಿಸಿಕೊಡಬೇಕೆಂದು ಜನತಾ ಪ್ರತಿನಿಧಿಗಳು ಜನರನ್ನು ಬಹಳವಾಗಿ ಒತ್ತಾಯಿಸುತ್ತಾರೆ. ರಾಷ್ಟ್ರೀಯ ಅಥವಾ ರಾಜ್ಯಮಟ್ಟದ ಯೋಜನೆಗಳಿಂದ ರಾಜ್ಯಕ್ಕೆ ಅಪಾರವಾಗಿ ಸಂಪನ್ಮೂಲಿಕ ಪ್ರಯೋಜನವಾದರೂ ಸ್ಥಳೀಯ ಜನರು ಮಾತ್ರ ಪಡುವಂಥ ಕಷ್ಟ ಯಾವ ಕಾಲಕ್ಕೂ ದೂರವಾಗುವುದಿಲ್ಲ. ಉದಾಹರಣೆಗೆ ಹೇಳಬೇಕಾದರೆ, ೧೯೮೦ರಲ್ಲಿ ಸೂಪಾ ಡ್ಯಾಮಿನ ನಿರ್ಮಾಣ ಕಾರ್ಯ ಪ್ರಾರಂಭವಾಯಿತು. ಆ ಡ್ಯಾಮಿನ ಅಡಿಯಲ್ಲಿ ಮುಳುಗುವಂಥ ಸಾವಿರಾರು ಕುಟುಂಬಗಳಿಗೆ ನಾವು ಪುನರ್ವಸತಿ ಕಲ್ಪಿಸಲಿಕ್ಕೆ ರಾಮನಗರದಲ್ಲಿ ವ್ಯವಸ್ಥೆ ಮಾಡಿದ್ದೇವೆಂದು ಹೇಳಿದರೂ ಇವತ್ತಿಗೂ ಸೂಪಾ ಡ್ಯಾಮಿನ ೨ನೇ ಮತ್ತು ೩ನೇ ಹಂತದ ಯೋಜನೆಯಲ್ಲಿ ಮುಳುಗಡೆಯಾದ ಜನರಿಗೆ ಇರಲಿಕ್ಕೆ ಜಾಗ ಇಲ್ಲ, ವಾಸಿಸಲಿಕ್ಕೆ ಮನೆ ಇಲ್ಲ. ಅವರೆಲ್ಲ ಅರಣ್ಯದಲ್ಲಿ ಅಲೆಯುತ್ತಿದ್ದಾರೆ. ಸರ್ಕಾರ ಸದರಿ ಯೋಜನೆಯಿಂದ ಲಕ್ಷಾಂತರ ರೂಪಾಯಿಗಳ ಪ್ರಯೋಜನ ಪಡೆಯುತ್ತಿರುವಾಗ. ಆ ಯೋಜನೆಗಾಗಿ ತ್ಯಾಗ ಮಾಡಿದ ಜನರು ಊರೂರಿಗೆ ಅಲೆಯುವ ದುರ್ದೈವ ಬಂದಿರುವುದರ ಬಗ್ಗೆ ಸರ್ಕಾರ ಗಂಭೀರವಾಗಿ ಯೋಚಿಸಬೇಕು.

೧೯೮೦ರಲ್ಲಿ ಸ್ಥಳಾಂತರಗೊಂಡ ಜನರಿಗೆ ಪುನರ್ವಸತಿ ಹಾಗೂ ಸೈಟ್ ಕೊಡುವ, ಮನೆ ಕೊಡುವ ವಿಷಯ ದೂರವಾಗಿದೆ. ಆದರೆ ಅವರು ಕಳೆದುಕೊಂಡ ಜಮೀನಿಗೆ ಪರಿಹಾರವನ್ನೂ ಕೂಡಾ ಸರಿಯಾಗಿ ಕೊಟ್ಟಿಲ್ಲ. ಇವತ್ತಿನದಿವಸ ಅಲ್ಲಿಯ ಭೂಸ್ವಾಧೀನ ಅಧಿಕಾರಿಗಳ ಇಲಾಖಾ ಕಛೇರಿಗಳು ಭ್ರಷ್ಟಾಚಾರದ ಕೂಪಗಳಾಗಿವೆ ಎಂದು ಹೇಳಬೇಕಾಗುತ್ತದೆ. ಯಾರು ಏಜೆಂಟರ ಮುಖಾಂತರ ಕಳೆದುಕೊಂಡ ಭೂಮಿಗೆ ಪರಿಹಾರವನ್ನು ಪಡೆದುಕೊಳ್ಳುತ್ತಾರೋ ಅವರಿಗೆ ಮಾತ್ರ ಹೆಚ್ಚಿನ ಪ್ರಮಾಣದಲ್ಲಿ ಪರಿಹಾರ ಸಿಗುತ್ತದೆ. ಉಳಿದವರಿಗೆ ಅನೇಕ ಕಾರಣಗಳನ್ನು ಒಡ್ಡಿ ಅಲ್ಲಿಯ ಅಧಿಕಾರಿಗಳು ತೊಂದರೆ ಉಂಟು ಮಾಡಿ ಆ ಅಮಾಯಕ ಜನರಿಗೆ ಕಷ್ಟಕ್ಕೆ ಒಳಪಡಿಸುವ ಕೆಲಸ ಭೂಸ್ವಾಧೀನ ಕಛೇರಿಯಲ್ಲಿ ನಡೆಯುತ್ತಿದೆ. ಈ ಕಛೇರಿಗಳು ತಮ್ಮ ಸೂಪಾದ ಜನರಿಗೆ ಒಂದು ಧರೋಡೆ ಕಛೇರಿಗಳಾಗಿವೆ ಎಂದರೆ ಅತಿಶಯೋಕ್ತಿ

ಯಾಗಲಾರದು. ಇವತ್ತು ಅಲ್ಲಿ ಹಗಲು ದರೋಡೆ ನಡೆಯುತ್ತಿದೆ. ಅನೇಕ ವರ್ಷಗಳಿಂದ ಅಲ್ಲಿ ಅಧಿಕಾರಿಗಳು ಬೀಡುಬಿಟ್ಟಿದ್ದಾರೆ. ಆ ಅಜ್ಞಾನೀ ಜನರನ್ನು ಯಾವ ರೀತಿ ಸುಲಿಗೆ ಮಾಡಬೇಕೆಂದು ಸಂಪೂರ್ಣ ಮಾಹಿತಿ ಅವರಲ್ಲಿ ಇದೆ. ಇದನ್ನು ಅವರು ಮುಂದುವರಿಸುತ್ತಿದ್ದಾರೆ. ಈ ಬಗ್ಗೆ ನಾನು ಮಾನ್ಯ ಮಂತ್ರಿಗಳ ಗಮನ ಸೆಳೆದಿದ್ದಕ್ಕೆ ಅವರು ಹೇಳಿದರು, ಇನ್ನು ಮುಂದೆ ಪರಿಹಾರ ಹಂಚುವಾಗ ಸ್ಥಳೀಯ ಶಾಸಕರ ಹಾಗೂ ಜಿಲ್ಲಾ ಪರಿಷತ್ತಿನ ಸದಸ್ಯರ ಮುಖಾಂತರ ಹಂಚುತ್ತೇವೆ ಎಂದು. ಇವತ್ತು ಅದೊಂದನ್ನೇ ಮಾಡಿದರೂ ಸರಿಯಾದ ಪರಿಹಾರ ಸಿಕ್ಕುವುದಿಲ್ಲ. ಕೆಲವು ಸಂದರ್ಭದಲ್ಲಿ ಶಾಸಕರ ಜಿಲ್ಲಾ ಪರಿಷತ್ ಸದಸ್ಯರ ಸಮ್ಮುಖದಲ್ಲಿ ಈ ಪರಿಹಾರ ಹಂಚಬಹುದು, ಆದರೆ ಈ ಪರಿಹಾರವನ್ನು ನಿಗದಿ ಮಾಡುವಾಗ ಯಾರಿಗೆ ಸಿಗಬೇಕು, ಯಾರಿಗೆ ಯಾವ ಪ್ರಮಾಣದಲ್ಲಿ ಸಿಗಬೇಕೆಂದು ನಿಗದಿ ಮಾಡುವಾಗಲೂ ಸ್ಥಳೀಕ ಜನರ ಮುಖಾಂತರವೇ ಆಗಬೇಕು ಎಂದು ಹೇಳುತ್ತೇನೆ. ಇವತ್ತಿನದಿವಸ ನಮ್ಮ ಕ್ಷೇತ್ರದ ಒಂದು ತುದಿಯಿಂದ ಮತ್ತೊಂದು ತುದಿಯುವರೆವಿಗೂ ವಿವಿಧ ರಾಷ್ಟ್ರೀಯ ಹಾಗೂ ರಾಜ್ಯಮಟ್ಟದ ಯೋಜನೆಗಳು ಸರಪಳಿಯಾಕಾರದಲ್ಲಿ ವ್ಯಾಪಿಸಿದೆ. ೧ನೇ ಹಂತದ ಯೋಜನೆ ಒಂದು ಕಡೆ, ಕಾಳೀ ೨ನೇ ಹಂತದ ಯೋಜನೆ ಒಂದು ಕಡೆ, ಕೈಗಾ ಅಣು ವಿದ್ಯುತ್ ಯೋಜನೆ ಒಂದು ಕಡೆ, ಸೀ–ಬರ್ಡ್ ಯೋಜನೆ ಒಂದು ಕಡೆ. ಹೀಗೆ ಸಾವಿರಾರು ಕುಟುಂಬಗಳು ಈ ವಿವಿಧ ಯೋಜನೆಗಳ ಕೆಳಗೆ ಸ್ಥಳಾಂತರಗೊಳ್ಳುವ ಸಂದರ್ಭ ಇದೆ. ಈ ಜನರಿಗೆಲ್ಲಾ ಯಾವ ರೀತಿಯ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ ? ಇವರ ಪುನರ್ವಸತಿ ಬಗ್ಗೆ ಸರ್ಕಾರ ಸರಿಯಾದ ಕಾರ್ಯಕ್ರಮವನ್ನು ಹಾಕಿಕೊಂಡಿಲ್ಲ ಎಂದು ನಾನು ಹೇಳಬೇಕಾಗುತ್ತದೆ. ಕೇಂದ್ರ ಸರ್ಕಾರದವರು ನೌಕಾನೆಲೆ ಯೋಜನೆ ಕೆಳಗೆ ಭೂ ಪರಿಹಾರ ಕೊಡುವುದಕ್ಕೆ, ಪುನರ್ವಸತಿ ಮಾಡುವುದಕ್ಕೆ ಸುಮಾರು ೨೩ ಕೋಟಿ ರೂಪಾಯಿಗಳನ್ನು ಜನವರಿ ೧೯೮೭ರಲ್ಲಿ ರಾಜ್ಯ ಸರ್ಕಾರಕ್ಕೆ ಸಂದಾಯ ಮಾಡಿದ್ದಾರೆ. ಇದರಲ್ಲಿ ಇದುವರೆವಿಗೂ ಯಾವ ಪ್ರಮಾಣದಲ್ಲಿ ಸಂಬಂಧಪಟ್ಟ ರೈತರಿಗೆ ಪರಿಹಾರವನ್ನು ಕೊಟ್ಟಿದ್ದೀರಿ ? ನೀವು ಯಾವ ರೀತಿ ಈ ಬಗ್ಗೆ ಕಾರ್ಯಪ್ರವೃತ್ತರಾಗಿದ್ದೀರೆಂಬುದನ್ನು ತಿಳಿದುಕೊಳ್ಳುವುದಕ್ಕೆ ಹೋದರೆ ಬಹಳ ನಿರಾಶೆಯಾಗುತ್ತದೆ. ಇವತ್ತಿನದಿವಸ ಅವಾರ್ಡ್ ಮಾಡುವುದಕ್ಕೆ ಏಕೆ ತಡವಾಯಿತು? ಇದನ್ನು ನಿರ್ಧಾರ ಮಾಡುವುದರಲ್ಲಿ ಏಕೆ ತಡವಾಯಿತು? ಅದು ಏನೇ ಇದ್ದರೂ ಶೇಕಡಾ ೮೦ರಷ್ಟು ಭಾಗವನ್ನು ರೈತರಿಗೆ ಅವಾರ್ಡ್ ಮುಖಾಂತರ ಕೊಡಬಹುದಾಗಿತ್ತು. ಇವತ್ತಿನದಿವಸ ರಕ್ಷಣಾ ಇಲಾಖೆಯುವರಿಂದ ಸರ್ಕಾರದ ಮೇಲೆ ಒತ್ತಡ ಬರುತ್ತಿದೆ. ಒಂದೇ ಕಾಲದಲ್ಲಿ ಎಲ್ಲಾ ಜನರನ್ನೂ ಬೇರೆ ಕಡೆಗೆ ಹಾಕುವ ಪ್ರಶ್ನೆ ಇದಲ್ಲ. ಇವತ್ತು ನಾನು ವಿಷಾದದಿಂದ ಹೇಳಬೇಕಾಗುತ್ತದೆ. ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಒಂದು ಲಿಖಿತ ಕರಾರು ಕೊಟ್ಟಿದೆ. ಅದು ಏನೆಂದರೆ ಭೂ ಪರಿಹಾರ ಮತ್ತು ಪುನರ್ವಸತಿ ಸಲುವಾಗಿ ೨೩ಕೋಟಿ ರೂಪಾಯಿಗಳನ್ನು ಸಂದಾಯ ಮಾಡಿದರೆ ಎಲ್ಲಾ ಜಮೀನನ್ನು ನಾವು ಅಕ್ಟೋಬರ್ ೧೯೮೭ರ ಒಳಗೆ ನಿಮಗೆ ವಹಿಸುತ್ತೇವೆಂದು ಹೇಳಿದ್ದಾರೆ. ಆದರೆ ಇವತ್ತಿನವರೆವಿಗೂ ವಹಿಸಿಲ್ಲ. ಆದರೆ ವಹಿಸಿಕೊಡುವ ಸ್ಥಿತಿಯಲ್ಲಿ ಈ ಜನರ ಪರಿಸ್ಥಿತಿ ಏನಾಗಿದೆ ಎಂಬುದನ್ನು ನೋಡಬೇಕಾಗಿದೆ ಈ ವಿಷಯದಲ್ಲಿ ಈ ಸರ್ಕಾರ ಜವಾಬ್ದಾರಿಯುತವಾಗಿ ನಡೆದುಕೊಂಡಿಲ್ಲ, ಕೇಂದ್ರ ಸರ್ಕಾರದಿಂದ ಪಡೆದ ಹಣವನ್ನು ಈಗಾಗಲೇ ಬೇರೆ ಕಡೆ ಉಪಯೋಗಿಸಿಕೊಂಡು ಬೇಜವಾಬ್ದಾರಿಯಿಂದ ಈ ಸರ್ಕಾರ ನಡೆಯುತ್ತಿದೆ ಎಂದು ತಮ್ಮ ಮುಖಾಂತರ ಈ ಸರ್ಕಾರಕ್ಕೆ ಎಚ್ಚರಿಕೆ ಕೊಡಬೇಕಾಗುತ್ತದೆ.

ಅಧ್ಯಕ್ಷರು.—ವೇಳೆ ಆಯಿತು. ತಮ್ಮ ಭಾಷಣ ಮುಕ್ತಾಯ ಮಾಡಿ.

ಶ್ರೀ ಪಿ. ಎಸ್. ರಾಣೆ.—ಹೆಚ್ಚಿನ ಕಾಲಾವಕಾಶ ಇಲ್ಲದ ಕಾರಣ ಇಷ್ಟು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಅಧ್ಯಕ್ಷರೆ, ಯೋಜನೆ, ನೀರಾವರಿ ಮತ್ತು ಕಂದಾಯ ಇಲಾಖೆ ಬೇಡಿಕೆಗಳನ್ನು ವಿರೋಧಕ್ಕಾಗಿ ವಿರೋಧಿಸದೆ, ಇವರ ಸರ್ಕಾರ ಹಳಿ ತಪ್ಪಿದ ರೈಲಿನಂತೆ ಹೋಗುತ್ತಿರುವುದಕ್ಕಾಗಿ ಇದನ್ನು ವಿರೋಧಿಸುತ್ತೇನೆ. ಈ ಒಂದು ವರದಿಯ ಸಾರಾಂಶವನ್ನು ನೋಡಿದರೆ ಅನ್ಯಥಾ ಮಾರ್ಗವಿಲ್ಲದೆ ವಿರೋಧಿಸಬೇಕಾಗುತ್ತದೆ. ಈ ರಾಜ್ಯದ ಯೋಜನಾ ಗಾತ್ರವು ೯೧೭ ಕೋಟಿ ರೂಪಾಯಿಗಳಷ್ಟು ಇದ್ದುದನ್ನು ಇಂದು ೭೫೫ ಕೋಟಿ ರೂಪಾಯಿಗಳಿಗೆ ಇಳಿಸಿದ್ದಾರೆ. ಇದನ್ನು ನೋಡಿದರೆ ಈ ರಾಜ್ಯದ ಪ್ರಗತಿ ಯಾವ ರೀತಿ ಸಾಗುತ್ತದೆ ಎಂಬುದು ನಮಗೆ ಮನವರಿಕೆಯಾಗುತ್ತದೆ, ಸಂಪನ್ಮೂಲಗಳನ್ನು ಕ್ರೋಢೀಕರಿಸುವುದಕ್ಕೆ ರಾಜ್ಯ ಸರ್ಕಾರ ವಿಫಲವಾಗಿ ರೈತರ ಕಿಸೆಗೆ

ಕತ್ತರಿ ಹಾಕುವಂತಹ ಯೋಜನೆಯನ್ನು ಮಾಡಿದ್ದಾರೆ. ಅಂದರೆ ನೀರಿನ ದರವನ್ನು ಹೆಚ್ಚಿಸಿ ರೈತರನ್ನು ಶೋಷಣೆ ಮಾಡುವಂತಹ ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಂಡಿದೆ. ಈ ಒಂದು ವಿಚಾರದಲ್ಲಿ ಹೇಳುವುದಾದರೆ ಕಂದಾಯ ಇಲಾಖೆಯ ಬೇಡಿಕೆಯಲ್ಲಿ ಮಾಜಿ ಗೇಣಿದಾರರು ಸಂದಾಯ ಮಾಡಬೇಕಾದ ಪ್ರೀಮಿಯಂ ಅನ್ನು ಮನ್ನಾ ಮಾಡಲಾಗಿದೆ ಎನ್ನುವಂತಹ ವಿಚಾರವನ್ನು ಈಗಾಗಲೇ ಹಲವಾರು ಸಲ ವಿಧಾನ ಸಭೆಯಲ್ಲೇ ಪ್ರಸ್ತಾಪ ಮಾಡಿದ್ದೇವೆ. ಇದೇ ರೀತಿಯ ಆಶ್ವಾಸನೆಯನ್ನು ಕಳೆದ ಚುನಾವಣೆಯ ಸಂದರ್ಭದಲ್ಲೂ ಸಹ ಕೊಟ್ಟಿದ್ದೀರಿ. ಈಗ ಮತ್ತೊಂದು ರೀತಿಯ ಆಶ್ವಾಸನೆಯನ್ನು ಜನರಿಗೆ ಕೊಡುತ್ತಿದ್ದೀರಿ ೧೯೭೪ರವರೆಗೆ ಯಾರ್‍ಯಾರು ಒತ್ತುವರಿಯನ್ನು ಮಾಡಿದ್ದಾರೋ ಅವರ ಜಮೀನನ್ನು ಸಕ್ರಮಗೊಳಿಸಲಾಗುವುದು ಎನ್ನುವ ಆಶ್ವಾಸನೆಯನ್ನು ಜನರಿಗೆ ಕೊಡುತ್ತಿದ್ದೀರಿ. ಇದನ್ನು ಯಾವ ರೀತಿ ಸಕ್ರಮಗೊಳಿಸುತ್ತೀರಿ ಎನ್ನುವ ಪ್ರಶ್ನೆಯನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಹಲವಾರು ವರ್ಷಗಳಿಂದ ಬಡ ರೈತರು, ದುರ್ಬಲ ವರ್ಗದವರು, ಕೃಷಿ ಕಾರ್ಮಿಕರು ಯಾ ಭೂ ರಹಿತ ಜನರು ಇದ್ದಾರೋ ಅವರು ಸರ್ಕಾರದ ಭೂಮಿಯನ್ನು ಅತಿಕ್ರಮ ಮಾಡಿಕೊಂಡು ಬಂದಿದ್ದಾರೆ. ಅಲ್ಲಿ ಅವರು ಸಾಗುವಳಿಯನ್ನೂ ಕೂಡ ಮಾಡಿಕೊಂಡಿದ್ದಾರೆ. ಆದರೆ ಇಂದು ಸರ್ಕಾರದಲ್ಲಿರತಕ್ಕ ಅಂಕಿ ಸಂಖ್ಯೆಗಳನ್ನು ನೋಡಿದರೆ ಯಾರು ನಿಜವಾಗಿ ಈ ರೀತಿಯ ಒತ್ತುವರಿ ಭೂಮಿಯನ್ನು ಪಡೆಯುವುದಕ್ಕೆ ಅರ್ಹರಿದ್ದಾರೋ ಅವರ ಹೆಸರೇ ಸರ್ಕಾರದ ದಾಖಲಾತಿಯಲ್ಲಿಲ್ಲ. ಆ ರೀತಿಯಾದರೆ ಅತಿಕ್ರಮಣ ಮಾಡಿಕೊಂಡಿರುವಂತಹವರು ಯಾರು ಎನ್ನತಕ್ಕಂತಹ ಪ್ರಶ್ನೆ ಬರುತ್ತದೆ. ಇದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕಾಗುತ್ತದೆ, ಯಾರು ಶ್ರೀಮಂತರಿದ್ದಾರೋ ಅವರು ತಮಗೆ ಬೇಕಾದ ರೀತಿಯಲ್ಲಿ ದಾಖಲಾತಿಗಳನ್ನು ಸೃಷ್ಟಿಸಿದ್ದಾರೆ. ಆದ್ದರಿಂದ ಇದರ ಬಗ್ಗೆ ನನ್ನ ಸಲಹೆ ಏನೆಂದರೆ, ಸ್ಥಳೀಯವಾಗಿ ಸಂದರ್ಶನ ಮಾಡಿದಾಗ ಯಾರು ನಿಜವಾಗಿಯೂ ಒತ್ತುವರಿ ಮಾಡಿಕೊಂಡಿದ್ದಾರೋ ಅದರಲ್ಲೂ ಭೂಹೀನ ಜನರು ಒತ್ತುವರಿ ಮಾಡಿಕೊಂಡಿದ್ದರೆ ಅಂತಹ ಪ್ರಕರಣಗಳನ್ನು ಸಕ್ರಮ ಗೊಳಿಸುತ್ತೀರಾ ಎಂಬುದನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಅದೇ ರೀತಿಯಾಗಿ ಮಾನ್ಯ ಮಂತ್ರಿಗಳು ಒಂದು ಮಾತನ್ನು ಹೇಳಿದರು. ಅದೇನೆಂದರೆ ೧–೭–೭೪ಕ್ಕಿಂತ ಪೂರ್ವಭಾವಿಯಾಗಿ ಯಾರ್‍ಯಾರು ಒತ್ತುವರಿಯನ್ನು ಮಾಡಿಕೊಂಡಿದ್ದಾರೋ, ಅಂತಹವರ ಜಮೀನನ್ನು ಸಕ್ರಮಗೊಳಿಸಲಾಗುವುದೆಂತಲೂ ಆದರ ನಂತರ ಯಾರ್‍ಯಾರು ಒತ್ತುವರಿ ಮಾಡಿಕೊಂಡಿದ್ದಾರೋ ಅಂತಹವರನ್ನು ಕೂಡಲೇ ಹೊರಹಾಕಲಾಗುವುದೆಂತಲೂ ತಿಳಿಸಿದ್ದಾರೆ. ಯಾರು ಅಕ್ರಮವಾಗಿ ಒತ್ತುವರಿ ಮಾಡಿದ್ದಾರೋ ಅಂತಹವರ ಜಮೀನನ್ನು ಸಕ್ರಮಗೊಳಿಸುವ ಜವಾಬ್ದಾರಿ ಅಧಿಕಾರಿಗಳಿಗೆ ಸೇರಿದ್ದು, ಆದರೆ ನಿಜವಾಗಿಯೂ ಅರ್ಹ ಜನರು ಯಾರು ಅಕ್ರಮ ಮಾಡಿಕೊಂಡಿದ್ದಾರೆ ಅಂತಹವರನ್ನೂ ಕೂಡ ಸ್ಥಳೀಯ ಅಧಿಕಾರಿಗಳು ಒಕ್ಕಲೆಬ್ಬಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಅಂತಹ ಒಂದು ಅಧಿಕಾರವನ್ನು ಅವರಿಗೆ ಕೊಟ್ಟಿದ್ದೀರಿ. ಹಲವಾರು ವರ್ಷಗಳಿಂದ ಅತಿಕ್ರಮವಾಗಿ ಸಾಗುವಳಿ ಮಾಡುತ್ತಿದ್ದಾರೋ ಅವರಿಗೆ ಸಕ್ರಮಗೊಳಿಸದೆ ಅವರನ್ನು ಅಲ್ಲಿಂದ ಒಕ್ಕಲೆಬ್ಬಿಸಿದರೆ ಅವರು ಎಲ್ಲಿಗೆ ಹೋಗಬೇಕು ಎನ್ನುವ ಪ್ರಶ್ನೆಯನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ, ಒಂದೊಂದು ಗ್ರಾಮದಲ್ಲೂ ಕಡಿಮೆ ಅಂದರೆ ೧೦೦ ಕುಟುಂಬಗಳು ಈ ರೀತಿಯಾಗಿ ಸರ್ಕಾರದ ಭೂಮಿಯನ್ನು ಅಕ್ರಮ ಮಾಡಿದ್ದಾರೆ. ಅವರು ಮಾಡುವಂತಹ ಕೆಲಸವೇನೆಂದರೆ, ಪ್ರತಿ ವರ್ಷ ನಡೆಯುವಂತಹ ಯಾವುದಾದರೊಂದು ಗ್ರಾಮ ಸಭೆಗೆ ಬಂದು ಇಂತಹ ಭೂಮಿಯನ್ನು ಅಕ್ರಮ ಮಾಡಿದ್ದೇವೆ. ಇದನ್ನು ಸಕ್ರಮಗೊಳಿಸಬೇಕು ಎನ್ನುವ ಅರ್ಜಿಯನ್ನು ಕೊಡುತ್ತಾರೆ. ಅವರು ಆ ರೀತಿ ಕೊಟ್ಟಂತಹ ಅರ್ಜಿಗಳು ಎಲ್ಲಿಗೆ ಹೋಗುತ್ತವೆ ಎಂಬುದು ಗೊತ್ತಾಗುವುದಿಲ್ಲ. ಅವರು ಆ ರೀತಿಯಾಗಿ ಕೊಟ್ಟ ಅರ್ಜಿಗಳು ಕಸದ ಬುಟ್ಟಿಗೆ ಹೋಗುತ್ತವೆಯೋ ಅಥವಾ ಅವುಗಳನ್ನು ದಾಖಲಾತಿಗೊಳಿಸುತ್ತಾರೆಯೋ ಗೊತ್ತಾಗುತ್ತಿಲ್ಲ. ಹಲವಾರು ವರ್ಷಗಳಿಂದ ಅಕ್ರಮ ಮಾಡಿಕೊಂಡಿರುವಂತಹವರು, ಇಂತಹ ಜಮೀನನ್ನು ಸಕ್ರಮಗೊಳಿಸಬೇಕೆಂದು ಅರ್ಜಿಯನ್ನು ಕೊಟ್ಟಿರುತ್ತಾರೆ, ಅದನ್ನು ಬಿಟ್ಟು ಅವರು ಇನ್ನೇನು ಮಾಡಬೇಕೆಂಬುದನ್ನು ಮಾನ್ಯ ಮಂತ್ರಿಗಳು ಸ್ಪಷ್ಟೀಕರಣ ನೀಡಬೇಕು. ಏಕೆಂದರೆ ಮಾನ್ಯ ಭೂಪತಿಯವರು ಮಾತನಾಡುತ್ತಾ, ೧೦–೧೫ ವರ್ಷಗಳಿಂದಲೂ ಅಕ್ರಮ ಮಾಡಿಕೊಂಡಿರುವಂತಹ ರೈತರ ಭೂಮಿಯನ್ನು ಸಕ್ರಮಗೊಳಿಸಲಿಲ್ಲ ಎನ್ನುವ ಮಾತನ್ನು ಹೇಳಿದರು. ಈ ರೀತಿ ಮಾಡಿದರೆ, ಬಡ ರೈತರು ಯಾರು ಅಕ್ರಮ ಮಾಡಿಕೊಂಡಿದ್ದಾರೋ ಅಂತಹವರ ಜಮೀನನ್ನು ಸಕ್ರಮಗೊಳಿಸುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವ ಮಾತನ್ನು ಹೇಳಬೇಕಾಗುತ್ತದೆ. ಅವರು ಸಕ್ರಮಗೊಳಿಸುವುದಕ್ಕೆ ಏನು ಮಾಡುವುದಕ್ಕೆ ಸಾಧ್ಯ ಇದೆ? ಅಳತೆ ಮಾಡಿಸುವ ಕೆಲಸ ಅವರದಲ್ಲ, ದಂಡ ಕಟ್ಟಿಸುವುದು ಇವರ ಕೆಲಸ ಇಲ್ಲ. ಅರ್ಜಿಯನ್ನು ಹಾಕುವುದಕ್ಕೆ

ಸಾಧ್ಯವೇ ಹೊರತು ಮತ್ತೆ ಯಾವ ದಾಖಲೆಗಳನ್ನು ಸೃಷ್ಟಿ ಮಾಡುವುದಕ್ಕೆ ಇವರಿಗೆ ಅಧಿಕಾರ ಇಲ್ಲ' ಕಂದಾಯ ಇಲಾಖೆಯ ಗ್ರಾಮಲೆಕ್ಕಿಗರು ವರ್ಷೇವರ್ಷೇ ಬರುತ್ತಾರೆ, ಅಕ್ರಮ ಭೂಮಿಯನ್ನು ಸಕ್ರಮ ಮಾಡಿಸುತ್ತೇವೆಂದು ಆಳತೆ ಮಾಡಿಸುತ್ತಾರೆ, ದಂಡವನ್ನು ಕಟ್ಟಿಸುತ್ತಾರೆ, ಇವರು ಕೊಟ್ಟ ಹಣವನ್ನು ತೆಗೆದುಕೊಂಡು ಹೋಗುತ್ತಾರೆ. ಮತ್ತೆ ೨ ವರ್ಷಕ್ಕೆ ಇನ್ನೊಬ್ಬ ಬರುತ್ತಾನೆ. ಇದೇ ಕೆಲಸ ಮಾಡುತ್ತಾನೆ ಹೋಗುತ್ತಾನೆ. ಹೀಗೆಪ್ರತೀ ವರ್ಷ ನಡೆಯುತ್ತಿದೆ. ಈ ಬಗ್ಗೆ ತಾವು ಕೆಲವು ಗ್ರಾಮಗಳಿಗೆ ಭೇಟಿ ಕೊಟ್ಟು ಕೇಳಿನೋಡಿ. ಅವರು ದಂಡಸೆ ಕಟ್ಟುತ್ತಾ ಇದ್ದಾರೆ, ನೀವು ಎಷ್ಟು ಅಕ್ರಮ ಭೂಮಿಯನ್ನು ಸಕ್ರಮ ಗೊಳಿಸಿದ್ದೀರಿ ಎಂದು ಕೇಳಿ ನೋಡಿ, ಆಗ ಜನರ ಕಷ್ಟ ನಿಮಗೆ ಗೊತ್ತಾಗುತ್ತದೆ. ಬರೀ ವಿಧಾನಸಭೆಯಲ್ಲಿ ಕೂತು ಜನರ ಸಮಸ್ಯೆ ಬಗ್ಗೆ ಹೇಳಿದರೆ ತಮಗೆ ಅರ್ಥವಾಗುವುದಿಲ್ಲ. ಸಾಮಾನ್ಯವಾಗಿ ಪ್ರತಿ ಗ್ರಾಮದಲ್ಲೂ ಈ ಸಮಸ್ಯೆ ಇದೆ. ನಮ್ಮ ಮಲೆನಾಡಿನ ಕುಂದಾಪುರ ಕುಗ್ರಾಮ ಅಮಾವಾಸ್ಸೆಬೈಲುವಿನ ಅಕ್ರಮ ಸಾಗುವಳಿ ಮಾಡಿದ ಕುಟುಂಬಗಳ ಸಂಖ್ಯೆ ಕೇವಲ ೧೬ ಎಂದು ನಾನು ಕಳೆದ ಅಧಿವೇಶನದಲ್ಲಿ ಕೇಳಿದ ಒಂದು ಪ್ರಶ್ನೆಗೆ ಉತ್ತರ ಕೊಟ್ಟಿದ್ದೀರಿ. ಅಲ್ಲಿ ಸುಮಾರು ೧೨೨ ಕುಟುಂಬಗಳು ಜಮೀನು ಅಕ್ರಮಣ ಮಾಡಿದ್ದು ಇದರಲ್ಲಿ ಅಲ್ಪಸಂಖ್ಯಾತರು, ಹರಿಜನರು ಗಿರಿಜನರು ಸೇರಿದ್ದಾರೆ. ಆದರೆ ಕೇವಲ ೧೬ ಕುಟುಂಬಗಳು ಎಂದು ಯಾವ ಆಧಾರದ ಮೇಲೆ, ಯಾವ ದಾಖಲೆ ಮೇಲೆ ಹೇಳಿದರೋ ನನಗೆ ಗೊತ್ತಾಗಲಿಲ್ಲ. ಈ ಬಗ್ಗೆ ತಾವು ವಿವರಣೆ ಕೊಡಬೇಕು. ಮತ್ತೆ ಇನ್ನೊಂದು ವಿಚಾರವನ್ನು ಹೇಳಿದ್ದಾರೆ. ಹರಿಜನಗಿರಿ ಜನರಿಗೆ ಭೂಮಿಯನ್ನು ವಿತರಣೆ ಮಾಡುತ್ತೇವೆಂದು ಹೇಳಿದ್ದಾರೆ, ವಿತರಣೆ ಮಾಡುವ ವಿಧಾನದ ಬಗ್ಗೆ ಹೇಳುತ್ತಾ ಲಭ್ಯವಾಗುವ ಪಟ್ಟಿಯಲ್ಲಿರತಕ್ಕ ಜನರಿಗೆ ಭೂಮಿಯನ್ನು ವಿತರಣೆ ಮಾಡುತ್ತೇವೆಂದು ಹೇಳಿದ್ದಾರೆ. ಅಧ್ಯಕ್ಷರೇ, ಸಾಮಾನ್ಯವಾಗಿ, ೧೯೮೮ರಲ್ಲಿ ೫೦೦ ಎಕರೆ ಅಥವಾ ೮ ಸಾವಿರ ಎಕರೆ ಲಭ್ಯವಾಗಿದೆ ಎನ್ನುವ ಪಟ್ಟಿಯಲ್ಲಿ ಇದ್ದರೆ ೧೯೮೯ರಲ್ಲಿ ಪುನಃ ಲಭ್ಯ ಆಗುವುದಕ್ಕೆ ಸಾಧ್ಯ ಇದೆಯೇ ? ಯಾರು ಹರಿಜನಗಿರಿಜನರು ತಮಗೆ ಭೂಮಿ ಇಲ್ಲವೆಂದು ಅರ್ಜಿ ಕೊಟ್ಟಿದ್ದಾರೆ ಅವರನ್ನು ಗುರ್ತಿಸಿ ಅವರಿಗೆ ಹಂಚಿಕೆ ಮಾಡಬೇಕಾಗುತ್ತದೆ. ನಮ್ಮ ಕ್ಷೇತ್ರದಲ್ಲಿ ಎಷ್ಟೋ ಜನ ಭೂರಹಿತರಿದ್ದಾರೆ ಮನೆನಿವೇಶನ ಇಲ್ಲದಂತಹವರೂ ಇದ್ದಾರೆ. ಮಾನ್ಯ ತಿಪ್ಪೇಸ್ವಾಮಿಯವರು ಒಂದು ಸಾರಿ ನನ್ನ ಕ್ಷೇತ್ರಕ್ಕೆ ಬಂದಿದ್ದರು, ಅವರು ಅಲ್ಲಿಗೆ ಬಂದಾಗ ಸಂದರ್ಶನ ಮಾಡಿದ ಎಷ್ಟೋ ಜನರಿಗೆ, ಹರಿಜನ–ಗಿರಿಜನರಿಗೆ ಭೂಮಿಯನ್ನು ವಿತರಣೆ ಮಾಡದೇ ಇರುವುದನ್ನು ಕಂಡು ಸಂಬಂಧಪಟ್ಟ ತಹಶೀಲ್ದಾರ್‌ರವರಿಗೆ ಹೇಳಿದ್ದಾರೆ. ಈ ಜನರಿಗೆ ಮನೆ ನಿವೇಶನಗಳನ್ನು ಕೊಡಿಸಬೇಕೆಂದು ಅವರು ಹೇಳಿದ್ದಾರೆ. ಹರಿಜನಗಿರಿಜನರು ಪ್ರತಿ ವರ್ಷ ಜನಸಂಪರ್ಕ ಸಭೆಯಲ್ಲಿ ಅಥವಾ ಸಂಬಂಧಪಟ್ಟ ಮುಖಂಡರ ಮುಖಾಂತರ ಸಂಬಂಧಪಟ್ಟ ಕಂದಾಯ ಇಲಾಖೆಯ ತಹಶೀಲ್ದಾರರಿಗೆ ಅರ್ಜಿಗಳನ್ನು ಸಲ್ಲಿಸುತ್ತಾರೆ. ಸಕ್ರಮಗೊಳಿಸುವುದಕ್ಕೆ ಮುಂದಿನ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ, ಮುಂದೆ ಸಕ್ರಮಗೊಳಿಸುತ್ತೇವೆಂದು ತಾವು ಆಶ್ವಾಸನೆಯನ್ನು ಕೊಡುತ್ತೀರಿ ಆದರೆ ಈ ಆಶ್ವಾಸನೆಗಳು ಎಲ್ಲಿ ಈಡೇರುತ್ತವೆ ? ನಿಜವಾಗಿಯೂ ಅಕ್ರಮ ಮಾಡಿರುವುದನ್ನು ಸಕ್ರಮ ಮಾಡುವ ವ್ಯವಸ್ಥೆ ಮಾಡುತ್ತೀರೋ ಇಲ್ಲವೋ? ಮತ್ತೊಂದನ್ನು ತಾವು ಹೇಳಿದ್ದೀರಿ. ಸಿ ಅಂಡ್ ಡಿ ಭೂಮಿಯನ್ನು ಅರಣ್ಯ ಇಲಾಖೆಗೆ ಮತ್ತು ವಿವಿಧ ಇಲಾಖೆಗಳಿಗೆ ವರ್ಗಾವಣೆ ಮಾಡಲಾಗಿದೆ ಎಂದು ಹೇಳಿದ್ದೀರಿ. ಅದನ್ನು ಯಾವ ರೀತಿ ವರ್ಗಾವಣೆ ಮಾಡಿದ್ದೀರಿ ? ಯಾವ ಕ್ರಮದಲ್ಲಿ ಮಾಡಿದ್ದೀರಿ ? ಆ ವರ್ಗಾವಣೆ ಕ್ರಮಬದ್ಧವಾಗಿದೆಯೇ? ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ವರ್ಗಾವಣೆ ಮಾಡಿದಾಗ ಯಾರು ಆ ಭೂಮಿಯನ್ನು ಅಕ್ರಮಣ ಮಾಡಿದ್ದಾರೆ ಅವರಿಗೆ ಆ ಭೂಮಿ ಸೇರಿದ್ದಾಗಿದೆಯೇ ? ಅರಣ್ಯ ಇಲಾಖೆಯವರಿಗೆ ವರ್ಗಾವಣೆ ಮಾಡಿದ ಮೇಲೆ ಆ ಜಾಗದಲ್ಲಿ ಎಷ್ಟು ಜನ ಆಕ್ರಮಣ ಮಾಡಿದ್ದಾರೆ ಎನ್ನುವ ಬಗ್ಗೆ ಮಾಹಿತಿ ಕೂಡಾ ಅರಣ್ಯ ಇಲಾಖೆಯಲ್ಲಿ ಇಲ್ಲ. ಎಲ್ಲಾ ಕೂಡ ಪೇಪರ್‌ನಲ್ಲಿ ವರ್ಗಾವಣೆ ಆಗಿದೆಯೇ ಹೊರತು ಈ ವರ್ಗಾವಣೆ ಕಾರ್ಯಗತವಾಗಿಲ್ಲ, ಈ ವರ್ಗಾವಣೆ ಆಗುವುದಕ್ಕಿಂತಾ ಮುಂಚೆ ಆಕ್ರಮಣ ಮಾಡಿದಂತಹ ಭೂಮಿಯನ್ನು ಸಕ್ರಮ ಗೊಳಿಸುವ ವ್ಯವಸ್ಥೆ ಆಗಬೇಕು.

ಇತ್ತೀಚೆಗೆ ತಾವೊಂದು ಹೇಳಿಕೆಯನ್ನು ಕೊಟ್ಟಿದ್ದೀರಿ. ಅರಣ್ಯ ಇಲಾಖೆಯ ಭೂಮಿಯನ್ನು ಅಕ್ರಮ ಸಾಗುವಳಿ ಮಾಡಿದ್ದರೆ ಅದನ್ನು ಸಕ್ರಮಗೊಳಿಸುತ್ತೇವೆಂದು ಹೇಳಿದ್ದೀರಿ. ಆ ಭೂಮಿ ದಾಖಲೆಯಲ್ಲಿ ಇಲ್ಲದೇ ಇರುವ ಸಂದರ್ಭವುಂಟು. ಕಂದಾಯ ಇಲಾಖೆಯ ಭೂಮಿ ಅರಣ್ಯ ಇಲಾಖೆಯ ಭೂಮಿ ದಾಖಲೆಯಲ್ಲಿ ಇಲ್ಲದೇ ಇದ್ದರೂ ಆ ಭೂಮಿ ಬಡ ಜನರಿಗೆ ಸಿಗುವ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಮಾಜಿ ಗೇಣಿದಾರರಿಗೆ ಸಂದಾಯ ಮಾಡಬೇಕಾದ ಫೀ ಬಗ್ಗೆ ಹೇಳಿದ್ದೀರಿ. ನಮ್ಮ ತಾಲ್ಲೂಕಿನಲ್ಲಿ ಏತಕ್ಕೆ ಕೊಡುತ್ತಿಲ್ಲ ? ಚುನಾವಣೆಯ ಸಂದರ್ಭದಲ್ಲಿ ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಕಂದಾಯವನ್ನು ಮನ್ನಾ ಮಾಡುತ್ತೇವೆಂದು ಹೇಳಿದಿರಿ. ನಮ್ಮ ತಾಲ್ಲೂಕಿನಲ್ಲಿ ಪ್ರಿಮಿಯುಮ್ ಮನ್ನಾ ಮಾಡುವಂತಹ ಕಾನೂನು ಅನ್ವಯವಾಗುವಂತೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಬಡ ಗೇಣಿದಾರರಿಗೆ ಕಾನೂನು ನೆರವು ಕೊಟ್ಟಿದ್ದೇವೆ ಎನ್ನುವ ವಿಚಾರವನ್ನು ಹೇಳಿದ್ದೀರಿ ಕೇವಲ ೫೧೨ ಜನರಿಗೆ ಕಾನೂನು ನೆರವು ಕೊಟ್ಟಿದ್ದೇವೆಂದು ಹೇಳಿದ್ದೀರಿ, ಕಾನೂನಿನ ನೆರವು ಅದರ ಪ್ರಯೋಜನ ಎಲ್ಲಾ ಬಡ ಜನರಿಗೆ ಗೇಣಿದಾರರಿಗೆ ಸಿಕ್ಕಿಲ್ಲವೆನ್ನುವ ವಿಚಾರವನ್ನು ಹೇಳಬೇಕಾಗುತ್ತದೆ. ನಮ್ಮ ತಾಲ್ಲೂಕಿನ ಮಟ್ಟಿಗೆ ಹೇಳಬೇಕಾದರೆ, ನಮ್ಮ ತಾಲ್ಲೂಕಿನಲ್ಲಿ ಅಪೀಲ್ ಪ್ರಾಧಿಕಾರ ಕಾರ್ಯ ನಿರ್ವಹಿಸುತ್ತಿದೆ ಎನ್ನುವ ವಿಚಾರವನ್ನು ಹೇಳಿದರು. ಕುಂದಾಪುರದಲ್ಲಿ ಬಹಳ ಕೆಲಸಗಳಿವೆಂದು ಪ್ರಾಧಿಕಾರ ಮಾಡಿದರು ಆದರೆ ಅದರಿಂದ ಪ್ರಯೋಜನವಾಗಲಿಲ್ಲ. ಅಲ್ಲಿಯ ಸಂಬಂಧಪಟ್ಟ ಅಧಿಕಾರಿಯನ್ನು ಶುಗರ್ ಫ್ಯಾಕ್ಟರಿಗೆ ವರ್ಗಾವಣೆ ಮಾಡಿದ್ದಾರೆ, ಈಗ ಅಲ್ಲಿ ಸಿಬ್ಬಂದಿ ಇಲ್ಲ. ನೊಂದ ರೈತರು, ಮಾಜಿ ಗೇಣಿದಾರರು ಅಪೀಲ್ ಕೋರ್ಟ್‌ಗೆ ಹೋಗಬೇಕೇ ಹೈಕೋರ್ಟ್‌ಗೆ ಹೋಗಬೇಕೇ ಎನ್ನುವ ಗೊಂದಲದಲ್ಲಿ ಸಿಕ್ಕಿಕೊಂಡಿದ್ದಾರೆ. ಇರತಕ್ಕ ಗೊಂದಲವನ್ನು ಆದಷ್ಟು ಬೇಗ ನಿವಾರಣೆ ಮಾಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ತಾವು ಕೂಡಿ, ಮಾನ್ಯ ವಿನಯಕುಮಾರ್ ಸೊರಕೆಯವರು ಮಾತನಾಡಿ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—ನೈಸರ್ಗಿಕ ವಿಪತ್ತುಗಳು ಬೆಂಕಿ ಮತ್ತು ನೆರೆಹಾವಳಿಗೆ ಒಳಗಾದವರಿಗೆ ಉಚಿತ ಪರಿಹಾರ ನೀಡುವುದಕ್ಕಾಗಿ ಅನುಕ್ರಮವಾಗಿ ೫೪–೫೫ ಲಕ್ಷ ರೂಪಾಯಿಗಳು ಮತ್ತು ೫೦ ಲಕ್ಷ ರೂಪಾಯಿಗಳನ್ನು ಬಜೆಟ್‌ನಲ್ಲಿ ಏರ್ಪಾಡು ಮಾಡಲಾಗಿತ್ತು. ಈಗ ಪೂರ್ಣ ಬಿಡುಗಡೆ ಮಾಡಲಾಗಿದೆಯೆಂದು ಹೇಳಿದ್ದಾರೆ.

ಅಧ್ಯಕ್ಷರು.—ಬಹಳಷ್ಟು ಜನ ಅದನ್ನು ಹೇಳಿದ್ದಾರೆ, ಹೇಳಿದ್ದೇ ಹೇಳುವುದು ಬೇಡ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—ಯಾರೇ ಆಗಲಿ ಬೆಂಕಿ ಮತ್ತು ನೆರೆ ಹಾವಳಿಗೆ ತುತ್ತಾದರೆ ಅವರಿಗೆ ತಕ್ಷಣ ಪರಿಹಾರ ಕೊಡಬೇಕು. ಆದಾಯದ ಮಿತಿಯಲ್ಲಿ ಬರುವವರಿಗೆ ಪರಿಹಾರ ಕೊಡುತ್ತೀರಿ ಆದಾಯ ಮಿತಿಯನ್ನು ಗ್ರಾಮ ಲೆಕ್ಕಿಗರು ಮತ್ತು ರೆವಿನ್ಯೂ ಇನ್ಸ್‌ಪೆಕ್ಟರ್ ಗೊತ್ತು ಪಡಿಸುತ್ತಿದ್ದಾರೆ. ಗಂಗೊಳ್ಳಿಯ ಬೆಂಕಿ ಅನಾಹುತದ ಬಗ್ಗೆ ತಹಶೀಲ್ದಾರ್‌ರವರು ಕೊಟ್ಟಂತಹ ವರದಿ ಬೇರೆ ಇದೆ, ಪೋಲೀಸ್ ಇಲಾಖೆಯವರು ಕೊಟ್ಟಂತಹ ವರದಿ ಬೇರೆ ಇದೆ. ಯಾರು ನಿಜವಾಗಿಯೂ ತೊಂದರೆಗೆ ಸಿಕ್ಕಿಕೊಂಡಿರುತ್ತಾರೆ ಅಂತಹವರಿಗೆ ಪರಿಹಾರ ಸಿಗಬೇಕು. ನಿಜವಾಗಿಯೂ ಅನಾಹುತಗಳಿಗೆ ಗುರಿಯಾದವರಿಗೆ ಪರಿಹಾರ ಸಿಗುತ್ತಿಲ್ಲ. ಪರಿಹಾರವನ್ನು ಕೊಡುವಾಗ ಎಷ್ಟು ಲಕ್ಷ ನಾಶವಾಗಿದೆ ಅದರಲ್ಲಿ ಅರ್ಧ ಕೊಡದಿದ್ದರೂ ಸ್ವಲ್ಪ ಜಾಸ್ತಿ ಪರಿಹಾರವನ್ನು ಕೊಡುವಂತಹ ವ್ಯವಸ್ಥೆಯಾಗಬೇಕು. ಇಲ್ಲದಿದ್ದರೆ ತೊಂದರೆಯಾಗುತ್ತದೆ. ನಮ್ಮ ತಾಲ್ಲೂಕಿನ ನೀರಾವರಿಯ ಬಗ್ಗೆ ಹೇಳುವುದಾದರೆ, ಪ್ರತಿಷ್ಠಿತವಾದ ವರಾಹಿ ಯೋಜನೆಯಿಂದೆ. ಆ ಯೋಜನೆಗೆ ಹಣವನ್ನು ಬಿಡುಗಡೆ ಮಾಡಿಲ್ಲ. ಅಲ್ಲಿ ಯಾವ ಕೆಲಸ ಕೂಡ ನಡೆಯುತ್ತಿಲ್ಲ. ನಮ್ಮ ತಾಲ್ಲೂಕಿನಲ್ಲಿ ಸಣ್ಣ ನೀರಾವರಿಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದು ಹೇಳುತ್ತೇನೆ. ನಾನು ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಿನಯಕುಮಾರ್ ಸೊರಕೆ (ಪುತ್ತೂರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಮಂಡಿಸಿರುವ ಕಂದಾಯ ಹಾಗೂ ನೀರಾವರಿ ಇಲಾಖೆಯ ಬೇಡಿಕೆಗಳನ್ನು ವಿರೋಧಿಸುತ್ತಾ, ನಿನ್ನೆ ಮಾನ್ಯ ಕೆ. ಹೆಚ್. ಶ್ರೀನಿವಾಸ್‌ರವರು ಮಾತನಾಡುವಾಗ ಕಂದಾಯ ಇಲಾಖೆ ಒಂದು ಸರ್ಕಾರವೆಂದು ಹೇಳಿ, ರಾಜ್ಯಮಟ್ಟದಲ್ಲಿ ಒಂದು ಸರ್ಕಾರ, ಜಿಲ್ಲಾಮಟ್ಟದಲ್ಲಿ ಒಂದು ಸರ್ಕಾರ, ಅದೇರೀತಿ ತಾಲ್ಲೂಕು ಮಟ್ಟದಲ್ಲಿ ಒಂದು ಸರ್ಕಾರ, ಹಳ್ಳಿಗಳಲ್ಲಿ, ಗ್ರಾಮಾಂತರ ಪ್ರದೇಶಗಳಲ್ಲಿ ಒಂದು ಸರ್ಕಾರ, ಎಂದು ಹೇಳಿದರು. ಅದೇರೀತಿ ಸರ್ಕಾರ ರೂಪಿತವಾಗಿರಬಹುದು ನನ್ನ ಅಭಿಪ್ರಾಯ. ಈ ಒಂದು ವ್ಯವಸ್ಥೆಯಲ್ಲಿ ಗ್ರಾಮೀಣ ಪ್ರದೇಶದ ಹಳ್ಳಿಯಲ್ಲಿರುವಂತಹ ಒಬ್ಬ ಸಾಮಾನ್ಯನಿಗೆ ಕಂದಾಯ ಇಲಾಖೆಯ ಮುಖಾಂತರ ಯಾವರೀತಿಯ ನ್ಯಾಯ ದೊರಕಿದೆ ಎಂಬುದನ್ನು ನಾವು ಹಳ್ಳಿಮಟ್ಟದಲ್ಲಿ ಅವಲೋಕಿಸಿದರೆ ಇವತ್ತು ಅಲ್ಲಿ ಯಾರು ಪ್ರಭಲರಿದ್ದಾರೆ ಅಥವಾ ಬಲಿಷ್ಠರಿದ್ದಾರೆ ಅಂತಹ ಮನುಷ್ಯನಿಗೆ ಕಂದಾಯ

ಇಲಾಖೆಯ ಮೂಲಕ ಯೋಗ್ಯ ಜಾಗ ಸಿಕ್ಕಿದೆ. ಅವರನ್ನು ಬಿಟ್ಟು ಷೆಡ್ಯೂಲ್ಡ್ ಕ್ಲಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನವರಿಗೆ, ಅದೇ ರೀತಿ ದುರ್ಬಲವರ್ಗದವರಿಗೆ, ಜನಸಾಮಾನ್ಯರಿಗೆ ಕಂದಾಯ ಇಲಾಖೆಯಲ್ಲಿ ಯಾವುದೇ ನ್ಯಾಯ ದೊರಕಿದೆಯೆಂದು ಹೇಳಿದರೆ ಅದು ತಪ್ಪಾಗುತ್ತದೆ. ಇವತ್ತು ಶ್ರೀಮಾನ್ ಪ್ರತಾಪಚಂದ್ರ ಶೆಟ್ಟಿಯವರು ನಮ್ಮ ಜಿಲ್ಲೆಯ ಮಟ್ಟಿಗೆ ಮಾತನಾಡುವಾಗ ಅನಧಿಕೃತ ಸ್ವಾಧೀನ ಮಟ್ಟಿಗೆ ಇದನ್ನು ಸಕ್ರಮಗೊಳಿಸಬೇಕೆಂದು ಹೇಳಿದರು. ನಾನಾದರೂ ನನ್ನ ತಾಲ್ಲೂಕಿನ ಮಟ್ಟಿಗೆ ಹೇಳಬೇಕೆಂದರೆ ಸಾಧಾರಣ ಆರು ಸಾವಿರಕ್ಕಿಂತಲೂ ಜಾಸ್ತಿ ಕುಟುಂಬಗಳು ಇಂತಹವು ಇದೆ. ಈ ಒಂದು ಬೇಡಿಕೆ ಮಟ್ಟಿಗೆ ನಾನು ಶಾಸಕನಾಗಿ ಬಂದಮೇಲೆ ಕೂಡ ಮಾನ್ಯ ಮಂತ್ರಿಗಳ ಗಮನಕ್ಕೆ ತಂದು, ವಿಧಾನಸಭೆಯಲ್ಲಿ ಕೂಡ ಒತ್ತಾಯ ತಂದು ಕೂಡಲೇ ಸಕ್ರಮಗೊಳಿಸುವ ಕಾರ್ಯಕ್ರಮ ತೆಗೆದು ಕೊಳ್ಳಬೇಕೆಂದು ಹೇಳಿದ್ದೇವೆ. ಇವತ್ತು ಈ ಆರು ಸಾವಿರ ಕುಟುಂಬದ ಜನ ಯಾರು ಎಂದರೆ ಯಾರು ವಿದ್ಯಾಭ್ಯಾಸ ಇಲ್ಲದ ಜನರು ಇದ್ದಾರೆ, ಯಾರು ತಿಳುವಳಿಕೆ ಇಲ್ಲದವರು, ದುರ್ಬಲವರ್ಗದವರು. ಆರ್ಥಿಕವಾಗಿ ಹಿಂದುಳಿದವರು ಪರಿಶಿಷ್ಟವರ್ಗದ ಜನರು ಯಾರು ಇದ್ದಾರೆ, ಹರಿಜನ ಗಿರಿಜನರು ಯಾರು ಇದ್ದಾರೆ, ಅವರಿಗೆ ಕಾನೂನು ಪ್ರಕಾರ ಸಕ್ರಮಗೊಳಿಸಬೇಕು ಎನ್ನುವ ರೀತಿಯಲ್ಲಿ ಕಾಯಿದೆ ಮಾಡಿದ್ದರೂ ಕೂಡ ಇವತ್ತು ಅವರಿಗೆ ಜಮೀನು ಸಿಗುವಂಥ ವ್ಯವಸ್ಥೆ ಆಗಿಲ್ಲ. ನಮ್ಮಲ್ಲಿ ಹಳ್ಳಿಗಳಲ್ಲಿ ವ್ಯವಸ್ಥೆ ಯಾವ ರೀತಿ ಇದೆ ಎಂದು ಹೇಳಿದರೆ ಗ್ರಾಮಕರಣಿಕನೇ ಆ ಊರಿನ ಜಿಲ್ಲಾಧಿಕಾರಿ. ಆ ಗ್ರಾಮಕರಣಿಕ ಏನು ಹೇಳುತ್ತಾನೆ ಅದನ್ನು ಜನರು ನಂಬುತ್ತಾರೆ. ಆತ ಒಂದು ಸಲ ಎರಡು ಸಲ ಅಳತೆ ಮಾಡಿಕೊಟ್ಟ ನಂತರ ಆ ಜಾಗದಲ್ಲಿ ಹೋಗಿ ಕುಳಿತು, ಆಜಾಗಕ್ಕೆ ಅಗಲ ಹಾಕಿ ಅಲ್ಲಿ ಮನೆಕಟ್ಟಿ ಬಾವಿ ತೆಗೆದು ಕೃಷಿ ಮಾಡಿ ಇದ್ದಾರೆ. ಸಾಧಾರಣ ಹತ್ತಿಪ್ಪತ್ತು ವರ್ಷಗಳಿಂದ ಇದ್ದವರೂ ಇದ್ದಾರೆ. ಇವತ್ತು ಗ್ರಾಮಕರಣಿಕ ಅಳತೆ ಮಾಡಿದ ನಂತರ ರೆಕಾರ್ಡ್ ಮಾಡಿ ರೆವಿನ್ಯೂ ಇನ್‌ಸ್ಪೆಕ್ಟರ್ ಅಥವಾ ತಹಸೀಲ್ದಾರರಿಗೆ ಕಳಿಸಿಕೊಡದೇ ಇದ್ದದ್ದು ಆತನ ತಪ್ಪು. ಇದು ರೈತನ ತಪ್ಪಲ್ಲ. ಗ್ರಾಮಕರಣಿಕ ಮಾಡಿದಂಥ ತಪ್ಪಿನಿಂದಾಗಿ ಇವತ್ತು ರೈತನಿಗೆ ಜಮೀನು ಸಿಗಲಿಕ್ಕೆ ಆಗಲಿಲ್ಲ. ರೈತನಿಗೆ ಗ್ರಾಮಕರಣಿಕ ಕೊಟ್ಟನಂತ ಅದು ರೆವಿನ್ಯೂ ಇನ್‌ಸ್ಪೆಕ್ಟರ್‌ಗೆ ಹೋಗಬೇಕು ಅಥವಾ ತಹಸೀಲ್ದಾರ್‌ಗೆ ಹೋಗಿ ಹುಕುಮ್ ಆಗಬೇಕು ಎನ್ನುವ ತಿಳುವಳಿಗೆ ಪಾಪ ಇವರಿಗೆ ಇಲ್ಲ. ಯಾರ್‍ಯಾರು ತಿಳುವಳಿಗೆ ಉಳ್ಳ ಜನರು ಇದ್ದಾರೆ ಅವರಿಗೆ ಅನುಕೂಲವಾಗಿದೆ. ಅವರಿಗೆ ಎರಡೆರಡು ಸಲ, ಮೂರುಮೂರು ಸಲ ಭೂಮಿ ಕೊಡುವ ವ್ಯವಸ್ಥೆ ಆಗಿದೆ. ಹತ್ತಿಪ್ಪತ್ತು ಎಕರೆ ಭೂಮಿ ಕೊಡುವ ವ್ಯವಸ್ಥೆ ಆಗಿದೆ. ಆದರೆ ಇವತ್ತು ಇಂತಹ ರೈತರಿಗೆ ಸಕ್ರಮಗೊಳಿಸುವಂಥ ವ್ಯವಸ್ಥೆ ಆಗಿಲ್ಲ. ಯಾರಿಗೆ ಸರ್ಕಾರದ ಅನುಕೂಲ ನಿಜವಾಗಿಯೂ ಮುಟ್ಟಬೇಕು, ಯಾರಿಗೆ ಸರ್ಕಾರದ ಅನುಕೂಲಗಳು ಸಿಗುವಂಥ ಅವಕಾಶ ಇರುತ್ತದೆ ಅಂತಹವರಿಗೆ ಈ ಒಂದು ಹಕ್ಕುಪತ್ರ ಇಲ್ಲದ ಕಾರಣ ಅವರಿಗೆ ಸರ್ಕಾರದ ಯಾವುದೇ ಸವಲತ್ತು ಸಿಗುವ ವ್ಯವಸ್ಥೆ ಆಗುತ್ತಿಲ್ಲ. ಆದ್ದರಿಂದ ಈ ರೀತಿಯ ವ್ಯವಸ್ಥೆ, ಡಿ-ನೋಟೀಸ್ ಹಕ್ಕು ಪತ್ರ ಸಿಗದ ಕಾರಣ ಯಾವುದೇ ರೀತಿಯ ಅನುಕೂಲ ಅವರಿಗೆ ಸಿಗಲಿಕ್ಕೆ ಆಗಿಲ್ಲ. ಅನಧಿಕೃತ ಸಾಗುವಳಿ ಮಾಡುವ ರೈತರಿಗೆ ಅದನ್ನು ಸಕ್ರಮ ಮಾಡಬೇಕೆಂಬ ಬೇಡಿಕೆಯನ್ನು ಇವತ್ತು ನಾವು ಇಟ್ಟಿದ್ದೇವೆ. ಇದೇರೀತಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಮ್ಮದು ಕುಮ್‌ಕಿ ಜಾಗ ಅಂತ ಇದೆ. ಬೇರೆ ಜಿಲ್ಲೆಗೆ ಈ ವ್ಯವಸ್ಥೆ ಬರುವುದಿಲ್ಲ. ಸರ್ಕಾರಕ್ಕೂ ಒಂದು ೫೦ ಅಂಶ ಪಾಲು ಇದರಲ್ಲಿ ಇದ್ದರೆ ಅದೇರೀತಿಯಾಗಿ ಪಟ್ಟಾಪಕ್ಕದಲ್ಲಿ ಅವನಿಗೂ ಕೂಡ ೫೦ ಭಾಗ ಇದರಲ್ಲಿ ಇರುವಂಥ ಕಾನೂನು. ಇವತ್ತು ಆ ಜಾಗ ವನ್ನು ಬೇಸಾಯ ಮಾಡಲಿಕ್ಕೆ ಸಂಬಂಧಪಟ್ಟ ರೈತರಿಗೆ ಸಕ್ರಮ ಮಾಡಲಿಕ್ಕೆ ಈ ಕುಮ್‌ಕಿ ಜಾಗವನ್ನು ಮಾಡಬೇಕೆಂದು ಬೇಡಿಕೆಯನ್ನು ತಮ್ಮಮುಂದೆ ಇಟ್ಟಿದ್ದೇವೆ. ನಮ್ಮ ನೆರೆಯ ರಾಜ್ಯವಾದ ಕೇರಳದಲ್ಲಿ ಈಗಾಗಲೇ ಕುಂಕಿ ಹಕ್ಕನ್ನು ರೈತರಿಗೆ ಒದಗಿಸಿಕೊಡುವ ಕಾರ್ಯಕ್ರಮ ಆಗಿದೆ. ನಮ್ಮ ರಾಜ್ಯದಲ್ಲಿಯೂ ಇದು ಆಗಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಪಡಿಸುತ್ತೇನೆ. ಇದೇ ರೀತಿ ಯಾಗಿ ರೆವಿನ್ಯೂ ಇಲಾಖೆಗೆ ಸಂಬಂಧಪಟ್ಟಂತೆ, ಫಾರೆಸ್ಟ್ ಇಲಾಖೆಗೆ ಸಂಬಂಧಪಟ್ಟಂತೆ ಸಾಧಾರಣ ಬಫರ್ ಜಾಗದಲ್ಲಿ ಇರತಕ್ಕಂಥ ಸಣ್ಣರೈತರು, ಸಣ್ಣ ಹಿಡುವಳಿದಾರರು ಏನು ಇದ್ದಾರೆ, ಅವರ ಬಗ್ಗೆ ನನ್ನ ತಾಲ್ಲೂಕಿಗೆ ಸಂಬಂಧಪಟ್ಟಂತೆ ಹೇಳುವುದಾದರೆ ಸುಮಾರು ಒಂಬೈನೂರು ಫೈಲಿಂಗಳು ಹಾಗೆಯೇ ಉಳಿದಿದ್ದು, ಇನ್ನೂ ಕೂಡ ವಿತರಣೆ ಆಗಲಿಕ್ಕೆ ಬಾಕಿ ಇದೆ. ಈಗಾಗಲೇ ಫಾರೆಸ್ಟ್ ಮಂತ್ರಿಗಳ ಮುಖಾಂತರ ಒಂದು ಕಮಿಟಿ ರಚನೆಯಾಗಿದೆ. ಇದಕ್ಕೆ ಡಿ.ಎಫ್.ಒ. ಛೇರ್ಮನ್ ಇದ್ದಾರೆ. ಶಾಸಕರು ಹಾಗೆಯೇ ತಹಸೀಲ್ದಾರರು ಇದಕ್ಕೆ ಸದಸ್ಯರು ಇನ್ನೂ ಕೂಡ ಒಂದು ಸಿಟ್ಟಿಂಗ್ ಸಹ ಮಾಡದೆ ಒಂಬೈ

ನೂರು ಫೈಲುಗಳನ್ನು ಹಾಗೆಯೇ ಇಟ್ಟಿದ್ದಾರೆ. ಇದನ್ನು ಬೇಗನೇ ಸಕ್ರಮ ಮಾಡುವ ರೀತಿಯಲ್ಲಿ ಆಜ್ಞೆ ಮಾಡಬೇಕೆಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಲ್ಯಾಂಡ್ ರಿಫಾರಮ್ಸ್ ಬಗ್ಗೆ ಏನೋ ದೊಡ್ಡ ಸಾಧನೆ ಮಾಡಿದ ರೀತಿಯಲ್ಲಿ ಸರ್ಕಾರ ಹೇಳಿಕೊಂಡಿದೆ. ತಮಗೆ ಗೊತ್ತಿರುವ ಹಾಗೆ, ಮಹಾತ್ಮ ಗಾಂಧಿಯವರ ಉಳುವವನೇ ಭೂಮಿಯ ಒಡೆಯ ಎಂಬ ಕನಸು ಇವತ್ತು ನನಸಾಗಬೇಕು. ನಮ್ಮ ಜಿಲ್ಲೆಯಲ್ಲಿ ಈ ಭೂ ಮಸೂದಾ ಕಾನೂನು ಮುಖಾಂತರ ಹಲವಾರು ಕಾರ್ಯಕ್ರಮಗಳು ಆಗಿವೆ. ಈಗ ಪರಿಸ್ಥಿತಿ ಏನಾಗಿದೆ ಎಂದರೆ ಕೊಟ್ಟಂಥ ಭೂಮಿಯನ್ನು ವಾಪಸ್ ಭೂ ಮಾಲೀಕರಿಗೆ ಕೊಡುವಂಥ ವ್ಯವಸ್ಥೆಯನ್ನು ಕಾಣುತ್ತಿದ್ದೇವೆ. ಹಿಂದಿನ ಸರ್ಕಾರ ಇರುವಾಗ, ಟ್ರಿಬ್ಯುನಲ್ ಮುಖಾಂತರ ಯಾರು ನಿಜವಾಗಿಯೂ ರೈತ ಇದ್ದಾನೆ, ಬೇಸಾಯ ಮಾಡುವವನು ಯಾರಿದ್ದಾನೆ, ಅಂಥವನ ಸ್ಥಳಕ್ಕೆ ಹೋಗಿ, ಸ್ಥಳ ತನಿಖೆ ಮಾಡಿ, ಕೊಟ್ಟಿಗೆಯಲ್ಲಿ ಎತ್ತು ಇದ್ದರೆ, ಉಳುವಂಥ ಸಾಮಗ್ರಿಗಳು ಇದ್ದರೆ, ಬೇಸಾಯದ ಮಟ್ಟಿಗೆ ಕುರುಹು ಇದ್ದರೆ, ಅಂತಹವರನ್ನು ಹುಡುಕಿ, ಭೂಮಿಯನ್ನು ಕೊಡುವಂಥ ವ್ಯವಸ್ಥೆ ಇತ್ತು. ಈಗ ಯಾವರೀತಿ ನಡೆಯುತ್ತಿದೆ ಎಂದರೆ, ಭೂಮಾಲೀಕನ ಹೆಸರಿನಲ್ಲಿ ಲ್ಯಾಂಡ್ ರಿಕಾರ್ಡ್ಸ್ ಇದ್ದರೆ, ಅಥವಾ ಅವನ ಪರವಾಗಿ ವಾದ ಮಾಡುವಂಥ ವಕೀಲರು ಇದ್ದರೆ, ಅಂತಹವರಿಗೇ ಭೂಮಿಯನ್ನು ಕೊಡುತ್ತಿದ್ದಾರೆ. ಹಿಂದೆ ಈ ರೀತಿ ಇವರ ಹೆಸರಿನಲ್ಲಿ ಮಾಡುವಂಥ ಅವಕಾಶ ಇರಲಿಲ್ಲ. ಇವತ್ತು ಭೂಮಾಲೀಕರೇ ಲ್ಯಾಂಡ್ ರಿಕಾರ್ಡ್ಸ್ ಮಾಡಿಕೊಂಡಿದ್ದಾರೆ, ಅಪಲೆಟ್ ಟ್ರಿಬ್ಯುನಲ್‌ನಲ್ಲೂ ಇದೇ ವ್ಯವಸ್ಥೆಯಾಗಿದೆ. ಸಂಪೂರ್ಣವಾಗಿ ಭೂಮಸೂದಾ ಕಾನೂನನ್ನು ಹಿಂತೆಗೆದುಕೊಳ್ಳಲಾಗಿದೆ ಎನ್ನುವ ವಾತಾವರಣ ನಿರ್ಮಾಣವಾಗುತ್ತಿದೆ. ಇದರ ಬಗ್ಗೆ ಸರ್ಕಾರ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಪರವಾಗಿ ಸರ್ಕಾರಕ್ಕೆ ಒತ್ತಾಯಿಸುತ್ತೇನೆ. ಇನ್ನು, ಇದೇರೀತಿಯಾಗಿ ಈ ಸದನದಲ್ಲಿ ಅನೇಕಸಾರಿ ಪ್ರಸ್ತಾಪ ಮಾಡಿದ್ದೇವೆ. ಕೃಷಿ ಕೂಲಿ ಕೆಲಸಕಾರ್ಯ ಮಾಡುವಂಥವರಿಗೆ ಟ್ರಿಬ್ಯುನಲ್ ಮುಖಾಂತರ ೫ ಸೆಂಟ್ಸ್ ಮಾಡುವಂಥ ವ್ಯವಸ್ಥೆ ಇತ್ತು. ಈ ವ್ಯವಸ್ಥೆಗೆ ಸರಿಯಾದ ಸಂದರ್ಭದಲ್ಲಿ ಅರ್ಜಿಯನ್ನು ಕೊಡುವುದಕ್ಕೆ ಆಗಲಿಲ್ಲ. ಇದಕ್ಕೆ ಅರ್ಜಿಯನ್ನು ಕೊಡುವುದಕ್ಕೆ ಇನ್ನೂ ಕಾಲಾವಕಾಶವನ್ನು ವಿಸ್ತರಿಸಬೇಕೆಂದು ಮನವರಿಕೆ ಮಾಡಿಕೊಂಡಿದ್ದೆವು. ಇದುವರೆಗೂ ಸರ್ಕಾರ ನಿರ್ದೇಶನ ಕೊಟ್ಟಿಲ್ಲ. ಈ ಕೃಷಿ ಕೂಲಿ ಮಾಡುವವರಿಗೆ, ವಾಸ್ತವವಾಗಿ ಜಾಗ ಸಿಗುವುದಕ್ಕೆ, ಅವಕಾಶ ಸಿಗುವಂತೆ ತಾವು ನಿರ್ದೇಶನ ಕೊಡಬೇಕು. ಇನ್ನು ಕಂದಾಯ ಇಲಾಖೆ ಪರವಾಗಿ. ಸರ್ಕಾರಿ ನಿರ್ದೇಶನದ ಪ್ರಕಾರ, ತಿಂಗಳಿಗೆ ೪ ಕಡೆ ಜನಸಂಪರ್ಕ ಸಭೆ ಮಾಡಬೇಕೆಂದು ಸರ್ಕಾರಿ ನಿರ್ದೇಶನ ಇದೆ. ಇತ್ತೀಚೆಗೆ ಕಳೆದ ೨ ವರ್ಷದಿಂದ ಈ ಜನಸಂಪರ್ಕ ಸಭೆಗಳು ನಿಲ್ಲುವಂಥ ಪರಿಸ್ಥಿತಿ ಇದೆ. ಎಲ್ಲಿಯೂ ಕೂಡ ಜನಸಂಪರ್ಕ ಸಭೆಗಳು ನಡೆಯುವುದಿಲ್ಲ. ಸರ್ಕಾರ ಈ ಬಗ್ಗೆ ಮುತುವರ್ಜಿ ತೆಗೆದುಕೊಳ್ಳುತ್ತಿಲ್ಲ ನಾವೇನಾದರೂ ಮುತುವರ್ಜಿ ತೆಗೆದುಕೊಂಡು, ಜನಸಂಪರ್ಕ ಸಭೆ ಮಾಡಬೇಕು, ಹಳ್ಳಿಯ ಜನಗಳ ಹತ್ತಿರ ಅಧಿಕಾರಿಗಳನ್ನು ತೆಗೆದುಕೊಂಡು ಹೋಗಬೇಕೆಂದು ಹೋದರೆ, ಇದಕ್ಕೆ ಒಳ್ಳೆಯ ರೀತಿಯ ಸಹಕಾರ ಸಿಗುವುದಿಲ್ಲ. ಅದಕ್ಕಾಗಿ ಸರ್ಕಾರ ನಿರ್ದೇಶನ ಕೊಡಬೇಕು, ಈ ಜನಸಂಪರ್ಕ ಸಭೆಗಳು ಹೆಚ್ಚಾಗಿ ನಡೆಯುವಂತಹ ವ್ಯವಸ್ಥೆ ಆಗಬೇಕು. ಜನಗಳ ಹತ್ತಿರ ಅಧಿಕಾರಿಗಳು ಹೋಗುವಂತೆ ಮಾಡಬೇಕು. ಅಧಿಕಾರಿಗಳು ತಾವಿದ್ದಲ್ಲಿಯೇ ಕುಳಿತು, ಬಂದಂಥ ಅರ್ಜಿಗಳಿಗೆ ಉತ್ತರ ಕೊಡುವಂತಾಗಬಾರದು. ಜನಗಳ ಹತ್ತಿರ ಹೋಗಿ, ಅವರ ಸಮಸ್ಯೆಗಳೇನು ಎಂಬುದನ್ನು ತಿಳಿಯಬೇಕು, ಹಳ್ಳಿಯ ಜನಗಳ ಹತ್ತಿರ ಅಧಿಕಾರಿಗಳು ಹೊಂದಿಕೊಂಡು ಹೋಗುವಂಥ ವ್ಯವಸ್ಥೆಯಾಗಬೇಕೆಂದು ಹೇಳಿ, ತಮ್ಮ ಮೂಲಕ ಸರ್ಕಾರಕ್ಕೆ ಈ ಬಗ್ಗೆ ಒತ್ತಾಯಿಸುತ್ತೇನೆ.

ಇದೇರೀತಿಯಾಗಿ, ಇವತ್ತು ನಾಡ ಕಚೇರಿಯನ್ನು ಪ್ರತಿಯೊಂದು ಹೋಬಳಿಗಳಲ್ಲೂ ತೆರೆಯಲಾಗುವುದೆಂದು ಸರ್ಕಾರ ಹೇಳಿಕೊಂಡಿತ್ತು. ಆದರೆ ನಮ್ಮ ತಾಲ್ಲೂಕಿನಲ್ಲಿ ಒಂದೇ ಒಂದು ನಾಡ ಕಛೇರಿ ಇದೆ, ಮುಂದಿನ ವರ್ಷದಲ್ಲಿ ಈ ನಾಡ ಕಛೇರಿಗಳನ್ನು ಹೆಚ್ಚಾಗಿ ತೆರೆಯುತ್ತೇವೆಂದು ಹೇಳಿದ್ದರು. ಈವರೆಗೆ ಈ ಕೆಲಸ ಆಗದೇ ಇರುವುದರಿಂದ ಇದರ ಬಗ್ಗೆ ನಾನು ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಿಸುತ್ತೇನೆ, ಹಿಂದೆ ಜಿಲ್ಲೆಗಳ ವಿಂಗಡಣೆ ಮಾಡುವಂಥ ವಿಷಯ ಪ್ರಸ್ತಾಪಕ್ಕೆ ಬಂದ ಸಂದರ್ಭದಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಉಡುಪಿ ಟೌನನ್ನು ಜಿಲ್ಲೆಯನ್ನು ಮಾಡಬೇಕೆಂಬ ಪ್ರಸ್ತಾಪ ಬಂತು. ಉಡುಪಿ ಒಂದು ಸಬ್ ಡಿವಿಜನ್ ಸೆಂಟರ್. ಅದೇರೀತಿ ಪುತ್ತೂರು ಕೂಡ ಸಬ್ ಡಿವಿಜನ್ ಸೆಂಟರ್. ಇದನ್ನು ಜಿಲ್ಲಾ ಕೇಂದ್ರವನ್ನಾಗಿ ಮಾಡಬೇಕೆಂದು ಹೇಳಿದ್ದೇವೆ. ಇದು ತುಂಬಾ ಹಿಂದುಳಿದ ಪ್ರದೇಶ, ಬೆಳ್ತಂಗಡಿ, ಸುಳ್ಯ, ಕಡಬಾ, ವಿಟ್ಲ, ಬಂಟ್ವಾಳ ತಾಲ್ಲೂಕುಗಳು ಇದಕ್ಕೆ ಸೇರಿದರೆ,

ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿಯಾಗುವುದಕ್ಕೆ ಅವಕಾಶ ಇದೆ. ಆದ್ದರಿಂದ ಮಾನ್ಯ ಕಂದಾಯ ಮಂತ್ರಿಗಳು, ಪುತ್ತೂರು ಪಟ್ಟಣವನ್ನು ಜಿಲ್ಲೆಯನ್ನಾಗಿ ಪರಿವರ್ತನೆ ಮಾಡಬೇಕೆಂದು ಈ ಮೂಲಕ ಒತ್ತಾಯಿಸುತ್ತೇನೆ. ಇವತ್ತು ಸ್ಕೇರ್‍ಸಿಟಿ ಮಟ್ಟಿಗೆ ಬೇರೆ ಬೇರೆ ಜಿಲ್ಲೆಗೆ ಬೇರೆ ಬೇರೆ ರೀತಿಯಲ್ಲಿ ಹಣವನ್ನು ವಿನಿಯೋಗಿಸುವುದನ್ನು ನಾವು ಕಂಡಿದ್ದೇವೆ. ಕಳೆದ ವರ್ಷ ನಮ್ಮ ಜಿಲ್ಲೆಯಲ್ಲಿ ಸಾಧಾರಣ ೫೦-೬೦ ವರ್ಷಗಳಿಂದ ಕಾಣದೇ ಇದ್ದಂಥ ಪರಿಸ್ಥಿತಿಯನ್ನು ನಾವು ಕಂಡಿದ್ದೇವೆ. ಮುಂಗಾರು ಬೆಳೆ ಸಂಪೂರ್ಣವಾಗಿ ಹಾಳಾದಂಥ ಪರಿಸ್ಥಿತಿಯನ್ನು ನಾವು ಕಂಡಿದ್ದೇವೆ. ಒಂದೇ ಬೆಳೆಯನ್ನು ನಂಬಿಕೊಂಡಿದ್ದ ರೈತರಿಗೆ ವಿಪರೀತವಾಗಿ ತೊಂದರೆಯಾಗಿದೆ. ಅವರಿಗೆ ಹೆಚ್ಚಿನ ರೀತಿಯಲ್ಲಿ ಸರಕಾರದಿಂದ ಸಹಾಯ ಸಿಗಬೇಕೆಂದು ಮನವಿ ಮಾಡಿಕೊಂಡಿದ್ದರೂ ಕೂಡಾ ಅದು ಸಿಗಲಿಲ್ಲ. ಈಗಿರುವ ಆರಾಣಿ ಲೆಕ್ಕದ ಪ್ರಕಾರ ಸ್ಕೇರ್‍ಸಿಟಿ ಎನ್ನುವುದು ನಮ್ಮ ಜಿಲ್ಲೆಗೆ ಬರುವುದಿಲ್ಲ. ಇದರಿಂದಾಗಿ ಬೇರೆ ಜಿಲ್ಲೆಗೆ ಸಿಗುವಂತಹ ಸಹಾಯ ನಮ್ಮ ಜಿಲ್ಲೆಗೆ ಸಿಗದಿರುವಂತಹ ವ್ಯವಸ್ಥೆಯನ್ನು ನಾವು ಕಂಡಿದ್ದೇವೆ. ಇಂತಹ ವ್ಯವಸ್ಥೆ ನಮ್ಮ ಜಿಲ್ಲೆಯಲ್ಲಿ ಇರುವುದರಿಂದ, ನಮ್ಮ ಜಿಲ್ಲೆಗೆ ಹೆಚ್ಚು ಸಹಾಯ ಮತ್ತು ಸಹಕಾರ ಸರಕಾರದಿಂದ ಸಿಗುವಂತಹ ರೀತಿಯಲ್ಲಿ ಕಾರ್ಯಕ್ರಮವನ್ನು ಅಳವಡಿಸಿಕೊಂಡು ಹೋಗಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಸರ್ವೆ ಡಿಪಾರ್ಟ್‌ಮೆಂಟ್ ಬಗ್ಗೆ ಹೇಳಬೇಕೆಂದರೆ, ಸಾಧಾರಣವಾಗಿ ಭೂ ಮಸೂದಾ ಕಾನೂನಿನ ಮುಖಾಂತರ ಭೂಮಿಯನ್ನು ಪಡೆದುಕೊಂಡಂಥ ರೈತರು ಯಾರಿದ್ದಾರೆ ಅವರಿಗೆ ಅವರ ಭೂಮಿಯನ್ನು ಅಳತೆ ಮಾಡಿ ವಿಂಗಡಿಸಿ ಕೊಡಬೇಕಾದ ಕೆಲಸ ಸರಿಯಾಗಿ ಆಗಿಲ್ಲ. ಇದಕ್ಕೆ ಸಂಬಂಧಿಸಿದ ಎಷ್ಟೋ ಫೈಲ್‌ಗಳು ಸರ್ವೆ ಡಿಪಾರ್ಟ್‌ಮೆಂಟ್‌ನಲ್ಲಿ ಕೊಳೆಯುತ್ತಿವೆ. ಇದನ್ನು ಕೂಡಲೇ ನಿವಾರಣೆ ಮಾಡುವುದಕ್ಕೆ ಯಾವುದಾದರೂ ಕ್ರಮ ಹಮ್ಮಿಕೊಳ್ಳಬೇಕೆಂದು ಹೇಳುತ್ತೇನೆ.

ಇರಿಗೇಷನ್ ಡಿಪಾರ್ಟ್‌ಮೆಂಟ್ ಮಟ್ಟಿಗೆ ನಾವು ನಮ್ಮ ಜಿಲ್ಲೆಯಲ್ಲಿ ಹೆಚ್ಚು ಮಾತನಾಡುವಂತಹ ಅವಕಾಶ ಇಲ್ಲ. ಆದರೆ ನಮ್ಮ ಎದುರು ನಮ್ಮ ಕರ್ನಾಟಕ ರಾಜ್ಯಕ್ಕೆ ಮಾತ್ರವಲ್ಲ, ಇಡೀ ನಮ್ಮ ರಾಷ್ಟ್ರಕ್ಕೆ ಅನ್ವಯಿಸುವಂತಹ ಒಂದು ಉದಾಹರಣೆ ಇದೆ. ಇರಿಗೇಷನ್‌ಗೆ ಸರಿಯಾದ ರೀತಿಯಲ್ಲಿ ದುಡ್ಡನ್ನು ವಿನಿಯೋಗ ಮಾಡಿಲ್ಲ ಎಂದು ನಮ್ಮ ಪಕ್ಷದವರು ಹೇಳುವುದಲ್ಲ ಕಮ್ಯುನಿಸ್ಟ್‌ನವರು, ಬಿ.ಜೆ.ಪಿ. ಯವರು ಹೇಳುವುದಲ್ಲ ಜನತಾ ಪಕ್ಷದ ಸರಕಾರದಲ್ಲಿದ್ದ ಮಂತ್ರಿಗಳೇ ರಾಜೀನಾಮೆ ಕೊಡುವ ಹಂತಕ್ಕೆ ಇದು ಬಂದಿದೆ. ಇದು ರಾಷ್ಟ್ರಕ್ಕೆ ತಿಳಿದಂಥ ವಿಚಾರ. ಇರಿಗೇಷನ್ ವಿಚಾರದಲ್ಲಿ ಈ ರಾಜ್ಯಕ್ಕೆ ಯಾವರೀತಿ ಅನ್ಯಾಯವಾಗಿದೆ ಎನ್ನುವುದಕ್ಕೆ ಇದು ಉದಾಹರಣೆ.

ಶ್ರೀ ಬಿ. ಸ್ವಾಮಿರಾವ್.—ಅಧ್ಯಕ್ಷರೇ, ಇದನ್ನು ಯಾರಿಗೆ ಹೇಳುವುದು ?

ಶ್ರೀ ಬಿ.ಎಂ. ಇದಿನಬ್ಬ.—ರಾಗ ಬರುವಾಗ ತಂತಿ ಕಡಿಯಿತು ಎಂದಹಾಗೆ ಆಯಿತು.

ಶ್ರೀ ಆರ್. ವೆಂಕಟರಾಮಯ್ಯ.—ಇದು ಇಂಪಾರ್ಟೆಂಟ್ ಡಿಮ್ಯಾಂಡ್. ಮಾನ್ಯ ಮಂತ್ರಿಗಳು ಇಲ್ಲದೇ ಹೋದರೆ ಅವರು ನಮ್ಮ ಫೀಲಿಂಗ್ಸನ್ನು ಯಾವರೀತಿ ಅರ್ಥಮಾಡಿಕೊಳ್ಳುತ್ತಾರೆ. ಇಂತಹ ಇಂಪಾರ್ಟೆಂಟ್ ಡಿಮ್ಯಾಂಡ್‌ನಲ್ಲೂ ಮಂತ್ರಿಗಳು ಇಲ್ಲದೇ ಹೋದರೆ ಏನು ಅರ್ಥ?

ಅಧ್ಯಕ್ಷರು.—ಇದ್ದಾರೆ, ತಾವು ಕುಳಿತುಕೊಳ್ಳಿ.

ಶ್ರೀ ಆರ್. ವೆಂಕಟರಾಮಯ್ಯ.—ಇರುವ ಮಂತ್ರಿಗಳು ಹೊಸಬರು, ಅವರು ಒಳ್ಳೆಯವರು. ಇದು ಇಂಪಾರ್ಟೆಂಟ್ ಡಿಮ್ಯಾಂಡ್. ಮಾನ್ಯ ಮಂತ್ರಿಗಳೇ ಇಲ್ಲದೇ ಹೋದರೆ ನಮ್ಮ ಫೀಲಿಂಗ್ಸನ್ನು ಹೇಗೆ ಅರ್ಥ ಮಾಡಿಕೊಳ್ಳಬೇಕು.

ಅಧ್ಯಕ್ಷರು.—ತಾವು ಕುಳಿತುಕೊಳ್ಳಿರಿ, ಅವರು ಮಾತನಾಡುತ್ತಿದ್ದಾರೆ, ಕಾಲಹರಣ ಮಾಡಬೇಡಿ. ಮಂತ್ರಿಗಳು ಇದ್ದಾರೆ, ಬರೆದುಕೊಳ್ಳುತ್ತಿದ್ದಾರೆ.

ಶ್ರೀ ಆರ್. ವೆಂಕಟರಾಮಯ್ಯ.—ಅವರು ಒಂದು ಡಿಪಾರ್ಟ್‌ಮೆಂಟದ್ದು ಬರೆದುಕೊಳ್ಳಬಹುದು. ಆದರೆ ಮಾನ್ಯ ಸಚಿವರು ನಮ್ಮ ಫೀಲಿಂಗ್ಸನ್ನು ಅರ್ಥಮಾಡಿಕೊಂಡು ರಿಪ್ಲೈ ಮಾಡಬೇಕು. ಅವರು ಇಲ್ಲದೇಹೋದರೆ ಹೇಗೆ?

ಅಧ್ಯಕ್ಷರು.—ನೀವು ಮಾತ್ರ ಹೊರಗೆ ಹೋಗಿ ಬರಬಹುದು. ಅವರು ಹೋಗಬಾರದೆ? ನೀವು ಎಷ್ಟು ಸಲಹೊರಗೆ ಹೋಗುತ್ತೀರಿ. ೫೦ ಸಲ ಹೋಗುತ್ತೀರಿ, ೫೦ ಸಲ ಬರುತ್ತೀರಿ. ಒಂದೊಂದು ಸಲ ಅವರು ಹೋದಕೂಡಲೇ ಈ ರೀತಿ ಮಾಡುತ್ತೀರಿ ಯಾವುದಕ್ಕೂ ಒಂದು ಮಿತಿ ಇರಬೇಕು, ಇಂಟರ್‌ಫಿಯರ್ ಮಾಡುವುದಕ್ಕೂ ಒಂದು ಮಿತಿ ಇರಬೇಕು.

ಶ್ರೀ ಎಸ್.ಆರ್. ಬೊಮ್ಮಾಯಿ.—೫ ನಿಮಿಷ ಆಫೀಸರ್ ಹತ್ತಿರ ಹೋಗಿದ್ದೆ. ಈಗ ಬಂದಿರುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಐದು ನಿಮಿಷ ಅಲ್ಲ. ನಿನ್ನೆ ಕೂಡಾ ತಾವು ಇರಲಿಲ್ಲ.

ಅಧ್ಯಕ್ಷರು.—ಮಾನ್ಯ ವೆಂಕಟರಾಮಯ್ಯನವರೇ, ನೀವು ಬಹಳ ಜವಾಬ್ದಾರಿಯಿಂದ ಮಾತನಾಡುತ್ತೀರಿ ಎಂದು ನಾನು ತಿಳಿದುಕೊಂಡಿದ್ದೆ. ನೀವು ಜವಾಬ್ದಾರಿಯಿಂದ ಮಾತನಾಡುವುದನ್ನು ಕಲಿಯಬೇಕು. ಪ್ರತಿಯೊಂದಕ್ಕೂ ಇಂಟರ್‌ಫಿಯರ್ ಮಾಡಬಾರದು.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ ಮಾನ್ಯ ಸಚಿವರು ರಿಪ್ಲೈ ಬಗ್ಗೆ ಸಿದ್ಧತೆ ನಡೆಸುವುದಕ್ಕೆ ಹೋಗಿರಬಹುದು, ಆದರೆ ಇಲ್ಲ ಎಂದು ನಾವು ಹೇಳುವುದಿಲ್ಲ. ಆದರೆ ನೀವು ಸದಸ್ಯರು ಗಲಾಟೆ ಮಾಡಿದ ತಕ್ಷಣ, ಈ ರೀತಿ ಮಾತನಾಡಬೇಡಿ, ಇಂಟರ್‌ಫಿಯರ್ ಮಾಡಬೇಡಿ ಜಗಳ ಮಾಡಬೇಡಿ ಎಂದು ಹೇಳುವುದು ಸರಿಯೇ? ನಾವು ಇಲ್ಲಿ ಬಂದಿರುವುದೇ ಅದಕ್ಕೋಸ್ಕರ. ಮಾನ್ಯ ಮಂತ್ರಿಗಳು ಇಲ್ಲಿ ಬಂದಿರುವುದು ಕುಳಿತುಕೊಳ್ಳುವುದಕ್ಕೋಸ್ಕರ. ಅವರು ಇಲ್ಲದಿದ್ದರೆ ಕೇಳಲೇಬೇಕಾಗುತ್ತದೆ. ಇದನ್ನು ಕೇಳಿದಾಗ, ಮೆಂಬರ್ಸ್ ಮೇಲೆ ತಾವು ಕಾಮೆಂಟ್ ಮಾಡುತ್ತಾ ಹೋದರೆ, ಮೆಂಬರ್ಸ್‌ನ ಹಕ್ಕಿನ ಗತಿ ಏನು? ಮೆಂಬರ್ಸ್, ತಮ್ಮ ಹಕ್ಕನ್ನು ಚಲಾವಣೆ ಮಾಡುವುದು ಬೇಡವೇ?

ಅಧ್ಯಕ್ಷರು.—ಸಚಿವರು ಒಂದೂವರೆ ತಾಸು ಇಲ್ಲೇ ಕುಳಿತಿದ್ದರು.

ಶ್ರೀ ಎಸ್. ಬಂಗಾರಪ್ಪ.—ನೀವು ಮೆಂಬರ್ಸ್ ಮೇಲೆ ಕಾಮೆಂಟ್ ಮಾಡಿದರೆ ಹೇಗೆ? ಪ್ರತಿದಿವಸ ಇಂಟರ್ ಫಿಯರ್ ಮಾಡಬೇಕಾಗುತ್ತದೆ. ಅವರು(ಮಂತ್ರಿಗಳು)ಎಲ್ಲಿಯವರೆಗೆ ಈರೀತಿಮಾಡುತ್ತಾರೋ, ಅಲ್ಲಿಯವರೆಗೆ ನಾವು ಕೇಳಲೇಬೇಕಾಗುತ್ತದೆ. ನೀವು ಸದಸ್ಯರ ಹಕ್ಕನ್ನು ರಕ್ಷಣೆ ಮಾಡಬೇಕು, ಅದರ ಜವಾಬ್ದಾರಿ ತಮ್ಮದು.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ, ನೀವೂ ಒಂದೊಂದು ಸಲ ಇಂಟರ್‌ಫಿಯರ್ ಮಾಡುತ್ತೀರಿ, ಮಹತ್ವದ ವಿಷಯ ಇದ್ದಾಗ ಮಾತ್ರ ಇಂಟರ್‌ಫಿಯರ್ ಮಾಡುತ್ತೀರಿ, ಆದರೆ ಸಿಕ್ಕಿಸಿಕ್ಕಿದಾಗ ಇಂಟರ್‌ಫಿಯರ್ ಆಗಿ ಮಾತನಾಡುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ನಾವು ಮಾಡುತ್ತೇವೆ, ಆದರೆ ಅವರ ಗತಿ ಏನಾಗಬೇಕು. ನೀವೂ ಕೂಡಾ ಇಲ್ಲಿ ಕುಳಿತು ಕೆಲಸ ಮಾಡಿರುತ್ತೀರಿ. ಅವರ ಹಕ್ಕಿನ ಗತಿ ಏನಾಗಬೇಕು?

ಅಧ್ಯಕ್ಷರು.—ನಿಮ್ಮ ಸ್ವಭಾವ ನನಗೆ ಗೊತ್ತಿದೆ, ಆದರೆ ಮಾನ್ಯ ವೆಂಕಟರಾಮಯ್ಯನವರ ಸ್ವಭಾವ ನಿಮಗೆ ಗೊತ್ತಿಲ್ಲ, ಪ್ರತಿದಿವಸ ಪ್ರತಿತಾಸಿಗೊಮ್ಮೆ ಅವರು ಇಂಟರ್‌ಫಿಯರ್ ಮಾಡುತ್ತಾರೆ.

ಶ್ರೀ ಎಸ್. ಬಂಗಾರಪ್ಪ.—ಸದಸ್ಯರ ಮೇಲೆ ಜನರಲ್ ಆಗಿ ಮಾತನಾಡುವುದು ಒಳ್ಳೆಯದಲ್ಲ.

ಅಧ್ಯಕ್ಷರು,—ಅವರ ಸ್ವಭಾವ ಗೊತ್ತಿಲ್ಲ ರೀ ನಿಮಗೆ. ಅವರು ವಿಪರೀತ ಇಂಟರ್‌ಫಿಯರ್ ಮಾಡುತ್ತಾರೆ.

ಶ್ರೀ ಎಸ್. ಬಂಗಾರಪ್ಪ,—ಇದು ಸ್ವಭಾವದ ಪ್ರಶ್ನೆ ಅಲ್ಲ.

ಶ್ರೀ ಆರ್. ವೆಂಕಟರಾಮಯ್ಯ,—ಸ್ವಭಾವ ಗೊತ್ತಿಲ್ಲವೆಂದರೆ ಹೇಗೆ ಸ್ವಾಮಿ? ತಾವು ನಮಗೆ ರಕ್ಷಣೆ ಕೊಡಬೇಕು. ಮಂತ್ರಿಗಳನ್ನು ಸರಿಯಾಗಿ ಪುಲ್‌ಅಪ್ ಮಾಡಲಿ ಎಂದು ನಾನು ಹೇಳಿದೆ,

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ನಿನ್ನೆ ಇಡೀ ದಿವಸವೆಲ್ಲಾ ಇಲ್ಲೇ ಇದ್ದೆ. ಊಟಕ್ಕೆ ಒಂದು ಹದಿನೈದು ನಿಮಿಷ ಮಾತ್ರ ಹೊರಗಡೆ ಹೋಗಿದ್ದೆ. ಇವತ್ತು ಪ್ರಾರಂಭವಾದಾಗಿನಿಂದಲೂ ಇಲ್ಲೇ ಇದ್ದೆ. ಆಫೀಸರ್ಸ್‌ಗಳ ಹತ್ತಿರ ಎರಡು ವಿಚಾರಗಳನ್ನು ಕ್ಲಾರಿಫೈ ಮಾಡಿಕೊಳ್ಳುವುದಕ್ಕೋಸ್ಕರ

ಹೊರಗಡೆ ಹೋಗಿದ್ದೆ ಅಷ್ಟೆ. ವಿಪ್ ರೂಮಿನಲ್ಲಿ ಟಿ. ವಿ. ಯಲ್ಲಿ ತಾವೇನು ಮಾತನಾಡುತ್ತಿದ್ದಿರೋ ಅದನ್ನು ನಾನು ಕೇಳುತ್ತಿದ್ದೆ. ಆದ್ದರಿಂದ ದಯಮಾಡಿ ತಾವು ಇಂಥಾದ್ದಕ್ಕೆ ಸಮಯ ಕಳೆಯುವುದು ಬೇಡ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ವೆಂಕಟರಾಮಯ್ಯನವರು ಕಾಮೆಂಟ್ಸ್‌ನ್ನು ಬಹಳ ಜವಾಬ್ದಾರಿಯಿಂದ ಮಾಡಿದ್ದಾರೆ,

ಶ್ರೀ ಜೆ. ಹೆಚ್. ಪಟೇಲ್.—ಇವರಿಗಿಂತ ಜವಾಬ್ದಾರಿ ಜಾಸ್ತಿ ಇವರ ಮೇಲಿದೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಪಟೇಲರೇ, ಅವರೆಷ್ಟು ಜವಾಬ್ದಾರಿಯಿಂದ ಮಾತನಾಡುತ್ತಾರೆಂದು ಎಲ್ಲರಿಗೂ ಗೊತ್ತಿರುವುದರಿಂದ ನಾನು ಹೇಳಿದೆ.

ಅಧ್ಯಕ್ಷರು.—ನನ್ನ ಕಾಮೆಂಟ್ಸನ್ನು ಜಸ್ಟಿಫೈ ಎಂದು ಅವರಿಗೆ ಗೊತ್ತಿದೆ.

ಶ್ರೀ ವಿನಯಕುಮಾರ್ ಸೊರಕೆ.—ನೀರಾವರಿಗೆ ಸಾಕಷ್ಟು ಹಣ ವಿನಿಯೋಗ ಮಾಡಿಲ್ಲವೆಂದು ಇವತ್ತು ಶ್ರೀಮಾನ್ ದೇವೇಗೌಡರು ನೀರಾವರಿ ಖಾತೆ ಮತ್ತು ಲೋಕೋಪಯೋಗಿ ಖಾತೆಯ ಮಂತ್ರಿ ಸ್ಥಾನಕ್ಕೆ ರಾಜೀನಾಮೆಯನ್ನು ಕೊಟ್ಟರೋ ಅಥವಾ ರಾಜ್ಯಸಭಾ ಸೀಟು ಸಿಗಲಿಲ್ಲವೆನ್ನುವ ಕಾರಣಕ್ಕೆ ಕೊಟ್ಟರೋ ನಮಗೆ ಗೊತ್ತಾಗಲಿಲ್ಲ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎರಡು ಯೋಜನೆಗಳು ಮಾತ್ರ ಇವೆ. ನಮ್ಮ ಜಿಲ್ಲೆಯಿಂದ ಸಾಧಾರಣವಾಗಿ ವರ್ಷಕ್ಕೆ ನೂರು ಕೋಟಿ ರೂ ಪಾಯಿಗಳ ಆದಾಯ ಸರ್ಕಾರಕ್ಕೆ ಬರುತ್ತದೆ. ಇಷ್ಟೊಂದು ಆದಾಯ ಬರತಕ್ಕಂಥ ಜಿಲ್ಲೆಗೆ ವಿನಿಯೋಗಿಸತಕ್ಕಂಥ ಹಣ ಬಹಳ ಕಡಿಮೆ. ಅದು ಅಭಿವೃದ್ಧಿ ಕೆಲಸಕಾರ್ಯಗಳಿಗೆ ಇರಬಹುದು, ಅಥವಾ ಸಾರ್ವಜನಿಕ ಕೆಲಸಕಾರ್ಯಗಳಿಗೆ ವಿನಿಯೋಗಿಸತಕ್ಕಂಥಾ ಹಣವಿರಬಹುದು ಬಹಳ ಕಡಿಮೆ ಹಣ ಖರ್ಚು ಮಾಡುತ್ತಿದ್ದಾರೆ. ಇವತ್ತು ನಮ್ಮ ಹೊಸದಾಗಿ ಬಂದಿರತಕ್ಕ ಜಿಲ್ಲಾ ಪರಿಷತ್ತಿನವರು ಹೊಸದಾಗಿ ವೆಂಟೆಡ್ ಡ್ಯಾಮ್ಸ್ ಕಟ್ಟಿಸಿಕೊಡಿ ಎಂದು ಕೇಳಲಿಲ್ಲ. ಇರತಕ್ಕಂಥ ವೆಂಟೆಡ್ ಡ್ಯಾಮ್ಸನ್ನು ರಿಪೇರಿ ಮಾಡಿಸಿಕೊಡಿ ಎಂದು ಕೇಳಿದ್ದರು. ಆ ಕೆಲಸ ಇದುವರೆವಿಗೂ ಆಗಲಿಲ್ಲ. ಈ ವೆಂಟೆಡ್ ಡ್ಯಾಮ್ಸನ್ನು ಸ್ವಂತವಾಗಿ ಕೃಷಿ ಮಾಡಿಕೊಳ್ಳುವವರು ಮಾಡಿಕೊಂಡಿದ್ದಾರೆ. ಅವರ ವೆಂಟೆಡ್ ಡ್ಯಾಮನ್ನು ಸರ್ಕಾರದವರು ರಿಪೇರಿ ಮಾಡಿಸಿಕೊಟ್ಟರೆ ಅವರ ಬೆಳೆ ಉಳಿಸಬಹುದು, ಇಲ್ಲದಿದ್ದರೆ ಅವರ ಬೆಳೆಗೆ ತೊಂದರೆಯಾಗತಕ್ಕಂಥ ಪರಿಸ್ಥಿತಿ ಬಂದಿದೆ. ಆದ್ದರಿಂದ ಸರ್ಕಾರದವರು ಈ ವೆಂಟೆಡ್ ಡ್ಯಾಮ್ಸ್ ರಿಪೇರಿ ಕೆಲಸಕ್ಕೆ ಜಾಸ್ತಿ ಹಣ ಕೊಡಬೇಕೆಂದು ಹೇಳಿ, ಕಂದಾಯ ಮಂತ್ರಿಗಳು ಆಗಲೇ ಇರಲಿಲ್ಲ ಕಂದಾಯ ಇಲಾಖೆಯ ಮುಖಾಂತರ ಮಾಡುವ ಬೇರೆ ಬೇರೆ ರೀತಿಯ ಯೋಜನೆಗಳು ಇವೆ, ಅವು ಆಶಾಕಿರಣ ಯೋಜನೆ ಇರಬಹುದು. ಹೆರಿಗೆ ಭತ್ಯೆ ಕೊಡುವ ಕಾರ್ಯಕ್ರಮವಿರಬಹುದು. ಮನೆ ಸುಟ್ಟುಹೋದವರಿಗೆ ತಹಶೀಲ್ದಾರರು 500 ರೂಪಾಯಿಗಳನ್ನು ಮತ್ತು ಅಸಿಸ್ಟೆಂಟ್ ಕಮಿಷನರ್ ರವರು 2000 ರೂಪಾಯಿಗಳು ಕೊಡುವಂತಹ ಪರಿಸ್ಥಿತಿ ಇದೆ. ಇದನ್ನು ಸ್ವಲ್ಪ ಜಾಸ್ತಿ ಮಾಡುವಂತಹ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಹೇಳಿ ಇದುವರೆವಿಗೂ ಮಾತನಾಡಲು ಅವಕಾಶವನ್ನು ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಕಂಶಾಲ(ಸುಳ್ಯ).—ಸನ್ಮಾನ್ಯ ಅಧ್ಯಕ್ಷರೇ, ಕಂದಾಯ ಮತ್ತು ನೀರಾವರಿ ಇಲಾಖೆಗಳಲ್ಲಿ ಇರುವಂತಹ ಅವ್ಯವಸ್ಥೆಯನ್ನು ವಿರೋಧಿಸಿ ನಾನು ನಾಲ್ಕಾರು ಮಾತುಗಳನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಈಗ ಇರುವಂತಹ ಭೂಸುಧಾರಣಾ ಕಾಯ್ದೆ ಮತ್ತು ನಿಗದಿತ ಜಮೀನಿನ ಬಗ್ಗೆ ಮತ್ತು ಅರ್ಬನ್ ಲ್ಯಾಂಡ್ ಸೀಲಿಂಗ್ ಪ್ರಕಾರ ಸರ್ಕಾರಕ್ಕೆ ಬಂದಿರುವ ಜಮೀನನ್ನು ಬಡವರಿಗೆ ಹಂಚತಕ್ಕ ವ್ಯವಸ್ಥೆಯಲ್ಲಿ ಬಹಳ ವಿಳಂಬವಾಗಿದೆ. ಇದು ಬಹಳ ಶೀಘ್ರಗತಿಯಲ್ಲಿ ವಿತರಣೆಯಾಗಬೇಕೆಂದು ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ರಾಜ್ಯದಲ್ಲಿ ಇರುವ ಹಳ್ಳಿಗಳಲ್ಲಿ ಆಗಲಿ ಅಥವಾ ಪಟ್ಟಣಗಳಲ್ಲಿ ಆಗಲಿ ಇರುವ ಹೆಚ್ಚುವರಿ ಜಮೀನನ್ನು ಹರಿಜನ ಮತ್ತು ಗಿರಿಜನರಿಗೆ, ಹಿಂದುಳಿದ ವರ್ಗದವರಿಗೆ ಹಂಚತಕ್ಕ ಕಾರ್ಯಕ್ರಮ ಸರ್ಕಾರ ತ್ವರಿತಗತಿಯಲ್ಲಿ ಹಾಕಿಕೊಳ್ಳಬೇಕೆಂದು ನಾನು ಹೇಳುತ್ತೇನೆ. ಮತ್ತು ಹಳ್ಳಿಗಳಲ್ಲಿ ಬರುವಂತಹ ಕಾಲು ದಾರಿ, ರಸ್ತೆ ದಾರಿ ಇವು ಪಹಣಿ ಮತ್ತು ಆರ್.ಟಿ.ಸಿ.ಯಲ್ಲಿ ದಾಖಲು ಮಾಡುವಂತಹ ಕಾರ್ಯಕ್ರಮ ಈಗ ಇಲ್ಲ. ಇದರಿಂದ ಮುಂದೆ ತುಂಬಾ ಜನರಿಗೆ ತೊಂದರೆಯಾಗುತ್ತದೆ. ಆದ್ದರಿಂದ ಕಡ್ಡಾಯವಾಗಿ ಪಹಣಿಪತ್ರಗಳಲ್ಲಿ ಕಾಲುದಾರಿ ರಸ್ತೆದಾರಿ ಹಕ್ಕುಗಳನ್ನು ದಾಖಲು ಮಾಡುವ ಕೆಲಸವನ್ನು ಕೈಗೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ. ಈಗ ಸರ್ಕಾರದವರು ನಾಡ ಕಚೇರಿಗಳನ್ನು ಹೋಬಳಿ ಮಟ್ಟದಲ್ಲಿ ಮಾಡಬೇಕೆಂದು ಇದೆ. ಈಗ ಸರ್ಕಾರದವರು ಒಂದು ತಾಲ್ಲೂಕಿ

ನಲ್ಲಿ ಒಂದೆರಡು ಕಡೆ ಮಾತ್ರ ಸ್ಟ್ಯಾಂಪಲ್‌ಗೆ ಹಾಕಿಕೊಂಡಿದ್ದಾರೆ. ಈ ನಾಡ ಕಚೇರಿಗಳಲ್ಲಿ ಕಂದಾಯ ಇಲಾಖೆಯ ಸಿಬ್ಬಂದಿ ಹಾಕಿ ಇರುತ್ತಾರೆ. ಕೆಲವು ಕಡೆಗಳಲ್ಲಿ ನೇಮಿಸಿರುವುದೇ ಇಲ್ಲ. ಇಲ್ಲಿ ಸಿಬ್ಬಂದಿಯ ಅವಶ್ಯಕತೆ ಇರುವುದರಿಂದ ಸಿಬ್ಬಂದಿಯನ್ನು ಒದಗಿಸಿಕೊಟ್ಟು ಜನರಿಗೆ ಅನುಕೂಲ ಮಾಡಬೇಕೆಂದು ನಾನು ಹೇಳುತ್ತೇನೆ.

ಅದೇ ರೀತಿಯಾಗಿ ಇವತ್ತಿನ ದಿವಸಗಳಲ್ಲಿ ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ತುಗಳು ಅಸ್ತಿತ್ವಕ್ಕೆ ಬಂದ ಮೇಲೆ ಕಂದಾಯ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ ನೌಕರರುಗಳನ್ನು ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ತುಗಳ ಕಛೇರಿಗಳಲ್ಲಿ ಕೆಲಸ ಮಾಡುವುದಕ್ಕೆ ನೇಮಿಸಿರುವುದರಿಂದ ಕಂದಾಯ ಇಲಾಖೆಯಲ್ಲಿ ಬಡ ಜನರ ಕೆಲಸಗಳು ಸರಿಯಾಗಿ ಸಮ ಆಗದ ರೀತಿಯಲ್ಲಿ ಆಗಿದೆ. ಏಕೆಂದರೆ ಕಂದಾಯ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ ನೌಕರರುಗಳನ್ನು ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ತುಗಳ ಕಛೇರಿಗಳಿಗೆ ಹಾಕಿರುವುದರಿಂದ ಕಂದಾಯ ಇಲಾಖೆಯಲ್ಲಿ ಸಿಬ್ಬಂದಿ ಕೊರತೆ ಸಾಕಷ್ಟು ಉಂಟಾಗಿದೆ. ಈ ರೀತಿ ಉಂಟಾಗಿರುವ ಸಿಬ್ಬಂದಿ ಕೊರತೆಯನ್ನು ನಿವಾರಣೆ ಮಾಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಇದೇ ರೀತಿಯಾಗಿ ೧೯೬೪ನೇ ಇಸವಿಯಲ್ಲಿ ಡಿಪ್ರೆಸ್ಡ್ "ಕ್ಲಾಸ್ ರಿಸರ್ವೇಷನ್ ಲ್ಯಾಂಡ್ ರೆವಿನ್ಯೂ ಆ್ಯಕ್ಟ್‌ನಲ್ಲಿ ಹೇಳುವಂತೆ ಡಿ ಸಿ. ಮನ್ನಾ ಜಮೀನುಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರುಗಳಿಗೆ ದರಕಾಸ್ ಮೂಲಕ ಕೊಡಬೇಕೆಂದು ಕಾನೂನು ಮಾಡಲಾಗಿತ್ತು. ಆದರೆ, ಡಿ.ಸಿ. ಮನ್ನಾ ಲ್ಯಾಂಡ್‌ನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಬಡ ಜನರುಗಳಿಗೆ ದರಕಾಸ್ ಮೂಲಕ ವಿತರಣೆ ಮಾಡದೇ ಇರುವ ನಿದರ್ಶನಗಳನ್ನು ನಾವು ಕಾಣುತ್ತಿದ್ದೇವೆ. ಅಲ್ಲದೇ ಈ ಡಿ.ಸಿ. ಮನ್ನಾ ಜಮೀನುಗಳನ್ನು ಶ್ರೀಮಂತ ವರ್ಗದವರೇ ಸ್ವಾಧೀನ ಮಾಡಿಕೊಂಡಿರುವ ನಿದರ್ಶನಗಳನ್ನು ನಾವು ಕಾಣುತ್ತಿದ್ದೇವೆ. ಯಾವ ರೀತಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರುಗಳಿಗೆ ಭೂಮಿ ಡಿಸಿ ಮನ್ನಾ ಜಮೀನು ಸಿಗಬೇಕೆಂದು ಕಾನೂನು ಮಾಡಿದ್ದಾರೋ ಅದರಂತೆ ಬಡ ವರ್ಗದ ಜನರುಗಳಿಗೆ ಭೂಮಿ ಸಿಕ್ಕುವ ಹಾಗೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇದೇ ರೀತಿಯಾಗಿ ೧೯೬೪ನೇ ಇಸವಿಯಲ್ಲಿ ಡಿ.ಸಿ. ಲ್ಯಾಂಡ್‌ನ್ನು ಅರಣ್ಯ ಇಲಾಖೆಗೆ ವರ್ಗ ಮಾಡಬೇಕೆಂಬ ನಿಯಮವನ್ನು ಮಾಡಲಾಗಿತ್ತು. ಈ ಡಿ.ಸಿ. ಲ್ಯಾಂಡ್‌ನಲ್ಲಿ ೧೯೬೪ನೇ ಇಸವಿಯಿಂದ ಇಲ್ಲಿಯವರೆಗೂ ಎಷ್ಟೋ ಕುಟುಂಬಗಳು ವ್ಯವಸಾಯವನ್ನು ಮಾಡಿಕೊಂಡು ಬಂದಿದ್ದಾರೆ. ಸಿ ಮತ್ತು ಡಿ ವರ್ಗದ ಜಮೀನುಗಳಲ್ಲಿ ಅನೇಕ ಕುಟುಂಬದವರು ಅಡಿಕೆ, ತೆಂಗು ಮುಂತಾದ ದೀರ್ಘಕಾಲಿಕ ಬೆಳೆಗಳನ್ನು ಬೆಳೆಯುತ್ತಿರುವ ನಿದರ್ಶನಗಳು ಇವೆ. ಈ ಭೂಮಿಯನ್ನು ಕೃಷಿಗೆ ಯೋಗ್ಯವಾದ ಭೂಮಿಯಾಗಿ ಪರಿವರ್ತನೆ ಮಾಡುವ ರೀತಿಯಲ್ಲಿ ರೈತರುಗಳು ವ್ಯವಸಾಯವನ್ನು ಮಾಡಿಕೊಂಡು ಬಂದಿದ್ದಾರೆ. ಆದರೆ, ಇತ್ತೀಚೆಗೆ ಸಿ ಮತ್ತು ಡಿ ಲ್ಯಾಂಡ್‌ನ್ನು ಅರಣ್ಯ ಇಲಾಖೆಗೆ ಕಂದಾಯ ಇಲಾಖೆಯವರು ವರ್ಗ ಮಾಡಿದ್ದಾರೆ. ೧೯೬೪ರ ನೋಟಿಫಿಕೇಶನ್—೧೯೭೮ರಲ್ಲಿ ಅರಣ್ಯ ಇಲಾಖೆಗೆ ವರ್ಗಾಯಿಸಿದ್ದು ಬಹಳ ವರ್ಷಗಳಿಂದ ಏನು ದುರ್ಬಲ ವರ್ಗದ ಜನರುಗಳು ಮತ್ತು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರು ವ್ಯವಸಾಯ ಮಾಡಿಕೊಂಡು ಬಂದಿದ್ದಾರೋ ಆ ಭೂಮಿಯಲ್ಲಿ ಅರಣ್ಯ ಇಲಾಖೆಯವರು ಸಾಮಾಜಿಕ ಅರಣ್ಯ ಯೋಜನೆಯಡಿಯಲ್ಲಿ ಗಿಡಗಳನ್ನು ನೆಡುವ ಕಾರ್ಯಕ್ರಮಗಳನ್ನು ಮಾಡುತ್ತಿದ್ದಾರೆ. ಯಾರು ಶ್ರೀಮಂತರಿದ್ದು ಸಿ ಮತ್ತು ಡಿ ಲ್ಯಾಂಡ್‌ಗಳನ್ನು ಸ್ವಾಧೀನ ಮಾಡಿಕೊಂಡು ವ್ಯವಸಾಯ ಮಾಡುತ್ತಿದ್ದಾರೋ ಅಂಥವರುಗಳ ಜಮೀನುಗಳನ್ನು ಅರಣ್ಯ ಇಲಾಖೆಯವರು ಗಿಡಗಳನ್ನು ನೆಡುವ ಕಾರ್ಯಕ್ರಮಕ್ಕೆ ಕಸಿದುಕೊಳ್ಳುವ ಗೋಜಿಗೇ ಹೋಗಿಲ್ಲ. ಯಾವ ದುರ್ಬಲ ವರ್ಗದ ಜನರುಗಳು ಮತ್ತು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ಜನರುಗಳು ವ್ಯವಸಾಯವನ್ನು ಮಾಡಿಕೊಂಡು ಬರುತ್ತಿದ್ದರೋ ಅಂಥ ಜಮೀನುಗಳನ್ನು ಮಾತ್ರ ಅರಣ್ಯ ಇಲಾಖೆಯವರು ಸ್ವಾಧೀನ ಪಡಿಸಿಕೊಳ್ಳುತ್ತಿದ್ದಾರೆ. ಆದ್ದರಿಂದ, ಬಡ ಜನರಾದ ಪರಿಶಿಷ್ಟ ಜಾತಿ ಮತ್ತು ಪಂಗಡದ ಜನರುಗಳಿಗೆ ಸಿ ಮತ್ತು ಡಿ ಲ್ಯಾಂಡ್ ಭೂಮಿಯನ್ನು ದರಕಾಸ್ ಮಂಜೂರಾತಿ ಆಗಿದ್ದವರಿಗೆ ದರಕಾಸ್ತು ಮೂಲಕ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಅದೇ ರೀತಿಯಲ್ಲಿ ನಮ್ಮ ರಾಜ್ಯಾದ್ಯಂತ ಕಂದಾಯ ಇಲಾಖೆಯ ವ್ಯಾಪ್ತಿಗೆ ಬರುವಂತೆ ಎಲ್ಲಾ ಗ್ರಾಮಗಳಲ್ಲಿ ಗ್ರಾಮ ಸಹಾಯಕರೆಂದು ಕೆಲಸ ಮಾಡುತ್ತಿದ್ದಾರೆ. ಈ ಗ್ರಾಮ ಸಹಾಯಕರುಗಳು ಜೀತದಾಳುಗಳ ರೀತಿಯಲ್ಲಿ ಇನ್ನೂ ಕೆಲಸ ಮಾಡುತ್ತಿರುವ ನಿದರ್ಶನಗಳನ್ನು ನಾವು ನೋಡುತ್ತಿದ್ದೇವೆ. ೩ನೇ ವೇತನ ಆಯೋಗದಲ್ಲಿ ಗ್ರಾಮಸಹಾಯಕರುಗಳಿಗೆ ತಿಂಗಳಿಗೆ ೭೦೦ ರೂಪಾಯಿಗಳ ವೇತನವನ್ನು ಕೊಡಬೇಕೆಂದು ಹೇಳಲಾಗಿದೆ,

ಆದರೂ ಗ್ರಾಮ ಸಹಾಯಕರು ಜೀತದಾಳುಗಳ ತರಹವೇ ಕೆಲಸ ಮಾಡುತ್ತಿದ್ದಾರೆ. ೪ನೇ ವೇತನ ಆಯೋಗದಲ್ಲಿ ತಿಳಿಸಿರುವ ಹಾಗೆ ಈ ಗ್ರಾಮ ಸಹಾಯಕರುಗಳಿಗೆ ಸಂಬಳವನ್ನು ಕೊಡುವುದಕ್ಕೆ ಸರ್ಕಾರ ಹೆಚ್ಚು ಮುತುವರ್ಜಿ ವಹಿಸುತ್ತಿಲ್ಲ. ಜೀತದಾಳುಗಳಾಗಿ ಕೆಲಸ ಮಾಡುತ್ತಿರುವ ಗ್ರಾಮ ಸಹಾಯಕರು ಗಳಿಗೆ ಮೂರನೇ ವೇತನ ಆಯೋಗದ ಸಂಬಳ ಕೊಟ್ಟು ಸರಿಪಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಅದೇ ರೀತಿಯಾಗಿ ಸಾರ್ವಜನಿಕ ಉದ್ದೇಶಕ್ಕೆ ಭೂ ಸ್ವಾಧೀನ ಕಾರ್ಯಕ್ರಮದಲ್ಲಿ ಸರ್ಕಾರವು ಭೂ ಸ್ವಾಧೀನ ಮಾಡಿಕೊಳ್ಳುವ ಸಂದರ್ಭದಲ್ಲಿ ಎಷ್ಟೋ ಪ್ರಕರಣಗಳು ನ್ಯಾಯಾಲಯಕ್ಕೆ ಹೋಗಿ ಭೂ ಸ್ವಾಧೀನ ಮಾಡಿಕೊಳ್ಳುವುದಕ್ಕೆ ಆಗಿಲ್ಲ. ನ್ಯಾಯಾಲಯಗಳು ತಡೆ ಆಜ್ಞೆ ನೀಡಿರುವುದರಿಂದ ಭೂ ಸ್ವಾಧೀನ ಮಾಡಿಕೊಳ್ಳುವುದಕ್ಕಾಗುವುದಿಲ್ಲ ಎಂದು ಒಂದೇ ಉತ್ತರ ಬರುತ್ತಿದೆ. ಆದ್ದರಿಂದ, ಸರ್ಕಾರವು ತ್ವರಿತವಾಗಿ ಈ ಕಡೆ ಗಮನಹರಿಸಿ ಸಾರ್ವಜನಿಕ ಉದ್ದೇಶಕ್ಕಾಗಿ ಸ್ವಾಧೀನ ಮಾಡಿಕೊಳ್ಳುವ ಜಮೀನು ಗಳ ಪ್ರಕರಣಗಳನ್ನು ನ್ಯಾಯಾಲಯದಲ್ಲಿ ಬೇಗ ಇತ್ಯರ್ಥಪಡಿಸಬೇಕು. ನ್ಯಾಯಾಲಯದಲ್ಲಿರುವ ಜಮೀನು ಖಟ್ಲೆ (ಕೇಸ್‌ಗಳನ್ನು) ಇತ್ಯರ್ಥ ಮಾಡಿ ಸಾರ್ವಜನಿಕ ಉದ್ದೇಶದ ಹಿತ ದೃಷ್ಟಿಯಿಂದ ಉಪಯೋಗಿಸುವುದಕ್ಕೆ ವಿಲೇ ಮಾಡಬಾರದೆಂದು ಕೇಳಿಕೊಳ್ಳುತ್ತೇನೆ.

ಹಲವು ವರ್ಷಗಳಿಂದ ಇರುವ ಖಟ್ಲೆಗಳನ್ನು ತ್ವರಿತಗತಿಯಿಂದ ಇತ್ಯರ್ಥ ಮಾಡಬೇಕೆಂದು ಕೇಳುತ್ತಾ ಇದ್ದೇನೆ. ಇದೇ ರೀತಿಯಾಗಿ ತಾಲ್ಲೂಕು ಕಚೇರಿಗಳಲ್ಲಿ ಈಗಾಗಲೇ ಸಾಕಷ್ಟು ಕಡಿಮೆ ಇರುವ ಸಿಬ್ಬಂದಿ ಹುದ್ದೆಗಳನ್ನು ನೇಮಕ ಮಾಡಿ ಸಾರ್ವಜನಿಕ ಹಿತದೃಷ್ಟಿಯಿಂದ ಅನುಕೂಲ ಮಾಡಿಕೊಡ ಬೇಕಾಗಿ ಕೇಳಿಕೊಳ್ಳುತ್ತೇನೆ. ಅದೇ ರೀತಿಯಲ್ಲಿ ಹೋಬಳಿಗೆ ಒಂದು ನಾಡಕಚೇರಿಯನ್ನು ತೆಗೆಯುವ ಕಾರ್ಯಕ್ರಮ ಇದೆ, ಇದನ್ನೂ ಇನ್ನೂ ವಿಸ್ತೀರ್ಣ ಮಾಡಬೇಕಾಗಿ ಕೇಳಿಕೊಳ್ಳುತ್ತೇನೆ.

ಇವತ್ತು ಯೋಜನಾ ಇಲಾಖೆಯಲ್ಲಿ ನೈಸರ್ಗಿಕ ಪ್ರಕೃತಿಯ ವಿಕೋಪಕ್ಕೆ ಒಳಗಾಗಿ ತೊಂದರೆಗೆ ಸಿಕ್ಕಿದ ಜನರಿಗೆ ಕೇವಲ ತಹಶೀಲ್ದಾರ್‌ರವರ ಅಧಿಕಾರದಲ್ಲಿ ೩೦೦ ರೂಪಾಯಿಗಳನ್ನು ಕೊಡುವ ಕಾರ್ಯ ಕ್ರಮ ಇದೆ. ಅದೇ ರೀತಿಯಲ್ಲಿ ಅಸಿಸ್ಟೆಂಟ್ ಕಮಿಶನರ್ ಮಟ್ಟದಲ್ಲಿ ೫೦೦ ರೂಪಾಯಿಗಳನ್ನು ಪರಿಹಾರವಾಗಿ ಕೊಡುವ ಮತ್ತು ಅದಕ್ಕಿಂತ ಜಾಸ್ತಿ ಇದ್ದಲ್ಲಿ ಅಂದರೆ ನಷ್ಟ ಸಂಭವಿಸಿದ್ದಲ್ಲಿ ಅದನ್ನು ಸರಕಾರಕ್ಕೆ, ಜಿಲ್ಲಾಧಿಕಾರಿಯವರು ಶಿಫಾರಸ್ಸು ಮಾಡಬೇಕಾಗುತ್ತದೆ. ಈಗಿನ ಪರಿಸ್ಥಿತಿಗೆ ಹೋಲಿಸಿದರೆ ಈ ಮೊತ್ತವು ತೀರಾ ಕಡಿಮೆ ಅನ್ನಿಸುತ್ತದೆ. ಈ ಒಂದು ಓಬಿರಾಯನ ಕಾಲದ ಪದ್ಧತಿಯನ್ನು ಬಿಟ್ಟು ಆ ಮೊತ್ತವನ್ನು ಹೆಚ್ಚಿಗೆ ಮಾಡಿ, ಮತ್ತು ಆ ಬಗ್ಗೆ ಕುಟುಂಬದ ಆದಾಯದ ಮೊತ್ತವನ್ನು ಕೂಡ ಹೆಚ್ಚಿಗೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ, ಯಾಕೆಂದರೆ ಮೊದಲಿನ ಹಣದ ಬೆಲೆಗೂ ಈಗಿನ ಹಣದ ಬೆಲೆಗೂ ಹೋಲಿಕೆ ಮಾಡಿದರೆ ಇದು ಏನೂ ಸಾಲದು ಎಂದು ಅರ್ಥವಾಗುತ್ತದೆ. ಆದುದರಿಂದ ಹೀಗೆ ಪರಿಹಾರವನ್ನು ಕೊಡುವಾಗ ಜಿಲ್ಲಾಧಿಕಾರಿಗಳ ಮಟ್ಟದಲ್ಲಿ ಇನ್ನೂ ೫೦೦ ಬದಲು ೮೦೦-೦೦ರೂ.ಗಳನ್ನಾಗಿ ಜಾಸ್ತಿ ಕೊಡುವ ಹಾಗೆ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಈಗಾಗಲೇ ರಾಜ್ಯದಲ್ಲಿ ತಾಲ್ಲೂಕು ಸಮಿತಿಗಳನ್ನು ರಚಿಸಲಾಗಿದೆ. ನಮ್ಮ ಸುಳ್ಯ ವಿಧಾನಸಭಾ ಕ್ಷೇತ್ರದಲ್ಲಿ ಪುತ್ತೂರು ತಾಲ್ಲೂಕಿನಲ್ಲಿ ಬರತಕ್ಕಂಥ ಕಡಬಾ ಹೋಬಳಿಯಲ್ಲಿರುವಂಥ ೨೮ ಗ್ರಾಮಗಳನ್ನು ಅದೇ ರೀತಿಯಲ್ಲಿ ಸುಳ್ಯ ತಾಲ್ಲೂಕಿನಿಂದ ೧೨ ಗ್ರಾಮಗಳನ್ನು ಕೂಡ ತೆಗೆದು ವಿಂಗಡಿಸಿ ತಾಲ್ಲೂಕು ಕಡಬಾ ಪಂಚಾಯತ್ ಸಮಿತಿ ಎಂದು ರಚಿಸಲಾಗಿದೆ. ಇದರಲ್ಲಿ ಅನ್ಯಾಯವಾಗಿದೆ, ಅದೇನೆಂದರೆ, ಸುಳ್ಯ ತಾಲ್ಲೂಕಿನ ೧೦ ಗ್ರಾಮಗಳನ್ನು ಕಡಬ ಪಂಚಾಯತ್ ಸಮಿತಿಗೆ ಶಿಫಾರಸ್ಸು ಮಾಡಿದ್ದರೆ, ಇದರಲ್ಲಿರತಕ್ಕಂಥ ೭-೮ ಗ್ರಾಮಗಳನ್ನು ಲಿಸ್ಟಿಯಲ್ಲಿ, ಮಧ್ಯದಲ್ಲಿ ಬಿಟ್ಟು ಐವರನಾಡು ಎಂಬ ಗ್ರಾಮ ವನ್ನು ಕಡಬಾ ಪಂಚಾಯಿತಿಗೆ ಸೇರಿಸಿದ್ದಾರೆ. ಇದು ನಿಜವಾಗಿಯೂ ಐವರನಾಡು ಗ್ರಾಮದ ಆ ಜನರಿಗೆ ಮಾಡಿದ ಅನ್ಯಾಯವಾಗುತ್ತದೆ. ಏಕೆಂದರೆ ಮಧ್ಯದಲ್ಲಿರುವ ಈ ಗ್ರಾಮವನ್ನು ಕಡಬಕ್ಕೆ ಸೇರಿಸುವುದಕ್ಕೆ ಕಾರಣ ಏನು? ಇದೇನೊ ಕೈತಪ್ಪಿನಿಂದ ಆದ ದೋಷ ಎಂದು ಹೇಳುವುದಕ್ಕಾಗುವುದಿಲ್ಲ. ಆದುದರಿಂದ ತಾಲ್ಲೂಕು ಸಮಿತಿಯನ್ನು ಮಾಡುವಾಗ ಇಂಥ ಲೋಪ ದೋಷಗಳನ್ನು ಗಮನದಲ್ಲಿಟ್ಟುಕೊಂಡು ಪುನಃ ರಚಿಸಬೇಕೆಂದು ಕೇಳಿಕೊಳ್ಳುತ್ತೇನೆ.

ನಮ್ಮ ಸುಳ್ಯ ವಿಧಾನ ಸಭಾ ಕ್ಷೇತ್ರದ ಪುತ್ತೂರು ತಾಲ್ಲೂಕಿನ ಕಡಬದಲ್ಲಿ ಈಗಾಗಲೇ ನಾಡಕಚೇರಿ ಯನ್ನು ತೆರೆಯಲಾಗಿದೆ. ಅಲ್ಲಿರುವಂತ ೨೮ ಗ್ರಾಮಗಳನ್ನು ಸೇರಿಕೊಂಡು ನಾಡ ಕಚೇರಿಯನ್ನು

ಮಾಡಲಾಗಿದೆ. ತಾಲ್ಲೂಕು ಕೇಂದ್ರವಾದ ಪುತ್ತೂರಿಗೆ ಬರಬೇಕಾದಂಥ ಎಂಟು ಗ್ರಾಮಗಳು ಚಾರ್ವಕಾ ಬೆಳಂದೂರು, ಕುಂಚಪ್ಪಾಡಿ, ಸವಣೂರು, ಕಾಯುಮಣ, ಮುಂತಾದ ಗ್ರಾಮಗಳ ಜನರು ಕೇವಲ ೨೨ ಕಿ. ಮೀ. ದೂರದ ತಾಲ್ಲೂಕು ಕೇಂದ್ರವಾದ ಪುತ್ತೂರಿಗೆ ಬರಬೇಕಾಗಿದ್ದರೆ. ಈಗ ಈ ಎಂಟು ಗ್ರಾಮಗಳನ್ನು ಕಡಬ ಹೋಬಳಿಗೆ ಸೇರಿಸಿದ್ದರಿಂದಾಗಿ ಅವರು ೫೦ ಕಿ. ಮೀ. ದೂರದವರೆಗೆ ಹೋಗ ಬೇಕಾದ ಪರಿಸ್ಥಿತಿಯು ಬಂದಿದೆ. ಆದುದರಿಂದ ಆ ಜನರಿಗೆ ಜಾಗದ ಅನುಕೂಲವಾಗುವಂತೆ ಕಡಬ ಕಚೇರಿಗೆ ಸೇರಿಸಿದೆ ಈ ಎಂಟುಗ್ರಾಮಗಳ ವಿಚಾರವನ್ನು ಕೈಬಿಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಬಗ್ಗೆ ಅಲ್ಲಿಯ ಸಾರ್ವಜನಿಕರು ಈಗಾಗಲೆ ಮನವಿಗಳನ್ನು ಕೊಟ್ಟಿದ್ದಾರೆ. ಆ ಬಗ್ಗೆ ಸೂಕ್ತ ನಿರ್ದಾರ ವನ್ನು ಸಂಬಂಧಪಟ್ಟ ಸಚಿವರು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಅದೇ ರೀತಿಯಲ್ಲಿ ನಾನು ಕಳೆದ ೧೯೮೫ರ ಕಂದಾಯ ಇಲಾಖೆಯ ಭಾಷಣದಲ್ಲಿ ಕೂಡಾ ಹೇಳಿದ್ದೆ, ಅದೇನೆಂದರೆ ಸುಳ್ಯ ತಾಲ್ಲೂಕಿನ ಗಡಿ ಭಾಗಕ್ಕೆ ಹೊಂದಿಕೊಂಡಂತೆ ಅಕ್ಕಿ ಗೇಟ್‌ನ್ನು ಹಾಕಲಾಗಿದೆ. ನಮ್ಮ ತಾಲ್ಲೂಕಿಗೆ ಕೇರಳದ ಗಡಿ ಹೊಂದಿಕೊಂಡಿದೆ. ಹೀಗೆ ಹೊರವಲಯಕ್ಕೆ ಹೋಗುವ ಕಡೆಗಳಲ್ಲಿ ನಾಲ್ಕು ಗೇಟ್‌ಗಳನ್ನು ಬೇರೆ ಬೇರ ಕಡೆ ಹಾಕುವ ಬದಲು, ಎರಡು ಗ್ರಾಮಗಳಲ್ಲಿ ಕೇಂದ್ರ ಸ್ಥಳದಲ್ಲಿ ನಾರ್ಕೊಡು ಎಂಬ ಸ್ಥಳದಲ್ಲಿ ಒಂದೇ ಗೇಟ್‌ನ್ನು ಹಾಕಲಾಗಿದೆ. ಒಂದೇ ಕಡೆಯ ಬದಲು ನಾಲ್ಕು ಕಡೆಗಳಲ್ಲಿ ಅಂದರೆ, ಅಜ್ಜಾವರ, ಆಲೆಟ್ಟಿ, ಮಂಡೆಕೋಲು, ಬಂದಡ್ಕ ಎಂಬಲ್ಲಿ ಹಾಕಬೇಕಾಗಿಲ್ಲ ಎಂದು ಹೇಳಬಯು ಸುತ್ತೇನೆ. ಏಕೆಂದರೆ ನಾಲ್ಕು ಕಡೆ ಬದಲು ಒಂದೇ ಕಡೆಯಲ್ಲಿ ಹಾಕಿರುವುದರಿಂದ ಜನರಿಗೆ ರೇಶನ್ ಅಕ್ಕಿ ಯನ್ನು ಕೂಡ ತೆಗೆದುಕೊಂಡು ಹೋಗುವುದು ಕಷ್ಟವಾಗಿದೆ. ಮತ್ತು ಹಲವಾರು ರೀತಿಯಲ್ಲಿ ತೊಂದರೆ ಯಾಗಿದೆ. ಹಾಗೂ ಈಗ ಇರುವ ಗೇಟ್‌ನ್ನು ಸ್ಥಳಾಂತರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಮನವಿಗಳನ್ನು ಸಲ್ಲಿಸಿದ್ದು, ೧೯೮೫ನೇ ಇಸವಿಯಿಂದಲೂ ಯಾವುದೇ ಇತ್ಯರ್ಥ ವಾಗದೆ ಇದೆ.

ಈಗಾಗಲೇ ಕಂದಾಯ ಇಲಾಖೆಯವರಿಂದ ಎಷ್ಟೋ ಜಮೀನನ್ನು ದುರ್ಬಲ ವರ್ಗದವರಿಗೆ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ದರಖಾಸ್ತು ರೂಪದಲ್ಲಿ ಕೊಡಲಾಗಿದ್ದರೂ ಈ ಭೂಮಿಯಲ್ಲಿಯ ಮರಗಳನ್ನು ಕಡಿಯುವ ಕೆಲಸವನ್ನು ಮಾಡದೆ ಇರುವುದು ಸರ್ಕಾರ ಅವನ್ನು ಕಡಿಯಲು ಬಡ ರೈತರಿಗೆ ಜಮೀನಿನಲ್ಲಿ ಸಾಗುವಳಿ ಮಾಡಲು ಅನುಕೂಲ ಮಾಡಿಕೊಡಬೇಕು ಆ ಕೆಲಸವನ್ನೇ ಮಾಡುತ್ತಿದ್ದು ಭೂಮಿ ಪಡೆದ ಭೂಹೀನರು ಸಾಗುವಳಿ ಮಾಡಲು ಮರತೆಗೆಯದೆ ಅನಾನುಕೂಲವಾಗಿದೆ. ೧೯೭೮–೭೯ ರಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಉಚಿತವಾಗಿ ದರಖಾಸ್ತು ಭೂಮಿ ಕೊಡುವ ಯೋಜನೆ ಯನ್ನು ಹಾಕಿಕೊಂಡ ಮೇಲೆ ನನ್ನ ಸುಳ್ಯ ತಾಲ್ಲೂಕಿನಲ್ಲಿ ಕೂಡಾ ಹಾಗೆ ಹಂಚಲಾಗಿತ್ತು. ಹಾಗೆ ಕೊಡ ಲಾಗಿರುವ ಭೂಮಿಗಳು ಎಲ್ಲೆಲ್ಲಿ ಇವೆ ಎಂದು ಫಲಾನುಭವಿಗಳಿಗೆ ಯಾರಿಗೂ ಗೊತ್ತಿಲ್ಲ. ಜಮೀನಿನ ಗಡಿಗುರುತು ನಿಗದಿಮಾಡಿಲ್ಲ. ಅಂಥ ಬಡವರು ತಮ್ಮ ಆಜ್ಞೆಗಳನ್ನು ಕೈಲಿ ಹಿಡಿದುಕೊಂಡು ತಮ್ಮ ಜಮೀನು ಎಲ್ಲಿದೆ ಎಂದು ಓಡಾಡುತ್ತಿದ್ದಾರೆ, ಆದ್ದರಿಂದ ಇದರ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳ ಬೇಕೆಂದು ಕೋರುತ್ತೇನೆ.

ಸುಳ್ಯ ತಾಲ್ಲೂಕಿನಲ್ಲಿ ಅಕ್ರಮವಾಗಿ ಒತ್ತುವರಿ ಮಾಡಿದ್ದರೆ ಭೂಮಿಯನ್ನು ಸಕ್ರಮಗೊಳಿಸಲು ಆಜ್ಞೆಯನ್ನು ಸರ್ಕಾರ ಹೊರಡಿಸ ಬೇಕೆಂದು ಒಂದು ಮನವಿಯನ್ನು ತಾಲ್ಲೂಕಿನಾದ್ಯಂತ ಜನರು ಒಪ್ಪಿಸಿ ದ್ದರು. ಆ ಪ್ರಕಾರ ಪರಿಶೀಲಿಸಿ ವರದಿ ಸಲ್ಲಿಸಬೇಕೆಂದು ಜಿಲ್ಲಾಧಿಕಾರಿಯವರು ತಹಸೀಲ್ದಾರ್‌ವರರಿಗೆ ಒಪ್ಪಿಸಿದ್ದಾರೆ. ಆದರೆ ಇದರ ಕುರಿತು ಅಕ್ರಮ ದರಕಾಸ್ತು ರಿಕಾರ್ಡು ತಯಾರಿಯ ಕೆಲವು ಕೆಲಸದ ಪ್ರಗ ತಿಯ ಆಗಿಲ್ಲ. ಆ ತಹಸೀಲ್ದಾರ್ ಆಫೀಸಿನಲ್ಲಿ ಮೇಲ್ಕಂಡ ಸಕ್ರಮದ ವಿವರಗಳು ಅಲಭ್ಯವಾಗಿರುವುದರಿಂದ ಮನವಿ ಈಗಾಗಲೇ ಕಸದ ಬುಟ್ಟಿಯಲ್ಲಿ ಬಿದ್ದಿರಬಹುದು. ಗ್ರಾಮದ ಮಟ್ಟದಲ್ಲಾದರೂ ವಿಲೇಜ್ ಅಕೌಂಟೆಂಟಿಂದ ರಿಕಾರ್ಡು ಆದಂತೆ ಕಾಣುತ್ತಿಲ್ಲ.

ಹಿಂದೆ ನಮ್ಮ ಸುಳ್ಯ ತಾಲ್ಲೂಕಿನಲ್ಲಿ ೭೮ ರವರೆಗೆ ಅಕ್ರಮ ದರಖಾಸ್ತುಗಳನ್ನು ಖಾಯಂಗೊಳಿಸುವ ಆಜ್ಞೆಯನ್ನು ಹೊರಡಿಸಲಾಗಿತ್ತು. ಆಗ ಕೆಲವು ಭೂಮಾಲೀಕರುಗಳು ಬೇರೆಯವರ ಅಕ್ರಮಜಮೀನು ಗಳನ್ನು ತೋರಿಸಿ ಅದು ತಮ್ಮದೆಂದು ಹೇಳಿ ಖಡ ದರಖಾಸ್ತು ಅಕ್ರಮದಾರರೂ ಜಮೀನನ್ನು ಮಂಜೂರು ಮಾಡಿಸಿಕೊಳ್ಳುತ್ತಿದ್ದಾರೆ ಇದರಿಂದ ಅವಿದ್ಯಾವಂತರಾದ ಬಡವರಿಗೆ ವಂಚನೆಯಾಗು ತ್ತಿದೆ. ಇದರಿಂದ ಕೆಲವು ಹಳ್ಳಿಗಳಲ್ಲಿ ಗಲಾಟೆಗಳು ವೈಮನಸ್ಸುಗಳುಂಟಾಗುವ ಪರಿಸ್ಥಿತಿ ಬಂದಿದೆ.

ಕಂದಾಯ ಇಲಾಖೆಯವರು ಈ ಅಕ್ರಮದಾರರ ಅವರ ಹಿಂದಿನ ಮಾಹಿತಿಗಳನ್ನೆಲ್ಲ ಇನ್ಸ್‌ಪೆಕ್ಷನ್ ನಡೆಸಿ ತಿಳಿದುಕೊಂಡಾದ ಮೇಲೆಯೇ ಈ ಕೆಲಸ ಮಾಡುವಂತೆ ಸೂಚನೆ ನೀಡಬೇಕಾಗಿದೆ. ಸರ್ಕಾರ ಈಗ ಅಕ್ರಮ ಜಮೀನು (ಒತ್ತುವರಿ ಜಮೀನು) ಮಂಜೂರಾತಿಗೆ ೫೦ ಪಟ್ಟು ತೀರ್ವೆ ವಸೂಲು ಮಾಡುವ ಕಾರ್ಯಕ್ರಮ ಹಾಕಿಕೊಳ್ಳುವುದರಲ್ಲಿದೆ, ಇದರಿಂದ ಬಡವರಿಗೆ ಎರಡು ಪಟ್ಟು ತೀರ್ವೆ ದಂಡನೆ ತೆರಲು ತುಂಬಾ ಕಷ್ಟ. ದುರ್ಬಲವರ್ಗದವರ ವಿಚಾರದಲ್ಲಿ ಇದನ್ನು ಮಾಫಿ ಮಾಡಬೇಕೆಂದು ಕೋರಿಕೊಳ್ಳುತ್ತಾ ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಚಂದ್ರಶೇಖರ ಮಾಮನಿ (ಪರಸಗಡ).—ಮಾನ್ಯ ಅಧ್ಯಕ್ಷರ, ಇವತ್ತಿನ ದಿವಸ ಏನು ಕಂದಾಯ ಮತ್ತು ನೀರಾವರಿ ಇಲಾಖೆಯ ಬೇಡಿಕೆಗಳನ್ನು ಸಭೆಯ ಮುಂದಿಟ್ಟಿದ್ದಾರೆ ಅದನ್ನು ಸಮರ್ಥಿಸುತ್ತಾ ಕೆಲವು ಸೂಚನೆಗಳನ್ನು ಸರಕಾರಕ್ಕೆ ನೀಡಲು ಇಚ್ಚೆಪಡತ್ತೇನೆ. ನನ್ನ ಮತದಾರ ಕ್ಷೇತ್ರದಲ್ಲಿನ ಮಲಪ್ರಭಾ ಯೋಜನೆ ಬಗ್ಗೆ ಕಲವು ಮಾತಂಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ದಿನಾಂಕ ೭-೩-೮೪ ರಂದು ಸರಕಾರ ನೀಡಿದ ಆದೇಶದ ಮೇಲೆ ಮಲಪ್ರಭಾ ಯೋಜನೆಯಲ್ಲಿದ್ದಂತಹ ರೈತರು ಯಾರಿದ್ದಾರೆ ಅವರಿಗೆ ೫ ವರ್ಷದ ನೀರು ಕಂದಾಯ ಸೂಟು ಬಿಡಬೇಕೆಂಬ ಆರ್ಡರ್ ಆಗಿದ್ದು ಇದು ೮೪ರ ಮುಂದೆ ಆಗಬೇಕೆಂದು ಇತ್ತು ಇದನ್ನು ೧೯೮೪ರ ಹಿಂದೆ ಕಂದಾಯ ಸೂಟು ಬಿಡಬೇಕೆಂಬ ಆದೇಶವನ್ನು ಸರಕಾರದವರು ಹೊರಡಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಮಲಪ್ರಭಾ ಡ್ಯಾಮ್‌ನಿಂದ ಹುಬ್ಬಳ್ಳಿ, ಧಾರವಾಡ, ಸೌಂದತ್ತಿ ಮುಂತಾದ ಅನೇಕ ಭಾಗಗಳಿಗೆ ನೀರು ಸಿಗುತ್ತದೆ ಇಲ್ಲಿ ಸರಿಯಾಗಿ ನೀರು ಶೇಖರಣೆಯಾಗಬೇಕು. ಪ್ರತಿ ವರ್ಷ ಕೂಡ ಈ ಭಾಗಗಳಲ್ಲಿ ಮಳೆ ಜಾಸ್ತಿ ಬಾರದೇ ಕುಡಿಯುವ ನೀರಿಗೆ ಬಹಳ ತೊಂದರೆಯಾಗಿದೆ ಆ ಡ್ಯಾಂನಲ್ಲಿ ನೀರು ಸರಿಯಾಗಿ ಶೇಖರಣೆಯಾಗದೆ ಅಲ್ಲಿರುವ ರೈತರಿಗೆ ತೊಂದರೆಯಾಗಿದೆ. ಮಹದಾಯಿ ನದಿ ನೀರನ್ನು ಮಲಪ್ರಭಾ ಡ್ಯಾಂನಲ್ಲಿ ಕೂಡಿಸಿದರೆ ರೈತರಿಗೆ ಒಳ್ಳೆಯದಾಗುತ್ತದೆ. ಮಲಪ್ರಭಾದಲ್ಲಿ ೮ ಲಿಫ್ಟ್ ಇರಿಗೇಷನ್ ಸ್ಕೀಮ್‌ಗಳು ಇದೆ. ಅದರಲ್ಲಿರುವಂತಹ ೪೦೦, ೫೦೦ ಹೆಚ್. ಪಿ. ಮೋಟಾರುಗಳು ಏನು ಇವೆ ಅವು ಸರಿಯಾಗಿ ಕೆಲಸ ಮಾಡದೇ ಇರುವುದರಿಂದ ಇವತ್ತು ಲಿಫ್ಟ್ ಇರಿಗೇಷನ್ ಸರಿಯಾಗಿ ನಡೆಯುತ್ತಿಲ್ಲ. ಆದರ ಬಗ್ಗೆ ಮಾನ್ಯ ಮಂತ್ರಿಗಳು ಅಧಿಕಾರಿಗಳಿಗೆ ಸೂಕ್ತ ಆದೇಶ ಕೊಟ್ಟು ಅವನ್ನು ರಿಪೇರಿ ಮಾಡಿಸಿ ನೀರು ಬಿಡುವಂತಹ ವ್ಯವಸ್ಥೆ ಮಾಡಬೇಕು. ಇನ್ನು ಕಂದಾಯ ಇಲಾಖೆಯ ಬಗ್ಗೆ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಚ್ಚೆಪಡುತ್ತೇನೆ. ಸತತವಾಗಿ ೩ ವರ್ಷದಿಂದ ಕಂದಾಯ ಸೂಟು ಇದ್ದಂತಹ ರೈತರು ಯಾರಿದ್ದಾರೆ ಅವರಿಗೆ ಕನ್‌ವರ್ಷನ್ ಮಾಡಬೇಕಾದರೆ ಇಂಟರೆಸ್ಟ್ ಸೂಟಿ ಬಿಡುವಂತಹ ಆದೇಶವಿಲ್ಲ. ೩ ವರ್ಷದಿಂದ ಸತತವಾಗಿ ಕಂದಾಯ ಯಾವ ರೈತರಿಗೆ ಸೂಟಿ ಆಗಿದೆ ಅವರಿಗೆ ೫ ವರ್ಷದ ಬಡ್ಡಿಯನ್ನು ಸೂಟಿ ಬಿಡುವಂತಹ ವ್ಯವಸ್ಥೆಯನ್ನು ಮಾಡಬೇಕು, ಇನ್ನು ಯೋಜನೆ ಬಗ್ಗೆ ಹೇಳುವುದಾದರೆ ಪ್ಲಾನ್‌ನಲ್ಲಿ ಇಂಬ್ಯಾಲೆನ್ಸ್ ಎನ್ನುವುದು ಆಗಬಾರದೆಂದು ಹೇಳುತ್ತಾ ಅಧ್ಯಕ್ಷರು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಗೌರವಾನ್ವಿತ ಅಧ್ಯಕ್ಷರೇ, ಕಂದಾಯ ಹಾಗೂ ನೀರಾವರಿ ಇಲಾಖೆಗಳ ಬೇಡಿಕೆಯನ್ನು ನಾನು ಆ ಇಲಾಖೆಗಳ ಕಾರ್ಯಕ್ರಮ ವಿಫಲವಾದುದರಿಂದಾಗಿ ವಿರೋಧಿಸುತ್ತಿದ್ದೇವೆ. ಉಳುವವನೇ ಭೂಮಿಯ ಒಡೆಯ ಎನ್ನುವಂತಹ ಕಾರ್ಯಕ್ರಮದ ಮೂಲಕ ಹಿಂದೆ ಸರ್ಕಾರ ತಂದಂತಹ ಭೂ ನ್ಯಾಯ ಮಂಡಲಿಗಳ ಮೂಲಕ ೧೩೨ ಪ್ರಕರಣಗಳು ಬಾಕಿ ಇವೆ. ಎಂದು ಸರಕಾರದವರು ಕೊಟ್ಟಂತಹ ವರದಿಯಲ್ಲಿ ಇದೆ. ಆದರೆ ಉಚ್ಚ ನ್ಯಾಯಾಲಯದಲ್ಲಿ ತೀರ್ಪು ರದ್ದಾಗಿ ಪುನಃ ವಿಚಾರಣೆಗೆ ಕಳಿಸಿದ ಅರ್ಜಿಗಳು ೩೫,೦೦೦ ಅಪೀಲು ಪ್ರಾಧಿಕಾರಕ್ಕೆ ಕಳಿಸಿದ್ದು ೨೪,೦೦೦ ಹೀಗೆ ಎಲ್ಲಾ ಸೇರಿ ಐವತ್ತು ಅರವತ್ತು ಸಾವಿರ ಅರ್ಜಿಗಳು ಆಗುತ್ತದೆ. ಇದು ಅನೇಕ ವರ್ಷಗಳ ಸಮಸ್ಯೆಯಾಗಿದ್ದು ನೆನೆಗುದಿಗೆ ಬಿದ್ದಿದೆ. ಈ ಸಮಸ್ಯೆ ಬೇಗ ಇತ್ಯರ್ಥವಾಗುವ ದೃಷ್ಟಿಯಿಂದ ಇದು ಆದಷ್ಟು ಬೇಗ ಕಾರ್ಯಾಚರಣೆ ಮಾಡಿ ತನಿಖೆ ಮಾಡಬೇಕು. ಎರಡನೆಯದಾಗಿ ಹೇಳುವುದಾದರೆ ಅಪೀಲು ಪ್ರಾಧಿಕಾರ ಏನು ಪ್ರಾರಂಭವಾಗಿದೆ ಅವು ಪ್ರಾರಂಭವಾಗುವ ಮೊದಲು ನಾವು ಇದನ್ನು ಮಾಡಿದರೆ ತೊಂದರೆಯಾಗುತ್ತದೆಂದು ವಿರೋಧ ಮಾಡಿದೆವು.

ಶ್ರೀ. ಎ. ಲಕ್ಷ್ಮೀಸಾಗರ್.—ಮಾನ್ಯ ಮೊಯಿಲಿಯವರು ಮತ್ತು ವಿರೋಧ ಪಕ್ಷದ ನಾಯಕರು ಈ ತಿದ್ದುಪಡಿ ಮಸೂದೆ ಬಂದಾಗ ಇದನ್ನು ಒಪ್ಪಿಕೊಂಡಿದ್ದರು.

ಶ್ರೀ ಜಿ. ಎಸ್. ಆಚಾರ್.—ಅದು ಏನೇ ಇರಲಿ, ಅಪೀಲು ಪ್ರಾಧಿಕಾರದ ಅಧಿಕಾರಿಗಳೊಂದಿಗೆ ನಾನು ಖಾಸಗಿಯಾಗಿ ಮಾತನಾಡಿದಾಗ ಅವರು ಏನು ಹೇಳಿದರು ಎಂದರೆ ಸಿವಿಲ್ ಪ್ರೊಸೀಜರ್ ಕೋಡಿಗೆ ಅನುಗುಣವಾಗಿ ನಿರ್ಧಾರವನ್ನು ತೆಗೆದುಕೊಳ್ಳಬೇಕಾಗುತ್ತದೆ. ಸಿವಿಲ್ ಪ್ರೊಸೀಜರ್ ಕೋಡಿಗೆ ಅನುಗುಣವಾಗಿ ಮಾಡುವುದಾದರೆ ಯಾರಿಗೆ ಭೂಮಿಯನ್ನು ಉಳುವಂತಹ ಅನುಭವವಿದೆಯೋ ಯಾರು ಭೂಮಿಯನ್ನು ಉಳುತ್ತಾ ಬಂದಿದ್ದಾನೋ, ಯಾರಿಗೆ ಪಹಣಿ ಇಲ್ಲ, ಗೇಣಿ ರಸೀದಿ ಇಲ್ಲವೋ ಅಂತಹವನಿಗೆ ಕೊಡುವುದಿಲ್ಲ. ಮತ್ತೆ ಇದರ ಬಗ್ಗೆ ವಿಚಾರ ಮತ್ತೆ ನೋಡೋಣ. ಅಪೀಲು ಪ್ರಾಧಿಕಾರ ಕೂಡಲೇ ಕುಂದಾಪುರದಲ್ಲಿ ಪ್ರಾರಂಭವಾಗುತ್ತದೆ ಎಂದು ಮಾನ್ಯ ರೆವಿನ್ಯೂ ಸಚಿವರು ಹೇಳಿದರು. ಅಲ್ಲಿ ಜುಡಿಷಿಯಲ್ ಮೆಂಬರ್ ಇಲ್ಲ. ಒಬ್ಬರನ್ನು ಅಲ್ಲಿ ಪೋಸ್ಟ್ ಮಾಡಿದ್ದರು, ಅವರು ತೀರಿ ಹೋದರು. ಅಲ್ಲಿಗೆ ಮತ್ತೊಬ್ಬರನ್ನು ಪೋಸ್ಟ್ ಮಾಡಿಲ್ಲ. ರೆವಿನ್ಯೂ ಮೆಂಬರ್‌ಸನ್ನು ಷುಗರ್ ಫ್ಯಾಕ್ಟರಿಗೆ ಹಾಕಿದ್ದಾರೆ, ಪ್ರಾಧಿಕಾರದ ಕೆಲಸ ಪ್ರಾರಂಭ ಆಗಿಲ್ಲ. ಅಲ್ಲಿ ಕೂಡಲೇ ಕೆಲಸ ಪ್ರಾರಂಭ ಮಾಡಬೇಕು. ಇನ್ನು ಭೂ ನ್ಯಾಯ ಮಂಡಲಿಯಲ್ಲಿ ಹಸ್ತಕ್ಷೇಪ ಆಗುತ್ತಿದೆ. ನಮ್ಮ ಕುಂದಾಪುರದಲ್ಲಿ ಭೂ ನ್ಯಾಯ ಮಂಡಲಿಯಲ್ಲಿ ಮೂರು ಜನ ಸದಸ್ಯರ ಮೇಲೆ ರಾಜಕೀಯ ಪಕ್ಷದಿಂದ ಒತ್ತಡ ತಂದು ಇದೇ ರೀತಿ ತೀರ್ಮಾನ ಮಾಡಬೇಕು ಎಂದು ಬಂದಿದ್ದನ್ನು ನಾನು ಮಾನ್ಯ ರೆವಿನ್ಯೂ ಸಚಿವರ ಗಮನಕ್ಕೆ ತಂದಿದ್ದೇನೆ. ಇದರ ವಿಚಾರವಾಗಿ ಬೇರೆ ಚರ್ಚೆಯಲ್ಲಿ ಇದರ ಬಗ್ಗೆ ಪ್ರಸ್ತಾಪ ಎತ್ತುತ್ತೇನೆ. ಭೂ ನ್ಯಾಯ ಮಂಡಲಿಯಲ್ಲಿ ಬದಲಾವಣೆ ಕೂಡಾ ಆಗಬೇಕಾದ್ದು ಅಗತ್ಯ ಇದೆ. ಭೂ ನ್ಯಾಯ ಮಂಡಲಿಯಲ್ಲಿ ಹಿಂದೆ ಅವಸರ ಅವಸರವಾಗಿ ಕೆಲವೊಂದು ತೀರ್ಮಾನವಾಗಿದೆ. ಸರ್ವೆ ಆಗಿರುವುದಿಲ್ಲ, ಸರ್ವೆನಂಬರ್‌ನಲ್ಲಿ ವ್ಯತ್ಯಾಸವಾಗಿದೆ, ಅದೆಲ್ಲ ಕ್ಲೆರಿಕಲ್ ಎರರ್ ಅಲ್ಲ. ಆದರೂ ಅವರೆಲ್ಲರೂ ಹೈಕೋರ್ಟಿಗೆ ಹೋಗ ಬೇಕಾದಂಥ ಪರಿಸ್ಥಿತಿ ಬಂದಿದೆ. ಇಂಥ ಕೆಲವು ಕೇಸ್‌ಗಳು ಮಾತ್ರ ಇದ್ದಾವೆ. ಭೂ ಸುಧಾರಣಾ ಕಾನೂನಿನಲ್ಲಿ ಚಿಕ್ಕ ತಿದ್ದುಪಡಿಯನ್ನು ಮಾಡತಕ್ಕಂಥ ಅಗತ್ಯ ಇದೆ. ಭೂ ಸುಧಾರಣಾ ಕಾಯ್ದೆ ಪ್ರಕಾರ ಸೆಕ್ಷನ್ ೭೯ (ಎ) ಪ್ರಕಾರ ಹನ್ನೆರಡು ಸಾವಿರ ರೂಪಾಯಿ ಮೇಲ್ಪಟ್ಟು ಇನ್‌ಕಂ ಹೊಂದಿರುವವರು ಭೂಮಿಯನ್ನು ಪಡೆದುಕೊಳ್ಳುವ ಹಾಗೆ ಇಲ್ಲ. ಅವತ್ತಿನ ಮಿತಿ ಹನ್ನೆರಡು ಸಾವಿರ ರೂಪಾಯಿ ಎಂದು ಈ ಆಜ್ಞೆಯಾಗಿದೆ, ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ಅವತ್ತಿನ ರೇಟ್ ಹನ್ನೆರಡು ಸಾವಿರ, ಇವತ್ತು ಒಬ್ಬ ಅಟೆಂಡರ್ ಕೂಡಾ ಇವತ್ತಿನ ದಿವಸ ಒಂದು ಭೂಮಿಯನ್ನು ಕೂಡಾ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಇದನ್ನು ಹೆಚ್ಚು ಮಾಡಬೇಕು ಎಂದು ಒಂದು ಮನವಿಯನ್ನು ಮಾಡುತ್ತೇನೆ. ಇನ್ನು ಪ್ರೀಮಿಯಂ ಕೊಡತಕ್ಕಂಥ ವಿಚಾರದಲ್ಲಿ ಬಿ. ಕ್ಲಾಸ್ ೧೮ ಎಕರೆಗಿಂತ ಕಡಿಮೆ ಅಥವಾ ಸಾಮಾನ್ಯವಾಗಿ ಅದಕ್ಕೆ ತತ್ಸಮಾನವಾದ ಬೇರೆ ಭೂಮಿ ಇದ್ದರೆ ಅದಕ್ಕೆ ಪ್ರೀಮಿಯಂ ಕೊಡತಕ್ಕಂಥದ್ದು ಬೇಡ ಎನ್ನುವ ಕಾನೂನನ್ನು ಸರ್ಕಾರ ತಂದಿದ್ದಾರೆ. ಇದು ೧೭-೧೦-೧೯೭೪ರ ನಂತರ ಯಾವ ಆಜ್ಞೆಯಾಗಿದೆ, ಆ ಕೇಸ್‌ಗಳಿಗೆ ಮಾತ್ರ ಸಂಬಂಧಪಡುತ್ತದೆ. ಇದಕ್ಕೆ ಹಿಂದೆ ತೀರ್ಮಾನವಾಗಿ ಇದ್ದಂಥ ಸಹಸ್ರಾರು ಕೇಸ್‌ಗಳಿಗೆ ಇದು ಅಪ್ಲೈ ಆಗುವುದಿಲ್ಲ. ನಿಜವಾಗಿ ಬಡವರಿಗೆ ಸಹಾಯ ಮಾಡಬೇಕಾಗಿದ್ದರೆ ಮೊದಲಿನಿಂದ ಬರುವ ಹಾಗೆ, ಅದು ಅನುಷ್ಠಾನಕ್ಕೆ ಬರುವ ಹಾಗೆ ತಾವು ಮಾಡಬೇಕು. ಆಮೇಲೆ ಭೂ ಮಾಪನ ವಿಚಾರದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಲ್ಲಾ ಕಲ್ಲು ಗುಡ್ಡಗಳೂ ಪೂರ್ತಿ ಕೃಷಿಭೂಮಿ ಎಂದು ಮಾಡಿದ್ದೀರಿ. ಜಿಲ್ಲೆ ಮತ್ತು ರಾಜ್ಯದ ಬೇರೆ ಜಿಲ್ಲೆಗಳಲ್ಲಿ ಆ ರೀತಿ ಇಲ್ಲ. ಭೂ ಮಾಪನ ಮಾಡಿ ಯಾವುದು ನಿಜವಾಗಿ ಕೃಷಿ ಭೂಮಿ ಅಂಥದ್ದನ್ನು ಮಾತ್ರ ಕೃಷಿ ಭೂಮಿ ಎಂದು ನಮೂದಿಸಬೇಕು. ಭೂ ಅನುದಾನದಲ್ಲಿ ಸಹಾ ಪ್ರಬಲ ಶಕ್ತಿಗಳಿಗೆ ಭೂಮಿಯನ್ನು ಕೊಡತಕ್ಕಂಥ ಒಂದು ಕೆಲಸ ಆಗುತ್ತಿದೆ. ಅದು ಹೋಗಬೇಕು. ಕಳೆದ ವರ್ಷ ಇದನ್ನು ಮಾನ್ಯ ಸಚಿವರ ಗಮನಕ್ಕೆ ತಂದಿದ್ದೇನೆ. ಹಿರಿಯಾರು ಎಂಬಲ್ಲಿ ಸೇಂದಿ ಅಂಗಡಿಗೆ ಮೀಸಲಾಗಿಟ್ಟ ಖಾಲಿ ಇದ್ದ ಜಾಗವನ್ನು ಕೊಟ್ಟುಬಿಟ್ಟಿದ್ದಾರೆ. ಅದು ಸರಿಯಲ್ಲ ತಿರುಗಿ ತಿರುಗಿ ಈ ವಿಷಯ ಗಮನಕ್ಕೆ ತಂದರೂ ಕೂಡಾ ಅಲ್ಲಿ ಫೈಲ್ ಏನೂ ಆಗಿಲ್ಲ ತರಿಸಿಕೊಂಡರೂ ಅವರು ಅಲ್ಲಿ ಮನೆಯನ್ನು ಕಟ್ಟುತ್ತಿದ್ದಾರೆ, ಇಂಥಾದ್ದು ನಡೆಯುತ್ತಿದೆ, ಇದು ಆಗಬಾರದು. ಭೂ ಕಂದಾಯ ಅಧಿನಿಯಮ ತಿದ್ದುಪಡಿ ಆಗುತ್ತದೆ ಎಂದಿದ್ದೀರಿ. ಆಗ ಅದರ ಬಗ್ಗೆ ಇನ್ನೂ ಹೆಚ್ಚಿನ ಕೆಲವು ವಿಷಯಗಳನ್ನು ಹೇಳುತ್ತೇನೆ. ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳ ಕಛೇರಿಯ ಕಟ್ಟಡ ಪ್ರಾರಂಭವಾಗಿ ಮೂರು ವರ್ಷ ಆಯಿತು. ಅದೇ ಹಂತದಲ್ಲಿ, ಫೌಂಡೇಷನ್ ಹಂತದಲ್ಲಿಯೇ ಇದೆ, ಅದು ಮೇಲೆ ಬರಬೇಕು. ಇದರ ಬಗ್ಗೆ ಸಮಗ್ರವಾಗಿ ಕೆಲಸ ಬೇಗನೆ ಆಗಬೇಕು. ಬೈಂದೂರು ತಾಲ್ಲೂಕಿನ ರಚನೆ ಆಗಬೇಕು.

ಉಡುಪಿ ಜಿಲ್ಲೆಯು ರಚನೆಯಾಗಬೇಕು. ನಮ್ಮ ಜಿಲ್ಲೆಗೆ ಅಭಾವ ಪರಿಹಾರಕ್ಕೆ ಭಾರತ ಸರ್ಕಾರದಿಂದ ಹಣ ಕೊಟ್ಟಿಲ್ಲ ಎಂದು ದೂರು ಬರುತ್ತಿದೆ. ವರದಿಯಲ್ಲಿ ಅದರ ಬಗ್ಗೆ ಇದೆ. ಆರ್.ಎಲ್.ಇ.ಜಿ.ಪಿ. ಎನ್.ಆರ್.ಇ.ಪಿ. ಯೋಜನೆ ಪ್ರಕಾರ ಪ್ರತಿ ಮಂಡಲಕ್ಕೆ ತಿಂಗಳಿಗೆ ೨.೦೨ ಲಕ್ಷ ರೂಪಾಯಿ ದೊರೆತಿದೆ ಎಂದು ಒಂದು ಉಲ್ಲೇಖ ಬರುತ್ತದೆ. ಅಂದರೆ ವರ್ಷಕ್ಕೆ ೨೪ ಲಕ್ಷ, ಸುಮಾರು ಮೂರು ಸಾವಿರ ಮಂಡಲಗಳಿಗೆ ವರ್ಷಕ್ಕೆ ೭೨೦ ಕೋಟಿ ರೂಪಾಯಿ ಬರುತ್ತದೆ. ಆದ್ದರಿಂದ ಸೆಂಟ್ರಲನ್ನು ಬಯ್ಯಬೇಡಿ ಎಂದು ಹೇಳಿ ಅಲ್ಲಿ ಕೆಲಸ ಆಗುತ್ತಿದೆ ಎಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನೀರಾವರಿಯಲ್ಲಿ ಒಂದು ಉದಾಹರಣೆಯನ್ನು ಆಗಾಗ ಮಂತ್ರಿಗಳು ಕೊಡುತ್ತಿದ್ದಾರೆ. ಹಿಂದೆ ಆಗಿದ್ದಕ್ಕಿಂತ ನಾವು ಈಗ ಹೆಚ್ಚಿಗೆ ಹಣ ಖರ್ಚು ಮಾಡುತ್ತಿದ್ದೇವೆ ಅದು ಒಂದು ರೀತಿಯಲ್ಲಿ ಮಾತ್ರ ಸತ್ಯ. ೬ನೇ ಯೋಜನೆಯಲ್ಲಿ ೧೮೮೮ ಲಕ್ಷ ಖರ್ಚಾಗಿದೆ. ಆರನೇ ಯೋಜನೆಯಲ್ಲಿ ೫೮೩ ಲಕ್ಷ ಖರ್ಚಾಗಿದೆ ಎಂದರೆ ಮೂರು ಪಾಲು ಹಣ ಜಾಸ್ತಿ ಖರ್ಚಾಗಿದೆ, ಒಪ್ಪಿಕೊಳ್ಳುತ್ತೇನೆ. ಆದರೆ ನೀರಾವರಿ ಕ್ಷೇತ್ರ ಎಷ್ಟು ವಿಸ್ತಾರವಾಗಿದೆ, ೬ನೇ ಯೋಜನೆಯಲ್ಲಿ ೯.೩೫ ಲಕ್ಷ ಹೆಕ್ಟೇರ್, ಆರನೇ ಯೋಜನೆಯಲ್ಲಿ ೧೧.೬೯ ಲಕ್ಷ ಹೆಕ್ಟೇರ್ ಅಂದರೆ ನಾಲ್ಕನೇ ಒಂದು ಅಂಶ ಮಾತ್ರ ಹೆಚ್ಚಾಗಿದೆ. ಹಣ ಹೆಚ್ಚಿಗೆ ಆದದ್ದು ಯಾವುದಕ್ಕೆ ಎಂದರೆ ಷೆಡ್ಯೂಲ್ ಆಫ್ ರೇಟ್ಸ್ ಹೆಚ್ಚಾಗಿದೆ, ಅದಕ್ಕೆ ಖರ್ಚಾಗಿದೆ. ಆದರೆ ಸಾಧನೆಯಲ್ಲಿ ಹೆಚ್ಚಿಗೆ ಆಗುವುದಿಲ್ಲ. ಇಲ್ಲಿ ಸಾಧನೆಯಲ್ಲಿ ಹೆಚ್ಚಾಗುವಂತೆ ಮಾಡಬೇಕು.

ಸಣ್ಣ ನೀರಾವರಿ ಯೋಜನೆಯಲ್ಲಿ ಕೂಡ ಇದೇ ತರಹ ಇದೆ. ನಾನು ವಿವರಗಳಿಗೆ ಹೋಗುವುದಿಲ್ಲ. ಶೆಡ್ಯೂಲ್ ಆಫ್ ರೇಟ್ ಹೆಚ್ಚು ಆಗಿದೆ ಎಂದು ಮಾತ್ರ ಹೇಳುತ್ತಿದ್ದೇನೆ. ಜಿಲ್ಲಾ ಪರಿಷತ್ ಚಿಕ್ಕ ನೀರಾವರಿ ಯೋಜನೆಗೆ ಹಣವನ್ನು ಒದಗಿಸಿಕೊಟ್ಟಿದ್ದಾರೆ. ನಮ್ಮ ಜಿಲ್ಲಾ ಪರಿಷತ್ ಯೋಜನೆಯಲ್ಲಿ ನೋಡಿದರೆ, ಜಿಲ್ಲಾ ಪರಿಷತ್ ಬಹಳಷ್ಟು ಕೆಲಸಗಳನ್ನು ಸೂಚನೆ ಮಾಡಿದ್ದಾರೆ. ಕೊನೆಯದಾಗಿ ಸರ್ಕಾರದಲ್ಲಿ ಮಂಜೂರು ಆಗುವಾಗ ನನ್ನ ಕ್ಷೇತ್ರಕ್ಕೆ ಬರೇ ಎರಡು ಕೆಲಸ. ಒಂದರಿಂದ ಒಂದೂವರೆ ಲಕ್ಷದಷ್ಟು ಹಣ ಬೇಕಾಗಿದೆ. ಇದರಲ್ಲಿ ೨೦-೨೫ ಸಾವಿರ ಮಾತ್ರ ಅವಕಾಶ ಇಟ್ಟಿದ್ದಾರೆ. ಮಂತ್ರಿಗಳ ಪರವಾಗಿ ಯಾರು ಬರೆದುಕೊಳ್ಳದಿದ್ದರೂ ನಾನೂ ಮಾತ್ರ ಹೇಳುವುದನ್ನು ಹೇಳಿಬಿಡುತ್ತೇನೆ. ಹಿಂದೆ ೫-೧೦ ಚಿಕ್ಕ ನೀರಾವರಿ ಕಾಮಗಾರಿಗಳು ಆಗುತ್ತಿತ್ತು. ಅದರ ಬದಲು ಈಗ ಬರೇ ಎರಡು ಯೋಜನೆಗಳು ಆದರೆ ಏನು ಪ್ರಯೋಜನ. ಇದರ ಬಗ್ಗೆ ಸರ್ಕಾರದವರು ತೀವ್ರ ಗಮನಕೊಡಬೇಕು. ಸಮುದ್ರ ಕೊರೆತ ತಡೆಗೋಡೆ ಮಾಡಲಿಕ್ಕೆ ಒಂದು ಅವಕಾಶ ಇದೆ. ಎಂದು ವರದಿಯಲ್ಲಿ ಕಾಣುತ್ತಿದೆ. ಕರ್ನಾಟಕ ರಾಜ್ಯದಲ್ಲಿ ೩೦ ಕಿಲೋ ಮೀಟರ್ ಸಮುದ್ರ ಕರಾವಳಿ ಇದೆ ಎಂದು ವರದಿಯಲ್ಲಿ ಇದೆ, ಇದು ಬಹುಶಃ ಅಚ್ಚಿನಲ್ಲಿ ತಪ್ಪಾಗಿದೆ ಎಂದು ಭಾವಿಸುತ್ತೇನೆ. ಅದನ್ನು ಸರಿಪಡಿಸಬೇಕು, ನನ್ನ ಕ್ಷೇತ್ರದಲ್ಲಿ ೩೫ ಕಿಲೋ ಮೀಟರ್ ಕರಾವಳಿ ಇದೆ. ಬಹುಶಃ ರಾಜ್ಯದಲ್ಲಿ ಮುನ್ನೂರು ಕಿಲೋಮೀಟರ್ ಎಂದು ಆಗಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಮುಂದ್ರಾ ರಾಕ್ಷಸನ ಹಾವಳಿಯಿಂದಾಗಿ ಈ ರೀತಿ ಆಗಿದೆ.

ಶ್ರೀ ಜಿ. ಎಸ್. ಆಚಾರ್.—ಯಾವ ಯಾವ ನಮೂನೆಯ ರಾಕ್ಷಸನ ಹಸ್ತಕ್ಷೇಪ ಮಾಡುತ್ತಿದ್ದಾರೋ ಗೊತ್ತಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಎಲ್ಲರಿಗೂ ಅದು ಹಿಡಿಯುತ್ತದೆ. ಯಾರನ್ನೂ ರಾಕ್ಷಸ ಬಿಡುವುದಿಲ್ಲ.

ಶ್ರೀ ಜಿ. ಎಸ್. ಆಚಾರ್.—೮೬-೮೭ರಲ್ಲಿ ತಡೆಗೋಡೆ ಅನುದಾನ ಸಲುವಾಗಿ ಇರುವುದು ೭೫ ಲಕ್ಷ ರೂಪಾಯಿಗಳು, ಆದರೆ ಖರ್ಚು ಆಗಿರುವುದು ೫೫ ಲಕ್ಷ. ೮೭-೮೮ರಲ್ಲಿ ೯ ತಿಂಗಳಲ್ಲಿ ೮೫ ಲಕ್ಷ ಅನುದಾನದಲ್ಲಿ ೧೧ ಲಕ್ಷ ಖರ್ಚು ಆಗಿದೆ ಉಳಿದ ೩ ತಿಂಗಳು ಬೇಸಿಗೆ. ಕೆಲಸ ಮಾಡಲು ಆಗುವುದಿಲ್ಲ ಸಮುದ್ರ ಕರಾವಳಿಯಲ್ಲಿ ಮೀನುಗಾರರ ಮನೆಗಳು, ಈಗಾಗಲೇ ಹೋಗಿವೆ, ತೆಂಗಿನ ಮರಗಳು ನಾಶ ಆಗಿವೆ, ಬಹಳ ಹಾನಿ ಆಗುತ್ತಿದೆ. ಇಂಥ ಸಂದರ್ಭದಲ್ಲಿ ಸರ್ಕಾರ ಅಲಕ್ಷ ಮಾಡುತ್ತಿದ್ದಾರೆ. ಇದರ ಬಗ್ಗೆ ಕೇರಳ ರಾಜ್ಯದ ಮಾದರಿಯಲ್ಲಿ ತಡೆಗೋಡೆ ಮಾಡಬೇಕು. ಹಿಂದೆ ಈ ಬಗ್ಗೆ ಹೇಳಿದ್ದೆ ಏನಾದರೂ ಮಾಸ್ಟರ್ ಪ್ಲಾನ್ ಮಾಡಿ ಸೆಂಟ್ರಲ್‌ಗೆ ಕಳಿಸಿಕೊಡಿ ಎಂದು ಹೇಳಿದ್ದೆ. ಕಳಿಸಿಲ್ಲವೆಂದು ಕಾಣುತ್ತದೆ, ಯಾಕೆಂದರೆ ಇದರ ಬಗ್ಗೆ ಕುರಿತ ಯಾವುದೇ ಒಂದು ವರದಿ ಬಂದ ಹಾಗೆ ಕಾಣುತ್ತಿಲ್ಲ ಮುಖ್ಯಮಂತ್ರಿಗಳು ಕೇಂದ್ರಕ್ಕೆ ಪತ್ರಗಳ ಬಂಡಲ್‌ಗಳನ್ನು ಬರೆಯುವುದನ್ನು ನಾವು ನೋಡುತ್ತಿದ್ದೇವೆ

ಇದರಲ್ಲಿ ಈ ಕುರಿತ ಉಲ್ಲೇಖ ಇಲ್ಲ ಕರಾವಳಿಯಲ್ಲಿ ಮುನ್ನೂರು ಕಿಲೋ ಮೀಟರ್ ತಡೆಗೋಡೆ ಮಾಡುವ ಬಗ್ಗೆ ಏನಾದರೂ ಉಲ್ಲೇಖ ಬರುವುದಿಲ್ಲ. ಸೆಂಟ್ರಲ್ ಸ್ಟೇಟ್ ರಿಲೇಷನ್ಸ್ ಬಗ್ಗೆ ಇತ್ಯಾದಿಯಾಗಿ ಅತ್ಯಂತ ದೊಡ್ಡ ಜಿಜ್ಞಾಸಾತ್ಮಕವಾದ ವಿಚಾರಗಳು ಇವೆ, ಆದರೆ ನಿಜವಾಗಿ ಬಡವರಿಗೆ ತೊಂದರೆ ಆಗುವಂತಹ ವಿಚಾರ ಬರುವುದಿಲ್ಲ, ಇದನ್ನು ನೋಡಿ ನನಗೆ ನೋವು ಆಗುತ್ತಿದೆ. ಜಲಸಂಪರ್ಕಯಾನ ಕೆಲಸದ ವಿಚಾರದಲ್ಲಿ ಹೇಳುವುದಾದರೆ ಪಶ್ಚಿಮಕ್ಕೆ ಹರಿಯುವ ಅನೇಕ ನದಿಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿವೆ. ಹರಿದು ವ್ಯರ್ಥವಾಗಿ ಹೋಗುತ್ತಿದೆ, ಇದರಲ್ಲಿ ಏನೂ ಪ್ರಯೋಜನ ಆಗುತ್ತಿಲ್ಲ. ಇದನ್ನು ಮಧ್ಯದಲ್ಲಿ ತಡೆದು ಅಣೆಕಟ್ಟುಗಳನ್ನು ಕಟ್ಟಿಸಿ ನೀರಾವರಿ ಸೌಲಭ್ಯವನ್ನು ಏರ್ಪಡಿಸಬಹುದು. ನೆರೆಯನ್ನು ತಡೆಯಬಹುದು, ಸಾರಿಗೆ ಸಂಪರ್ಕವನ್ನು ಮಾಡಬಹುದು, ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಬಹುದು, ಇದರ ಕುರಿತು ಸರ್ಕಾರಕ್ಕೆ ಚಿಂತನೆ ಇಲ್ಲ. ಈ ಅಚ್ಚುಕಟ್ಟಿನ ಪ್ರದೇಶದ ಅಭಿವೃದ್ಧಿಯಲ್ಲಿ ಕೂಡ ತುಂಗ ಭದ್ರಾ, ಮಲಪ್ರಭಾ ಘಟಪ್ರಭಾ, ಕೃಷ್ಣಾ ಮೇಲ್ದಂಡೆಗೆ ಕಾವೇರಿ ಜಲಾಯನ. ಈ ಎಲ್ಲಾ ಯೋಜನೆಗಳಲ್ಲಿ ಎಷ್ಟೋ ಯೋಜನೆಗಳನ್ನು ಹಾಕಿಕೊಂಡಿದ್ದರೂ ಅಷ್ಟು ವೆಚ್ಚವಾಗಿಲ್ಲ, ಇನ್ನು ಕೆಲವು ಕಡೆ ಮೂರನೇ ಒಂದಂಶ ವೆಚ್ಚವಾಗುತ್ತದೆ, ಇದು ಸರ್ಕಾರದ ವಿಫಲತೆಯನ್ನು ಎತ್ತಿ ತೋರಿಸುತ್ತದೆ. ಹಾಗೆಯೇ ಬೃಹತ್ ನೀರಾವರಿಗಳಲ್ಲಿ ಕೃಷ್ಣಾ ಮೇಲ್ದಂಡೆ, ಯೋಜನೆಯಲ್ಲಿ ೨೨೮ ಕೋಟಿ ರೂಪಾಯಿ, ಹೇಮಾವತಿಯಲ್ಲಿ ೨೫೪ ಕೋಟಿ ಇಟ್ಟಿದ್ದೀರಿ. ಇಷ್ಟಾದರೂ ಹಿಂದೆ ದೇವೇಗೌಡರು ಮಾನ್ಯ ನೀರಾವರಿ ಸಚಿವರಾಗಿ ಇದ್ದಾಗ ಈ ವಿಚಾರವನ್ನು ಹೇಳುತ್ತಿದ್ದರು. ಇಡೀ ನಮ್ಮ ಸದನದಲ್ಲಿ ಪಕ್ಷ ಭೇದವನ್ನು ಮರೆತು ಮುನ್ನೂರು ಕೋಟಿ ರೂಪಾಯಿ ಕೊಡಬೇಕೆಂದು ಒಪ್ಪಿಗೆ ಕೊಟ್ಟಿತ್ತು. ಅದನ್ನು ಅವೊತ್ತು ಉಗ್ರವಾಗಿ ಪ್ರತಿಪಾದನೆ ಮಾಡಿದಂತಹ ಮಾನ್ಯ ಕಡಪಟ್ಟಿಯವರು ಇವತ್ತು ಈಸದನದಲ್ಲಿ ಯಾಕೆ ಮಾತನಾಡುತ್ತಿಲ್ಲ. ದೇವೇಗೌಡರು ಈ ಖಾತೆಯನ್ನು ಬಿಟ್ಟು ಬಿಟ್ಟರೆಂದ ತಕ್ಷಣ ನೀರಾವರಿ ಸಮಸ್ಯೆಗಳು ಮುಗಿದು ಹೋಯಿತೆಂದು ತಿಳಿಯುವುದೇ, ಇದು ನನಗೆ ಅರ್ಥವಾಗುವುದಿಲ್ಲ. ಅವರು ಮಾತನಾಡಬೇಕಾಗಿತ್ತು. ಮಾತನಾಡಿಲ್ಲ, ನನಗೆ ನೋವು ಆಗಿದೆ. ಈ ವಿಚಾರದಲ್ಲಿ ಸರ್ಕಾರ ಇಟ್ಟುಕೊಂಡ ಕ್ರಮದಲ್ಲಿ ಈಗ ಎಷ್ಟು ಹಣ ಕೊಟ್ಟಿದ್ದಾರೆ, ಹಣದ ಈ ಒಂದು ಗತಿಯಲ್ಲಿ ಇನ್ನೂ ಬಹಳ ವರ್ಷಗಳು ಬೇಕಾಗುತ್ತದೆ. ಈ ಯೋಜನೆ ಮುಗಿಯಲು. ನಾವು ಯಾವ ಒಂದು ಸ್ಪೀಡ್‌ನಲ್ಲಿ ಹೋಗುತ್ತಿದ್ದೇವೆ ನಮಗಿಂತ ಹೆಚ್ಚು ಸ್ಪೀಡ್‌ನಲ್ಲಿ ಆಂಧ್ರದವರು ಹೋಗುತ್ತಿದ್ದಾರೆ ತಮಿಳುನಾಡಿನವರು ಹೋಗುತ್ತಿದ್ದಾರೆ. ಬೇರೆ ಎಲ್ಲಾ ಅವಾರ್ಡ್‌ಗಳನ್ನು ಧಿಕ್ಕರಿಸಿ ಹೋಗುವಂತಹ ಪ್ರಮೇಯ ಈಗ ಉಂಟಾಗಿದೆ. ನಾವು ಇನ್ನಾದರೂ ನಮ್ಮ ಕೆಲಸ ಮುಂದುವರೆಸಿಕೊಂಡು ನೀರನ್ನು ಉಳಿಸಿಕೊಳ್ಳಬೇಕಾದ ಕಾರ್ಯಕ್ರಮವನ್ನು ಕೈಕೊಳ್ಳಬೇಕಾಗಿದೆ. ಇನ್ನು ವಾರಾಹಿ ಯೋಜನೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ. ವಾರಾಹಿ ಜಲವಿದ್ಯುತ್ ಯೋಜನೆಯಲ್ಲಿ ವ್ಯರ್ಥವಾಗಿ ಹರಿದು ಹೋಗತಕ್ಕಂಥ ನೀರು ಏನು ಇದೆ, ಅದಕ್ಕೆ ಒಂದು ಅಣೆಕಟ್ಟನ್ನು ಕಟ್ಟಿ ಬೃಹತ್ ನೀರಾವರಿ ಕಾಮಗಾರಿಗಳನ್ನು ಮಾಡುವುದಕ್ಕೆ ಸಾಧ್ಯ ಇದೆ. ನಮ್ಮ ಕುಂದಾಪುರ ತಾಲ್ಲೂಕಿನಲ್ಲಿ. ಉಡುಪಿ-ಕುಂದಾಪುರ ತಾಲ್ಲೂಕಿನಲ್ಲಿ ೧೫,೭೦೧ ಹೆಕ್ಟೇರ್‌ಗೆ ನೀರಾವರಿ ಆಗುತ್ತದೆ, ೧೯೭೯ರಲ್ಲಿ ಆಡಳಿತ ಮಂಜೂರಾತಿ ಆಗಿ ೬೪೩ ಲಕ್ಷ ಎಸ್ಟಿಮೇಟ್ ಆಗಿದ್ದು ಆಡಳಿತ ಮಂಡಲಿ ಮಂಜೂರಾತಿ ಕೂಡ ಆಗಿದೆ. ಆ ಮೇಲೆ ಕೆ. ಪಿ. ಸಿ. ಯವರು ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್ ಮಾಡಬೇಕು ಎಂದು ಆಲೋಚನೆ ಮಾಡಿದರು ಅದಕ್ಕೆ ಹೆಚ್ಚು ಕಾಡು ಮುಳುಗಡೆ ಆಗುತ್ತದೆ ಎಂದು ಪರಿಸರ ವಿರೋಧಿಗಳಿಂದ ತೊಂದರೆ ಬಂತು. ನಮ್ಮ ಊರಿಗೆ ಮಾನ್ಯ ದೇವೇಗೌಡರು ಬಂದ ಸಂದರ್ಭದಲ್ಲಿ ಅವರಿಗೆ ಮನವಿ ಮಾಡಿಕೊಂಡೆವು.

ಈ ಹಿಂದಿನ ಎಸ್ಟಿಮೇಟ್ ಪ್ರಕಾರವೇ ಮಾಡಿ ಅನ್ನುವಂತಹ ವಿಚಾರವನ್ನು ನಾವು ಹೇಳಿದಾಗ ಮಾನ್ಯ ಮಂತ್ರಿಗಳು ಆಗಲಿ, ಅದೇರೀತಿ ಮಾಡುತ್ತೇವೆ ಎಂದು ಒಪ್ಪಿಕೊಂಡರು. ಈ ಸಭೆಯಲ್ಲಿ ಸಹ ಎರಡು ಮೂರು ಸಲ ಆಶ್ವಾಸನೆಯನ್ನು ಕೊಟ್ಟರು. ಆದರ ಪ್ರಕಾರ ಏನೂ ಆಗಿಲ್ಲ ೧೯೭೭ ರಲ್ಲಿ ಕೆಲಸ ಪ್ರಾರಂಭವಾಯಿತು. ಇಲ್ಲಿಯವರೆಗೆ ಅಲ್ಲಿ ಆದಂಥ ಕೆಲಸಗಳೆಂದರೆ, ಅಲ್ಲಿನ ನೌಕರರಿಗೆ ಮನೆಗಳನ್ನು ಕಟ್ಟುವಂತಹ ಕೆಲಸ ಮತ್ತು ವಾಹನಗಳು ಓಡಾಡಲು ಅನುಕೂಲವಾಗುವಂತಹ ರಸ್ತೆಗಳ ಕೆಲಸವನ್ನು ಬಿಟ್ಟರೆ ಬೇರೆ ನೀರಾವರಿ ಕೆಲಸಗಳು ಯಾವುದೂ ಪ್ರಾರಂಭವಾಗಲಿಲ್ಲ. ಈ ವರಾಹಿ ಯೋಜನೆ ಕೆಲಸ ಪ್ರಾರಂಭವಾಗದ ಪ್ರಯುಕ್ತ ಇಲ್ಲಿಯವರೆಗೆ ಖರ್ಚು ಮಾಡಿರುವಂತಹ ೧.೮೭ ಕೋಟಿ

ರೂಪಾಯಿಗಳಷ್ಟು ಹಣ ವ್ಯರ್ಥವಾಗುತ್ತಿದೆ ಎಂದು ಹೇಳಬಹುದು. ಈಗ ಅಲ್ಲಿ ನಿರ್ಮಿಸಿರುವ ರಸ್ತೆಗೆ ದಾಮರು ಹಾಕಬೇಕು ಮತ್ತು ಈ ಯೋಜನೆಯ ಎಡದಂಡೆ ಮತ್ತು ಬಲದಂಡೆಗೆ ಸಂಪರ್ಕ ಕಲ್ಪಿಸಲು ಕಟ್ಟಬೇಕಾದ ಸೇತುವೆಯನ್ನು ಹೆಚ್ಚು ಜನರು ಓಡಾಡುವ ಕಡೆ ಕಟ್ಟಬೇಕೆಂದು ಅಲ್ಲಿನ ಸಾರ್ವಜನಿಕರು ಮನವಿಗಳನ್ನು ಸಲ್ಲಿಸಿದರೂ ಸಹ, ಅದಕ್ಕೆ ಗಮನ ಕೊಡದೆ ಎಲ್ಲೋ ಕಾಡಿನಲ್ಲಿ ಈ ಕೆಲಸ ಕೈಕೊಂಡಿದ್ದಾರೆ. ಇದು ಸರಿಯಲ್ಲ ಎಂದು ಶಾಸಕರು ವಿರೋಧ ಮಾಡಿದ್ದಾರೆ ಮತ್ತು ಅಲ್ಲಿನ ಜಿಲ್ಲಾ ಪರಿಷತ್‌ನವರು ಸಹ ಈ ಬಗ್ಗೆ ಒಂದು ನಿರ್ಣಯವನ್ನು ಪಾಸ್ ಮಾಡಿ ಕಳುಹಿಸಿಕೊಟ್ಟಿದ್ದಾರೆ. ಅಲ್ಲಿನ ಇಬ್ಬರು ಶಾಸಕರು ಸಹ ಸಾರ್ವಜನಿಕರಿಗೆ ಅನುಕೂಲವಾಗುವಂತಹ ಕಡೆ ಸೇತುವೆಯನ್ನು ಕಟ್ಟಿಸಿದರೆ ಅದು ಶಾಶ್ವತವಾದಂಥ ಸೇತುವೆ ಆಗುತ್ತದೆಂದು ಹೇಳಿದರೂ ಸಹ ಗಮನ ಕೊಟ್ಟಿಲ್ಲ. ಅಲ್ಲಿನ ರಸ್ತೆಗೆ ದಾಬರು ಹಾಕಿಸಿದರೆ ಶಾಶ್ವತ ರಸ್ತೆಯಾಗುತ್ತದೆಂದು ಹೇಳಿದರೂ ಸಹ ಕೇಳುತ್ತಿಲ್ಲ. ಈಗ ಕಟ್ಟುತ್ತಿರುವ ಜಾಗ ಬಿಟ್ಟು ಒಂದು ಕಿಲೋಮೀಟರ್ ಕೆಳಗೆ ಡೌನ್‌ಸ್ಟ್ರೀಮ್ ಬಳಿ ಕಟ್ಟಿದರೆ ಸಹಸ್ರಾರು ಜನರಿಗೆ ಅನುಕೂಲವಾಗುತ್ತದೆಂದು ಆ ತಾಲ್ಲೂಕ್‌ನ ಇಬ್ಬರು ಶಾಸಕರು ಹೇಳಿದರೂ ಸಹ, ಅದಕ್ಕೆ ಗಮನ ಕೊಡದೆ ಬೇರೆ ಕಡೆ ಮಾಡುತ್ತಿದ್ದಾರೆಂದು ಕೇಳಿದ್ದೇನೆ.

ಅಧ್ಯಕ್ಷರು — ತಾವು ಮುಗಿಸಿ.

ಶ್ರೀ ಜಿ. ಎಸ್. ಆಚಾರ್. — ಮಾನ್ಯ ಮಂತ್ರಿಗಳು ಇದನ್ನು ದಯಮಾಡಿ ಪುನರ್‌ಪರಿಶೀಲನೆ ಮಾಡಿ ಜನರಿಗೆ ಅನುಕೂಲವಾಗುವ ಕಡೆ ಕಟ್ಟಿಸಬೇಕೆಂದು ಕೇಳಿಕೊಂಡು ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ತಮಗೆ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಶ್ರೀ ಸಿ. ಎಂ. ರೇವಣಸಿದ್ದಯ್ಯ (ಸಿರಗುಪ್ಪ). — ಸನ್ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮುಂದಿರ ತಕ್ಕಂಥ ನೀರಾವರಿ ಮತ್ತು ಕಂದಾಯ ಇಲಾಖೆಗಳ ಬೇಡಿಕೆಗಳನ್ನು ಅನುಮೋದಿಸುತ್ತಾ ಕೆಲವು ವಿಚಾರ ಗಳನ್ನು ಹೇಳಬಯಸುತ್ತೇನೆ. ಈ ನೀರಾವರಿ ಬಗ್ಗೆ ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ಈ ನೀರಾವರಿ ಯೋಜನೆಗಳಿಗೆ ಅಗತ್ಯವಾದ ಹಣವನ್ನು ನಾನಾ ರೀತಿಯಿಂದ ಸಂಗ್ರಹ ಮಾಡಿ, ಎಲ್ಲ ಕೆಲಸಗಳನ್ನು ಪೂರೈಸುವುದು ನಮ್ಮ ಸರ್ಕಾರದ ಆದ್ಯಕರ್ತವ್ಯವಾಗಿದೆ ಎಂದು ಹೇಳಬಯಸುತ್ತೇನೆ. ಈ ಬಗ್ಗೆ ನನ್ನ ಸಲಹೆ ಏನೆಂದರೆ, ಅಗತ್ಯಬಿದ್ದರೆ ನನ್ನನ್ನು ಸಹ ಸೇರಿಸಿಕೊಂಡು ಎಲ್ಲ ಶಾಸಕರು ತಿಂಗಳ ತಮ್ಮ ಆದಾಯದಲ್ಲಿ ಪ್ರತಿ ತಿಂಗಳೂ ಸಹ ಒಂದೊಂದು ಸಾವಿರ ರೂಪಾಯಿಗಳ ಪ್ರಕಾರ ಈ ನೀರಾವರಿ ಯೋಜನೆಗಳ ಕೆಲಸ ಮುಗಿಯುವವರೆಗೆ ಏತಕ್ಕೆ ಕೊಡಬಾರದು ? ಅದೇರೀತಿ ಅಧಿಕಾರಿಗಳಿಂದಲೂ ಮತ್ತು ವರ್ತಕರಿಂದಲೂ ವಸೂಲಿ ಮಾಡಬಹುದು. ಏಕೆಂದರೆ, ಸಕಾಲದಲ್ಲಿ ನಮ್ಮ ನೀರಾವರಿ ಯೋಜನೆಗಳ ಕೆಲಸವನ್ನು ಮುಗಿಸದಿದ್ದರೆ ಬಚಾವತ್ ಆಯೋಗದ ತೀರ್ಪಿನ ಪ್ರಕಾರ ನಮ್ಮ ಪಾಲಿನ ನೀರಿನ ಮೇಲೆ ಸಹ ನಮ್ಮ ಹಕ್ಕು ಉಳಿಯುವುದಿಲ್ಲ. ಆದ್ದರಿಂದ ಎಲ್ಲ ರೀತಿಯ ಪ್ರಯತ್ನವನ್ನು ಮಾಡಿ ನಮ್ಮ ಪಾಲಿನ ನೀರನ್ನು ನಾವು ಬಳಸಿಕೊಳ್ಳಬೇಕೆಂದು ಎಂದು ಒತ್ತಾಯ ಪೂರ್ವಕವಾಗಿ ಹೇಳ ಬಯಸುತ್ತೇನೆ.

ಇನ್ನು ಅನಧಿಕೃತವಾಗಿ ಯಾರು ನೀರನ್ನು ಬಳಸುತ್ತಾರೋ ಅಂತಹವರಿಗೆ ದಂಡ ಅಥವಾ ಶಿಕ್ಷೆ ವಿಧಿಸುವುದುದಕ್ಕೆ ಈಗಿನ ನೀರಾವರಿ ಆಕ್ಟ್‌ನಲ್ಲಿ ಅವಕಾಶ ವಿಲ್ಲವೆಂದು ಅಧಿಕಾರಿಗಳು ಹೇಳುತ್ತಾರೆ. ನಮ್ಮ ತುಂಗಭದ್ರಾ ಜಲಾಶಯದ ಕೆಳಗೆ ಸುಮಾರು ೮ ಲಕ್ಷ ಎಕರೆಗಳಷ್ಟು ಜಮೀನು ಇದ್ದರೂ ಸಹ ನೀರಾವರಿ ಮೂಲಕ ಅಭಿವೃದ್ಧಿ ಆಗಿರುವುದು ಕೇವಲ ೫ ಲಕ್ಷ ಎಕರೆಗಳು ಮಾತ್ರ. ಇನ್ನೂ ೩ ಲಕ್ಷ ಎಕರೆಗಳಿಗೆ ನೀರು ಸಿಕ್ಕಿಲ್ಲ. ಈ ಭಾಗದ ರೈತರು ಅನಧಿಕೃತವಾಗಿ ನೀರನ್ನು ಬಳಸುತ್ತಿದ್ದಾರೆ. ಇದನ್ನು ನಿರ್ಬಂಧ ಮಾಡುವುದಕ್ಕೆ ಈಗಿನ ಆಕ್ಟ್‌ನಲ್ಲಿ ಯಾವ ಒಂದು ಕ್ಲಾಸ್ ಸಹ ಇಲ್ಲವೆಂದು ಅಧಿಕಾರಿಗಳು ಸಬೂಬು ಹೇಳುತ್ತಾರೆ. ಇದರಿಂದ ಇವರು ಅನಧಿಕೃತವಾಗಿ ನೀರನ್ನು ಬಳಸುವುದನ್ನು ತಪ್ಪಿಸುವುದಕ್ಕೆ ಇದುವರೆಗೆ ಸಾಧ್ಯವಾಗಿಲ್ಲ. ಆದ್ದರಿಂದ ಈ ಬಗ್ಗೆ ಕ್ರಮ ಕೈಕೊಳ್ಳಲು ಅಧಿಕಾರಿಗಳಿಗೆ ಅವಕಾಶವಾಗು ವಂತೆ ಈಗಿರುವ ಆಕ್ಟ್‌ನ್ನು ಸೂಕ್ತವಾಗಿ ಬದಲಾವಣೆ ಮಾಡುವುದು ಒಳ್ಳೆಯದೆಂದು ಸಲಹೆ ಮಾಡು ತ್ತೇನೆ.

ಇನ್ನು ಕಂದಾಯ ಇಲಾಖೆ ಬಗ್ಗೆ ಹೇಳಲು ಹೆಚ್ಚು ಸಮಯ ಇಲ್ಲ. ಲ್ಯಾಂಡ್ ರಿಫಾರಮ್ಸ್ ಆಕ್ಟ್ ೧೯೭೪ ರಲ್ಲಿ ಜಾರಿಗೆ ಬಂದಾಗ, ಯಾರು ಯಾರು ಸಾಗುವಳಿದಾರರು ಇದ್ದರು, ಅಂತಹವರು ಸೆಕ್ಷನ್ ೪೮ರ ಪ್ರಕಾರ ಒಂದು ವರ್ಷದೊಳಗಾಗಿ ಅರ್ಜಿ ಸಲ್ಲಿಸಬೇಕಾಗಿತ್ತು. ಆದರೆ ತಿಳಿವಳಿಕೆ ಇಲ್ಲದ

ಅನೇಕ ಸಾಗುವಳಿದಾರರು ಒಂದು ವರ್ಷದೊಳಗೆ ಅರ್ಜಿಗಳನ್ನು ಹಾಕಿಕೊಳ್ಳಲಿಲ್ಲ. ಈ ಬಗ್ಗೆ ಕ್ರಮ ತೆಗೆದುಕೊಳ್ಳಲು ಅಧಿಕಾರಿಗಳಿಗೆ ಯಾವ ಅಧಿಕಾರವೂ ಇಲ್ಲ. ಆದ್ದರಿಂದ ಈ ನಾಲ್ಕನೇ ಸೆಕ್ಷನ್‌ಗೆ ಸೂಕ್ತ ತಿದ್ದುಪಡಿಯನ್ನು ಈಗಲಾದರೂ ಮಾಡಬೇಕು. ಅನೇಕ ಜನ ಜಮೀನಿನ ಒಡೆಯರಾಗಿದ್ದರೂ ಸಹ ಮತ್ತು ಸಾಗುವಳಿದಾರರಾಗಿದ್ದರೂ ಸಹ ಸಕಾಲದಲ್ಲಿ ಅರ್ಜಿಗಳನ್ನು ಹಾಕಿಕೊಳ್ಳದ ಕಾರಣ ಈಗ ಈ ಜಮೀನುಗಳು ಬೇರೆಯವರ ಹೆಸರಿನಲ್ಲಿವೆ. ಇದಕ್ಕೆ ಸೂಕ್ತ ತಿದ್ದುಪಡಿಯನ್ನು ಮಾಡಿ ಅಂತಹವರು ಈಗಲಾದರೂ ಅರ್ಜಿ ಹಾಕಿಕೊಳ್ಳಲು ಅವಕಾಶ ಮಾಡಿಕೊಡಬೇಕೆಂದು ಸಲಹೆ ಮಾಡುತ್ತೇನೆ.

೫ನೇ ಸೆಕ್ಷನ್‌ನಲ್ಲಿ ಏನಿದೆ ಅಂದರೆ ಹೊಲ ಉಳುವವನೇ ಭೂಮಿಯ ಒಡೆಯನಾಗಿರಬೇಕು ಎಂದು ಇದೆ, ಹಿಂದಿನ ಆಕ್ಟ್‌ನಲ್ಲಿತ್ತು, ಕೆಲವು ಅಂಗವಿಕಲರಿಗೆ ಮತ್ತು ಮೈನರ್ ಮಕ್ಕಳಿದ್ದ ವಿಧವೆಯರಿಗೆ ಹಾಗೂ ಬುದ್ಧಿ ಭ್ರಮಣೆ ಬಂದವರಿಗೆ ಅವರು ಭೂಮಿಯನ್ನು ಸಾಗುವಳಿಗೆ ಕೊಡಬೇಕು ಎಂದು ಇತ್ತು. ಆದರೆ ಈ ಆಕ್ಟ್‌ನಲ್ಲಿ ಅವುಗಳು ಯಾವುವೂ ಸೇರಿಲ್ಲ. ಇವತ್ತು ನಾನು ಹೇಳುತ್ತಾ ಇದ್ದೇನೆ. ಅನೇಕ ಮಂದಿ ಪಾರ್ಲಿಮೆಂಟ್ ಸದಸ್ಯರು ಇದ್ದರೂ ಕೂಡ ಅವರೊಬ್ಬರೇ ಏನಾದರೂ ಇದ್ದರೆ ಸಾಗುವಳಿ ಮಾಡಲಿಕ್ಕೆ ಆಗಿಲ್ಲ, ಆದರೆ ಅವರ ಭೂಮಿಯನ್ನು ಯಾರು ಕಸಿಯುವ ಹಾಗಿಲ್ಲ. ಏಕೆಂದರೆ, ಪಾರ್ಲಿಮೆಂಟ್ ಸುಮಾರು ೬ ತಿಂಗಳಿಂದ ೯ ತಿಂಗಳವರೆಗೆ ನಡೆಯುತ್ತದೆ. ಅವರು ಯಾವಾಗ ಭೂಮಿಯನ್ನು ಮಾಡುತ್ತಾರೆ. ಈ ರೀತಿ ಇದು ಒಂದು ಅವಾಸ್ತವಿಕವಾದ ಒಂದು ಕ್ಲಾಸ್. ಇದಕ್ಕೆ ಒಂದು ಅಮೆಂಡ್‌ಮೆಂಟ್ ಬೇಕು. ಈಗಾಗಲೇ ನಾನು ಹೇಳಿದ ಹಾಗೆ ಎಕನಾಮಿಕಲಿ ಅಫೆಕ್ಟೆಡ್. ಈಗ ಬರ ಬಂದಿದೆ: ಅವನು ಬರದಲ್ಲಿ ಎತ್ತನ್ನು ಸಾಕಲಾರದೆ ಮಾರಿಬಿಡುತ್ತಾನೆ. ಮುಂದಿನ ವರ್ಷ ಆ ಭೂಮಿ ಮಾಡುವ ಶಕ್ತಿ ಇಲ್ಲ. ಆಗ ಅವನು ಆ ಭೂಮಿಯನ್ನು ಸಾಗುವಳಿಗೆ ಕೊಡಬಾರದು ಅಂದರೆ ಅರ್ಥ ಏನು ? ಆದಕ್ಕಾಗಿ ಯಾರಿಗೆ ಎಕನಾಮಿಕಲಿ ಅಫೆಕ್ಟ್ ಆಗಿದೆ, ಅಥವಾ ಬುದ್ಧಿ ಭ್ರಮಣೆ ಬಂದವರು, ಮೈನರ್ ಮಕ್ಕಳಿದ್ದ ವಿಧವೆಯರಿಗೆ ಮತ್ತು ಅಂಗವಿಕಲರಾಗಿದ್ದರೆ ಅವರು ಸಾಗುವಳಿಗೆ ಕೊಡತಕ್ಕಂಥ ಅವಕಾಶಗಳನ್ನು ಅಳವಡಿಸದೆ ರೈತರನ್ನು ಕಳ್ಳರನ್ನಾಗಿ ಮಾಡಿದೆ, ಸುಳ್ಳರನ್ನಾಗಿ ಮಾಡಿದೆ ಈ ಆಕ್ಟ್‌ನಲ್ಲಿ ಈ ಸೆಕ್ಷನ್. ಇದು ಬದಲು ಆಗಬೇಕು ಎಂದು ನಾನು ಸಲಹೆ ಮಾಡುತ್ತಾ ಇದ್ದೇನೆ. ಇದರ ಜೊತೆಗೆ ಈ ಆಕ್ಟ್‌ನ ೭೯ ಎಬಿಸಿ ಇದರ ಬಗ್ಗೆ ಹೇಳಬೇಕಾದರೆ ಮೊನ್ನೆ ನಾನು ವ್ಯವಸಾಯ ಇಲಾಖೆಯ ಡಿಮ್ಯಾಂಡ್ ಮೇಲೆ ಮಾತನಾಡುವಾಗ ಹೇಳುತ್ತಿದ್ದೆ. ೧೨ ಸಾವಿರಕ್ಕಿಂತಲೂ ಹೆಚ್ಚು ಆದಾಯ ಇರತಕ್ಕವರು ಭೂಮಿಯನ್ನು ಹೊಂದುವ ಹಾಗಿಲ್ಲ, ಅಪ್ಪನ ಆಸ್ತಿಯನ್ನು ಉಳಿಸಿಕೊಳ್ಳುವ ಹಾಗಿಲ್ಲ, ಪ್ರಾಪರ್ಟಿ ಇನ್‌ಹೆರಿಟೆಡ್. ಇದು ಬದಲು ಆಗಬೇಕು. ೧೨ ಸಾವಿರ ಕೇವಲ ಸಣ್ಣ ಆದಾಯ ಇವತ್ತಿನ ಲೆಕ್ಕಕ್ಕೆ, ಇದು ೧೦ ವರ್ಷಗಳ ಕೆಳಗೆ ಆದಂಥ ಕಾನೂನು. ಈಗ ಅದರ ಹತ್ತು ಪಟ್ಟಾದರೂ ಆಗಬೇಕು. ೧೨ ಸಾವಿರ ಇರುವುದು ಒಂದು ಲಕ್ಷದ ಆದಾಯದವರೆಗೂ ಕೂಡ ಇರಬೇಕು, ಅದಕ್ಕೆ ಮಿಕ್ಕಿದರೆ ಆಗ ಅವನು ಆ ಭೂಮಿಯನ್ನು ಹೊಂದಿರಬಾರದು, ಇಲ್ಲದೇ ಹೋದರೆ ಇಲ್ಲ ಎಂದು ಇರಬೇಕು. ಅನೇಕ ಮಂದಿ ಈ ಭೂಮಿಯನ್ನು ಕೊಳ್ಳಲಿಕ್ಕೆ ಅರ್ಹರು ಇಲ್ಲವಾದಾಗ ಭೂಮಿಯ ಬೆಲೆ ಇಳಿದು ಹೋಗಿದೆ. ಅನೇಕ ರೈತರಿಗೆ ಭೂಮಿ ಸಾಕು ಎನ್ನುವ ಹಾಗೆ ಆಗಿದೆ. ಅನೇಕ ರೈತರು ಭೂಮಿಯನ್ನು ಮಾರಿ ಜವಾನನ ಕೆಲಸಕ್ಕೆ ಬರಬೇಕು ಎನ್ನುವಷ್ಟು ಸ್ಥಿತಿಯಲ್ಲಿ ಕೆಲವರು ಇದ್ದಾರೆ. ಹೀಗಿರುವಾಗ ಹೊಲಗಳನ್ನು ಮಾರುವುದರಲ್ಲಿ ಅಥವಾ ಕೊಳ್ಳುವುದರಲ್ಲಿ ಈ ನಿರ್ಬಂಧ ಏನಿದೆ it is detrimental to the interest of farmers and also detrimental to the interest of the development. ಈ ಕಲಮುಗಳನ್ನು ತಿದ್ದಬೇಕು. ಸೆಕ್ಷನ್ ೪–೫–೭೯ ಎಬಿಸಿ ಇದನ್ನು ತಿದ್ದುಪಡಿ ಮಾಡಬೇಕು. ಮತ್ತೆ ತುಂಡು ಭೂಮಿ ವಿಚಾರ ಇದೆ. ಬಡವರಿಗೆ ತುಂಡು ಭೂಮಿ ಇರುತ್ತದೆ. ಎರಡೂವರೆ ಎಕರೆ ಭೂಮಿ ಇದೆ, ಈ ಎರಡೂವರೆ ಎಕರೆ ಭೂಮಿಯನ್ನು ಅವನು ಮಾರುವ ಹಾಗಿಲ್ಲ. ಅವನಿಗೆ ಆಪತ್ತು ಬಂದಿರುತ್ತದೆ, ಅವನಿಗೆ ಬೇನೆ ಬಂದಿರುತ್ತದೆ, ಅವನ ಹೆಂಡತಿಗೆ ಬೇನೆ ಬಂದಿರುತ್ತದೆ, ಆದರೂ ಅವನು ಆ ಭೂಮಿಯನ್ನು ಮಾರುವ ಹಾಗಿಲ್ಲ. ಇದು ಯಾವ ಆಸ್ತಿ ಮೇಲೆ ಇಲ್ಲ ಈ ದೇಶದಲ್ಲಿ. ಮಿಲ್‌ಗಳ ಮೇಲೆ ಇಲ್ಲ, ಪಟ್ಟಣಗಳ ಆಸ್ತಿ ಮೇಲೆ ಇಲ್ಲ, ಮನೆ ಮೇಲೆ ಇಲ್ಲ ಈ ನಿರ್ಬಂಧ. ಆದರೆ ಭೂಮಿ ಮೇಲೆ ಮಾತ್ರ ಇದೆ ಅವನು ಅವನ ಆಸ್ತಿಯನ್ನು ಮಾರಿಕೊಳ್ಳುವುದಕ್ಕೆ ರಿಸ್ಟ್ರಿಕ್ಷನ್ ಇದೆ. ಆದ್ದರಿಂದ ಈ ತುಂಡು ಭೂಮಿಯನ್ನು ಮಾರ ಕೂಡದು ಎನ್ನುವ ನಿರ್ಬಂಧ ಹೋಗಬೇಕು, ತುಂಡು ಭೂಮಿಯನ್ನು ಮಾರತಕ್ಕಂಥ ಹಕ್ಕು ಅವನಿಗೆ

ಇರಬೇಕು. ಇದಕ್ಕೂ ಕೂಡ ತಿದ್ದುಪಡಿ ಅಗತ್ಯವಿದೆ. ಇದೂ ಕೂಡ ರೈತ ಸಂಘದ ಒಂದು ಬೇಡಿಕೆಯಾಗಿತ್ತು. ಆದರೂ ಕೂಡ ಇವತ್ತಿನವರೆಗೂ ಆ ಬಗ್ಗೆ ಗಮನ ಹರಿಸಿಲ್ಲ. ಇದರಿಂದ ಏನಾಗುತ್ತದೆ ಅಂದರೆ, ತುಂಡು ಭೂಮಿ ಮಾರಾಟ ಆಗುತ್ತಿದೆ, ಲಂಚಲಾವಣೆ ಕೊಡುತ್ತಾ ಇದ್ದಾರೆ, ಮಾಡುತ್ತಾ ಇದ್ದಾರೆ. ಈ ಲಂಚ ಕೊಡುವುದು ನಿಲ್ಲಬೇಕಾದರೆ, ರೈತನು ಸಣ್ಣಪನಿದ್ದವನು ತುಂಡು ಭೂಮಿ ಮಾರಲಿಕ್ಕೆ ಅನುಕೂಲ ಆಗಬೇಕಾದರೆ ಈ ತುಂಡು ಭೂಮಿ ಮಾರಾಟದ ನಿರ್ಬಂಧ ಇಲ್ಲದಂತೆ ಆಗಬೇಕು. ಅವೇಲ್ ಹಳ್ಳಿಗಳಲ್ಲಿ ಕೂಡ ನಾನ್ ಅಗ್ರಿಕಲ್ಚರ್ ಮಾಡಬೇಕಾದರೆ ಆಗಬಾರದ ನಿರ್ಬಂಧಗಳನ್ನು ಹಾಕಿದ್ದಾರೆ. ಪಟ್ಟಣಗಳಲ್ಲಿ ಏನು ಹಾಕಿದ್ದಾರೆ ಅಷ್ಟೇ ನಿರ್ಬಂಧಗಳನ್ನು ಇವರಿಗೆ ಹಾಕಿದ್ದಾರೆ, ಅದು ಸಾಧ್ಯವಿಲ್ಲ ಅಲ್ಲಿನ ಭೂಮಿ ಅಷ್ಟರಲ್ಲೇ ಇರುತ್ತದೆ. ಅಲ್ಲಿನ ವಾತಾವರಣ ಅಷ್ಟರಲ್ಲೇ ಇರುತ್ತದೆ. ಪ್ರತಿಯೊಂದು ಹಳ್ಳಿಯಲ್ಲೂ ಕೂಡ ಟೌನ್ ಪ್ಲಾನಿಂಗ್‌ನಿಂದ ಬಂದು ಅಥವಾ ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರ್‌ನಿಂದ ಅಥವಾ ಡಿಸ್ಟ್ರಿಕ್ಟ್ ಪಿಡಬ್ಲ್ಯುಡಿ ಆಫೀಸರ್‌ನಿಂದ ಮಾಡಿಸಿ ಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲ. ಇದನ್ನು ತಹಶೀಲ್ದಾರರಿಗೆ ವಹಿಸಿಕೊಟ್ಟರೆ ಸಣ್ಣ ಹಳ್ಳಿಗಳ ರೈತರಿಗೆ ಎನ್.ಎ. ಮಾಡಿಸಿಕೊಳ್ಳಲಿಕ್ಕೆ ಅನುಕೂಲವಾಗುತ್ತದೆ. ಈ ನಿರ್ಬಂಧವನ್ನು ತೆಗೆದು ಬಿಡಬೇಕು ಎಂದು ಹೇಳುತ್ತಾ, ನಾನು ಹೆಚ್ಚು ವೇಳೆ ತೆಗೆದುಕೊಳ್ಳದೆ, ನಾನು ಕೊಟ್ಟಂಥ ಸಲಹೆಗಳನ್ನು ಮಾನ್ಯ ಕಂದಾಯ ಮಂತ್ರಿಗಳು ಅಳವಡಿಸುತ್ತಾರೆ ಎಂದು ತಿಳಿದು, ನನಗೆ ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).— ಮಾನ್ಯ ಅಧ್ಯಕ್ಷರೆ, ಆಯವ್ಯಯದ ಚರ್ಚೆಯ ಮೇಲೆ ಬಹಳ ಮಾನ್ಯ ಸದಸ್ಯರು ಭಾಗವಹಿಸಿದ್ದಾರೆ. ನಾನು ಎಲ್ಲ ಖಾತೆಗಳ ಮೇಲೆ ಮಾತನಾಡುವುದಕ್ಕೆ ಹೋಗುವುದಿಲ್ಲ, ಒಂದೆರಡು ಖಾತೆಗಳ ಬಗ್ಗೆ ಮಾತನಾಡುತ್ತೇನೆ. ಯೋಜನೆಯ ಬಗ್ಗೆ ಹೇಳುವುದಾದರೆ, ಯೋಜನೆ ಮಾಡುವಾಗ ಸರ್ಕಾರವಾಗಲೀ, ಅದರ ಒಡೆಯರಾಗಲೀ, ತನ್ನ ವ್ಯವಹಾರಗಳ ಬಗ್ಗೆ ರಾಜ್ಯದ ಬಗ್ಗೆ ಸರಿಯಾಗಿ ಯೋಚನೆ ಮಾಡಿ, ಜನಗಳ ಏಳಿಗೆಗೋಸ್ಕರ ಅವರು ಯೋಜನೆಯನ್ನು ತಯಾರು ಮಾಡದೆ ಹೋದರೆ ಕಾರ್ಯಕ್ರಮಗಳನ್ನು ತಯಾರು ಮಾಡಿ ಕಾರ್ಯಗಳ ಮಾಡದೇಹೋದರೆ, ಏಳಿಗೆಯನ್ನು ಸಾಧನೆಯನ್ನು ಮಾಡುವುದಕ್ಕಾಗುವುದಿಲ್ಲ. ಈ ದೇಶದಲ್ಲಿ ಬಡವರು ಬಲ್ಲಿದರು ಇದ್ದಾರೆ. ಮಿತಿಮೀರಿದ ಸಾಹುಕಾರರು ಇದ್ದಾರೆ. ಈ ಅಂತರವನ್ನು ಕಡಿಮೆ ಮಾಡುವುದಕ್ಕೆ ನಾವು ಸರ್ವಪ್ರಯತ್ನ ಮಾಡುತ್ತಿದ್ದೇವೆ. ಯೋಜನಾ ಆಯೋಗದ ಉದ್ದೇಶವು ಅದೇ ಆಗಿದೆ. ಯಾರುಯಾರು ಯಾವ ಯಾವ ಕ್ಷೇತ್ರದಲ್ಲಿ ಹಿಂದುಳಿದಿದ್ದಾರೆ. ವ್ಯತ್ಯಾಸದ ಜೀವನ ವನ್ನು ಕಡಿಮೆ ಮಾಡಿ ಈ ದೇಶವನ್ನು ಪುರೋಭಿವೃದ್ಧಿ ಕಡೆಗೆ ಕೊಂಡ್ಯೊಯ್ಯುವುದು ಪ್ಲಾನಿಂಗ್. ಈ ಯೋಜನೆ ಅಂದಿನಿಂದ ಇವತ್ತಿನವರೆಗೂ ಯಾವ ರೀತಿ ಮಾಡುತ್ತಿದ್ದಾರೆ ಎನ್ನುವುದನ್ನು ನಾವು ಯೋಜನೆ ಮಾಡಬೇಕು. ಯೋಜನೆಯನ್ನು ತಯಾರು ಮಾಡತಕ್ಕವರು ಯಾರಿಗೋಸ್ಕರ ಮಾಡುತ್ತಿ ದ್ದಾರೆ ಯಾರು ಮಾಡುತ್ತಿದ್ದಾರೆ. ಯಾರು ದೇಶದಲ್ಲಿ ೯೭ ಜನ ಹಿಂದುಳಿದಿದ್ದಾರೆ. ಅವರಿ ಗೋಸ್ಕರ ೩ ಜನ ಮುಂದುವರಿದಿರುವವರು ಮಾಡುತ್ತಿದ್ದಾರೆ. ಇದು ಪಾರ್ಟಿ ಪಕ್ಷದ ವ್ಯವಸ್ಥೆ ಅಲ್ಲ. ದೇಶದ ಪ್ರಶ್ನೆ ಅವತ್ತಿನಿಂದ ಇವತ್ತಿನವರೆಗೂ ಅವರೇ ಮಾಡುತ್ತಿದ್ದಾರೆ. ಎಲ್ಲ ಅವರ ಪರವಾಗಿಯೇ ಮಾಡಿಕೊಳ್ಳುತ್ತಿದ್ದಾರೆ. ಈ ದೇಶದಲ್ಲಿ ೩–೪ ಜನ ಸ್ಥಿತಿವಂತರು ಏನು ಇದ್ದಾರೆ, ಅಂತಹವರ ಬಗ್ಗೆ ಯೋಜನೆ ಮಾಡುತ್ತಿದ್ದಾರೆ. ಈ ದೇಶದಲ್ಲಿ ಕುಣಿಯಬೇಕು ಹಾಡಬೇಕು ತಬಲ ಬಡಿಯಬೇಕು. ದೇಶ ವಿದೇಶಗಳಿಗೆ ಹೋಗಿ ತಿರುಗಬೇಕು. ಇಂತಹವರ ಬಗ್ಗೆ ೫೦೦ ಕೋಟಿ ರೂಪಾಯಿಗಳನ್ನು ಪ್ರಾವಿಜನ್ ಮಾಡಿದ್ದಾರೆ. ಕರ್ನಾಟಕದಲ್ಲಿ ಕಲೆಗೋಸ್ಕರ ೨ ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ, ಕಲೆಯಲ್ಲಿ ಯಾರಿದ್ದಾರೆ ಇದರ ಬಗ್ಗೆ ನೇರವಾಗಿ ಮಾತನಾಡುವುದು ಒಳ್ಳೆಯದು. ಹೊಲೆಮಾದಿಗರು, ಬೆಸ್ತರು, ಕುರುಬರು, ಇದ್ದಾರೆಯೇ. ೨ಕೋಟಿ ರೂಪಾಯಿಗಳನ್ನು ಯಾರಿಗೆ ಹಂಚುತ್ತೀರಿ. ಸುಖ ವಾಗಿರುವವರು ಕಚೇರ್‌ಭೂತರಾಗಿ ಇರುತ್ತಾರೆ, ಅಂಥವರಿಗೋಸ್ಕರ ಎರಡು ಕೋಟಿರೂಪಾಯಿಗಳನ್ನು ಇಟ್ಟಿದ್ದೀರಿ. ಇದರಿಂದ ಯಾರ ಏಳಿಗೆ ಸಾಧನೆಯಾಯಿತು. ಬಡವರ ಏಳಿಗೆ ಆಗಲಿಲ್ಲ. ಯಾರು ಯೋಜನೆ ಮಾಡುತ್ತಾರೆ. ಅವರು ಬಡವರ ಬಗ್ಗೆ ಯೋಜನೆಯನ್ನು ಮಾಡಬೇಕು. ನಿಮ್ಮ ಸರ್ಕಾರ ದಲ್ಲಿ ''ಥಿಂಕ್‌ಟ್ಯಾಂಕ್'' ಎಂದು ಇದೆ. ಅಂದರೆ ಯೋಚನೆಯ ಕೆರೆ ಇದೆ. ಈ ಯೋಚನೆಯ ಕೆರೆಯಲ್ಲಿ ಸೇವಕವಾಗಿರುವ ಮುಖ್ಯಸ್ಥರ ಮತ್ತು ಸದಸ್ಯರ ಸೇವಕ ಮಾಡಿದಮೇಲೆ ತಲೆ ಎತ್ತು

ವುದಕ್ಕಾಗಿಲ್ಲ, ಇವತ್ತು ಈ ರಾಜ್ಯ ಆರ್ಥಿಕ ಮುಗ್ಗಟ್ಟಿನ ಪರಿಸ್ಥಿತಿಗೆ ಸಿಕ್ಕಿಕೊಂಡಿದೆ. ಆರ್ಥಿಕ ಮುಗ್ಗಟ್ಟನ್ನು ಪರಿಹಾರ ಮಾಡಲಿಕ್ಕೆ ಆಗಿಲ್ಲ. ನಿಮ್ಮ "ಯೋಜನೆಯ ಕೆರೆ" ಏನಿದೆ, ಅದು ನಿಂತ ನೀರಾಗಿದೆ. ಹರಿಯುವಂತ ನೀರಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.— ಇ.ಪಿ.ಸಿ. ಎಂದು ಏನು ಕರೆಯುತ್ತಾರೆ. ಅವರು ಯಾರ ಪರವಾಗಿ ಮಾಡಿದ್ದಾರೆ. ರಿಪೋರ್ಟ್ ಏನು ಕೊಟ್ಟಿದ್ದಾರೆ ಎನ್ನುವುದನ್ನು ತಾವು ನೋಡಿ. ಗ್ರಾಮಾಂತರ ಪ್ರದೇಶದ ಬಗ್ಗೆ, ಲಿಟರೆಸಿ ಬಗ್ಗೆ, ಕೈಗಾರಿಕೆಗಳ ಬಗ್ಗೆ ಏನು ಹೇಳಿದ್ದಾರೆ ಎನ್ನುವುದನ್ನು ಯಾವ ರೀತಿಯ ರಚನಾತ್ಮಕ ಸಲಹೆಗಳನ್ನು ಕೊಟ್ಟಿದ್ದಾರೆ ಎನ್ನುವುದನ್ನು ನೋಡಿ, ತಾವು ಆ ರಿಪೋರ್ಟ್ ನೋಡಿಲ್ಲ,

ಶ್ರೀ ಬಿ. ಬಸವಲಿಂಗಪ್ಪ.—ಚಿಂತನಾಕೆರೆ......

ಅಧ್ಯಕ್ಷರು.—ಚಿಂತನಾ ಚಿಲುಮೆ.

ಶ್ರೀ ಬಿ. ಬಸವಲಿಂಗಪ್ಪ.—ಈ ಚಿಂತನಾ ಕೆರೆಗೆ ಅವರೇ ಮಾಲೀಕರು. ಅವರು ಬರೆದಿದ್ದನ್ನು ಓದಬೇಕು. ಅವರು ಯಾರು ನೋಡಿ ಯೋಜನೆ ಮತ್ತು ಕಾರ್ಯಕ್ರಮಗಳನ್ನು ಮಾಡಿದ್ದಾರೆ. ಎಲ್ಲಿ ಪುಸ್ತಕಗಳು ಪ್ರಿಂಟ್ ಆಗುತ್ತದೆಂಬುದನ್ನು ನಾವು ನೋಡಿಲ್ಲ. ಅದಕ್ಕೆ ಉಪಯೋಗಿಸತಕ್ಕ ಪೇಪರ್ ಎಷ್ಟು ಚೆನ್ನಾಗಿರುತ್ತದೆ ಗೊತ್ತೆ ? ಥಳ ಥಳಿಸುತ್ತದೆ. ಅದು ಮಾನ್ಯ ಸದಸ್ಯರ ಪ್ರಯೋಜನಕ್ಕೆ ಅಲ್ಲ ಅಧಿಕಾರಿಗಳ ಪ್ರಯೋಜನಕ್ಕೆ ಅಲ್ಲ. ಈ ಕರ್ನಾಟಕದ ಜನರ ಪ್ರಯೋಜನಕ್ಕೆ ಅಲ್ಲ ಈ ಇಂಡಿಯಾದಲ್ಲಿ ಎಷ್ಟು ಜನ ಪತ್ರಕರ್ತರಿದ್ದಾರೆ, ಎಷ್ಟು ಜನ ಎಂ. ಪಿ. ಗಳಿದ್ದಾರೆ, ಎಷ್ಟು ಜನ ದೊಡ್ಡ ದೊಡ್ಡ ರಾಜಕಾರಣಿಗಳಿದ್ದಾರೆ ಅವರ ಉಪಯೋಗಕ್ಕೆ ಅವರ ಕೈಗೆ ಸಿಕ್ಕುವಂತೆ ಕಳುಹಿಸುತ್ತಿದ್ದಾರೆ......

ಶ್ರೀ ಎಸ್. ಆರ್. ಬೊಮ್ಮಾಯಿ.—ನೀವು ಕನ್‌ಫ್ಯೂಸ್ ಮಾಡಿಕೊಳ್ಳುತ್ತಿದ್ದೀರಿ. ಅದು ಕೇಂದ್ರ ಸರ್ಕಾರ......

ಶ್ರೀ ಬಿ. ಬಸವಲಿಂಗಪ್ಪ.—ಕೇಂದ್ರ ಸರ್ಕಾರದ್ದು ಬೇಡ, ನಿಮ್ಮದು ಹೇಳಿ ಸ್ವಾಮಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ನೀವು ಪಾಂಪ್ಲೆಟ್ಸ್ ಬಗ್ಗೆ ಹೇಳುತ್ತಿದ್ದೀರಿ......

ಶ್ರೀ ಬಿ. ಬಸವಲಿಂಗಪ್ಪ. – ಪುಸ್ತಕಗಳು......

ಶ್ರೀ ಎಸ್. ಆರ್. ಬೊಮ್ಮಾಯಿ.—ಆ ಪುಸ್ತಕಗಳು ಗ್ಲೇಸ್ಡ್ ಪೇಪರ್‌ನಲ್ಲಿಲ್ಲ. ನೀವು ಹೇಳುತ್ತಿರತಕ್ಕ ಅಂತರಾಷ್ಟ್ರೀಯ ಖ್ಯಾತಿಯನ್ನು ಪಡೆದಂಥ ವ್ಯಕ್ತಿಗಳಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೆ, ಮಾನ್ಯ ಬೊಮ್ಮಾಯಿಯವರು ರಾಯ್ ಅವರ ಅನುಯಾಯಿಗಳು ಎಂದು ಹೇಳಿಕೊಂಡಿದ್ದಾರೆ. ಅದರ ಅರ್ಥ "he believes entirely in materialism". ವಸ್ತು ರೂಪವಾಗಿರತಕ್ಕ ಕಾರ್ಯಕ್ರಮಗಳು ಏನಿವೆ, ಯೋಜನೆಗಳು ಏನಿವೆ, ಅವುಗಳಲ್ಲಿ ನಂಬಿಕೆ ಇರುವವರನ್ನು ರಾಯಿಸ್ಟ್ ಎಂದು ಹೇಳುತ್ತೇನೆ. ಬೊಮ್ಮಾಯಿಯವರು ದೊಡ್ಡ ರಾಯಿಸ್ಟ್ ಆಗಿರಬಹುದು. ಸ್ವಾಮಿ, ನಾನು ಹೇಳುತ್ತೇನೆ, ವಸ್ತು ರೂಪವಾಗಿ ಏನು ಪ್ರಾರಂಭ ವಾಯಿತು ? ಥಿಂಕ್ ಟ್ಯಾಂಕ್ ಎಂದು ಏನು ಮಾಡಿದ್ದೀರಿ ಅದರಿಂದ ನಿಮಗಾಗಲಿ, ನಮಗಾಗಲಿ ಏನಾದರು ಪ್ರಯೋಜನವಾಯಿತೆ. I am talking with responsiblity.

ಶ್ರೀ ಎಸ್. ಆರ್. ಬೊಮ್ಮಾಯಿ.—ನೀವು ಹೇಳುವುದನ್ನೆಲ್ಲಾ ಹೇಳಿ. ನಾನು ಉತ್ತರವನ್ನು ಕೊಡುವಾಗ ಹೇಳುತ್ತೇನೆ

ಅಧ್ಯಕ್ಷರು.—ನಿಮಗೆ 60 ಮಿನಿಟ್ಸ್ ಕೊಟ್ಟಿದ್ದೇನೆ. ನೀವು ಏನು ಬೇಕಾದರೂ ಮಾತನಾಡಿ...

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೆ, ಅವರು ಬಹಳ ಒಳ್ಳೆಯ ರೀತಿಯಲ್ಲಿ ಪ್ರಾರಂಭ ಮಾಡಿದ್ದಾರೆ. ಅವರಿಗೆ ಅವಕಾಶ ಕೊಡಿ.

ಶ್ರೀ ಬಿ. ಬಸವಲಿಂಗಪ್ಪ.—ಥಿಂಕ್ ಟ್ಯಾಂಕ್‌ನಲ್ಲಿ ಇರುವವರು ಇಲ್ಲಿ ಇದ್ದವರು. ಅವರು ಹೊರಗಿನವರಲ್ಲ. ಅವರು ಹೇಳುವಂತೆ ಈ ರಾಜ್ಯದಲ್ಲಿ ಏನಾಯಿತು ? ಅಂದರೆ ಈ ರಾಜ್ಯ ಹಾಳಾಯಿತು. I am talking with responsiblity. Whatever it be.

ಶ್ರೀ ಎಸ್. ಆರ್. ಬೊಮ್ಮಾಯಿ.- ಅವರನ್ನು ಕೇಂದ್ರ ಸರ್ಕಾರದವರು ೨೦ ಪಾಯಿಂಟ್ ಕಾರ್ಯಕ್ರಮದ ಇವ್ಯಾಲ್ಯುಯೇಷನ್‌ನ ಅಧ್ಯಕ್ಷರನ್ನಾಗಿ ಮಾಡಿದ್ದಾರೆ. He has been made Chairman. ನೀವು ಯೋಜನೆಯ ಬಗ್ಗೆ ಹೇಳುತ್ತಿದ್ದೀರಿ. ಅವರನ್ನು ಕೇಂದ್ರ ಸರ್ಕಾರದವರು ನೇಮಕ ಮಾಡಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.—ನಾನು ಹೇಳುವುದನ್ನು ಹೇಳುತ್ತೇನೆ. ಅದಕ್ಕೆ ನೀವು ಉತ್ತರ ಕೊಡುವಾಗ ಹೇಳಿ.

SRI S. R. BOMMAI.—He is the Vice-Chirman of All India Government.

SRI B. BASAVALINGAPPA.—I know it. ಮಾನ್ಯ ಬೊಮ್ಮಾಯಿಯವರೇ ಪ್ಲಾನಿಂಗ್ ಮಂತ್ರಿಗಳಾಗಿದ್ದಾರೆ. ಅವರ ಕರ್ತವ್ಯ ಏನು ಎಂಬುದನ್ನು ಹೇಳುತ್ತೇನೆ. ಸುಮ್ಮನೆ ಪ್ಲಾನಿಂಗ್ ಅಂತ ಮಾಡಿ, ಥಿಂಕ್ ಟ್ಯಾಂಕ್ ಅಂತ ಮಾಡಿ ಹತ್ತಾರು ವರ್ಷಗಳಿಂದ ಸರ್ಕಾರದ ಸೇವೆಯಲ್ಲಿಯೇ ಇದ್ದು, ನಿವೃತ್ತರಾದ ಅಧಿಕಾರಿಗಳನ್ನೇ ನೇಮಕ ಮಾಡಿಕೊಂಡಿದ್ದಾರೆ. ಅವರಿಂದ ಈ ದೇಶದಲ್ಲಿ ಏನೂ ಉದ್ಧಾರವಾಗಿಲ್ಲ. ಅವರಿಂದ ಯಾವ ಪ್ರಯೋಜನವೂ ಇಲ್ಲ. ಅವರನ್ನು ಕಟ್ಟಿಕೊಂಡು ನಾವು ಪ್ಲಾನಿಂಗ್ ಮಾಡುತ್ತೇವೆ. ದೇಶಉದ್ಧಾರ ಮಾಡುತ್ತೇವೆಂದು ಹೇಳಬೇಡಿ. ಸ್ವಾಮಿ, ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳುತ್ತೇನೆ. ನಾನು ಊರಿಗೆ ಹೋಗಿದ್ದಾಗ ನನ್ನ ತಾಯಿ ಒಂದು ಮಾತನ್ನು ಕೇಳಿದರು. ಏನಪ್ಪಾ ದಿನ ಬೆಳಗಾದರೆ ಹರಿಜನರು, ಗಿರಿಜನರು ಅಂತ ದೊಡ್ಡ ದೊಡ್ಡ ನಾಯಕರು ಹೇಳುತ್ತಿರುತ್ತಾರೆ. ಆದರೆ ನನಗೆ ಗೊತ್ತಿರುವಂತೆ ಅವರಿಂದ ಏನೂ ಉಪಯೋಗವಾಗಿಲ್ಲ ಅಂತ ಕೇಳಿದರು. ಅದಕ್ಕೆ ನಾನು ಹೇಳಿದೆ, ನಮ್ಮ ದೇಶದ ಸಂಸ್ಕೃತಿಯೇ ಹಾಗೆ. ಅವರು ಹೇಳುತ್ತಾರೆಯೇ ಹೊರತು ಮಾಡುವುದಿಲ್ಲ ಎಂದು ಹೇಳಿದೆ. ಯಾರಿಂದ ದೇಶಕ್ಕೆ ಪ್ರಯೋಜನವಾಗಿಲ್ಲ, ಯಾರಿಂದ ಈ ದೇಶದ ಹಳ್ಳಿಗಾಡಿನ ಜನಜೀವನದಲ್ಲಿ ಸುಧಾರಣೆಯಾಗಿಲ್ಲ ಅಂಥವರನ್ನು ನೀವು ಸಾಯುವವರೆಗೂ ಇಟ್ಟುಕೊಳ್ಳುತ್ತೀರಾ ? ಅಲ್ಲಿ ಯಾರು ಯೋಜನೆಗಳನ್ನು ಮಾಡಿದ್ದಾರೆ ಅವರನ್ನೇ ಇಲ್ಲೂ ಇಟ್ಟುಕೊಳ್ಳುತ್ತೀರಾ ? ನಿಮ್ಮ ಸೆಕ್ರೆಟರಿಯೇಟ್‌ನಲ್ಲಿ ಕೇವಲ ಬ್ರಾಹ್ಮಣರೇ ಇದ್ದಾರೆ, ಎಲ್ಲ ಹುದ್ದೆಗಳಲ್ಲೂ ಬ್ರಾಹ್ಮಣರೇ ಇದ್ದಾರೆ.

ಎಲ್ಲ ಹಂತಗಳಲ್ಲೂ ಬ್ರಾಹ್ಮಣರೇ ಇದ್ದಾರೆ. ಅಂಡರ್ ಸೆಕ್ರೆಟರಿ, ಡೆಪ್ಯುಟಿ ಸೆಕ್ರೆಟರಿ, ಬ್ರಾಹ್ಮಣರೇ, ಡೆಪ್ಯುಟಿ ಕಮಿಷನರ್ ಬ್ರಾಹ್ಮಣರೇ ಇದ್ದಾರೆಂದು ಹೇಳಿ ಸ್ಟ್ಯಾಟಿಸ್ಟಿಕ್ಸ್ ಕೊಟ್ಟು ಹೇಳಲಿಲ್ಲವೇ ? ನಾವು ಹೇಳಿದ್ದಲ್ಲ, ನೀವೇ ಇದನ್ನು ಹೆಚ್ಚಾಗಿ ಹೇಳಿದ್ದು. ಸ್ವಾಮಿ, ನಾನು ಹೇಳುತ್ತಿದ್ದೇನೆ, ಈ ರಾಜ್ಯದಲ್ಲಿ ಎಲ್ಲಿಯವರೆಗೆ ಬಡಜನರ ಕಷ್ಟ ಗೊತ್ತಿಲ್ಲದವರು, ರೈತರ ಕಷ್ಟ ಗೊತ್ತಿಲ್ಲದವರು, ಅವನ ಸಂಕಟ, ಅವನ ಹಸಿವು ಗೊತ್ತಿಲ್ಲದವರನ್ನು ಅಧ್ಯಕ್ಷನ್ನಾಗಿ ಇಟ್ಟುಕೊಂಡಿರುತ್ತೀರೋ (ಥಿಂಕ್‌ಟ್ಯಾಂಕ್) ಅಲ್ಲಿಯವರೆಗೂ ಅವರ ಬಾಳು ಸರಿಹೋಗುವುದಿಲ್ಲ. ಈಗ ರಾಜ್ಯ ಹೀಗೇನೇ ಮುಂದುವರಿಯುತ್ತಿರುತ್ತದೆ. ದಯವಿಟ್ಟು ಈ ರಾಜ್ಯಕ್ಕೆ ಸಾಧಾರಣವಾಗಿ ಪ್ಲಾನ್ ಮಾಡುವಾಗ ೨೦ ವರ್ಷಗಳಿಂದ ೫೦ ವರ್ಷಗಳಿಂದ ಯಾರು ಬಡವರಿದ್ದಾರೆ, ಅವರ ಬಗ್ಗೆ ಯೋಚನೆ ಮಾಡದೆ ಹೋದರೆ ಹೇಗೆ ನೀವು ಪ್ಲಾನ್ ಮಾಡುತ್ತೀರಿ ? ಎರಡನೆಯದಾಗಿ, ೧೯೮೭–೮೮ನೇ ಇಸವಿಯಲ್ಲಿ ತಾವು ಏನು ಮಾಡಿದ್ದೀರಿ ಎನ್ನುವ ಬಗ್ಗೆ ಆಡಳಿತ ವರದಿಯ ಮೊದಲನೇ ವಾಕ್ಯವನ್ನು ಓದಿ ಹೇಳುತ್ತೇನೆ.

> "ಯೋಜನಾ ಇಲಾಖೆ ೧೯೮೭–೮೮ರಲ್ಲಿ, ಯೋಜನಾ ಇಲಾಖೆಯು ಲಭ್ಯವಿರುವ ಸಂಪನ್ಮೂಲ ಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು, ಯೋಜನಾ ಹಂಚಿಕೆಯನ್ನು ೯೧೭ ಕೋಟಿ ರೂ.ಗಳಿಂದ ೭೮೯.೪೫ ಕೋಟಿ ರೂ.ಗಳಿಗೆ ಇಳಿಸಲು ಕ್ರಮ ಕೈಗೊಂಡಿದೆ. ಇಲಾಖೆ ನಡೆಸಿದ ಒಂದು ವೈಶ್ಲೇಷಿಕ ಅಧ್ಯಯನವು ನೀರಿನ ದರಗಳ ಮೇಲ್ಮುಖ ಪರಿಷ್ಕರಣೆಗೆ ಕಾರಣವಾಯಿತು. ಇಲಾಖೆ ನಡೆಸಿದ ಕ್ಷೇತ್ರ ಅಧ್ಯಯನದ ಶಿಫಾರಸ್ಸುಗಳ ಆಧಾರದಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮದ ಮತ್ತು ಗ್ರಾಮೀಣ ಭೂರಹಿತರ ಉದ್ಯೋಗ ಆಶ್ವಾಸನಾ ಕಾರ್ಯಕ್ರಮದ ಮೇರೆಗಿನ ಪ್ರತಿ ಕೆಲಸದ ದಿನದ ವೆಚ್ಚವನ್ನು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯು ಕಡಿಮೆ ಮಾಡಿದೆ".

ಕಡಿಮೆ ಮಾಡಿದ್ದು ಯಾರಿಗೋಸ್ಕರ ? ಬಡವರಿಗಾಗಿ ಇರುವ ಆರ್. ಎಲ್, ಇ. ಜಿ. ಪಿ. ಎನ್‌ಆರ್‌ಇಪಿ ಕಾರ್ಯಕ್ರಮಗಳು ಬಡವರಿಗೋಸ್ಕರ ಇದ್ದುದು ಇದರಲ್ಲಿ ಕಡಿಮೆ ಮಾಡಿದ್ದೀರಿ. ಕಡಿಮೆ ಮಾಡಿ ದೇಶಕ್ಕೆ ಬಡವರಿಗೆ ಸಹಾಯ ಮಾಡುತ್ತೇವೆಂದು ತಾವು ಹೇಳುತ್ತೀರಿ. ಸ್ವಾಮಿ, ೯೧೭ ಕೋಟಿ ರೂಪಾಯಿಗಳಿಂದ ೭೬೦ ಕೋಟಿ ರೂಪಾಯಿಗಳಿಗೆ ಇಳಿಸಿಬಿಟ್ಟು ಬಹಳ ಚೆನ್ನಾಗಿ ಈ ದೇಶಕ್ಕೆ ಕೆಲಸ ಮಾಡಿದ್ದೇವೆ ಎಂದು ಹೇಳುತ್ತಿದ್ದೀರಲ್ಲಾ. ಇದಕ್ಕೆ ನಿಮಗೆ ನಿಜವಾಗಿಯೂ ಕೂಡ ಹೇಳಿಕೊಳ್ಳಲಿಕ್ಕೆ ಧೈರ್ಯ ಮತ್ತು ಗರ್ವ ಏನು ಗರ್ವದಿಂದ ಮಾತನಾಡುತ್ತಿದ್ದೀರಿ, ಹಾಗೆ ಮಾಡಿದ್ದೇವೆ ಹೀಗೆ ಮಾಡಿದ್ದೇವೆಂದು ಏನು ಹೇಳುತ್ತೀರಿ ಅದಕ್ಕೆ ನಿಜವಾಗಿಯೂ ಬುನಾದಿ ಇದೆಯೋ ಎಂದು ಕೇಳುತ್ತೇನೆ. ಪ್ಲಾನಿಂಗ್ ಕಮಿಷನರ್‌ರವರ ಚಿತ್ರ, ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ಚಿತ್ರ ಮತ್ತು ಬೊಮ್ಮಾಯಿ ಅವರ ಚಿತ್ರಗಳನ್ನು ಮುದ್ರಿಸಿಕೊಂಡು ಬಹಳ ಶ್ರಮ ಪಟ್ಟುಬಿಟ್ಟಿದ್ದೇವೆಂದು ಹೇಳಿಕೊಳ್ಳುತ್ತೀರಿ. ೯೦೦ ಕೋಟಿ ರೂಪಾಯಿಗಳಿಂದ ೧೭ ನೂರು ಕೋಟಿ ರೂಪಾಯಿಗಳವರೆಗೆ ಜಾಸ್ತಿ ಕರ್ನಾಟಕ ರಾಜ್ಯಕ್ಕೆ ಬಂದಿದೆ ಎಂದು ಹೇಳುತ್ತಿದ್ದೀರಿ. ಹೋದವರ್ಷ ಏನು ಮಾಡಿದ್ದಾರೆ ಕರ್ನಾಟಕ ರಾಜ್ಯಕ್ಕೆ ಎಂದರೆ ೨-೩ ಕೋಟಿ ರೂಪಾಯಿಗಳನ್ನು ಕಡಿಮೆ ಮಾಡಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಹೋದ ವರ್ಷ ಕಡಿಮೆಯಾದ ವಿಚಾರ ಹೇಳುತ್ತಿದ್ದೇನೆ. ಅದಕ್ಕೂ ಹಿಂದಿನ ವರ್ಷಗಳದ್ದು ತಾವು ನೋಡಿ. ೧೯೮೩-೮೪ರಲ್ಲಿ ನಾನ್ ಪ್ಲಾನ್ ಪ್ರಾವಿಷನ್ ೫೭೮ ಕೋಟಿ.

ಶ್ರೀ ಬಿ. ಬಸವಲಿಂಗಪ್ಪ.—ನೀವು ಮಾಡಿರುವ ಪ್ಲಾನ್, ಏನು ಮಾಡಿದ್ದೀರಿ ಎಂದು ಕೇಳಿದರೆ ನಾವೇನು ಮಾಡಿದ್ದೆವು ಅದನ್ನು ಹೇಳುವುದಕ್ಕೆ ಹೋಗುತ್ತೀರಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—೧೯೮೩-೮೪ ರಲ್ಲಿ ಜನತಾ ಸರ್ಕಾರ ಬಂದಮೇಲೆ ಹೇಳುತ್ತಿದ್ದೇನೆ. ೧೯೮೩-೮೪ ರಲ್ಲಿ ಪ್ಲಾನ್ ಔಟ್‌ಲೇ ೫೬೫ ಕೋಟಿ ಇದರಲ್ಲಿ ಎಕ್ಸ್‌ಪೆಂಡೀಚರ್ ೫೩೧ ೭೭ ಕೋಟಿ ಹೆಚ್ಚಾದಂದು ೫೬.೭೭ ಕೋಟಿ ೧೯೮೪-೮೫ರಲ್ಲಿ ಪ್ಲಾನ್ ಔಟ್‌ಲೇ ೬೫೦ ೨೦ ಕೋಟಿ ಎಕ್ಸ್‌ಪೆಂಡೀಚರ್ ೭೦೬.೮೦ ಕೋಟಿ, ಹೆಚ್ಚಾಗಿರುವುದು ೫೬.೫೭ ಕೋಟಿ ೧೯೮೫-೮೬ ರಲ್ಲಿ ೬೫೭.೬೦ ಕೋಟಿ ಪ್ಲಾನ್ ಔಟ್‌ಲೇ ಎಕ್ಸ್‌ಪೆಂಡೀಚರ್ ೬೯೩.೩೨ ಕೋಟಿ, ಹೆಚ್ಚಾಗಿರುವುದು ೪೨.೫೫ ಕೋಟಿ ರೂ.ಗಳು.

೧೯೮೬-೮೭ರಲ್ಲಿ ಪ್ಲಾನ್ ಔಟ್‌ಲೇ ೭೬೬ ಕೋಟಿ ರೂಪಾಯಿಗಳು, ಎಕ್ಸ್‌ಪೆಂಡಿಚರ್ ೯೭.೧೩ ಕೋಟಿ ಅಂದರೆ ೩೦ ಕೋಟಿ ೯೨ ಲಕ್ಷ ರೂಪಾಯಿ ಹೆಚ್ಚು. ೧೯೮೭-೮೮ಕ್ಕೆ ತಾವು ಹೇಳಿದ ಹಾಗೆ ಕಡಿಮೆ ಆಗಿದೆ. ಅದನ್ನು ಆ ಮೇಲೆ ಉತ್ತರದಲ್ಲಿ ಹೇಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ.—ಖರ್ಚು ಮಾಡಿಕೊಂಡು ಬಂದದ್ದು ೧೦ ಪರ್ಸೆಂಟ್ ಕೂಡ ಇಲ್ಲ. ೧೦ ಲಕ್ಷ, ೩೦ ಲಕ್ಷ...

ಶ್ರೀ ಎಸ್.ಆರ್. ಬೊಮ್ಮಾಯಿ.—ಬೇರೆ ಬೇರೆ ರಾಜ್ಯಗಳಲ್ಲಿ ಏನಾಗಿದೆ ಎಂಬುದನ್ನು ಉತ್ತರದಲ್ಲಿ ಹೇಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನಿಮ್ಮ ರಕ್ಷಣೆಗೆ ಬೇರೆ ರಾಜ್ಯಗಳು ಬರಬೇಕೆ ?

ಶ್ರೀ ಕೆ, ಹೆಚ್. ಪಾಟೀಲ್.—ನೀವು ನಾವು ಇರುವಾಗ ಮಾದರಿಯಾಗಿ ಮಾಡುವುದಕ್ಕೆ ಪ್ರಯತ್ನ ಮಾಡಿ. ಅಲ್ಲಿ ಕಳವು ಆಗಿದೆ, ಅಲ್ಲಿ ಅವರು ಕಳವು ಮಾಡುತ್ತಾರೆ. ಇಲ್ಲಿ ನಾವು ಏತಕ್ಕೆ ಮಾಡಬಾರದು ಎಂದು ಅಲ್ಲ. ಎಲ್ಲರಿಗೂ ಮಾದರಿಯಾಗಿ ಇರಬೇಕು.

ಶ್ರೀ ಧರ್ಮಸಿಂಗ್.—ನಿಮ್ಮ ಸ್ಥಿತಿಯನ್ನು ಹೇಳಿ. ಬೇರೆ ರಾಜ್ಯದ್ದನ್ನು ಹೇಳಬೇಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಆಲ್ ಇಂಡಿಯಾ ಮಟ್ಟದಲ್ಲಿ ನಾವು ನಮ್ಮ ಆರ್ಥಿಕ ಪರಿಸ್ಥಿತಿಯನ್ನು ನೋಡಬೇಕು. ಫೈನಾನ್ಸಿಯಲ್ ಇನ್‌ಪ್ಲೇಷನ್ ವಿಚಾರದಲ್ಲಿ ರಾಷ್ಟ್ರೀಯ ನೀತಿಯ ಪರಿಣಾಮ ನಮ್ಮ ರಾಜ್ಯದ ಮೇಲೂ ಆಗುತ್ತದೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಇಲ್ಲ. ತಾವು ಹಣಕಾಸಿನ ಸಚಿವರಿದ್ದಾಗ ಪ್ಲಾನ್ ಔಟ್‌ಲೇ ಯಲ್ಲಿ ಎಕ್ಸ್‌ಪೆಂಡಿಚರ್ ಜಾಸ್ತಿಯಾಗಿದೆ. ೧೯೮೭-೮೮ರಲ್ಲಿ ಮುಖ್ಯಮಂತ್ರಿಗಳು ಮಾಡಿದಾಗ ಕಡಿಮೆ ಆಗಿದೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಬೊಮ್ಮಾಯಿಯವರು ಮಧ್ಯೆ ಪ್ರವೇಶಿಸಿ ನಾವು ಹಿಂದೆ ಏನು ಮಾಡಿದ್ದೆವು ಎಂಬುದನ್ನು ಹೇಳಿ ತಾವು ಮಾಡಿದ ತಪ್ಪನ್ನು ಸಮರ್ಥಿಸುವುದಕ್ಕೆ ಪ್ರಯತ್ನ ಮಾಡುತ್ತಾರೆ. ಅವರಿಗೆ ಹೇಳುತ್ತೇನೆ, ನೀವು ಪ್ಲಾನಿಂಗ್ ಮಂತ್ರಿಗಳಾಗಿದ್ದೀರಿ. ನೀವು ಸರಿಯಾಗಿ ಕೆಲಸ ಮಾಡಿ. ಸರಿಯಾಗಿ ನೋಡಿಕೊಳ್ಳಿ, ಎಲ್ಲಿ ದೋಷಗಳಿವೆ ಅವನ್ನು ಸರಿ ಮಾಡಿ ಎಂದು ಹೇಳುತ್ತೇನೆ. ನೀವು ಹಾಗೆ ಮಾಡಿದಿರಿ, ನಾವು ಹೀಗೆ ಮಾಡುತ್ತೇವೆ ಅನ್ನುವುದು ಬೇಡ. ನಿಮಗೆ ಒಳ್ಳೆಯ ಬುದ್ಧಿ ಬರಲಿ. ಇವತ್ತಿನಿಂದ ಹಳೆಯದನ್ನೆಲ್ಲ ಬಿಡಿ, ಕಾಂಗ್ರೆಸ್ಸಿನವರು ಹಾಗಿದ್ದರು, ಕೇಂದ್ರದಲ್ಲಿ ಹಾಗಿದ್ದಾರೆ, ನಾವು ಹೀಗೆ ಮಾಡಿದ್ದೇವೆಂಬುದನ್ನು ಬಿಡಿ. ಇದನ್ನೆಲ್ಲ ಬಿಟ್ಟು ಒಳ್ಳೆಯ ಕೆಲಸ ಮಾಡಿ. ನಿಮಗೆ ಹಣ ಬೇಕು ಅಂತ ಇಟ್ಟುಕೊಳ್ಳೋಣ. ಆ ಹಣವನ್ನು ಎಲ್ಲಿಂದ ತರುತ್ತೀರಿ ? ಸಂಪನ್ಮೂಲಗಳನ್ನು ರೂಡಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಸಂಪನ್ಮೂಲಗಳನ್ನು ರೂಡಿಸಿಕೊಳ್ಳುವುದಕ್ಕೆ ಅವರ ಕೈಯಲ್ಲಿ ಆಗುವುದಿಲ್ಲವೆಂದು ಹೇಳುತ್ತೇನೆ. ಪಿಕ್ಚರ್ ಆಫ್ ಕರ್ನಾಟಕ ಬಡ್ಜೆಟ್ ೧೯೮೮-೮೯ರಲ್ಲಿ ಸಾಲ ೩೫೫೮ ಕೋಟಿ. ಆ ಸಾಲಕ್ಕೆ ಎಷ್ಟು ಬಡ್ಡಿ ಕೊಡಬೇಕು ? ಸಾಲಕ್ಕೆ ಬಡ್ಡಿ ಕೊಟ್ಟು ಉಳಿದ ಹಣದಲ್ಲಿ ಯೋಜನೆಗಳನ್ನು ಮಾಡಬೇಕು. ಇದರ ಅರ್ಥ ಏನಾಗುತ್ತದೆಂದರೆ ಅವರಿಂದ ಯಾವ ಯೋಜನೆಗಳೂ ಆಗುವುದಿಲ್ಲವೆಂದು ಹೇಳುತ್ತೇನೆ. ಸಾಲದ ಹೊರೆಯನ್ನು ತಪ್ಪಿಸಿಕೊಳ್ಳದೆ ಹೋದರೆ, ಸಂಪನ್ಮೂಲಗಳನ್ನು ರೂಡಿಸಿಕೊಳ್ಳದೆ ಹೋದರೆ ನಿಮ್ಮಿಂದ ವ್ಯವಹಾರ ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತೇನೆ. ಸ್ಪೆಷಲ್ ಕಾಂಪೊನೆಂಟ್ ಪ್ಲಾನ್ ಮತ್ತು ಸೆಂಟ್ರಲಿ ಸ್ಪಾನ್ಸರ್ಡ್ ಸ್ಕೀಂ ಸಲುವಾಗಿ ಏನು ಹಣ ಬರುತ್ತದೆ ಅದನ್ನು (ಮೇ ತಿಂಗಳಲ್ಲಿ ಬಂದರೆ ಮಾರ್ಚ್ ಕೊನೆಯವರೆಗೆ ಹಾಗೇ ಇಟ್ಟುಕೊಂಡು) ನಿಮ್ಮ ವ್ಯವಹಾರಗಳನ್ನು ನಡೆಸುವುದಕ್ಕೆ ನಿಮ್ಮ ಒಂದು ಲಿಕ್ವಿಡಿಟಿ ಪೊಸಿಷನ್ ಅನ್ನು ಮೈಯಿಂಟೇನ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ. ಇದು ಸರಿಯಲ್ಲ. ಸ್ಪೆಷಲ್ ಕಾಂಪೊನೆಂಟ್ ಪ್ಲಾನಿನ ಒಂದು ಉದಾಹರಣೆ ಕೊಟ್ಟು ಮುಂದೆ ಹೋಗುತ್ತೇನೆ. ಸ್ಪೆಶಲ್ ಕಾಂಪೊನೆಂಟ್ ಪ್ಲಾನ್ ಅನ್ನು ಜಿಲ್ಲಾ ಪರಿಷತ್ತಿನವರು ವಹಿಸಿಕೊಂಡಿದ್ದಾರೆ, ಇಲ್ಲಿ ಬೆಂಗಳೂರು ಅರ್ಬನ್ ಡಿಸ್ಟ್ರಿಕ್ಟ್‌ನಲ್ಲಿ ಜಿಲ್ಲಾಧಿಕಾರಿಗಳಿಗೆ ವಹಿಸಿದ್ದಾರೆ. ಅವರು ಮಾರ್ಚ್ ತಿಂಗಳ ೩೧ರವರೆಗೆ ಏನೇನು ಖರ್ಚು ಮಾಡಿಲ್ಲ. ೬೯ ಲಕ್ಷ ರೂಪಾಯಿಗಳನ್ನು ಬೆಂಗಳೂರು ಜಿಲ್ಲೆಗೆ ಅಲಾಟ್ ಮಾಡಿದ್ದಾರೆ. ಅದರಲ್ಲಿ ಅವರು ಕೇವಲ ೧೦-೧೨ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಹಾಗೆಯೇ ಉಳಿದಿದ್ದನ್ನು ಇಟ್ಟುಕೊಂಡಿದ್ದಾರೆ. ನಾವು ಬಲಾತ್ಕಾರ ಮಾಡಿ ಖರ್ಚು ಮಾಡಿಸುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಅವರು ಯಾವ ರೀತಿ ಖರ್ಚು ಮಾಡಿದ್ದಾರೋ ಅದು ಬೇರೆ ವಿಚಾರ. ಹಾಗೆಯೇ ಜಿಲ್ಲಾ ಪರಿಷತ್ತಿಗೆ ಸ್ಪೆಷಲ್ ಕಾಂಪೊನೆಂಟ್ ಪ್ಲಾನ್‌ನಲ್ಲಿ, ಅದರಲ್ಲೂ ಬಡವರಿಗೆ ಶೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ, ದೀನದಲಿತರಿಗೆ ಅವರ ಉದ್ಧಾರಕ್ಕೋಸ್ಕರ ಕೇಂದ್ರ ಸರ್ಕಾರದವರು ಏನು ಹಣವನ್ನು ಒದಗಿಸಿದ್ದಾರೆ ಅದನ್ನು ಬಳಸಿಕೊಳ್ಳುವುದಕ್ಕೆ ಹಿಂದೆ ಮುಂದೆ ಏತಕ್ಕೆ ನೋಡುತ್ತೀರಿ ? ಜಿಲ್ಲಾ ಪರಿಷತ್ತಿನವರು ಏನು ಮಾಡಿದ್ದಾರೆ ಕೊನೆಯವರೆಗೂ ತಮ್ಮ ಖರ್ಚಿಗೆ ಬಳಸಿಕೊಂಡು ೧೦೦ಕ್ಕೆ ೭೫ ಭಾಗದಷ್ಟು ಹಣವನ್ನು ಖರ್ಚು ಮಾಡದೆ ಲ್ಯಾಪ್ಸ್ ಮಾಡಿದ್ದಾರೆ. ಮಾಡದೇಹೋದರೆ ಇವರು ಇಟ್ಟುಕೊಂಡಿದ್ದಾರೆ. ಇದು ಇರತಕ್ಕ ಪರಿಸ್ಥಿತಿ ಟ್ರೈಬಲ್ಸ್ ಜನ ಇದ್ದಾರೆ. ಸ್ಪೆಷಲ್ ಕಾಂಪೊನೆಂಟ್ ಪ್ಲಾನ್‌ನಲ್ಲಿ ಅವರ ಉದ್ಧಾರಕ್ಕೋಸ್ಕರ ಕಾರ್ಯಕ್ರಮ ಹಾಕಿಕೊಂಡು ಕೆಲಸ ಮಾಡಬೇಕು ಎಂದು ಹೇಳಿದ್ದಾರೆ. ಅದೂ ಖರ್ಚು ಮಾಡಿಲ್ಲ. ಹಾಗೆಯೇ ಇಟ್ಟುಕೊಂಡಿದ್ದಾರೆ. ಇದು ಸರ್ವಥಾ ಸರಿಯಲ್ಲ ಎಂದು ಹೇಳುತ್ತಿದ್ದೇನೆ. ಕೇಂದ್ರ ಯೋಜನಾ ಕಾರ್ಯಕ್ರಮದಿಂದ ಈ ದೇಶಕ್ಕೆ ಅನುಕೂಲವಾಗಿಲ್ಲ. ನಮ್ಮ ಸ್ಥಿತಿಗತಿಗಳು ಎಷ್ಟು ಉದ್ಧಾರವಾಗಬೇಕಾಗಿತ್ತೋ ಅಷ್ಟು ಆಗಿಲ್ಲ. ಎಷ್ಟು ಸುಧಾರಿಸಬೇಕಿತ್ತೋ ಅಷ್ಟು ಸುಧಾರಿಸಿಲ್ಲ ಎಂದು ಪ್ರಧಾನಮಂತ್ರಿಗಳಾದ ರಾಜೀವ್‌ಗಾಂಧಿಯವರು ಮೊನ್ನೆ ತಾನೇ ೨೩-೪-೮೮ರಂದು ಮರೈಮಲೈ ನಗರದಲ್ಲಿ ನಡೆದ ಎ.ಐ.ಸಿ.ಸಿ. ಸಭೆಯಲ್ಲಿ ಏನು ಘೋಷಣೆ ಮಾಡಿದ್ದಾರೆ ಆ ಘೋಷಣೆ ಪ್ರಕಾರ ನೀತಿ ಬದಲಾವಣೆ ಆಗಿದೆ. ಇದುವರೆಗೂ ಮಾಡಿದ್ದಂಥ ಯೋಜನೆಗಳು ನಿಷ್ಪ್ರಯೋಜಕವಾಗಿವೆ. ಬಡವರ ಉದ್ಧಾರಕ್ಕೆ ಆಗಿಲ್ಲ, ಬಡತನ ಹೋಗಲಿಲ್ಲ, ಆದ್ದರಿಂದ ಡಿಸ್ಟ್ರಿಕ್ಟ್ ಪ್ಲಾನಿಂಗ್ ಇನ್ನು ಮೇಲೆ ಶುರು ಮಾಡುತ್ತೇವೆ ಎಂದು ಘೋಷಣೆ ಮಾಡಿದ್ದಾರೆ.

ಶ್ರೀ ಬಿ. ಸ್ವಾಮಿರಾವ್.—ಅಧ್ಯಕ್ಷರೇ, ಅವರಿಗೆ ಒಂದು ಸ್ಥಳ ಮಾಡಿಕೊಟ್ಟರೆ ಒಳ್ಳೆಯದು.

(ಗೊಂದಲ)

ಅಧ್ಯಕ್ಷರು.—ನೀವು ಇಲ್ಲಿ ಹೇಗೆ ಮಾಡುತ್ತೀರೋ ಹಾಗೆ ಅವರು ಅಲ್ಲಿ ಮಾಡುತ್ತಾರೆ ಬಿಡಿ.

ಶ್ರೀ ಬಿ. ಬಸವಲಿಂಗಪ್ಪ.—ಈ ರೀತಿ ಮಾಡಿದರೆ ಹೌಸ್ ಡಿಸ್ಆರ್ಡರ್ ಆಗುತ್ತದೆ. ಅವರು ಹೊರಗಡೆ ಹೋಗಲಿ. ಇದುವರೆಗೆ ಆಗಿರತಕ್ಕ ಯೋಜನೆಗಳ ಫಲಗಳ ಹಿನ್ನೆಲೆಯಲ್ಲಿ ಏನಾಗಿದೆ ಇವತ್ತು ಬೊಮ್ಮಾಯಿಯವರು ಆಗಿಂದಾಗ್ಗೆ ಹೇಳುತ್ತಿರುತ್ತಾರೆ ಪ್ರಧಾನ ಮಂತ್ರಿಗಳು ನಿರ್ಧಾರ ತೆಗೆದುಕೊಳ್ಳಬೇಕು. ಕೇಂದ್ರದಲ್ಲಿ ನಿರ್ಧಾರ ತೆಗೆದುಕೊಳ್ಳಬೇಕು ಎಂದು. ಅವರು ಡಿಸ್ಟ್ರಿಕ್ಟ್ ಮಟ್ಟದಲ್ಲಿ ಯೋಜನೆ ಮಾಡಿ ತಾಲ್ಲೂಕು, ಹೋಬಳಿ ಮತ್ತು ಗ್ರಾಮಗಳಲ್ಲಿ ಅನುಕೂಲ ಆಗತಕ್ಕ ರೀತಿಯಲ್ಲಿ ಮಾಡಿದ್ದಾರೆ. ಆದ್ದರಿಂದ ಈಗಿರತಕ್ಕ ಯೋಜನೆಗಳ ದೊಡ್ಡ ದೊಡ್ಡ ಪುಸ್ತಕಗಳು ಪ್ರಯೋಜನವಾಗುವುದಿಲ್ಲ ಎಂಬುದನ್ನು ನೋಡಬೇಕು. ಪ್ರಧಾನ ಮಂತ್ರಿಗಳು ೨೩–೪–೮೮ರಲ್ಲಿ ಮದ್ರಾಸಿನಲ್ಲಿ ಹೇಳಿದ್ದು ಬೇರೆ. ಅದಾದಮೇಲೆ ಮೊನ್ನೆ ೨೩ನೇ ತಾರೀಖು ಡೆಲ್ಲಿಯಲ್ಲಿ ಮತ್ತೆ ಹೇಳಿದ್ದಾರೆ.

"Prime Minister Rajiv Gandhi today gave broad direction to the Planning Commission on formulation of the Eigth Plan. He has asked it to make the Plan employment oriented, to lay emphasis on agriculture development and increased use of science and technology to raise production.

The full meeting of the Planning Commission presided over by Mr. Gandhi reviewed the framework in which the Plan would be formulated.

The Prime Minister told the Planning Commission that looking at higher growth rate of economy, emphasis should be laid on agricultural development. At the same time, the Plan should be employment-oriented, he said.

He stressed the need for providing more employment in the rural sector and working out a Plan which provided more employment in non-agriculture sector also.

About industry, Mr. Gandhi called for going ahead with rationalisation, modernisation and making the industry more competitive."

These are certain directions the Prime Minister is taking.

ಶ್ರೀ ಎಸ್. ಆರ್. ಬೊಮ್ಮಾಯಿ.—೪೦ ವರ್ಷ ಆದ ಮೇಲೆ ಮೊದಲನೇ ಸಲ ಹೇಳಿದ್ದಾರೆ ಅದನ್ನು ಸ್ವಾಗತ ಮಾಡುತ್ತೇನೆ. ಆದರೆ it is too late.

ಶ್ರೀ ಬಿ. ಬಸವಲಿಂಗಪ್ಪ.—ಈ ಹಿನ್ನೆಲೆಯಲ್ಲಿ ತಾವು ಏನು ಯೋಜನೆ ಮಾಡಬೇಕು...

ಶ್ರೀ ಕೆ. ಎಚ್. ಪಾಟೀಲ್.—೪೨ ವರ್ಷ ರಾಜೀವ್ ಗಾಂಧೀಯವರಿಗೆ ಆಗಲಿಲ್ಲ. ಅವರು ಈಗ ಬಂದಿದ್ದಾರೆ. ನಾವು ನೀವು ಕೂಡಿ ೪೦ ವರ್ಷ ಆಗಿದೆ. ಅವರು ತರುಣರಾದರೂ he has given a new outlook which you have to welcome.

ಶ್ರೀ ಎಸ್. ಆರ್. ಬೊಮ್ಮಾಯಿ.—ಅವರು ಬಂದು ಐದು ವರ್ಷವಾದಮೇಲೆ ಈ ಮಾತು ಬಂದಿದೆ. ಎನ್.ಡಿ.ಸಿ ಸಿ. ಮೀಟಿಂಗ್‌ನಲ್ಲೂ ಹೇಳಿದರು. The Prime Minister has, for the first time, said that Agriculture should be given Nationat

priority, The Government should have a political will to impliment it. ಮೊದಲನೇ ಸಲ ಹೇಳಿದ್ದಾರೆ, ಅದನ್ನು ನಾನು ಸ್ವಾಗತ ಮಾಡಿದ್ದೇನೆ.

ಯೋಜನಾ ಗಾತ್ರವನ್ನು ೯೧೭ ಕೋಟಿ ರೂಪಾಯಿಗಳಿಂದ ೭೬೯.೪೫ ಕೋಟಿ ರೂಪಾಯಿಗಳಿಗೆ ಇಳಿಸಿದ್ದೀರಿ. ಯಾವ್ಯಾವ ಬಾಬುಗಳ ಮೇಲೆ ಕಡಿಮೆ ಮಾಡಿದ್ದೀರಿ ಎಂಬುದಾಗಿ ಹೇಳುತ್ತೇನೆ. ಇವರು ಏನು ಹೇಳಿದ್ದಾರೆಂದರೆ, ಕಡಿಮೆ ಮಾಡಲ್ಪಟ್ಟ ಬಾಬುಗಳು ನೀರಾವರಿಗಾಗಿ ೨೩೭,೮೮ ಕೋಟಿ ರೂಪಾಯಿಗಳಿದ್ದುದನ್ನು ೧೪೧.೬೭ ಕೋಟಿ ರೂಪಾಯಿಗಳಿಗೆ ಇಳಿಸಿದ್ದಾರೆ, ಅಂದರೆ ಇದರಲ್ಲೇ ೧೦೦ ಕೋಟಿ ರೂಪಾಯಿಗಳು ಹೋಯಿತು. ಅದೇ ರೀತಿ ವಿದ್ಯುಚ್ಛಕ್ತಿ ಬಾಬಿನಲ್ಲಿ ೨೦೭,೮೦ ಕೋಟಿ ರೂಪಾಯಿಗಳು ಇದ್ದುದನ್ನು ೧೬೪.೩೦ ಕೋಟಿ ರೂಪಾಯಿಗಳಿಗೆ ಇಳಿಸಿದ್ದಾರೆ. ನಂತರ ಸಾಮಾಜಿಕ ಸೇವೆಗಳ ಬಾಬಿನಲ್ಲಿ ೨೩೧.೨೨ ಕೋಟಿ ರೂಪಾಯಿಗಳು ಇದ್ದುದನ್ನು ೨೧೪.೪೫ ಕೋಟಿ ರೂಪಾಯಿಗಳಿಗೆ ಇಳಿಸಿದ್ದಾರೆ. ಕನಿಷ್ಟ ಅಗತ್ಯ ಕಾರ್ಯಕ್ರಮಗಳ ಬಾಬಿನಲ್ಲಿ ಅಂದರೆ ಮಿನಿಮಮ್ ನೀಡ್ಸ್ ಪ್ರೋಗ್ರಾಂ ೧೫೧.೬೩ ಕೋಟಿ ರೂಪಾಯಿಗಳು ಇದ್ದುದನ್ನು ೧೦೧.೧೭ ಕೋಟಿ ರೂಪಾಯಿಗಳಿಗೆ ಇಳಿಸಿದ್ದಾರೆ. ಇದರ ಅರ್ಥ ಏನಾಗುತ್ತದೆ? ಯಾವ ಅವಶ್ಯಕತೆಗಳಿಗೋಸ್ಕರ ಈ ರಾಜ್ಯ ಇದೆಯೋ ಯಾವ ಒಂದು ಅವಶ್ಯಕತೆಗಳಿಗೋಸ್ಕರ ಈ ಸದನ ಹಗಲಿರುಳು ಶ್ರೀಮಾನ್ ರೇವಣಸಿದ್ದಯ್ಯನವರಾದಿಯಾಗಿ ಬಡವರಿಗೋಸ್ಕರ, ರೈತರಿಗೋಸ್ಕರ ಶ್ರಮಿಸುತ್ತಿದೆಯೋ ಅಂತಹ ಕ್ಷೇತ್ರಕ್ಕೆ ಹಣವನ್ನು ಕಡಿಮೆ ಮಾಡಿ, ಬೇರೆ ಅನವಶ್ಯಕವಾದ ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್‌ಗಾಗಿ ಪಾಪ್ಯುಲಿಸ್ಟ್ ಪ್ರೋಗ್ರಾಂಗಳ ಬಗ್ಗೆ ಆ ರೀತಿಯ ಕಾರ್ಯಕ್ರಮಗಳ ಬಗ್ಗೆ ಗಮನಹರಿಸಿದರೆ ಯಾವ ದೇಶ ಉದ್ಧಾರವಾಗುತ್ತದೆ? ನಿಮ್ಮನ್ನು ಸೀರೆ ಕೊಡಿ ಅಂತ ಕೇಳಿದವರು ಯಾರು? ತಾಳಿ ಕೊಡಿ ಅಂತ ಕೇಳಿದವರು ಯಾರು? ಹಗಲೆಲ್ಲಾ ಎದ್ದದ್ದು ಏಕೆ ಕುಣಿಯುತ್ತೀರಿ? ಡಾ ಡಿ. ವಿ. ಗುಂಡಪ್ಪನವರ ಮಂಕುತಿಮ್ಮನ ಕಗ್ಗವನ್ನು ನೀವೆಲ್ಲಾ ಓದಿರಬಹುದು. ಎದ್ದದ್ದು ಬೀಳುತಿಹೆ-ಗುದ್ದಾಡಿ ಸೋಲುತಿಹೆ ಎಂಬ ಗಾದೆಯಂತೆ ಈ ರೀತಿ ಏಕೆ ಮಾಡುತ್ತಿದ್ದೀರಿ? ಅಂದರೆ ಏನಾದರೂ ಹೇಳಿಬಿಟ್ಟರೆ ಜನ ಒಂದು ಸಾರಿ ಮೋಸ ಹೋಗಬಹುದು, ಆದರೆ ಕೊಟ್ಟಂತಹ ವಾಗ್ದಾನವನ್ನು ಕಾರ್ಯಗತ ಮಾಡದಿದ್ದರೆ ಅವರು ಮತ್ತೆ ನಿಮ್ಮನ್ನು ನಂಬುವುದೇ ಇಲ್ಲ. ಮಾನ್ಯ ಖರ್ಗೆಯವರು ತಮ್ಮ ಭಾಷಣದಲ್ಲಿ ಹೇಳಿದ ಪ್ರಕಾರ ನೀವು ಇದುವರೆವಿಗೂ ೨ ಸಾವಿರ ವಾಗ್ದಾನಗಳನ್ನು ಕೊಟ್ಟಿದ್ದೀರಿ ಅದರಲ್ಲಿ ಎಷ್ಟನ್ನು ಅನುಷ್ಠಾನಕ್ಕೆ ತಂದಿದ್ದೀರಿ ಎಷ್ಟನ್ನು ಕಾರ್ಯಗತ ಮಾಡಿದ್ದೀರಿ ಎಂಬ ಪ್ರಶ್ನೆ ಬರುತ್ತದೆ. ಸುಮ್ಮನೆ ಇಷ್ಟೊಂದು ಏಕೆ ಹೇಳುತ್ತೀರಿ? ಹೇಳಿದ್ದನ್ನು ಕಾರ್ಯಗತ ಮಾಡಿ. ಆಗ ನೀವೂ ಉಳಿದುಕೊಳ್ಳುತ್ತೀರಿ. ನಿಮ್ಮ ಪಾರ್ಟಿಯೂ ಉಳಿದುಕೊಳ್ಳುತ್ತದೆ ಈಗಿನ ಸನ್ನಿವೇಶದಲ್ಲಿ ನಿಮ್ಮ ಪಾರ್ಟಿ ಉಳಿಯುವ ಹಾಗೇ ಇಲ್ಲ. ನಿಮ್ಮ ಬಾಯಿಂದಲೇ ನಿಮ್ಮನ್ನು ನೀವೇ ಮುಗಿಸಿಕೊಳ್ಳುತ್ತಿದ್ದೀರಿ. ಆಮೇಲೆ ಮಿನಿಮಮ್ ನೀಡ್ಸ್ ಪ್ರೋಗ್ರಾಂನಲ್ಲಿ ಕಡಿಮೆ ಮಾಡಿದ್ದೀರಲ್ಲಾ ಇದರ ಉದ್ದೇಶ ಏನು ? ಗ್ರಾಮೀಣ ವಿದ್ಯುಚ್ಛಕ್ತಿ, ಗ್ರಾಮೀಣ ರಸ್ತೆಗಳು, ಪ್ರಾಥಮಿಕ ಶಿಕ್ಷಣ, ವಯಸ್ಕರ ಶಿಕ್ಷಣ ಗ್ರಾಮೀಣ ಆರೋಗ್ಯ, ಗ್ರಾಮೀಣ ನೈರ್ಮಲ್ಯ ಸುಧಾರಣೆ. ಗ್ರಾಮೀಣ ನೀರು ಸರಬರಾಜು ಯೋಜನೆ, ಕೊಳಚೆ ಪ್ರದೇಶ ಮುಂತಾದ ೧೧ ಬಾಬುಗಳು ಬಡವರಿಗೋಸ್ಕರ ಇರುವಂತಹವುಗಳು ಅವರಲ್ಲಿ ೧೮೧.೬೩ ಕೋಟಿ ರೂಪಾಯಿಗಳು ಇದ್ದುದನ್ನು ೧೦೧.೧೭ ಕೋಟಿ ರೂಪಾಯಿಗಳಿಗೆ ಇಳಿಸಿದ್ದೀರಿ. ನೀವು ಯಾರಿಗೋಸ್ಕರ ರಾಜ್ಯಭಾರ ಮಾಡುತ್ತಿದ್ದೀರಿ ಎಂಬುದು ನನಗೆ ಅರ್ಥವಾಗಲಿಲ್ಲ.

ಅಧ್ಯಕ್ಷರು.—ಬೇಗ ಮುಗಿಸಿ.

ಶ್ರೀ ಬಿ. ಬಸವಲಿಂಗಪ್ಪ.—ಆಯಿತು. ನೀರಾವರಿ ಬಗ್ಗೆ ಒಂದೆರಡು ವಿಚಾರಗಳನ್ನು ಹೇಳಿ ನಂತರ ಕಂದಾಯ ಇಲಾಖೆಯ ಬಗ್ಗೆ ಒಂದೇ ವಿಷಯವನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ ನೀರಾವರಿ ಯೋಜನೆಯ ಬಗ್ಗೆ ಮಾನ್ಯ ಸದಸ್ಯರಾದ ಶ್ರೀಮಾನ್ ಖರ್ಗೆಯವರು ಹಾಗೂ ಶ್ರೀಮಾನ್ ಕೆ. ಎಚ್. ಶ್ರೀನಿವಾಸ್‌ರವರು ಬಹು ವಿಸ್ತಾರವಾಗಿ ಹಾಗೂ ಬಹಳ ಚೆನ್ನಾಗಿ ಹೇಳಿದ್ದಾರೆ, ಅವರ ಭಾಷಣವನ್ನು ನಾನು ಕೇಳಿದ್ದೇನೆ. ಅವರು ಹೇಳದೇ ಇರತಕ್ಕ ಒಂದು ಪಾಯಿಂಟ್‌ನ್ನು ಆ ಇಲಾಖೆಯ ಬಗ್ಗೆ ನಾನು ಹೇಳಿ ರೆವಿನ್ಯೂ ಇಲಾಖೆಯ ಬಗ್ಗೆ ಒಂದೆರಡು ವಿಚಾರಗಳನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಕೃಷ್ಣಾ ನದಿ ಇದೆ. ಕೃಷ್ಣಾ ನದಿ ಹೊಳೆಯಾಗಿ ನಮ್ಮ ರಾಜ್ಯದಲ್ಲಿ ಹರಿಯುತ್ತಿದೆ. ಶ್ರೀಮಾನ್ ಎಸ್. ಟಿ. ರಾಮರಾವ್‌ರವರು ಆ ರಾಜ್ಯದ ಮುಖ್ಯ ಮಂತ್ರಿಗಳಾಗಿ ಕೆಲಸ ಮಾಡಿಕೊಂಡು

ಅಣೆಕಟ್ಟನ್ನು ಕಟ್ಟುವಂತಹ ಕೆಲಸ ಮಾಡುತ್ತಿದ್ದಾರೆ. ಹಿಂದೆ ನಾಗಾರ್ಜುನ ಸಾಗರವನ್ನು ಕಟ್ಟುವಂತಹ ಕಾಲದಲ್ಲೂ ಕೂಡ ಆ ರಾಜ್ಯದ ಯೋಜನೆಯಲ್ಲಿ ಒದಗಿಸಿದ ಎಲ್ಲಾ ಇಲಾಖೆಗಳ ಹಣವನ್ನು ತಂದು ಅದಕ್ಕೆ ಹಾಕಿ ಅದನ್ನು ಕಟ್ಟಿಬಿಟ್ಟರು. ಅದೇ ರೀತಿಯಾಗಿ ಶ್ರೀಮಾನ್ ಎನ್. ಟಿ. ರಾಮರಾವ್ ಅವರು ಜನರ ಅಭಿಪ್ರಾಯವನ್ನು ರೂಢಿಸಿಕೊಳ್ಳುವುದಕ್ಕೋಸ್ಕರ ಎಲ್ಲಾ ಹಣವನ್ನು ಹಾಕಿ ಅಲ್ಲಿ ತೆಲುಗು ಗಂಗಾ ಯೋಜನೆಯನ್ನು ಪೂರೈಸುತ್ತಿದ್ದಾರೆ. ನಾವು ಏನು ಮಾಡಬೇಕು? ನಾವು ಜಾಣರಾಗದೇಹೋದರೆ ಹೇಗೆ? ನಾವು ಯಾವ ರೀತಿ ಕರ್ನಾಟಕ ರಾಜ್ಯದ ಹಿತವನ್ನು ಕಾಪಾಡಬೇಕು ಎಂಬುದರ ಬಗ್ಗೆ ನಾನು ಸಲಹೆ ಮಾಡುತ್ತಿದ್ದೇನೆ. ಕೃಷ್ಣ ನದಿ ಎಷ್ಟು ದೂರ ಹರಿಯುತ್ತದೋ ಅಷ್ಟು ದೂರವೂ ಕೂಡ ಪಿಕಪ್ಸ್ ಹಾಕಬೇಕು. ಮಳೆಗಾಲದಲ್ಲಿ ನೀರು ಹರಿದುಹೋಗುವುದು ಹೋಗಲಿ ೫ ಅಡಿಯ, ೪ ಅಡಿಯ ಪಿಕಪ್ಸ್‌ಗಳನ್ನು ಮೈಲಿಗೆ ಒಂದರಂತೆ ಹಾಕಿದರೆ ಈ ಜನರಿಗೂ ಉಪಯೋಗವಾಗುತ್ತದೆ. ಅಲ್ಲಿ ಕುಡಿಯತಕ್ಕ ನೀರನ್ನು ಕುಡಿಯುವುದಕ್ಕೆ ಅನುಕೂಲವಾಗುತ್ತದೆ, ನೀರಾವರಿಗೂ ಅನುಕೂಲವಾಗುತ್ತದೆ. ಇದರಿಂದ ನಮ್ಮ ಕರ್ನಾಟಕ ತಣ್ಣಗೆ ಇರುತ್ತದೆ, ಸಂಪದ್ಯುಕ್ತವಾಗುತ್ತದೆ. ಎಲ್ಲರಿಗೂ ಕೂಡಾ ಸಂತೋಷವಾಗುತ್ತದೆ. ಏಕೆ ಈ ಕಡೆ ಗಮನಹರಿಸುವುದಿಲ್ಲ? ಬರೀ ಕೃಷ್ಣಾ ನದಿ ದಂಡೆಯಲ್ಲಿರುವವರಿಗೆ ಆರ್ಬಿಟ್ರೇಷನ್ ಮಾಡಿ ದುಡ್ಡು ಕೊಡುವುದೇ? ಇದನ್ನೂ ನಾವೇ ಹೇಳಬೇಕೇ ಈ ಬಗ್ಗೆ ಬುದ್ಧಿ ಹರಿಯುವುದಿಲ್ಲವೇ? ತಮ್ಮ ಬುದ್ಧಿ ಇತ್ತ ಕಡೆಗೆ ಹರಿಯುವುದಿಲ್ಲವೇ? ಇದನ್ನೆಲ್ಲಾ ಕ್ಯಾಬಿನೆಟ್‌ನಲ್ಲಿ ಯೋಜನೆ ಮಾಡುವುದಿಲ್ಲವೇ? ದಯಮಾಡಿ ಈ ಸಲಹೆಯನ್ನು ತೆಗೆದುಕೊಳ್ಳಿ. ಬಹಳ ಪರಿಣಾಮಕಾರಿಯಾದ ಸಲಹೆ ಕೊಟ್ಟಿದ್ದೇನೆ. ಕೃಷ್ಣನದಿ ಎಲ್ಲಿಯವರೆಗೆ ಹರಿಯುತ್ತದೆಯೋ ಅಲ್ಲಿಯವರೆಗೆ ಪಿಕಪ್ ಮಾಡಿ. ಬಚಾವತ್ ಅವಾರ್ಡ್ ವಿಷಯ ಬೇರೆ. ಎಷ್ಟು ನೀರನ್ನು ನಾವು ರೂಢಿಸಿಕೊಳ್ಳಬಹುದೋ ಅಷ್ಟನ್ನೂ ಉಪಯೋಗಿಸಿಕೊಳ್ಳೋಣ. ಈ ಕೆಲಸವನ್ನು ನೀವು ಮಾಡಿ ಶ್ರೀಮಾನ್ ರಾಮರಾವ್ ಅವರು ಅವರ ಕೆಲಸ ಅವರು ಮಾಡುತ್ತಾರೆ. ನಾವು ನಮ್ಮ ಕೆಲಸವನ್ನು ಮಾಡೋಣ. ಹಿಂದೆ ತಮಿಳುನಾಡಿನವರು ಕಾವೇರಿ ನದಿಗೆ ಅಣೆಕಟ್ಟನ್ನು ಹಾಕಿದರು. ಕೆಳಭಾಗದವರೆಗೂ ಹೋಗಿ ಎಷ್ಟು ನೀರಾವರಿ ಮಾಡಬೇಕೋ ಅದನ್ನು ಮಾಡಿ ಮುಗಿಸುತ್ತಿದ್ದಾರೆ. ನೀರು ಸಾಲದಿದ್ದಾಗ ಮಾನ್ಯ ರಾಮಕೃಷ್ಣ ಹೆಗ್ಡೆಯವರನ್ನು ಕರೆದು ೧೦ ಟಿಎಂಸಿ ಅಡಿ ನೀರು ಬಿಡಿ ಸ್ವಾಮಿ, ಬೆಳೆ ಬೆಳೆದು ನಿಂತಿದೆ, ಅದು ಹಾಳಾಗುತ್ತದೆ ಎಂದು ಹೇಳುತ್ತಾರೆ. ಕರ್ನಾಟಕ ಹಾಳಾಗಿ ಹೋದರೆ ಏನು ಬಿಟ್ಟರೆ ಏನು, ಶಹಭಾಸ್‌ಗಿರಿ ಸ್ಟೇಟ್‌ಮೆಂಟ್ ಕೊಡುವುದು ನೀರು ಬಿಡುವುದು. ಹತ್ತಾರು ವರ್ಷಗಳಿಂದ ಇದು ನಡೆಯುತ್ತಿದೆ. ಎಲ್ಲಿಯವರೆಗೆ ಇದೇ ರೀತಿಯಿಂದ ಸ್ವೇಚ್ಛೆ ರಾಜ್ಯಭಾರ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಿ?

ಶ್ರೀ ಜೆ. ಎಚ್. ಪಟೇಲ್.—ಪಿಕಪ್ ಎಂದರೆ ತಮ್ಮ ಕಲ್ಪನೆ ಏನು ?

ಶ್ರೀ ಬಿ. ಬಸವಲಿಂಗಪ್ಪ.—ಬ್ಯಾರೇಜ್. I am sorry; I stand corrected. ಎರಡನೆಯದಾಗಿ, ದೊಡ್ಡ ದೊಡ್ಡ ಅಣೆಕಟ್ಟುಗಳನ್ನು ನಾವು ಕಟ್ಟಿದ್ದೇವೆ. ತುಂಗಭದ್ರಾ ಅಣೆಕಟ್ಟನ್ನು, ಕಾವೇರಿ ಅಣೆಕಟ್ಟನ್ನು ಹೇಮಾವತಿ ಅಣೆಕಟ್ಟನ್ನು ಕಟ್ಟಿದ್ದೇವೆ. ನುಗು ಪ್ರಾಜೆಕ್ಟ್ ಆಗಿದೆ. ಈ ಅಣೆಕಟ್ಟುಗಳಿಗೆ ಮಣ್ಣು ನದೀ ಮುಖಾಂತರ ಬಂದು ನಿಲ್ಲುತ್ತದೆ. ತುಂಗಭದ್ರಾ ನದಿಯಲ್ಲಿ ಇದು ಬಹಳ ಬೇಗ ತುಂಬುತ್ತದೆ. ಈ ಸಿಲ್ಟೇಜನ್ನು ತೆಗೆಯುವುದಕ್ಕೆ ಏನು ಪ್ರಯತ್ನವನ್ನು ನೀವು ಮಾಡಿದ್ದೀರಿ ಎಂದು ಕೇಳುತ್ತೇನೆ, ಹಿಂದೆ ನಾವು ಈ ಬಗ್ಗೆ ಯೋಚನೆ ಮಾಡಿದ್ದೇವು, ಈ ಬಗ್ಗೆ ಮಾನ್ಯ ಬೊಮ್ಮಾಯಿಯವರು ಯೋಚನೆ ಮಾಡಬೇಕು. ನದಿಯಲ್ಲಿ ಬ್ಯಾರೇಜ್‌ಗಳನ್ನು ಕಟ್ಟಿದರೆ ಅಲ್ಲಿಂದ ಇಲ್ಲಿಗೆ ಹರಿದು ಬರತಕ್ಕ ಮೆಕ್ಕಲು ಮಣ್ಣನ್ನು ಅವು ತಡೆಯುತ್ತವೆ. ಆ ಮೂಲಕ ಬರೀ ನೀರು ಅಣೆಕಟ್ಟಿಗೆ ಬರುತ್ತದೆ. ಇದನ್ನು ಮಾನ್ಯ ಸಚಿವರು ಯೋಚನೆ ಮಾಡಬೇಕು. ಮತ್ತೆ ನೀವು ಏನು ಕೆರೆಗಳನ್ನು ಕಟ್ಟಿದ್ದೀರಿ, ಅವುಗಳ ಸುತ್ತಮುತ್ತ ೨-೩-೪ ಲೈನ್ ಸಾಲು ಮರಗಳನ್ನು ಹಾಕತಕ್ಕದ್ದು ಒಳ್ಳೆಯದೆಂದು ಹೇಳುತ್ತೇನೆ. ಈ ರೀತಿ ೩-೪ ಸಾಲು ಮರಗಳನ್ನು ಹಾಕಿದರೆ ಸಿಲ್ಟೇಜ್ ಮೆಕ್ಕಲು ಮಣ್ಣನ್ನು ಅವುಗಳು ತಡೆದು ಬಿಡುತ್ತವೆ. ಕೆ.ಆರ್.ಎಸ್. ಬಗ್ಗೆ ಒಂದು ಯೋಜನೆಯನ್ನು ತಯಾರು ಮಾಡಿ ಅದು ತಮ್ಮ ಮುಂದಿದೆ. ಅದನ್ನು ಕಾರ್ಯಗತ ಮಾಡಿದರೆ ಬಹಳ ಒಳ್ಳೆಯದು ಎಂದು ನಾನು ಸಲಹೆ ಮಾಡುತ್ತಿದ್ದೇನೆ.

ಲ್ಯಾಂಡ್ ರಿಫಾರಮ್ಸ್ ಅನ್ನು ಏತಕ್ಕೋಸ್ಕರ ಮಾಡಿದ್ದೇವೆ, ಅದನ್ನು ಏತಕ್ಕೋಸ್ಕರ ಕೈಗೆ ತೆಗೆದುಕೊಂಡಿದ್ದೇವೆ ಎನ್ನತಕ್ಕ ಪ್ರಶ್ನೆ ನಮ್ಮ ಮುಂದಿದೆ. ಕಾಂಗ್ರೆಸ್ ಸರ್ಕಾರದಲ್ಲಿ ಎಲ್ಲರೂ ಹೋರಾಟಗಾರರು ಇದ್ದರು. ಭೂ ಸುಧಾರಣಾ ಸಮಸ್ಯೆ ಇವತ್ತಿನದಲ್ಲ ನೂರಾರು ವರ್ಷಗಳಿಂದ ಇರತಕ್ಕ ಸಮಸ್ಯೆ. ಭೂ ಸುಧಾರಣಾ ಕಾನೂನು ಜಾರಿಗೆ ತರಬೇಕೆಂದು ಏತಕ್ಕೆ ಮಾಡಿದರು ಅಂದರೆ, ಸಾವಿರಾರು ಎಕರೆ ಭೂಮಿಯನ್ನು ಹೊಂದಿರತಕ್ಕ ಭೂ ಮಾಲೀಕರು ಆ ಭೂಮಿಯನ್ನು ಆಬಾದು ಮಾಡುವುದಕ್ಕಾಗುವುದಿಲ್ಲ ಎಂಬ ಉದ್ದೇಶದಿಂದ ಸ್ವತಃ ಯಾರು ಉಳುಮೆ ಮಾಡುತ್ತಾರೆ ಅವರಿಗೆ ಭೂಮಿಯನ್ನು ಕೊಡಬೇಕೆಂದು ಸ್ವಾತಂತ್ರ್ಯದ ಪೂರ್ವದಲ್ಲಿಯೇ ಹೋರಾಟ ಪ್ರಾರಂಭವಾಯಿತು. ಎರಡನೆಯದಾಗಿ, ಭೂಮಿಯಲ್ಲಿ ಜಾಸ್ತಿ ಬೆಳೆಯಬೇಕು, ಭೂಮಿಯಲ್ಲಿ ಯಾವುದೇ ಬೆಳೆ ಬೆಳೆಯಲಿ ಯಾರು ಅಲ್ಲಿ ಕೆಲಸ ಮಾಡುತ್ತಾರೆ ಅಂತಹವರಿಗೆ ಭೂಮಿಯನ್ನು ಕೊಡಬೇಕೆಂದು ಭೂ ಸುಧಾರಣಾ ಕಾನೂನು ಆಯಿತು. ೧೯೬೧ನೇ ಇಸವಿಯ ಹೋಲ್ಡಿಂಗ್ಸ್ ಆದರೆ ಇವತ್ತಿನವರೆಗೆ ಇರತಕ್ಕ ಜನಗಣತಿಯ ಪ್ರಕಾರ 2.4% of the landlords own 24% of the total extent of land. I think the total extent land in Karnataka is 3 Crores acres. I think I am correct. When I was the Revenue Minister, it was 3 crore acres out of 3 crore acres of land, 24% of the extent is owned by 2.4% of the people. Now, inspite of the Land Reforms, 26.3% of the totalextent of land, i.e., 1 crore 26 acres is owned by 74.5% of the people, That means lesser extent of the land is owned by large number of people and larger extent of the land is owned by less number of people. This is What you have done inspite of the Land Reforms? The second thing is about the distribution of surplus land under the Land Reforms Act. I know for certainly that in 1931 census, it was 15 lakhs acres of land which was surplus. I think you can send for the files. We have done the census of ownership by the tenants. According to this 15 lakhs acres of land is surplus land. What have you done? We have tried to distribute the land under the Land Reforms Act. ಭೂಸುಧಾರಣಾ ಕಾಯಿದೆ ಪ್ರಕಾರ ಸರ್‌ಪ್ಲಸ್ ಲ್ಯಾಂಡನ್ನು ಯಾರ‍್ಯಾರಿಗೆ ಕೊಡಬೇಕೆಂದು ನಿಯಮಗಳನ್ನು ಮಾಡಿದ್ದೇವೆ ಅದನ್ನು ಹಂಚಲಿಕ್ಕೆ ಪ್ರಾರಂಭ ಮಾಡಿದ್ದೇವೆ. ನೀವು ಎಷ್ಟು ಹಂಚಿದ್ದೀರಿ? ಏನು ಹಂಚಿಲ್ಲ. ತಾವು ಅಧಿಕಾರಕ್ಕೆ ಬಂದಮೇಲೆ ಬಿಜಾಪುರ ಜಿಲ್ಲೆಯಲ್ಲಿ ೫ ಸಾವಿರ ೧೦ ಸಾವಿರ ಎಕರೆ ಭೂಮಿ ಇರತಕ್ಕ ಯಜಮಾನರು ಯಜಮಾನಿಕೆ ಇರತಕ್ಕ ಜನರು ಇದ್ದಾರೆ.

SRI S.R. BOMMAI.—By 1983, most of the applications for distribution of surplus land were disposed off Decisions have been taken much earlier. ಸರ್‌ಪ್ಲಸ್ ಲ್ಯಾಂಡ್‌ಗೆ ಬಂದಿದ್ದ ಅರ್ಜಿಗಳೆಲ್ಲಾ ೧೯೭೪ರಲ್ಲಿಯೇ ಮುಗಿದಿತ್ತು. ಸ್ವಲ್ಪ ಉಳಿದಿದ್ದನ್ನು ಹಂಚಿದ್ದೇವೆ, ಕೆಲವು ಕೋರ್ಟಿನಲ್ಲಿವೆ. ಅವುಗಳ ಅಂಕಿಸಂಖ್ಯೆಯನ್ನು ಕೊಟ್ಟಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.—ಈಗ ಮಾನ್ಯ ಬೊಮ್ಮಾಯಿಯವರು ನನ್ನ ಸ್ನೇಹಿತರು. ಅವರಿಗೆ ನಾನು ಹೇಳುತ್ತೇನೆ ಏನೆಂದರೆ ನಾನು ಅವರಿಗಿಂತ ಮುಂಚೆ ಬಂದವನು. ಈಗ ನೀವು ಬಂದಿರಿ. ನಾವು ಹೇಳುವುದನ್ನು ಕಿವಿಯಿಂದ ಕೇಳಿ. ಮಾಡುವುದಕ್ಕೆ ಸಾಧ್ಯ ಇದ್ದರೆ, ನ್ಯಾಯವಾಗಿದ್ದರೆ ಮಾಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾವು ಬಂದ ಮೇಲೆ ಹಂಚಿಲ್ಲವೆಂದು ಹೇಳಿದ್ದೀರಿ. ಡಿಟರ್‌ಮೈನ್ ಆಗಿ ಎಷ್ಟು ಲಕ್ಷ ಸರ್‌ಪ್ಲಸ್ ಲ್ಯಾಂಡ್ ಇದೆ ಎನ್ನುವುದು ೮೩ರಲ್ಲಿ ನಿರ್ಣಯ ಆಗಿದೆ. ಈಗ ಉಳಿದಿರುವುದನ್ನು ಹಂಚತಕ್ಕ ವಿಚಾರ ಇದೆ. ಮೊದಲು ಪ್ರಾರಂಭ ಮಾಡಿದ್ದು ಅಲ್ಲ. ಲ್ಯಾಂಡ್ ರಿಫಾರ್ಮ್ಸ್ ಆ್ಯಕ್ಟ್ ಬಂದ ಮೇಲೆ ಕೂಡ ಯಾವ ರೀತಿ ಜಮೀನನ್ನು ಉಳಿಸಿಕೊಂಡಿದ್ದಾರೆ ಎನ್ನುವುದು

ಇದು ಮೊದಲಿನಿಂದಲೂ ಇದೆ. ಇವತ್ತು ನಿನ್ನೆ ಅಲ್ಲ. ಹಿಂದಿನಿಂದಲೂ How they escape the clutches of the law. ಅದು ಇದೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಇದರೊಳಗೆ ಏನು ಆಗಿದೆ ಎಂದರೆ ನಾವು ಸರ್‌ಪ್ಲಸ್ ಲ್ಯಾಂಡ್ ಹಂಚಿದ್ದು ಒಂದು ಕಡೆ ಇರಲಿ. ನೀವು ಬಂದ ಮೇಲೆ ಸರ್‌ಪ್ಲಸ್ ಲ್ಯಾಂಡ್ ಏನು ಹಂಚಿದ್ದೀರಿ ಅದು ಒಂದು ಕಡೆ ಇರಲಿ. ನಾನೇನೂ ಪರ ವಿರೋಧವಾಗಿ ಮಾತನಾಡುತ್ತಿಲ್ಲ. ಆದರೆ ನಾನು ಹೇಳುತ್ತಿರುವುದು ಏನೆಂದರೆ ಈ ಸರ್ಕಾರಗಳು ಏನಿದೆ, ಈ ಸರ್ಕಾರ ಅಥವಾ ಯಾವುದೇ ಸರ್ಕಾರವಾಗಲಿ ಲ್ಯಾಂಡ್‌ಗೆ ಯಾವನು ಓನರ್ ಇದ್ದಾನೆ ಅದು ಅವನ ಪರವಾಗಿದೆ, ಈ ಸರ್ಕಾರ ಅಂತೂ ಲ್ಯಾಂಡ್ ಓನರ್ ಪರವೇ ಆಗಿದೆ. ಸರ್‌ಪ್ಲಸ್ ಲ್ಯಾಂಡ್ ಏನಿದೆ, ಐವತ್ತು ಸಾವಿರ ಎಕರೆ ಜಮೀನು ಹಂಚಿರುವುದನ್ನು ನಿಮ್ಮ ಆಫೀಸರ್‌ಗಳನ್ನು ಕರೆದು ವಿವರಗಳನ್ನು ತರಿಸಿ ನೋಡಿ. ಅಲ್ಲಿ ಹ್ಯಾಗೆ ಹಂಚಿಕೆ ಆಯಿತು ? ಬೇನಾಮಿ ಟ್ರಾನ್ಸ್‌ಕ್ಷನ್ಸ್ ಎಷ್ಟು ಆಯಿತು ? ಅವರವರ ನಾಯಿನರಿಗಳಿಗೆ ಎಷ್ಟು ಹಂಚಿದ್ದಾರೆ. ಅವರ ಸಂಬಂಧಿಕರಿಗೆ ಎಷ್ಟು ಹಂಚಿದ್ದಾರೆ. ಅದನ್ನೆಲ್ಲಾ ನೀವು ತನಿಖೆ ಮಾಡ ಬೇಕಾಗುತ್ತದೆ. ಅದೆಲ್ಲಾ ಆಯಿತು, ಕಾನೂನು ಆಯಿತು ಎಂದು ಹೇಳುವುದಕ್ಕೆ ಆಗುವುದಿಲ್ಲ. ತನಿಖೆ ಯಂತೂ ಆಗಬೇಕು. ಬೇನಾಮಿ ಹೆಸರಿನಲ್ಲಿ ಎಷ್ಟು ಇಟ್ಟುಕೊಂಡಿದ್ದಾರೆ ಎನ್ನುವುದನ್ನು ನೀವು ನೋಡಬೇಕು ಮತ್ತು ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಮತ್ತೆ ಇವತ್ತು ಏನಾಗಿದೆ ಎಂದರೆ ಯಾರ್ಯಾರು ಜಮೀನ್ದಾರರು ಇದ್ದರು ಪುನಃ ಅವರೇ ಸ್ವಾಧೀನಕ್ಕೆ ತೆಗೆದುಕೊಂಡುಬಿಟ್ಟರು. ಉಳಿದು ದೆಲ್ಲ ಹೈಕೋರ್ಟಿನಲ್ಲಿ ಇವೆ. ಆಂಧ್ರಪ್ರದೇಶದಲ್ಲಿ ಏನು ಆಗಿದೆ ಎಂದರೆ ಅಲ್ಲಿ ಒಂದು ಕೋಟಿಗೂ ಹೆಚ್ಚು ಸರ್‌ಪ್ಲಸ್ ಲ್ಯಾಂಡ್ ಅಂತ ಡಿಕ್ಲೇರ್ ಮಾಡಿದರು. ಇವತ್ತಿಗೂ ಯಾರಿಗೂ ಒಂದು ಎಕರೆ ಜಮೀನನ್ನು ಹಂಚಿಲ್ಲ. ಕಾರಣ ಏನು ಎಂದರೆ ಹೈಕೋರ್ಟಿನಿಂದ ಸ್ಟೇ ತೆಗೆದುಕೊಂಡುಬಿಟ್ಟರು. ಅವರಿಗೆ ಅನುಕೂಲವಾಗಿರತಕ್ಕಂಥ ಜಡ್ಜ್‌ಗಳನ್ನು ನಾಮಕರಣ ಮಾಡಿಕೊಂಡು ಸ್ಟೇ ತೆಗೆದುಕೊಂಡು ಇವತ್ತಿನವರೆಗೂ ಭೂಸುಧಾರಣೆ ಕಾನೂನನ್ನು ಜಾರಿಗೆ ಕೊಟ್ಟಿಲ್ಲ. ಶ್ರೀ ಎನ್. ಟಿ. ರಾಮರಾವ್ ಅವರಿಗೆ ಈ ಸದನದಲ್ಲಿ ನಾನು ಹೇಳುತ್ತಿದ್ದೇನೆ. ದಯವಿಟ್ಟು ನಿಮಗೆ ಬಡವರ ಬಗ್ಗೆ ನಿಸ್ಪೃಹತೆಯಿಂದ ಕೆಲಸ ಮಾಡಬೇಕೆಂದು ಇಚ್ಛೆ ಇದ್ದರೆ, ಬಡವರ ಪರವಾಗಿ ಇರಬೇಕೆಂದು ಮನಸ್ಸಿಗೆ ಇದ್ದರೆ ಸ್ಟೇ ಆರ್ಡರ್ ಇರುವುದನ್ನು ಕಿತ್ತುಹಾಕಿಬಿಟ್ಟು ಬಡವರಿಗೆ ಅನುಕೂಲ ಮಾಡತಕ್ಕಂಥ ಪ್ರಯತ್ನ ಮಾಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಎನ್.ಟಿ.ಆರ್. ಅಷ್ಟೇ ಅಲ್ಲ. ಯು.ಪಿ. ಮತ್ತು ಬಿಹಾರದ್ದೂ ಹೇಳಿ.

ಶ್ರೀ ಬಿ. ಬಸವಲಿಂಗಪ್ಪ.—ಯು.ಪಿ. ಮತ್ತು ಬಿಹಾರ್‌ನಲ್ಲೂ ಯಾರ್ಯಾರು ಇದ್ದಾರೋ ಅಯೋಗ್ಯತನ ಎಂದರೆ ಅಯೋಗ್ಯತನ. ಈ *** ಯಾರಾದರೂ ಜಾತೀಯ ಜಡ್ಜ್‌ಗಳು ಎಂದರೆ ಜಾತಿಯ ಜಡ್ಜ್‌ಗಳೇ. ಸಾಮಾಜಿಕ ನ್ಯಾಯವೆಂದು ಶ್ರೀ ಜೆ. ಹೆಚ್. ಪಟೇಲರು ಸಾವಿರ ಸಲ ಹೇಳು ತ್ತಾರೆ, ಎಲ್ಲಿದೆ ನಿಮ್ಮ ಸಾಮಾಜಿಕ ನ್ಯಾಯ ? ಹೈಕೋರ್ಟಿನಲ್ಲಿ ನೀವು ಮಾಡಿದ್ದನ್ನು ತಡೆ ಮಾಡು ತ್ತಾರೆ. ಸರ್‌ಪ್ಲಸ್ ಲ್ಯಾಂಡ್ ಬಗ್ಗೆ ಎಷ್ಟು ಕೇಸುಗಳನ್ನು ಇಟ್ಟುಕೊಂಡಿದ್ದರು ? ಇವಾಗ ಎಲ್ಲಿ ಹೋಗಿದ್ದಾರೆ, ಏನಾಗಿದ್ದಾರೆ ಅದು ಬೇರೆ ವಿಚಾರ. ಇದುವರೆಗೂ ಇಟ್ಟುಕೊಂಡಿದ್ದರು ಅಲ್ಲ ? ಆದ್ದರಿಂದ ನಾನು ಹೇಳುತ್ತೇನೆ ಏನೆಂದರೆ ಈ ಹೈಕೋರ್ಟಿನಲ್ಲಿ ಕೂಡ ಜನಗಳ ಬಯಕೆ ಏನು ಅನ್ನು ವಂಥದ್ದು ಮತ್ತು ಸರ್ಕಾರಗಳಿಗೆ ಬಯಕೆ ಇದೆಯೋ ಎಂದು ಜಡ್ಜ್‌ಗಳು ಅರ್ಥ ಮಾಡಿಕೊಳ್ಳಲಿಲ್ಲ ಎಂದರೆ ಅವರಿಗೆ ಏನು ಗೌರವ ಕೊಡಬೇಕು ಎನ್ನುವುದು ಪ್ರಶ್ನೆ.

ಅಧ್ಯಕ್ಷರು.—ಶ್ರೀ ಬಸವಲಿಂಗಪ್ಪನವರೇ ಇಲ್ಲಿ ಕೇಳಿ. ನೀವು 'ಅಯೋಗ್ಯ ಜಡ್ಜ್‌ಗಳು' ಎಂದು ಹೇಳಿದ್ದೀರಿ. Is it parliamentary or not ? Is it in good taste ?

ಶ್ರೀ ಕೆ. ಎಚ್. ಪಾಟೀಲ್.—ಯೋಗ್ಯ—ಅಯೋಗ್ಯ.

ಅಧ್ಯಕ್ಷರು.—ಮಾನ್ಯ ಸಂಸದೀಯ ಮಂತ್ರಿಗಳು ಹೇಳಲಿ. 'ಅಯೋಗ್ಯ ಜಡ್ಜ್‌ಗಳು' ಎನ್ನುವ ಪದ. Whether it is parliamentary or unparliamentary or in good taste ?

** Expunged as ordered by the speaker.

ಶ್ರೀ ಕೆ. ಎಚ್. ಪಾಟೀಲ್.—'ಅಯೋಗ್ಯ' ಎನ್ನುವ ಪದ ಪಾರ್ಲಿಮೆಂಟರಿ ಆಗುತ್ತದೆ. ಆದರೆ not in good taste ಅನ್ನಿರಿ. ಅದನ್ನು ಒಪ್ಪುತ್ತೇನೆ. But it is parliamentary.

ಶ್ರೀ ಎ. ಲಕ್ಷ್ಮೀಸಾಗರ್.—ಅದೇ ಅರ್ಥ ಬರುವ ಹಾಗೆ ಬೇರೆ ಗಂಭೀರವಾದಂಥ ಶಬ್ಧವನ್ನು ಉಪಯೋಗಿಸಲಿಕ್ಕೆ ಬರುತ್ತದೆ. ಇದು ಅಷ್ಟು ಚೆನ್ನಾಗಿ ಕಾಣಿಸುವುದಿಲ್ಲ.

MR. SPEAKER.—I will expunge it.

ಶ್ರೀ ಬಿ ಬಸವಲಿಂಗಪ್ಪ.—ಯೋಗ್ಯವಲ್ಲದ ಜಡ್ಜ್ ಎಂದರೆ ಸರಿಹೋಗುತ್ತದಾ ? ಲ್ಯಾಂಡ್ ರಿಫಾರ್ಮ್ಸ್ ಕಾನೂನು ಮಾಡಿದ್ದೇವೆ. ನಾನು ಅದರ ಸೃಷ್ಟಿ ಕರ್ತರಲ್ಲಿ ಒಬ್ಬ I am one of the authors of the Land Reforms.

ನಾವು ಇಂಪ್ಲಿಮೆಂಟ್ ಮಾಡಿದ್ದೇವೆ. ನೀವು ಪುನಃ ಈ ಭೂ ಸುಧಾರಣಾ ಕಾನೂನನ್ನು ತರದೇ ಹೋದರೆ, ಈ ಭೂ ಸುಧಾರಣೆಯನ್ನು ಮಾಡುವುದಕ್ಕಾಗುವುದಿಲ್ಲ. ಪ್ರತಿಯೊಂದು ಕುಟುಂಬಕ್ಕೆ 20 ಎಕರೆ ಮೇಲೆ, ಯಾರೂ ಜಾಸ್ತಿ ಜಮೀನು ಇಟ್ಟುಕೊಳ್ಳುವುದಕ್ಕೆ ಬಿಡಲೇ ಬಾರದು. ಅಂತಹ ಕಾನೂನು ತರದೇಹೋದರೆ ಲ್ಯಾಂಡ್ ರಿಫಾರ್ಮ್ಸ್‌ಗೆ ಅರ್ಥ ಇಲ್ಲ. ಇದರಿಂದ ಸುಮಾರು ಎಷ್ಟು ಜನಕ್ಕೆ ಪ್ರಯೋಜನವಾಗುತ್ತದೆ ಎಂದರೆ ಮುಕ್ಕಾಲು ಭಾಗ ಜನಕ್ಕೆ ಪ್ರಯೋಜನವಾಗುತ್ತದೆ ಸಾಧಾರಣವಾಗಿ ಇರತಕ್ಕ ಎಲ್ಲಾ ಗೇಣಿದಾರರಿಗೂ ಪ್ರಯೋಜನವಾಗುತ್ತದೆ. ಇವತ್ತು 62 ಪರ್ಸೆಂಟ್ ಲ್ಯಾಂಡ್‌ಲೆಸ್ ಲೇಬರರ್ಸ್ ಇದ್ದಾರೆ ಅರ್ಧ ಎಕರೆ ಇರತಕ್ಕ ರೈತರು ಏನಿದ್ದಾರೆ ಅವರೂ ಲ್ಯಾಂಡ್‌ಲೆಸ್ ಇದ್ದಾರೆ ನೀವು ಏನು ರೈತರ ಬಗ್ಗೆ ಹೇಳಿ ಶಹಬಾಸ್‌ಗಿರಿ ತೆಗೆದುಕೊಳ್ಳುತ್ತಿದ್ದೀರಿ ಲ್ಯಾಂಡ್‌ಲೆಸ್ labourer is not a ryot ? A person owning one acre is not a ryot ? A person owning half-an-acre is not a ryot ? ಇವರ ಬಗ್ಗೆ ಏನು ಯೋಚನೆ ಮಾಡಿದ್ದೀರಿ ಏನು ಕಾಳಜಿ ಮಾಡಿದ್ದೀರಿ ಎನ್ನುವುದನ್ನು ಹೇಳುತ್ತಿದ್ದೇನೆ. ಮಾನ್ಯ ಶ್ರೀ ಬೊಮ್ಮಾಯಿಯವರು 2 ಸಾವಿರ ವರ್ಷ ಮುಗಿಯುವುದರೊಳಗೆ ಪ್ರತಿಯೊಂದು ಕುಟುಂಬಕ್ಕೆ 20 ಎಕರೆಗಿಂತ ಜಾಸ್ತಿ ಇರಲೇಬಾರದು ಎಂಬ ವ್ಯವಸ್ಥೆ ಮಾಡಿದರೆ ಎಲ್ಲರೂ ಸುಖವಾಗಿರಬಹುದು. ಇವತ್ತು ಜಮೀನು ಉತ್ಪತ್ತಿ ಬರಬೇಕು ಐ.ಎ.ಎಸ್. ಆಫೀಸರ್ ಆಗಿರಬೇಕು, ಇಂಜನಿಯರ್ ಆಗಿರಬೇಕು, ಹೆಂಡತಿ ಐ.ಎ.ಎಸ್. ಆಗಿರಬೇಕು, ಮಗ ಐ.ಎ.ಎಸ್. ಆಫೀಸರ್ ಆಗಿರಬೇಕು ಎನ್ನತಕ್ಕಂತಹ ಪರಿಸ್ಥಿತಿ ಇದೆ.........

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಬರೀ ಭೂ ಸುಧಾರಣೆ ಬಗ್ಗೆ ಮಾತ್ರ ಹೇಳುತ್ತಿದ್ದೀರಿ, ಅರ್ಬನ್ ಸೀಲಿಂಗ್ ಲಿಮಿಟ್ ಬಗ್ಗೆಯೂ ಸ್ವಲ್ಪ ಹೇಳಿ......

ಶ್ರೀ ಬಿ. ಬಸವಲಿಂಗಪ್ಪ.—ಒಂದು ಆದಾಯ ಒಬ್ಬರಿಗೆ ಬರಬೇಕು, 20 ಎಕರೆ ಒಂದು ಕುಟುಂಬಕ್ಕೆ ಇರಬೇಕು. ಇವತ್ತು 20 ಪರ್ಸೆಂಟ್ ಕಾರ್ಖಾನೆಗಳನ್ನು ಮುಚ್ಚಿರುತ್ತಾರೆ, ಇದರ ಬಗ್ಗೆ ಮಾನ್ಯ ಜೆ. ಹೆಚ್. ಪಟೇಲರ ಬಾಯಿಂದಲೇ ಕೇಳಬೇಕು......

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಮಾನ್ಯ ಸದಸ್ಯರು ಬರೀ ಲ್ಯಾಂಡ್‌ಲೆಸ್ ಬಗ್ಗೆ ಹೇಳುತ್ತಿದ್ದಾರೆ, ಅರ್ಬನ್ ಸೀಲಿಂಗ್ ಬಗ್ಗೆಯೂ ಕೂಡ ಕಡಿಮೆ ಮಾಡಿ ಎಂದು ಹೇಳಬೇಕು. ನಾವು ಬರೀ ಕಾನೂನು ಮಾಡಿದ ತಕ್ಷಣ ಪ್ರಯೋಜನವಿಲ್ಲ, ಅದನ್ನು ಕಾರ್ಯರೂಪಕ್ಕೆ ತರುವಂಥ ಸಲಹೆ ಕೊಡಬೇಕು.........

SRI B. BASAVALINGAPPA.—'Socialisation of urban lands' ಬಗ್ಗೆ ಹೇಳಿದ್ದೇನೆ ತಾವು ಈಗತಾನೆ ಮಂತ್ರಿಗಳಾಗಿದ್ದೀರಿ, ನಮ್ಮ ಶಿಷ್ಯರೂ ಇದ್ದೀರಿ. ಇವತ್ತು 20 ಪರ್ಸೆಂಟ್ ಕಾರ್ಖಾನೆಗಳನ್ನು ಮುಚ್ಚತಕ್ಕಂಥ ಪರಿಸ್ಥಿತಿ ಬರುತ್ತಿದೆ, ಇದಕ್ಕೆ ಕಾರಣ ಏನು? ರೂರಲ್ ಏರಿಯಾದಲ್ಲಿ ಅರ್ಬನ್ ಏರಿಯಾದಲ್ಲಿ ಖರೀದಿ ಮಾಡುವವರಿಗೆ ಎಷ್ಟು ಉತ್ಪತ್ತಿ ಮಾಡಿದ್ದೀರಿ ? ಆ ಕಾರ್ಖಾನೆಗಳಲ್ಲಿ ಉತ್ಪತ್ತಿ ಮಾಡತಕ್ಕಂಥ ಸಾಮಾನುಗಳು ಯಾವುವು ? Where is planning ? It is not a connected subject ? Why are you closing factories? Are there no purchasers ? Purchasing capacity is not created among the people. Therefore, I submit with great respect and appeal also that you must think in a coordinated manner. Agriculture is not different

Land reforms is not different. Industry is not different. Therefore, I say you should plan in a coordinated manner to bring about results that we aim at ultimately. These are the things. ಲ್ಯಾಂಡ್ ರಿಫಾರ್ಮ್ಸ್ ನಾವು ಏನು ಮಾಡುತ್ತಿದ್ದೇವೆ ಅದು ಸರಿಯಲ್ಲ ಎಂದು ನಾನು ಹೇಳುತ್ತಿದ್ದೇನೆ. ಯಾರು ಬಲಾಢ್ಯರಿದ್ದಾರೆ ಪುನಃ ಅವರ ಕೈಯಲ್ಲಿ ನಾವು ಭೂಮಿಯನ್ನು ಕೊಡುತ್ತಿದ್ದೇವೆ. ಮಾನ್ಯ ಬೊಮ್ಮಾಯಿಯವರು ಅಪಲೇಟ್ ಕೋರ್ಟ್ಸ್ ಎಂದು ಮಾಡಿದರು ಒಂದು ವರ್ಷದಲ್ಲಿ ಎಲ್ಲಾ ಪ್ರಕರಣಗಳನ್ನು ರಿವ್ಯೂ ಮಾಡುತ್ತೇವೆ ಎಂದು ಹೇಳಿದರು. ಇನ್ನೂ ರಿವ್ಯೂ ಮಾಡುವುದಕ್ಕೆ ಆಗಲಿಲ್ಲ. ಇವತ್ತು ಏನಾಗಿದೆ ಎಂದರೆ ಯಾರು ಯಾರು ಬಡವರು ಬಹಳ ಹಿಂದಿನ ಕಾಲದಿಂದ ಜಮೀನನ್ನು ಇದುವರೆಗೆ ಇಟ್ಟುಕೊಂಡಿದ್ದಾರೆ, ಈಗ ಅವರ ಹತ್ತಿರ ಪುನಃ ನಿನ್ನ ಹತ್ತಿರ ಚೀಟಿ ಇದೆಯಾ, ಡಾಕ್ಯುಮೆಂಟ್ಸ್ ಇದೆಯಾ, ಇಂಡೆಕ್ಸ್ ಆಫ್ ಲ್ಯಾಂಡ್ ರಿಜಿಸ್ಟರ್ ಇದೆಯಾ, ಅದರ ಕಾಪಿ ಇದೆಯಾ ಎಂದು ಕೇಳಿದರೆ ಆ ಬಡವ ಎಲ್ಲಿಂದ ತಂದು ಕೊಡುತ್ತಾನೆ ? ಆದಂದರಿಂದ ಸ್ಪಾಟ್‌ಗೆ ಹೋಗಿ ಯಾರು ಭೂಮಿಯನ್ನು ಸ್ವಾಧೀನದಲ್ಲಿಟ್ಟುಕೊಂಡಿದ್ದಾನೆ, ಯಾರು ಅನುಭವಿಸುತ್ತಿದ್ದಾರೆ ಎಂಬುದನ್ನು ನೋಡಿ ತೀರ್ಮಾನ ಮಾಡಬೇಕು, ಈ ರೀತಿ ಟ್ರಿಬ್ಯೂನಲ್‌ಗೆ ತಿದ್ದುಪಡಿ ಮಾಡಿ ಎಂದು ನಾನು ಹೇಳಿದ್ದೆ. ಅಪಲೇಟ್ ಟ್ರಿಬ್ಯೂನಲ್‌ನಲ್ಲಿ ಏನು ಜನರನ್ನು ಹಾಕಿದ್ದೀರಿ ಅವರು ಬಡ ರೈತರನ್ನು ಡಾಕ್ಯುಮೆಂಟ್ಸ್ ಇಲ್ಲದೆ ನಮ್ಮ ಹತ್ತಿರ ಬರಬೇಡಿ, ಎಂದು ಹೇಳಿ, ಯಾರು ಮಾಲೀಕರಿದ್ದರೆ ಅವರಿಗೆ ಅದನ್ನು ಕೊಡಬೇಕೆಂದು ತೀರ್ಮಾನ ಮಾಡುತ್ತಿದ್ದಾರೆ. ಇಲ್ಲ ಎಂದು ಹೇಳಿಬಿಟ್ಟರೆ ಬಹಳ ಸಂತೋಷ.

ಶ್ರೀ ಎಸ್. ಆರ್. ಬೊಮ್ಮಾಯಿ.—ಟ್ರಿಬ್ಯೂನಲ್‌ನವರಿಗೆ ಲೋಕಲ್ ಇನ್‌ಸ್ಪೆಕ್ಷನ್ ಮಾಡುವ ಪವರ್ಸ್ ಕೊಟ್ಟಿದ್ದೇವೆ. ಲೋಕಲ್ ವಿಸಿಟ್ ಅವರು ಮಾಡಬಹುದು, ಎಲ್ಲಾ ಅದರಲ್ಲಿ ಇದೆ.

ಶ್ರೀ ಟಿ. ಬಸವಲಿಂಗಪ್ಪ.—ತಾವು ಸಿಂತುಕೊಂಡು ಏನೋ ಹೇಳಬೇಡಿ, ನಾನು ಒಳ್ಳೆಯದನ್ನು ಹೇಳುತ್ತಿದ್ದೇನೆ, ಕೇಳಿ. ಅಪ್‌ಲೇಟ್ ಟ್ರಿಬ್ಯೂನಲ್‌ನ ಜನ ಏನಿದ್ದಾರೆ, ಆ ಜನಕ್ಕೆ ವ್ಯವಹಾರ ಜ್ಞಾನ ಇಲ್ಲದೇ ಹೋದರೆ, ಸಾಮಾಜಿಕ ವ್ಯವಸ್ಥೆಯ ಜ್ಞಾನ ಹಾಗೂ ಪರಿಮಿತಿ ಇಲ್ಲದೇ ಹೋದರೆ, ಆ ಉದ್ದೇಶ ಇಲ್ಲದೇ ಹೋದರೆ ತಾವು ದಯವಿಟ್ಟು ಅವರಿಗೆ ಬುದ್ಧಿ ಹೇಳಿ ಕಳಿಸಬೇಕು. ಇದರ ಬಗ್ಗೆ ತಿದ್ದುಪಡಿ ಮಾಡಬೇಕು. ಯಾರು ಬಡವರು ಇದ್ದಾರೆ ಅವರಿಗೆ ಜಮೀನು ಸಿಕ್ಕುವಹಾಗೆ ಮಾಡಬೇಕೆಂದು ಹೇಳಿ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ಮಾನ್ಯ ಮಂತ್ರಿಗಳಿಂದ ಉತ್ತರ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮೊದಲು ಇರಿಗೇಷನ್ ಬಗ್ಗೆ ಉತ್ತರ ಕೊಡುತ್ತೇನೆ. ಆಮೇಲೆ ನೋಡೋಣ.

ಮಾನ್ಯ ಸಭಾಧ್ಯಕ್ಷರೇ, ಕಳೆದ ಎರಡು ದಿವಸಗಳಿಂದ ನೀರಾವರಿ, ಕಂದಾಯ ಮತ್ತು ಯೋಜನಾ ಇಲಾಖೆಯ ಬೇಡಿಕೆಗಳ ಬಗ್ಗೆ ಬಹಳ ರಚನಾತ್ಮಕವಾದ ಚರ್ಚೆಯಾಗಿದೆ. ಪ್ರಾರಂಭದಲ್ಲಿ ನಾನು ಒಂದು ಸಂತೋಷದ ಮಾತನ್ನು ಹೇಳಬಯಸುತ್ತೇನೆ. ಕಳೆದ ಐದು ವರ್ಷಗಳಿಂದ ಅಭಾವ ಪರಿಸ್ಥಿತಿಯನ್ನು ಎದುರಿಸಿದಂಥ ರಾಜ್ಯದಲ್ಲಿ ಈ ವರ್ಷ ಶುಭಾರಂಭವಾಗಿದೆ. ಮಳೆ ವರ್ಷದ ಪ್ರಾರಂಭದಲ್ಲೇ ಬಂದಿದೆ. ನಿನ್ನೆ ಮೊನ್ನೆ ಕೂಡಾ ಕೆಲವು ಕಡೆ ಮಳೆಯಾಗಿದೆ. ಇದು ನಾವೆಲ್ಲರೂ ಸಮಾಧಾನ ಪಡತಕ್ಕಂಥ ವಿಷಯ. ಇನ್ನೂ ಕೂಡಾ ಈ ವರ್ಷ ಚೆನ್ನಾಗಿ ಮಳೆ ಬರುತ್ತದೆ, ಜೊತೆಗೆ ಗೆಳೆಯರಾದಂಥ ಮಾನ್ಯ ಜೆ. ಹೆಚ್. ಪಟೇಲರ ಸಮಸ್ಯೆ ಕೂಡಾ ಸ್ವಲ್ಪ ಬಗೆಹರಿಯುತ್ತದೆ, ವಿದ್ಯುಚ್ಛಕ್ತಿ ಕೂಡಾ ಹೆಚ್ಚು ಉತ್ಪಾದನೆಯಾಗುತ್ತದೆ ಎಂಬ ಮಾತನ್ನು ಹೇಳುತ್ತಾ, ನೀರಾವರಿಯ ಬಗ್ಗೆ ಎಲ್ಲ ಸದಸ್ಯರೂ ಕೂಡಾ ತಮ್ಮ ಅತ್ಯಂತ ತೀಕ್ಷ್ಣವಾದ ವಿಚಾರಗಳನ್ನು ವ್ಯಕ್ತಮಾಡಿದ್ದಾರೆ. ನಮ್ಮ ರಾಜ್ಯದ ನದಿಗಳಲ್ಲಿರತಕ್ಕಂಥ ನೀರನ್ನು ಸಂಪೂರ್ಣವಾಗಿ ನಿಗದಿತ ಅವಧಿಯಲ್ಲಿ ಉಪಯೋಗ ಮಾಡಬೇಕೆಂಬುದರ ಬಗ್ಗೆ ಒತ್ತಾಯ ಮಾಡಿರುತ್ತಾರೆ. ಕಟುವಾದ ಟೀಕೆಯನ್ನು ಮಾಡಿರುತ್ತಾರೆ. ನೀರಾವರಿ ವಿಚಾರದಲ್ಲಿ ನಾವು ಆಲೋಚನೆ ಮಾಡುವಾಗ, ಸಮಗ್ರವಾಗಿ ರಾಜ್ಯದ ನದಿಗಳ ನೀರಿನ ಪ್ರಯೋಜನ ಪಡೆಯತಕ್ಕಂಥ ವಿಷಯದಲ್ಲಿ ನಾವು ನಮ್ಮ ಪ್ರಾಮಾಣಿಕ ಪ್ರಯತ್ನವನ್ನು ಅರ್ಥ ಮಾಡಿಕೊಳ್ಳಬೇಕೆಂದು ಹೇಳಿ ನಾನು ಕೇಳಿಕೊಳ್ಳುತ್ತೇನೆ. ಹೊಟ್ಟಮೊದಲು ಈ ವಿಚಾರದಲ್ಲಿ ಜನತಾ ಸರಕಾರದ ನೀತಿಯನ್ನು ತಾವೆಲ್ಲರೂ

ಅರಿತಿರಬೇಕು. ನೀರಾವರಿ ಮತ್ತು ವಿದ್ಯುಚ್ಛಕ್ತಿ ಈ ಎರಡು ವಿಚಾರದಲ್ಲಿ ಆದ್ಯತೆ ಕೊಡುವುದರ ಬಗ್ಗೆ ನಮ್ಮಲ್ಲಿ ಎರಡು ಅಭಿಪ್ರಾಯ ಇಲ್ಲ. ಈ ಬಗ್ಗೆ ಬರೀ ಬಾಯಿ ಮಾತಿನಿಂದ ಹೇಳಿದರೆ ಅದು ಸರಿಯಲ್ಲ. ಅಂಕಿ ಅಂಶಗಳ ಆಧಾರದ ಮೇಲೆ ಇದನ್ನು ನೋಡಬೇಕಾಗುತ್ತದೆ. ಟೀಕೆ ಮಾಡುವಾಗ ಅಥವಾ ಉತ್ತರ ಕೊಡುವಾಗ ಕಳೆದ ಐದು ವರ್ಷಗಳಲ್ಲಿ ನಾವು ನಡೆದು ಬಂದ ದಾರಿ ಏನು ಸಾಧನೆ ಏನು ಎಂಬುದರ ವಿಹಂಗಮ ನೋಟ ಅವಶ್ಯ. ನಮ್ಮ ರಾಜ್ಯದಲ್ಲಿ ನೀರಾವರಿಗೆ ಯೋಗ್ಯವಾದಂಥ ಜಮೀನು, ನೀರು ದೊರಕತಕ್ಕಂಥ ಜಮೀನು ಎಷ್ಟು ಎಂದರೆ, ಅದು ಸಣ್ಣ ನೀರಾವರಿ ಇರಬಹುದು ದೊಡ್ಡ ನೀರಾವರಿ ಇರಬಹುದು, ಮಧ್ಯಮ ನೀರಾವರಿ ಇರಬಹುದು ಅಥವಾ ಗ್ರೌಂಡ್ ವಾಟರ್ ಪೊಟೆನ್‍ಷಿಯಲ್ ಇರಬಹುದು, ಇವೆಲ್ಲವುಗಳಿಂದ ಸುಮಾರು ೫೫ ಲಕ್ಷ ಹೆಕ್ಟೇರ್ ಭೂಮಿಗೆ ನಾವು ನೀರು ಒದಗಿಸಬಹುದು. ಎಲ್ಲಾ ಸೇರಿದರೆ ಸುಮಾರು ೫೫ ಲಕ್ಷ ಹೆಕ್ಟೇರ್ ಜಮೀನಿಗೆ ನೀರು ಒದಗಿಸಬಹುದು. ಈಗಾಗಲೇ ನಾವು ಪ್ರೀ ಪ್ಲಾನ್ ಪಿರೀಡ್ ೫೧ಕ್ಕಿಂತ ಮೊದಲು ೫೦ಕ್ಕಿಂತ ಈಚೆಗೆ ಇಲ್ಲಿಯವರೆವಿಗೆ

(ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಸುಮಾರು ೬ ಲಕ್ಷ ೭೧ ಸಾವಿರ ಹೆಕ್ಟೇರ್‍ಗೆ ನೀರಾವರಿಯಾಗಿದೆ. ಅದು ಕಾವೇರಿ ಕನ್ನಂಬಾಡಿ ಇರಬಹುದು, ಬೇರೆ ಬೇರೆ ಯೋಜನೆಗಳು ಇರಬಹುದು. ನಮ್ಮ ಕಡೆ ಕೆಲವು ವಿಜಯಾ ಕಾಲುವೆಗಳು ಎಂದು ಇವೆ ಅವುಗಳು ಇರಬಹುದು. ಪ್ರೀಪ್ಲಾನ್ ಪಿರೀಡ್ ಯೋಜನೆಗಳು ಪ್ರಾರಂಭವಾದ ಮೇಲೆ ಇದುವರೆವಿಗೆ ನಾವು ನೀರಾವರಿ ಒದಗಿಸಿರುವ ಜಮೀನು ೨೯ ಲಕ್ಷ ೬ ಸಾವಿರ ಹೆಕ್ಟೇರ್‍ಗಳು. ಇನ್ನು ನಾವು ಸುಮಾರು ೨೦ ಲಕ್ಷ ಹೆಕ್ಟೇರ್ ಜಮೀನಿಗೆ ನೀರು ಒದಗಿಸತಕ್ಕಂಥ ಕಾರ್ಯ ಮಾಡಬೇಕಾಗಿದೆ. ಈ ಬಗ್ಗೆ ಸಮಗ್ರವಾಗಿ ನೀರಾವರಿ ಯೋಜನೆ ಹಾಕಿಕೊಂಡರೆ ಈ ಪ್ರದೇಶದ ಜನರ ಆರ್ಥಿಕ ಉನ್ನತಿಯಾಗುತ್ತದೆ, ಅಲ್ಲಿನ ಜನಜೀವನ ಸಮೃದ್ಧಿಯಾಗುತ್ತದೆ ಎನ್ನುವುದರಲ್ಲಿ ಭಿನ್ನಾಭಿಪ್ರಾಯ ಇಲ್ಲ. ನೀರಾವರಿ ವಿಚಾರದಲ್ಲಿ ನಾವು ಅರ್ಥ ಮಾಡಿಕೊಳ್ಳಬೇಕು. ಮಾನ್ಯ ಸದಸ್ಯರಾದ ಶ್ರೀ ಬಸವಲಿಂಗಪ್ಪನವರು ಹೇಳಿದ ಹಾಗೆ ಸಮಾಜದಲ್ಲಿರುವವರಿಗೆ ಸಾಮಾಜಿಕ ನ್ಯಾಯ ಕೊಡಬೇಕು, ಅಂದರೆ ಸಮಾಜದಲ್ಲಿರತಕ್ಕಂಥ ಸರ್ವರ ಏಳಿಗೆಗೆ ಸರ್ಕಾರ ಯೋಜನೆ ಮಾಡಬೇಕಾಗುತ್ತದೆ. ಅದು ಅಗ್ರಿಕಲ್ಚರ್ ಇರಬಹುದು, ಇಂಡಸ್ಟ್ರಿ ಇರಬಹುದು, ಅಗ್ರಿಕಲ್ಚರ್ ಲೇಬರರ್ಸ್ ಇರಬಹುದು, ಆರ್ಟಿಜನ್ಸ್ ಇರಬಹುದು ಇವರೆಲ್ಲರಿಗೂ ಸಮಗ್ರವಾಗಿ ಸಮಾಜದಲ್ಲಿರತಕ್ಕಂಥ ಸರ್ವರ ಉನ್ನತಿಗೆ ಒಂದು ಯೋಜನೆ ಮಾಡಬೇಕಾಗುತ್ತದೆ. ಇದರಲ್ಲಿ ಪ್ರಿಯಾರಿಟಿ ಫಿಕ್ಸ್ ಮಾಡಬೇಕಾಗುತ್ತದೆ. ಪ್ರಿಯಾರಿಟಿ ಬಗ್ಗೆ ನಾನು ಆಮೇಲೆ ಮಾತನಾಡುತ್ತೇನೆ. ಸರ್ಕಾರಿ ಮೂಲಗಳಿಂದ ನೀರಾವರಿ ಲಾಭ ಪಡೆದಿರತಕ್ಕಂಥ ಕುಟುಂಬಗಳ ಸಂಖ್ಯೆ ३ ಲಕ್ಷ ೧೯ ಸಾವಿರ. ಖಾಸಗಿ ವಲಯಗಳಿಂದ ನೀರಾವರಿ ಲಾಭ ಪಡೆದಿರತಕ್ಕಂಥ ರೈತರು ಅದು ಕೆರೆಗಳಿಂದ ಇರಬಹುದು, ಬಾವಿಗಳಿಂದ ಇರಬಹುದು ಅವರು ಸುಮಾರು ೩ ಲಕ್ಷ ೬೫ ಸಾವಿರ. ನೀರಾವರಿ ಇಲ್ಲದೇ ಇರತಕ್ಕಂಥ ರೈತರು ಒಣಬೇಸಾಯ ಪದ್ಧತಿಯಿಂದ ಲಾಭ ಪಡೆದಿರತಕ್ಕಂಥ ರೈತರು ೧೭ ಲಕ್ಷ ೬೫ ಸಾವಿರ ಕೃಷಿ ಕಾರ್ಮಿಕರು ೧೭ ಲಕ್ಷ ೧೪ ಸಾವಿರ ಕುಟುಂಬಗಳು ಕೃಷಿಯೇತರರು ಅಂದರೆ ಚಮ್ಮಾರರು ಬಡಗಿಗಳು, ಕಮ್ಮಾರರು ಇರಬಹುದು ಅವರು ಸುಮಾರು ೨೨ ಲಕ್ಷ ३೯ ಸಾವಿರ ಕುಟುಂಬಗಳು. ಒಟ್ಟು ಗ್ರಾಮಾಂತರ ಪ್ರದೇಶದಲ್ಲಿರತಕ್ಕವರು ೬೪ ಲಕ್ಷ ಕುಟುಂಬಗಳು. ಇದರ ಪರ್ಸೆಂಟೇಜ್ ನೋಡಿದರೆ ಸರ್ಕಾರಿ ವಲಯದಿಂದ ನೀರು ಪಡೆದುಕೊಂಡಿರತಕ್ಕಂಥವರು ೪.೩೮ ಪರ್ಸೆಂಟ್. ಖಾಸಗಿ ವಲಯದಿಂದ ನೀರು ಪಡೆದುಕೊಂಡಿರತಕ್ಕಂತಹವರು ೫.೭೦ ಪರ್ಸೆಂಟ್. ನೀರಾವರಿ ಇಲ್ಲದವರ ಸಂಖ್ಯೆ ೨೭.೫೭ ಪರ್ಸೆಂಟ್. ಕೃಷಿ ಕಾರ್ಮಿಕರು ೨೬.೭೮ ಪರ್ಸೆಂಟ್. ಕೃಷಿಯೇತರರು ३೪.೯೭ ಪರ್ಸೆಂಟ್. ಇದು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಕುಟುಂಬಗಳ ಒಂದು ಚಿತ್ರ. ಇದು ನಮ್ಮ ಮುಂದೆ ಇದೆ. ಈ ಒಂದು ಚಿತ್ರದ ಹಿನ್ನೆಲೆಯನ್ನು ಇಟ್ಟುಕೊಂಡು ಯೋಜನೆ ಹಾಕಿಕೊಳ್ಳತಕ್ಕಂಥಾದ್ದು ಬಂದಂತಹ ಆದಾಯದಲ್ಲಿ ಖರ್ಚು ಮಾಡತಕ್ಕಂಥಾದ್ದು. ಈ ವಿಚಾರದಲ್ಲಿ ನಾವು ಹಣ ಖರ್ಚು ಮಾಡುತ್ತಾ ಬಂದಿದ್ದೇವೆ. ಈಗ ನಾನು ವಾಸ್ತವಿಕ ವಿವರಗಳಿಗೆ ಹೋಗುವುದಕ್ಕೆ ಮೊದಲು ಕೃಷ್ಣಾ ಬೇಸಿನ್‍ನಲ್ಲಿರತಕ್ಕಂಥ ಎಲ್ಲಾ ನೀರನ್ನು ನಾವು ಉಪಯೋಗಿಸಿಕೊಳ್ಳಬೇಕಾದರೆ ನಾವು ಇನ್ನು ೨೬೦೭ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ಎರಡು ಸಾವಿರ ಇಸವಿಯೊಳಗೆ ಬಚಾವತ್ ಅವಾರ್ಡ್ ಪ್ರಕಾರ ನೀರನ್ನು ಉಪಯೋಗ ಮಾಡಬೇಕಾದರೆ ನಾವು ಪ್ರತಿ ವರ್ಷ ಈ ಯೋಜನೆಗಾಗಿ

೨೦೪ ಕೋಟಿ ರೂಪಾಯಿಗಳನ್ನು ಕೃಷ್ಣ ಬೇಸಿನ್ ಯೋಜನೆಗೆ ಕೊಡಬೇಕಾಗುತ್ತದೆ. ಕಾವೇರಿ ಬೇಸಿನ್‌ನಲ್ಲಿರತಕ್ಕ ಯೋಜನೆಗಳನ್ನು ಪೂರ್ಣಗೊಳಿಸಬೇಕಾದರೆ ಒಟ್ಟು ೯೮೪ ಕೋಟಿ ರೂಪಾಯಿಗಳು ಬೇಕಾಗುತ್ತದೆ. ೫ ವರ್ಷಗಳಲ್ಲಿ ಈ ಯೋಜನೆ ಮುಗಿಸಬೇಕಾದರೆ ಪ್ರತಿ ವರ್ಷ ಸುಮಾರು ೨೦೦ ಕೋಟಿ ರೂಪಾಯಿಗಳು ಬೇಕಾಗುತ್ತವೆ. ಇದೇ ನಮ್ಮ ಮುಂದಿರತಕ್ಕ ಚಿತ್ರ. ಇದನ್ನು ಸಾಧನೆ ಮಾಡುವುದು ಹೇಗೆ ? ಆ ಬಗ್ಗೆ ಗಂಭೀರವಾಗಿ ನಾವೆಲ್ಲರೂ ಯೋಚನೆ ಮಾಡಬೇಕಾಗಿದೆ. ಇದರ ಬಗ್ಗೆ ಸರ್ಕಾರದ ಮೇಲೆ ಹೆಚ್ಚಿನ ಜವಾಬ್ದಾರಿ ಇದೆ. ವಿರೋಧ ಪಕ್ಷದ ಸದಸ್ಯರುಗಳಿಂದ ಇದರ ಬಗ್ಗೆ ರಚನಾತ್ಮಕವಾದ ಸಲಹೆಗಳು ಬಂದಿವೆ. ಇದರ ಜೊತೆಗೆ ಇನ್ನೂ ಸಲಹೆಗಳನ್ನು ಪಡೆಯಬೇಕಾಗುತ್ತದೆ. ಇನ್ನೊಂದು ವಿಚಾರ. ಮಾನ್ಯ ಖರ್ಗೆಯವರು, ನೀರಾವರಿ ವಿಚಾರದಲ್ಲಿ ನಾವು ಮಾಡಿದ ಒಂದು ಪ್ರಗತಿಗಿಂತ ನೀವು ಬಹಳ ಹಿಂದೆ ಬಿದ್ದಿದ್ದೀರಿ ಎನ್ನುವ ಮಾತನ್ನು ಹೇಳಿದರು. ಆ ಬಗ್ಗೆ ಹೇಳಬೇಕಾದರೆ, ಕೃಷ್ಣ ಬೇಸಿನ್‌ನಲ್ಲಿ ೧೯೭೮ ರಿಂದ ೧೯೮೩ರವರೆಗೆ ಅವರು ಖರ್ಚು ಮಾಡಿದಂಥ ಹಣ ೧೫೦ ಕೋಟಿ ೭೩ ಲಕ್ಷ ರೂಪಾಯಿಗಳು. ೧೯೮೩ ರಿಂದ ೧೯೮೮ರವರೆಗೆ ಅದೇ ಕೃಷ್ಣ ಬೇಸಿನಲ್ಲಿ ನಾವು ಖರ್ಚು ಮಾಡಿದಂಥ ಹಣ ೪೦೦೧ ಕೋಟಿ ೨೫ ಲಕ್ಷ ರೂಪಾಯಿಗಳು. ಪೊಟೆನ್‌ಶಿಯಲ್ ಕ್ರಿಯೇಟ್ ಆಗಿರುವ ಬಗ್ಗೆ ಹೇಳಬೇಕಾದರೆ, ೧೯೭೮ ರಿಂದ ೧೯೮೩ರವರೆಗೆ ೫೯ ಸಾವಿರದ ೫೪೮ ಹೆಕ್ಟೇರ್. ೧೯೮೩ ರಿಂದ ೧೯೮೮ರ ವರೆಗೆ ೧ ಲಕ್ಷ ೪೨ ಸಾವಿರದ ೭೮೪ ಹೆಕ್ಟೇರ್.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—೧೯೭೮ ರಿಂದ ೧೯೮೩ರ ವರೆಗೆ ಎಷ್ಟು ಅಮೌಂಟ್ ಖರ್ಚು ಮಾಡಲಾಗಿದೆ ಎಂಬ ಬಗ್ಗೆ ಹೇಳುವುದು ಬೇಡ. ೧೯೮೩ ರಿಂದ ೧೯೮೮ರ ವರೆಗೆ ನೀವು ಎಷ್ಟು ಹಣವನ್ನು ಖರ್ಚು ಮಾಡಬೇಕೆಂದು ತೀರ್ಮಾನ ಮಾಡಿ ಅದರಲ್ಲಿ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ ? ಆಮೇಲೆ ಎಷ್ಟು ಹೆಕ್ಟೇರ್‌ಗೆ ನೀರಾವರಿ ಕಲ್ಪಿಸಿದ್ದೀರಿ ಎಂಬುದನ್ನು ಮಾತ್ರ ಹೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ನೀವು ಕೇಳಿರುವಂಥ ಪ್ರಶ್ನೆಗೆ ನಾನು ಎಲ್ಲವನ್ನೂ ಹೇಳಬೇಕಾಗುತ್ತದೆ. ತಾವೇ ಒಂದು ತರಹ ಚಿತ್ರವನ್ನು ಈ ಸಭೆಗೆ ಕೊಟ್ಟಿದ್ದೀರಿ. ಕಾವೇರಿ ಬೇಸಿನ್‌ನಲ್ಲಿ ೧೯೭೮ ರಿಂದ ೧೯೮೩ರ ವರೆಗೆ ನೀವು ಖರ್ಚು ಮಾಡಿದಂಥ ಹಣ ೧೫೦ ಕೋಟಿ ೭೩ ಲಕ್ಷ. ೧೯೮೩ ರಿಂದ ೧೯೮೮ರ ವರೆಗೆ ನಾವು ಕಾವೇರಿ ಬೇಸಿನ್‌ನಲ್ಲಿ ಖರ್ಚು ಮಾಡಿದಂಥ ಹಣ ೩೧೪ ಕೋಟಿ ೫ ಲಕ್ಷ ರೂಪಾಯಿಗಳು.

ಶ್ರೀ ಬಿ. ಬಸವಲಿಂಗಪ್ಪ.—ನೀವೇನು ಜಾಸ್ತಿ ಮಾಡಿದ್ದೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ನಿಮ್ಮ ಸರ್ಕಾರ ಇದ್ದಾಗ ನೀರಾವರಿಗೆ ಎಷ್ಟು ಖರ್ಚು ಮಾಡಿದ್ದೀರಿ ಎಂಬ ಬಗ್ಗೆ ಹೇಳುತ್ತಿದ್ದೇವೆ. ನಾನು ಎಲ್ಲಾ ಫಿಗರ್ಸ್‌ಗಳನ್ನು ಇಟ್ಟುಕೊಂಡಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ದೇವೇಗೌಡರು ನೀರಾವರಿ ಮಂತ್ರಿಯಾಗಿದ್ದಾಗ ನಾವು ಅಷ್ಟು ಖರ್ಚು ಮಾಡುತ್ತೇವೆ ನಾವು ಇಷ್ಟು ಖರ್ಚು ಮಾಡುತ್ತೇವೆಂದು ಹೇಳಿದ್ದೇ ಹೇಳಿದ್ದು. ಇದನ್ನೆಲ್ಲಾ ನೀವು ಮಾಡಿದ್ದು ?

ಶ್ರೀ ಎಸ್. ಆರ್. ಬೊಮ್ಮಾಯಿ.—ಇದರ ಬಗ್ಗೆ ನಾನು ಎಲ್ಲಾ ಹೇಳ್ತೀನಿ. ತಾವು ತಾಳ್ಮೆಯಿಂದ ಕೇಳಬೇಕಪ್ಪೇ. ಮಾನ್ಯ ಖರ್ಗೆಯವರು ಮಾತನಾಡುತ್ತಾ, ಅವರ ಸರ್ಕಾರ ಇದ್ದಾಗ ೧೯೮೩ರ ವರೆಗೆ ೮೨ ಸಾವಿರ ೭೨೭ ಹೆಕ್ಟೇರ್‌ಗೆ ಕೃಷ್ಣ ಬೇಸಿನ್‌ನಿಂದ ನೀರಾವರಿ ಆಗಿತ್ತು ಎಂದು ಹೇಳಿದ್ದರು.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನೀವು ದುಡ್ಡು ಖರ್ಚು ಮಾಡಿರುವುದು ಎಷ್ಟು ಎಂದು ಹೇಳಿದರೆ ಆಗುವುದಿಲ್ಲ. ಆ ಪಿರಿಯಡ್‌ನಲ್ಲಿ ಎಸ್. ಆರ್. ರಿವಿಜನ್ ಆಗಿದೆಯೆಲ್ಲಾ ? ಅದು ಎಷ್ಟು ವ್ಯತ್ಯಾಸವಾಗಿದೆ ಎಂದು ನೋಡಿದರೆ ಗೊತ್ತಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ತಾವು ಕೊಟ್ಟಿರುವ ಪುಸ್ತಕ ''A Picture of Karnataka Budget'' ದಲ್ಲಿ ಪೇಜ್ ೩೪ರಲ್ಲಿ ನೋಡಿದರೆ ತಿಳಿಯುತ್ತದೆ......

ಶ್ರೀ ಎಸ್. ಆರ್. ಬೊಮ್ಮಾಯಿ.—ಅದನ್ನೂ ಕೂಡ ರೆಫರ್ ಮಾಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ತಾವುಗಳು ಪ್ರಿಂಟ್ ಆಗಿರುವುದನ್ನು ಮಾತ್ರ ಓದುತ್ತೀರಾ ?

ಶ್ರೀ ಎಸ್.ಆರ್. ಬೊಮ್ಮಾಯಿ.— ಈಗ ನಾನು ಅಂಕಿಅಂಶಗಳನ್ನು ಕೊಡುತ್ತಾ ಇದ್ದೇನೆ. ತಾವು ಏನು ಹೇಳುತ್ತಿದ್ದೀರಿ ಅದನ್ನೂ ಕೂಡ ಹೇಳೋಣ. ಕಾವೇರಿ ಮತ್ತು ಕೃಷ್ಣ ಬೇಸಿನ್ ನಲ್ಲಿ ಒಟ್ಟು ಹಣ ಖರ್ಚು ಮಾಡಿರುವುದು ಎರಡರಷ್ಟು ಆಗಿದೆ. ಐದು ವರ್ಷಗಳ ಅವಧಿಯಲ್ಲಿ, ಅಂದರೆ ಜನತಾ ಪಕ್ಷದ ಆಡಳಿತ ಅವಧಿಯಲ್ಲಿ ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ಆಡಳಿತದ ಅವಧಿಯಲ್ಲಿ ಎರಡು ಪಟ್ಟು ಹಣವನ್ನು ಆ ಉದ್ದೇಶಗಳಿಗಾಗಿ ಖರ್ಚು ಮಾಡಲಾಗಿದೆ.

SRI M, MALLIKARJUNA KHARGE.—Relative value of money is there, You take this document. Based on this document you talk.

ಶ್ರೀ ಎಸ್.ಆರ್. ಬೊಮ್ಮಾಯಿ.—ಪಿಸಿಕಲೀ ನಾನು ಹೇಳುತ್ತಾ ಇದ್ದೇನೆ, ಮೊನ್ನೆ ತಾವುಗಳು ಭಾಷಣ ಮಾಡಿದುದನ್ನು ಓದಿದ್ದೀರಾ ? ಅದನ್ನು ತಾವು ಪೂರ್ಣ ಓದಬೇಕು. ಒಂದು ರಿಪೋರ್ಟ್ ಮೊದಲಾಗಿ ಬಂದಿದೆ ಅದನ್ನು ಪೂರ್ಣವಾಗಿ ಓದಿದರೆ ಗೊತ್ತಾಗುತ್ತದೆ. ಅದು ಹೀಗಿದೆ ''ನೀರಾವರಿ ಇಮ್ಮಡಿಸಿದ ರಾಮಕೃಷ್ಣ ಹೆಗಡೆ ಯವರಿಗೆ ಋಣಿ ಆಗಿರಿ ಎಂದು ಇದೆ ಮುಂದೆ ಹೇಳುತ್ತಾ, ಈಗ ನೀರಾವರಿ ಪ್ರದೇಶ ಎರಡು ಪಟ್ಟು ಆಗಿದೆ. ಅದಕ್ಕೆ ರಾಮಕೃಷ್ಣ ಹೆಗಡೆಯವರ ನೇತೃತ್ವ ಕಾರಣ ವಾಗಿದೆ. ಅದಕ್ಕಾಗಿ ಜನತೆ ರಾಮಕೃಷ್ಣ ಹೆಗಡೆಯವರಿಗೆ ಚಿರಋಣಿಯಾಗಿರ ಬೇಕೆಂದು ಕಂದಾಯ ಮತ್ತು ನೀರಾವರಿ ಸಚಿವರಾದ ಶ್ರೀ ಎಸ್.ಆರ್. ಬೊಮ್ಮಾಯಿಯವರು ಹೇಳಿದರು. ಪಿರಿಯಾಪಟ್ಟಣ ತಾಲ್ಲೂಕಿನ ಬೆಟ್ಟದಪುರದಲ್ಲಿನ ಸರಕಾರಿ ಬಸ್ ನಿಲ್ದಾಣದ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡುತ್ತಿದ್ದ ಅವರು ಉತ್ತರ ಕರ್ನಾಟಕದಿಂದ ಬಂದಿರುವ ನನಗೆ ಹೆಗಡೆಯವರ ಮೇಲೆ ಕೋಪ ಇದೆ, ಅವರು ಕಾವೇರಿ ಕಣಿವೆ ಯೋಜನೆಗೆ ಹೆಚ್ಚಿನ ಹಣವನ್ನು ಒದಗಿಸಿದ್ದಾರೆ. ಆದರೆ ಕಾವೇರಿ ನೀರಿನ ಬಳಕೆಯನ್ನು ಎರಡು ಸಾವಿರದನೇ ಇಸವಿಯೊಳಗಾಗಿ ಬಳಸಬೇಕಾಗಿರುವುದರಿಂದ ಹೆಚ್ಚಿನ ಹಣವನ್ನು ಒದಗಿಸುವುದು ಅನಿವಾರ್ಯವಾಗಿ ಪರಿಣಮಿಸಿದೆ, ಅದೇ ರೀತಿ ಕೃಷ್ಣಾ ನದಿ ನೀರಿನ ಬಳಕೆಯನ್ನು ಪಡೆದುಕೊಳ್ಳಲು ಕೃಷ್ಣಾ ಮೇಲ್ದಂಡೆ ಯೋಜನೆಗೆ ಆದ್ಯತೆ ಕೊಡಬೇಕಾಗಿದೆ.'' ಹೀಗೆ ಇದೆ.

ತಾವು ಬಹಳ ದೂರ ಹೋಗಿ ಮಾತನಾಡಿದ್ದೀರಿ. ಮಾನ್ಯ ರಾಮಕೃಷ್ಣ ಹೆಗಡೆಯವರ ಬಗ್ಗೆ ನನಗೆ ಬಹಳ ಗೌರವ ಇದೆ. ಅವರು ನಮ್ಮ ನಾಯಕರು. ನಾನು ವ್ಯಕ್ತಿ ಪೂಜೆ ಮಾಡುವವನು ಅಲ್ಲ, ಮಾಡುವುದೂ ಇಲ್ಲ. ಅದು ನಾನು ನಡೆದು ಬಂದ ದಾರಿಯಾಗಿದೆ. ನಾನು ಯಾವುದೇ ವಿಚಾರದಲ್ಲಿ ಮುಕ್ತವಾಗಿ ಮಾತನಾಡುತ್ತೇನೆ. ತಪ್ಪು ಇದ್ದರೆ ಅದನ್ನು ಇದ್ದಂತೆ ಹೇಳತಕ್ಕಂಥ ಒಂದು ಪರಿಪಾಠ ವನ್ನು ರೂಢಿಸಿಕೊಂಡು ಬಂದಿದ್ದೇನೆ. ನಾನು ನನ್ನ ಮಾತನ್ನು ಎಲ್ಲಿ ಹೇಳ ಬೇಕೋ ಅಲ್ಲಿ ಸ್ಪಷ್ಟವಾಗಿ ಹೇಳುತ್ತೇನೆ. ಕ್ಯಾಬಿನೆಟ್‌ನಲ್ಲಿಯಾಗಲೀ, ಇಲ್ಲಿ ಈ ಸದನದಲ್ಲಾಗಲೀ, ಎಲ್ಲಿಯೋ ಆಗಲಿ ಹೇಳ ಬೇಕಾದುದನ್ನು ನಿರ್ಭೀತಿಯಿಂದ ಹೇಳುತ್ತೇನೆ. ನಾನು ಕಾವೇರಿ ಕಣಿವೆ ಜನರ ಬಗ್ಗೆ ಅಲ್ಲಿನ ನೀರಿನ ಬಗ್ಗೆ ಮಾತನಾಡುತ್ತಾ ಇದ್ದೆ. ಒಟ್ಟು ಕಾವೇರಿ ನದಿಯೋಜನೆ ಪ್ರಾರಂಭವಾದಾಗಿನಿಂದ ೧೯೮೩ರ ವರೆಗೆ ಖರ್ಚು ಮಾಡಿದಂಥ ಹಣ ೨೬೮ ಕೋಟಿ ೮೮ ಲಕ್ಷ ರೂಪಾಯಿಗಳು. ಅಂದರೆ ೧೯೬೬-೬೭ರಿಂದ ಮಾನ್ಯ ವೀರೇಂದ್ರ ಪಾಟೀಲ್ ರವರ ಕಾಲವನ್ನೂ ಸೇರಿಸಿ, ೧೯೮೩ರ ವರೆಗೆ ಖರ್ಚು ಮಾಡಿದ್ದುದು. ಅನಂತರ ೧೯೮೩ರಿಂದ ೧೯೮೮ರ ಅವಧಿಯ ವರೆಗೆ ಒಟ್ಟು ಖರ್ಚು ಮಾಡಿದುದು ೩೪೧ ಕೋಟಿ ರೂಪಾಯಿಗಳು. ಅಂದರೆ ಎರಡ ರಷ್ಟು ಹಣವನ್ನು ಖರ್ಚು ಮಾಡಿದ್ದೇವೆ ಎಂಬ ವಿಚಾರವನ್ನು ಕಾವೇರಿ ಕಣಿವೆ ವಿಚಾರ ಮಾಡುವಾಗ ಆ ಮಾತನ್ನು ಹೇಳಿದೆ. ಇದರಲ್ಲಿ ಸಂಪೂರ್ಣವಾದ ಸತ್ಯಾಂಶ ಇದೆ. ಜನತಾ ಸರ್ಕಾರ ೫ ವರ್ಷದಲ್ಲಿ ಖರ್ಚು ಮಾಡಿದ ಹಣ ಹಿಂದೆ ೨೦ ವರ್ಷಗಳಲ್ಲಿ ಮಾಡಿದ ಹಣಕ್ಕಿಂತ ಜಾಸ್ತಿ ಇದೆ. ಆ ಅರ್ಥದಲ್ಲಿ ಕಾವೇರಿ ಕಣಿವೆ ಜನ ಋಣಿಯಾಗಿರಬೇಕೆಂದು ಹೇಳಿದೆ. ನನ್ನ ಮನಸ್ಸಿಗೆ ಸರಿ ಎನಿಸಿದ್ದನ್ನು ಹೇಳಿದ್ದೇನೆ, ಇದುವರೆಗೂ ಮಾನ್ಯ ಖರ್ಗೆಯವರು ಮಾತನಾಡುವ ಧಾಟಿ ಬೇರೆ ಇತ್ತು, ಅಪ್ಪರ್ ಕೃಷ್ಣಾ ಮಲ ಪ್ರಭಾ, ಘಟಪ್ರಭಾ ಇವುಗಳ ಬಗ್ಗೆ ಉತ್ತರ ಕರ್ನಾಟಕಕ್ಕೆ ಅನ್ಯಾಯ ಮಾಡಿದ್ದಾರೆನ್ನುವ ಧಾಟಿಯಲ್ಲಿ ಅದು ಇರುತ್ತಿತ್ತು,

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನಾನು ಏಕೆ ಹಾಗೆ ಮಾತನಾಡಿದೆ ಎಂಬುದನ್ನೂ ಹೇಳಿದ್ದೇನೆ.

ಶ್ರೀ ಕೆ.ಹೆಚ್. ಪಾಟೀಲ್.—ಆಗ ಬರೀ ಸದಸ್ಯರಾಗಿದ್ದರು, ಈಗ ವಿರೋಧ ಪಕ್ಷಗಳ ಲೀಡರ್, ಆದ್ದರಿಂದ ಈ ಬದಲಾವಣೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಆದರೆ ಕೃಷ್ಣಾಗಾಗಲೀ, ಕಾವೇರಿ ಬೇಸಿನ್‌ಗಾಗಲೀ ಹಣ ಕೊಟ್ಟಿರುವುದು ಸಾಕು ಎಂದು ನಾನು ಹೇಳುತ್ತಿಲ್ಲ, ಆದರೆ ಸಾಕಷ್ಟು ಖರ್ಚು ಮಾಡಿದ್ದೇವೆ. ಹಾಗೆ ಮಾಡಿರುವುದೂ ಸರಿ ಎಂದು ನಾನು ಹೇಳುತ್ತಿದ್ದೇನೆ. ಬಹುಶಃ ಮಾನ್ಯ ಖರ್ಗೆಯವರು ರಾಜಕಾರಣ ವನ್ನು ಮನಸಿನಲ್ಲಿಟ್ಟುಕೊಂಡು ಹಾಗೆ ಹೇಳಿರಬಹುದು. ಆದರೆ ಅದು ನಡೆಯುವುದಿಲ್ಲ, ಇನ್ನು ಗೋದಾವರಿ ಬೇಸಿನ್ನು. ಇದು ಬೀದರ್ ಜಿಲ್ಲೆಗೆ ಸಂಬಂಧಿಸಿದ್ದು. ೧೯೭೮ ೮೦ರಲ್ಲಿ ಸ್ಥಾಪನೆಯಾದ ಈ ಸ್ಕೀಮ್ ಇದುವರೆಗೂ ೧೧೨ ಕೋಟಿ ಖರ್ಚಾಗಿದೆ, ಆದರೆ ಒಂದುಎಕರೆ ಭೂಮಿಯೂ ನೀರಾವರಿ ಯಾಗಿಲ್ಲ. ಇದಕ್ಕೆ ಇನ್ನೂ ೯೦ ಕೋಟಿ ಖರ್ಚು ಮಾಡಿದರೆ ಉಪಯೋಗವಾಗುವುದು.

ಶ್ರೀ ಕೆ. ಹೆಚ್. ಪಾಟೀಲ್.—ಅಷ್ಟು ಹಣವನ್ನು ಕೊಡುತ್ತೀರೋ ಬಿಡುತ್ತೀರೋ ಹೇಳಿರಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕೃಷ್ಣಾ ಬೇಸಿನ್ ಮುಕ್ತಾಯವಾಗಬೇಕಾದರೆ ೨೬೫೦ ಕೋಟಿ ಖರ್ಚು ಮಾಡಬೇಕಾಗಿದೆ, ಕಾವೇರಿಗೆ ೯೮೪ ಕೋಟಿ ಬೇಕಾಗಿದೆ, ಗೋದಾವರಿಗೆ ೯೦ ಕೋಟಿ ಬೇಕಾಗಿದೆ. ಈಗ ಚಿತ್ರ ಇಡುತ್ತಿದ್ದೇನೆ, ಆಮೇಲೆ ಏನು ಮಾಡಬೇಕೆಂದಿದೆ ಎಂಬುದನ್ನು ಹೇಳುತ್ತೇನೆ.

ಅದೇ ರೀತಿ ಚಿಕ್ಕ ನೀರಾವರಿ ೧೯೭೮-೮೩ರ ಅವಧಿಯಲ್ಲಿ ಆದ ಪ್ರಗತಿ ೧,೬೬,೦೦೦ ಹೆಕ್ಟೇರ್‌ಗಳು ೧೯೮೩-೮೮ರ ಅವಧಿಯಲ್ಲಿ ೨.೫೫,೦೦೦ ಹೆಕ್ಟೇರ್‌ಗಳು.

ಈ ಎಲ್ಲಾ ನದಿಗಳ ಜಲಾಶಯಗಳಲ್ಲಿರತಕ್ಕಂತಹ ನೀರಿನ ಉಪಯೋಗದ ಬಗ್ಗೆ ಮತ್ತು ಈ ಐದು ವರ್ಷದ ಅಂದರೆ ೧೯೭೮ ರಿಂದ ೮೩, ೮೩ ರಿಂದ ೮೮ರ ನಡುವೆ ಇದಕ್ಕೆ ಖರ್ಚಾದಂತಹ ಹಣದ ಬಗ್ಗೆ ವಿವರವನ್ನು ಕೊಟ್ಟಿದ್ದೇನೆ. ಈ ವಿವರವನ್ನು ನೋಡಿದರೆ ಈ ಸರ್ಕಾರ ನೀರಾವರಿಗೆ ಹೆಚ್ಚು ಪ್ರಾಶಸ್ತ್ಯ ಕೊಟ್ಟಿದೆಯೇ ಅಥವಾ ಇಲ್ಲವೇ ಎಂಬುದು ಅರ್ಥವಾಗುತ್ತದೆ. ಹಿಂದಿಗಿಂತ ಪ್ರಗತಿಯಾಗಿದೆ ಎಂಬುದರ ಬಗ್ಗೆ ಸ್ಪಷ್ಟವಾದ ಚಿತ್ರ ಇಲ್ಲಿ ಇದೆ. ಪ್ರಗತಿ ಸಾಕಷ್ಟು ಆಗಿದೆಯೇ, ಸಮಾಧಾನಕರವಾಗಿ ಆಗಿದೆಯೋ ಎಂದು ಪ್ರಶ್ನೆ ಹಾಕಿದರೆ ಇಲ್ಲವೆಂದು ಹೇಳಬೇಕಾಗುತ್ತದೆ. ಆದರೆ ಏನೂ ಪ್ರಗತಿಯಾಗಿಲ್ಲ, ಇದನ್ನು ನಿರ್ಲಕ್ಷಿಸಲಾಗಿದೆ ಮಾನ್ಯ ಹೆಗಡೆಯವರು ನೀರಾವರಿಗೆ ಪ್ರಾಶಸ್ತ್ಯ ಕೊಟ್ಟಿಲ್ಲವೆಂದು ಹೇಳುವುದು ಏನು ಇದೆ ಅದು ಸರಿಯಾದುದಲ್ಲ, ಇನ್ನೂ ಹೆಚ್ಚು ಹಣವನ್ನು ಕೊಡಬೇಕಾಗುತ್ತದೆ ಪ್ರಾಶಸ್ತ್ಯವನ್ನು ಕೊಡ ಬೇಕಾಗುತ್ತದೆ. ಆ ಬಗ್ಗೆ ಆಲೋಚನೆ ಮಾಡೋಣ ಈ ಬಗ್ಗೆ ಪೂರ್ಣವಾದ ಚಿತ್ರವನ್ನು ಕೊಡಬೇಕಾದರೆ ಇನ್ನೂ ಕೆಲವು ವಿಚಾರಗಳನ್ನು ಹೇಳಬೇಕಾಗುತ್ತದೆ. ನೀರಾವರಿ ಯೋಜನೆಯಿಂದ ಪ್ರಯೋಜನ ಪಡೆದಂತವರಿಂದ ವಾಟರ್ ರೇಟ್ ಮೂಲಕವಾಗಿ ಎಷ್ಟು ಆದಾಯ ಪ್ರತಿ ವರ್ಷ ಬರುತ್ತದೆ ಎಂಬುದನ್ನು ನಾವು ಯೋಚನೆ ಮಾಡಬೇಕು. ಅದರ ವಿವರವನ್ನು ಇಲ್ಲಿ ಕೊಡಬಯಸುತ್ತೇನೆ. ೧೯೮೨-೮೩ರಲ್ಲಿ ೪೨ ಕೋಟಿ ೫ಲಕ್ಷ ೧೯೮೩-೮೪ರಲ್ಲಿ ೭೩ ಕೋಟಿ ೪ ಲಕ್ಷ, ೧೯೮೪-೮೫ ರಲ್ಲಿ ೫೯ ಕೋಟಿ ೧ಲಕ್ಷ ೧೯೮೫-೮೬ರಲ್ಲಿ ೪೭ ಕೋಟಿ ೮ ಲಕ್ಷ, ೧೯೮೬-೮೭ರಲ್ಲಿ ೮೦ ಕೋಟಿ ೮ಲಕ್ಷ ೧೯೮೭-೮೮ರಲ್ಲಿ ೧೨೩ ಕೋಟಿ ಇದು ವಾಟರ್ ರೇಟ್‌ನಿಂದ ಬರತಕ್ಕಂತಹ ಆದಾಯ. This is an income we are getting from the irrigated area.

ಶ್ರೀ ಕೆ. ಹೆಚ್. ಪಾಟೀಲ್.—ಬೆಟರ್‌ಮೆಂಟ್ ಲೆವಿ ಹಾಕಬೇಕೆಂದು ಮಾನ್ಯ ದೇವರಾಜ್ ಅರಸ್ ರವರು ಇದ್ದಾಗ ಮಾಡಿದರು. ನೀವು ಸೂಟು ಬಿಡಬೇಕೆಂದು ಹೇಳುತ್ತಾ ಅಧಿಕಾರಕ್ಕೆ ಬಂದಿರಿ. ಸೂಟು ಬಿಟ್ಟಿದ್ದೀರಿ ಅದಕ್ಕೆ ಆದಾಯ ಕಡಿಮೆಯಾಯಿತು.

ಶ್ರೀ ಎಸ್. ಆರ್. ಬೊಮ್ಮಾಯಿ.—ನೀರಾವರಿ ಯೋಜನೆಗಳ ಮೈನ್‌ಟೆನೆನ್ಸ್‌ಗೆ ಎಷ್ಟು ಖರ್ಚಾಗಿದೆ ಎಂಬುದನ್ನು ಹೇಳುತ್ತೇನೆ. ಇತ್ತೀಚಿನದನ್ನು ಮಾತ್ರ ನಾನು ಹೇಳುತ್ತೇನೆ. ೧೯೮೩-೮೪ ರಲ್ಲಿ ೨೪ ಕೋಟಿ ೫೨ ಲಕ್ಷ ೧೯೮೪-೮೫ರಲ್ಲಿ ೨೮ ಕೋಟಿ ೭೨ ಲಕ್ಷ, ೧೯೮೫-೮೬ರಲ್ಲಿ ೩೨ ಕೋಟಿ ೮೩ ಲಕ್ಷ ೧೯೮೬-೮೭ರಲ್ಲಿ ೩೫ ಕೋಟಿ ೮೯ ಲಕ್ಷ, ೧೯೮೭-೮೮ರಲ್ಲಿ ೩೩ ಕೋಟಿ ೨೯ ಲಕ್ಷ ಮೈನ್‌ಟೆನೆನ್ಸ್ ಚಾರ್ಜ್ ಆಗಿದೆ. ಮೈನ್‌ಟೇನೆನ್ಸ್ ಚಾರ್ಜ್ ಏನು ಇದೆ ಮತ್ತು ಬರತಕ್ಕಂತಹ ಆದಾಯವೇನು ಇದೆ ಇದು ಹೆಚ್ಚು ಕಡಿಮೆ ಸರಿ ಹೋಗುತ್ತದೆ. ಇದರಲ್ಲಿ ಹೆಚ್ಚು ಹಣವೇನೂ ಉಳಿಯುವುದಿಲ್ಲ. ರೈತರು ಚಳುವಳಿಯನ್ನು ಮಾಡಿದ್ದಾರೆ ರೈತರ ವಿಚಾರ ಅವರ ಬೇಡಿಕೆಗಳು ಏನು ಇವೆ ಎಂಬುದು ನಮಗೆ ಗೊತ್ತಿದೆ. ಬೆಟರ್‌ಮೆಂಟ್ ಲೆವಿ ಬೇಡವೆಂದು ಹೇಳಿದ್ದು ನಾವು ಅಧಿಕಾರಕ್ಕೆ ಬಂದ ಮೇಲೆ ಅದನ್ನು ಅಬಾಲಿಷ್ ಮಾಡಿದೆವು. ನೀರಿನ ದರ ಹೆಚ್ಚು ಮಾಡುವುದರ ಬಗ್ಗೆ ನಮ್ಮ ವಿರೋಧವಿರಲಿಲ್ಲ. ಮಾನ್ಯ

ವಿದ್ಯುಚ್ಛಕ್ತಿ ಮಂತ್ರಿಗಳು ಇಲ್ಲಿಯೇ ಇದ್ದಾರೆ. ಪವರ್ ಪ್ರಾಜೆಕ್ಟ್‌ಗೆ ೨೦೦-೩೦೦ ಕೋಟಿ ಖರ್ಚು ಮಾಡುತ್ತಾರೆ ಯಾರಿಗೆ ವಿದ್ಯುಚ್ಛಕ್ತಿಯನ್ನು ಕೊಡುತ್ತಾರೆಯೋ ಅದರ ಮೇಲೆ ಚಾರ್ಜು ಮಾಡುತ್ತಾರೆ. ಇಂಡಸ್ಟ್ರಿಯಲಿಸ್ಟ್ ಇರಬಹುದು ಇಲ್ಲವೇ ಅವರು ಫಾರ್ಮರ್ ಇರಬಹುದು ಬೆಟರ್‌ಮೆಂಟ್ ಲೆವಿಯನ್ನು ಹಾಕುವುದಿಲ್ಲ. ಆದರೆ ವಿದ್ಯುಚ್ಛಕ್ತಿಗೆ ಚಾರ್ಜ್ ಹಾಕುತ್ತಾರೆ ಆ ಒಂದು ನೀತಿಯನ್ನು ಅನುಸರಿಸಬೇಕಾಗುತ್ತದೆ ಎಂಬ ದೃಷ್ಟಿಯಿಂದ ನಾನು ಈ ಮಾತನ್ನು ಹೇಳಿದೆ. ಅದೇ ರೀತಿ ವಾಟರ್ ರೇಟ್ ಬಗ್ಗೆ ಕೂಡ ಒಂದು ಮಾತನ್ನು ಹೇಳಬೇಕಾಗುತ್ತದೆ ನಾನು ಅಲ್ಲಿ ನಿಂತು ಒಂದು ಬೇಡಿಕೆಯನ್ನು ಇಟ್ಟಿದ್ದು ಆದರ ಅರಿವು ಕೂಡ ನನಗೆ ಇದೆ. ರೈತರಿಗೆ ಒಂದು ವಾಗ್ದಾನವನ್ನು ನಾವು ಮಾಡಿದ್ದೆವು. ನೀರಿನ ದರ ೧೯೭೬ರಲ್ಲಿ ಈ ಕಬ್ಬಿನ ವಿಚಾರ ಮಾತ್ರ ಹೇಳುತ್ತಿದ್ದೇನೆ ಉಳಿದದ್ದು ಎಲ್ಲಾ ಅದೇ ರೀತಿ ಇದೆ. ೧೯೭೮ರಲ್ಲಿ ೭೦೦ ರೂಪಾಯಿ ಮಾಡಿದ್ದೆವು. ಪುನಃ ಅದು ೨೭-೧೧-೮೭ ಕ್ಕೆ ೭೦೦ ಎಂದು ಮಾಡಿದರು ೧೯೮೮ರಲ್ಲಿ ೧೫೦ ರೂಪಾಯಿ ಆಗಿದೆ ಆಗ ಇದನ್ನು ರಿವೈಸ್ ಮಾಡಿದೆವು. ೧೯೮೫ರಲ್ಲಿ ಇದರ ಬಗ್ಗೆ ಆಜ್ಞೆಯನ್ನು ಹೊರಡಿಸಿ ೧೫೦ ರೂಪಾಯಿ ಮಾಡಿದ್ದೇವೆ. ಅದೇ ರೀತಿ ಗೋಧಿ ಬಗ್ಗೆ ಡ್ರೈಕ್ರಾಪ್ಸ್ ಬಗ್ಗೆ ಹೇಳುತ್ತೇನೆ. ೧೯೭೬ರಲ್ಲಿ ೧೮ ರೂಪಾಯಿ ೧೯೭೮ರಲ್ಲಿ ೩೦ ರೂಪಾಯಿ, ಈ ರೀತಿ ಮಾಡಿದ್ದೇವೆ ಇದರ ಜೊತೆಗೆ ಈ ನೀರಿನ ದರದಬಗ್ಗೆ ನರಗುಂದ ನವಲಗುಂದ ಬೇರೆ ಬೇರೆ ಕಡೆಯಲ್ಲಿ ಆದಂಥ ಚಳುವಳಿ ಏನು ಇದೆ, ಅದನ್ನು ಗಮನಿಸಿ ಕ್ರಮಕೈಗೊಂಡಿದ್ದೇವೆ, ಈಕರವನ್ನು ಒಂದು ಶಾಸ್ತ್ರೀಯವಾಗಿ ಹೇರಿಲ್ಲ, ನೀರನ್ನು ಕೊಡದೆ ವಸೂಲು ಮಾಡತಕ್ಕಂತದ್ದು ಏನು ಇದೆಯಲ್ಲಾ ಇದರ ಬಗ್ಗೆ ಒಂದು ವಾಗ್ದಾನವನ್ನು ಕೂಡಾ ಮಾಡಿದ್ದೆವು. ೧೯೭೬ರಲ್ಲಿ ಏನು ನೀರಿನ ದರ ಇದೆ, ಅದನ್ನು ಮಾತ್ರ ವಸೂಲು ಮಾಡುತ್ತೇವೆ. ಮತ್ತೆ ಹೆಚ್ಚು ಮಾಡುತ್ತೇವೆ, ಹಿಂದಿನ ದರವನ್ನೆಲ್ಲಾ ೭೬ರ ರೇಟ್‌ನಲ್ಲಿ ಮಾಡುತ್ತೇವೆಂದು ಹೇಳಿ ಆ ಪ್ರಕಾರ ೧೯೮೫ರಲ್ಲಿ ಆಜ್ಞೆಯನ್ನು ಹೊರಡಿಸಿದ್ದೇವೆ. ಇದರಿಂದ ಸುಮಾರು ೪೦-೫೦ ಕೋಟಿ ರೂಪಾಯಿ ವಸೂಲು ಮಾಡುವುದನ್ನು ಬಿಟ್ಟಿದ್ದೇವೆ ಇದರಿಂದ ಎಷ್ಟೋ ರೈತರಿಗೆ ಅನುಕೂಲವಾಗಿದೆ.

ಶ್ರೀ ಆರ್. ವೆಂಕಟರಾಮಯ್ಯ.—ಇದರ ಬಗ್ಗೆ ಹೋದಸಾರಿಯೇ ನೀರಿನ ಕರವನ್ನು ವಸೂಲು ಮಾಡಿಲ್ಲ ಎಂದು ಹೇಳಿದ್ದೀರಿ ಬೇಕಾದರೆ ಇದರ ಬಗ್ಗೆ ರೆವಿನ್ಯೂ ಕಮೀಷನರ್ ಹತ್ತಿರ ವೆರಿಫೈ ಮಾಡಿಸಿ, ಅಲ್ಲಿ ನೀರಿನ ದರವನ್ನು ವಸೂಲು ಮಾಡುತ್ತಿದ್ದಾರೆ. ಇದನ್ನು ನೋಡಿ.

ಶ್ರೀ ಆರ್. ಎಲ್. ಜಾಲಪ್ಪ.—ಅವರು ರಿಪ್ಲೈ ಮುಗಿಸಲಿ ಪದೇ ಪದೇ ಈ ರೀತಿ ಎದ್ದು ಕೇಳಿದರೆ ಹೇಗೆ ? ಆಮೇಲೆ ಕ್ಲಾರಿಫಿಕೇಷನ್ ಕೇಳಲಿ. ಈ ರೀತಿ ಡಿಸ್ಟರ್ಬ್ ಮಾಡಿದರೆ ಹೇಗೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಈ ವಿಚಾರದಲ್ಲಿ ನಾವು ಅಧ್ಯಯನ ಮಾಡುವಾಗ ಚರ್ಚೆ ಮಾಡುವಾಗ ಸಮಗ್ರ ಚಿತ್ರವನ್ನು ನೋಡಬೇಕು ಎನ್ನುವ ವಿಚಾರವನ್ನು ನಾನು ಹೇಳಿದ್ದೇನೆ. ತಾವು ಮಾತನಾಡುವಾಗ ಹೇಳಿದ ವಿಚಾರಗಳು ಇಷ್ಟು. ನೀರಾವರಿಗೆ ಹಣ ಕೊಡತಕ್ಕಂಥದ್ದರಲ್ಲಿ ಕಡಿಮೆಯಾಗಿದೆ ಎನ್ನುವ ಮಾತನ್ನು ಹೇಳಿದ್ದೀರಿ. ಇನ್ನೊಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅಂದರೆ ಈ ಖರ್ಚಿನ ವಿಚಾರ ನೋಡುವಾಗ ಟೋಟಲ್ ಬಜೆಟ್ ಏನು ಇದೆ, ಅದರಲ್ಲಿ ಎಷ್ಟು ಹಣ ಯಾವ ಇಲಾಖೆಗೆ ಖರ್ಚು ಮಾಡುತ್ತೇವೆ ಅದು ಬಹಳ ಮುಖ್ಯ. ಕೃಷಿ ಇರಬಹುದು ವಿದ್ಯುಚ್ಛಕ್ತಿ ಇರಬಹುದು, ನೀರಾವರಿ ಇರಬಹುದು, ಕೈಗಾರಿಕೆ ಇರಬಹುದು, ಜನ ಕಲ್ಯಾಣ ಕಾರ್ಯಕ್ರಮಗಳು ಇರಬಹುದು. ಇದನ್ನು ಕೂಡಾ ನೋಡಿದಾಗ ಕೃಷಿ ವಲಯ, ಗ್ರಾಮೀಣಾಭಿವೃದ್ಧಿ ಮತ್ತು ಸಹಕಾರಿ ವಲಯಗಳಲ್ಲಿ ೭೮ ರಿಂದ ೮೩ ನೇ ಇಸವಿ ಐದು ವರ್ಷದ್ದು ತೆಗೆದುಕೊಳ್ಳುತ್ತಿದ್ದೇನೆ. ಖರ್ಚು ಮಾಡಿದಂಥ ಹಣ ೧೪.೯೩ ಪರ್ಸೆಂಟ್ ೭೮ ರಿಂದ ೮೩ ರವರೆಗೆ ೮೩ ರಿಂದ ೮೮ರವರೆಗೆ ೧೪.೨೮ ಪರ್ಸೆಂಟ್. ಸಾಮಾಜಿಕ ಸೇವೆಗಳು ೨೦.೧೨ ಪರ್ಸೆಂಟ್ ೭೮ ರಿಂದ ೮೩ರವರೆಗೆ. ಅಮೇಲೆ ೮೩-೮೮ರವರೆಗೆ ೨೪.೫೧ ಪರ್ಸೆಂಟ್ ನೀರಾವರಿಗೆ ೧೯೭೮-೮೩ರವರೆಗೆ ೨೪.೫೪ ಪರ್ಸೆಂಟ್. ೧೯೮೩-೮೮ರವರೆಗೆ ೨೪.೧೯ ಪರ್ಸೆಂಟ್ ವಿದ್ಯುಚ್ಛಕ್ತಿಗೆ ೧೯೭೮-೮೩ರವರೆಗೆ ೨೪.೧೨ ಪರ್ಸೆಂಟ್. ೧೯೮೩-೮೮ರವರೆಗೆ ೨೦.೫೨ ಪರ್ಸೆಂಟ್. ಇಲ್ಲಿ ಕಡಿಮೆಯಾಗಿದೆ ಎಂದು ನಮ್ಮ ಕಾಲದಲ್ಲಿ ಅದನ್ನು ತೋರಿಸುತ್ತಿದ್ದೇವೆ. ಇತರೆ ವಲಯಗಳು ೧೯೭೮-೮೩ರವರೆಗೆ ೭.೫೫ ಪರ್ಸೆಂಟ್ ೧೯೮೩-೮೮ರವರೆಗೆ ೭.೬೨ ಪರ್ಸೆಂಟ್ ಅಂದರೆ ಬಜೆಟ್‌ನಲ್ಲಿ ಏನು ಹಣ ಇದೆ, ಅದನ್ನು ಖರ್ಚು ಮಾಡತಕ್ಕಂಥ ಆದ್ಯತೆ ಆದಂತ ಇಲಾಖೆಗೆ ಕೊಟ್ಟಂಥ ವಿಚಾರ ಸ್ಪಷ್ಟವಾಗಿದೆ. ಆದರೆ ಸಾಮಾಜಿಕ ಸೇವೆಗಳು ಇದ್ದಾವೆ, ಅಲ್ಲಿ ನಾಲ್ಕು ಪರ್ಸೆಂಟ್ ಹೆಚ್ಚು ಮಾಡಿದ್ದೇವೆ.

ಮಾನ್ಯ ವಿರೋಧ ಪಕ್ಷದವರು ಟೀಕೆ ಮಾಡಿದ್ದಾರೆ. ಇಲ್ಲವೆಂದು ಅಲ್ಲ. ಅದು ಅವರ ಅಭಿಪ್ರಾಯ. ಪಾಪ್ಯುಲಿಸ್ಟ್ ಪ್ರೋಗ್ರಾಮ್ ಎಂದು ನೀವು ಹೇಳಿದಿರಿ. ಆಂಟಿ ಪಾವರ್ಟಿ ಪ್ರೋಗ್ರಾಮ್ ಎಂದು ನಾವು ಹೇಳುವುದು. ಆಹಾರಧಾನ್ಯಗಳನ್ನು ಕೊಡತಕ್ಕ ಹಸಿರು ಕಾರ್ಡ್ ಯೋಜನೆ, ಬಟ್ಟೆ ಕೊಡತಕ್ಕ ಯೋಜನೆ, ಪಠ್ಯ ಪುಸ್ತಕ ಯೋಜನೆ ಇರಬಹುದು, ತಾಳಿ ಭಾಗ್ಯ ಯೋಜನೆ ಇರಬಹುದು, ಅದು ಒಂದು ಅಭಿಪ್ರಾಯ. ಇದರ ಜೊತೆಗೆ ರಾಜ್ಯದ ವಿವಿಧ ರಂಗಗಳಲ್ಲಿ ಆದಂತಹ ಪ್ರಗತಿಯನ್ನು ಗಮನದಲ್ಲಿಟ್ಟುಕೊಂಡು ಟೀಕೆ ಮಾಡಬೇಕಾಗಿದೆ. ಎಜುಕೇಷನ್ ಬಗ್ಗೆ ಹೇಳಬೇಕಾದರೆ ೭೮ ರಿಂದ ೮೩ರವರೆಗೆ ಆದಂತಹ ಪ್ರೈಮರಿ ಸ್ಕೂಲುಗಳು ೩೬,೩೫೬. ಕ್ಯುಮುಲೇಟೀವ್ಸ್ ೮೩ರಲ್ಲಿ ಆಗಿದ್ದು, ೪೦,೮೫೫. ಸೆಕೆಂಡರಿ ಸ್ಕೂಲುಗಳು, ೩೦,೦೭೮. ಡ್ರೈನೇಜ್ ವಾಟರ್–ಬೋರ್‌ವೆಲ್ಸ್‌ಗಳು ೩೬,೩೨೦, ೭೮ ರಿಂದ ೮೩ರವರೆಗೆ ೫೭,೯೪೪, ನಂಬರ್ ಆಫ್ ವಿಲೇಜಸ್‌ಗಳಿಗೆ ವಾಟರ್ ಕೊಟ್ಟಿರುವುದು ೯೪೯. ನಂಬರ್ ಆಫ್ ವಿಲೇಜಸ್ ಎಲೆಕ್ಟ್ರಿಫೈಡ್ ಆಗಿರುವುದು ೩,೨೨೨. ಮೊದಲ ಪಿರಿಯಡ್‌ನಲ್ಲಿ ೧೯೭೩–೭೮ರಲ್ಲಿ ೮,೦೫೦, ಟೋಟಲ್ ವಿಲೇಜಸ್ ಎಲೆಕ್ಟ್ರಿಫೈಡ್ ೧೮ ಪರ್ಸೆಂಟ್ ಮೊದಲು, ಈಗ ೨೬,೪೩ ಪರ್ಸೆಂಟ್ ಇರಿಗೇಷನ್ ಪಂಪ್ಸ್ ೩ ಲಕ್ಷ ೫೮ ಸಾವಿರ ಮುಂಚೆ ಆದದ್ದು, ಇವೊತ್ತು ೫ ಲಕ್ಷ ೭೭ ಸಾವಿರ. ಹಣದುಬ್ಬರ ಇದೆ ಎಂದು ಮಾನ್ಯ ಕೆ.ಹೆಚ್. ಪಾಟೀಲ್‌ರವರು ಹೇಳಿದರು. ರೂಪಾಯಿ ಬೆಲೆ ಇಳಿಯುತ್ತಿದೆ. ನಾವು ಫಿಸಿಕಲ್ ಪ್ರೋಗ್ರೆಸ್ ಆಗಿರುವುದನ್ನು ನೋಡಬೇಕು. ಎಷ್ಟು ರಸ್ತೆಗಳು ಆಗಿವೆ, ಎಷ್ಟು ಶಾಲೆಗಳು ಆಗಿವೆ, ಎಷ್ಟು ಕುಡಿಯುವ ನೀರಿನ ಯೋಜನೆಗಳು ಆಗಿವೆ. ಎಷ್ಟು ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಕೊಟ್ಟಿದ್ದೇವೆ ಎಂಬುದನ್ನು ನೋಡಿ. ಹಣದುಬ್ಬರದ ಜೊತೆಗೆ ಆಗಿರತಕ್ಕ ಪ್ರಗತಿಯ ಬಗ್ಗೆ, ಆದ್ಯತೆಯ ವಿಚಾರವನ್ನು ಸಹ ಗಮನದಲ್ಲಿಡಬೇಕಾಗುತ್ತದೆ, ಒಂದು ಮಾತನ್ನು ಇಲ್ಲಿ ಹೇಳಬೇಕಾಗಿದೆ. ನೀರಾವರಿಗೆ ಆದ್ಯತೆ ಬೇಕೋ, ವಿದ್ಯುಚ್ಛಕ್ತಿಗೆ ಆದ್ಯತೆ ಬೇಕೋ ಎಂಬ ಬಗ್ಗೆ ಪ್ರಶ್ನೆ ಬರುತ್ತದೆ. ನಾನು ಈಗಾಗಲೇ ಹೇಳಿದ್ದೇನೆ. ಕೃಷಿ ಕುಟುಂಬಗಳು, ಕೃಷಿ ಕಾರ್ಮಿಕರ ಕುಟುಂಬಗಳು ಎಷ್ಟು ಇವೆ, ಕೃಷಿಯೇತರ ಕುಟುಂಬಗಳು ಎಷ್ಟು ಇವೆ ಎಂಬುದನ್ನು ನೋಡಬೇಕು. ಸಮಾಜದಲ್ಲಿ ನೂರಕ್ಕೆ ೭೦ ಜನರಿಗೆ ಭೂಮಿ ಇಲ್ಲ. ಅಂತಹವರಿಗೆ ಸಾಮಾಜಿಕ ನ್ಯಾಯವನ್ನು ಕೊಡಬೇಕಾಗಿದೆ. ಅವರುಗಳಿಗೆ ಶಾಲೆಯನ್ನು ಕೊಡತಕ್ಕ ವಿಚಾರದಲ್ಲಿ ಆಗಲಿ, ವಿದ್ಯುಚ್ಛಕ್ತಿ ಕೊಡತಕ್ಕ ವಿಚಾರದಲ್ಲಿಯಾಗಲೀ, ಸಮಾಜಿಕವಾಗಿ ನ್ಯಾಯ ಮಾಡತಕ್ಕದ್ದು ಅಗತ್ಯವಾಗಿದೆ. ಇದರಲ್ಲಿ ಕೆಲವೊಂದು ಯೋಜನೆಗಳನ್ನು ಮಾಡದೇ ಹೋದರೆ ಅವರು ಎಲ್ಲಿಯವರೆಗೆ ಯೋಜನೆಗಳಿಗಾಗಿ ಕಾಯಬೇಕಾಗುತ್ತದೆ. ಇದು ತಾತ್ವಿಕವಾದ ವಿಚಾರ. ಇದರಲ್ಲಿ ಎರಡು ಅಭಿಪ್ರಾಯಗಳಿವೆ. ಮೊದಲು ನೀರಾವರಿ ಯೋಜನೆಗಳಿಗೆ ಹಣವನ್ನು ಒದಗಿಸ ಬೇಕೋ, ಅಥವಾ ವಿದ್ಯುಚ್ಛಕ್ತಿ ಯೋಜನೆಗಳನ್ನು ಮಾಡಿ ಬಿಡಬೇಕೋ ಎಂಬ ಸಹಜವಾದ ಪ್ರಶ್ನೆ ಬರುತ್ತದೆ. ಆಮೇಲೆ ಶಾಲೆಗಳನ್ನು ಪ್ರಾರಂಭಿಸುವುದು, ಕುಡಿಯುವ ನೀರಿನ ಯೋಜನೆಯನ್ನು ಕೊಡುವುದು ಮುಂತಾದ ವಿಚಾರಗಳು ಬರುತ್ತವೆ. ಇಲ್ಲಿ ಇವೆರಡರ ನಡುವೆ ಸಮತೋಲನ ತರತಕ್ಕಂಥ ಸಾಮಾಜಿಕ ನ್ಯಾಯವನ್ನು, ಕೊಡತಕ್ಕಂಥ ಕೆಲಸವನ್ನು ಮಾಡಬೇಕು. ನಾವು ನೀರಾವರಿಗೆ ಆದ್ಯತೆ ಕೊಡಬೇಕು, ವಿದ್ಯುಚ್ಛಕ್ತಿಗೆ ಆದ್ಯತೆ ಕೊಡಬೇಕು. ಹಾಗೆಯೇ ಸಮಾಜದಲ್ಲಿರತಕ್ಕ ದುರ್ಬಲರಿಗೆ ಸಾಮಾಜಿಕ ನ್ಯಾಯ ಮಾಡತಕ್ಕದ್ದು ಬಹಳ ಅವಶ್ಯಕ ಇದೆ, ಹಸಿರು ಕಾರ್ಡಿನ ವಿಚಾರವನ್ನು ಹೇಳುತ್ತಿದ್ದೇನೆ, ಒಂದು ಕುಟುಂಬಕ್ಕೆ ೧೦ ಕಿಲೋ ಅಕ್ಕಿ ಸಾಲದು. ಎರಡು ರೂಪಾಯಿಗೆ ಒಂದು ಕಿಲೋ ಜೋಳ ಕೊಡುತ್ತಿದ್ದೇವೆ. ಮಾರುಕಟ್ಟೆಯಲ್ಲಿ ಅಕ್ಕಿ ಬೆಲೆ ೫ ರೂಪಾಯಿ ಇದೆ. ಜೋಳ ನಾಲ್ಕು ರೂಪಾಯಿ ಇದೆ. ಕೃಷಿ ಕಾರ್ಮಿಕರಿಗೆ, ಬಡಕುಟುಂಬಗಳಿಗೆ ನಾವು ಯಾವ ರೀತಿ ಸಹಾಯ ಮಾಡುತ್ತಿದ್ದೇವೆ ಎಂಬುದನ್ನು ನೋಡಬೇಕು. ಅವರಿಗೆ ಏನಾದರೂ ತುಟ್ಟಿ ಭತ್ಯೆ ಇದೆಯೇ? ಅವರೇನು ಸಂಬಳ ಪಡೆಯುವವರಾ? ಆ ತರಹ ಅವರು ಏನಾದರೂ ಏರಿಕೆಯನ್ನು ಪಡೆಯುತ್ತಾರೆಯೇ, ಏನೂ ಇಲ್ಲ. ಕೊನೆಯ ಪಕ್ಷ ದಿನಕ್ಕೆ ಹತ್ತು ರೂಪಾಯಿಗಳನ್ನು ದುಡಿಯುವವರಿಗೆ ಎರಡು ರೂಪಾಯಿಗಳಿಗೆ ಒಂದು ಕೆ.ಜಿ. ಯಂತೆ ಅಕ್ಕಿ ಕೊಟ್ಟರೆ, ಅದನ್ನು ಕೊಳ್ಳುವ ಶಕ್ತಿ ಇರುತ್ತದೆ. ಇಂತಹವರು ೫ ಕೆ.ಜಿ. ಅಕ್ಕಿಯನ್ನು ಕೊಂಡುಕೊಂಡು ಮನೆಗೆ ತೆಗೆದುಕೊಂಡು ಹೋಗುತ್ತಾರೆ. ಈ ಯೋಜನೆ ಇಲ್ಲದಿದ್ದರೆ ಅವರು ಹೊರಗಡೆ ಮಾರುಕಟ್ಟೆಯಲ್ಲಿ ಕೆ.ಜಿ.ಗೆ ೫ ರೂಪಾಯಿಗಳಂತೆ ಕೇವಲ ಎರಡು ಕೆ.ಜಿ. ಅಕ್ಕಿಯನ್ನು ಮಾತ್ರ ಕೊಳ್ಳಬೇಕಾಗುತ್ತದೆ. ಈ ಒಂದು ಕಲ್ಪನೆಯನ್ನು ನಾವು ಮನಸ್ಸಿನಲ್ಲಿಟ್ಟುಕೊಂಡು ಇದನ್ನು ಜಾರಿಗೆ ತಂದಿದ್ದೇವೆ. ಇದು ನಾನ್ ಪ್ರೊಡಕ್ಟೀವ್ ಇನ್‌ವೆಸ್ಟ್‌ಮೆಂಟ್ ಎಂದು ಕೆಲವರು ಹೇಳುತ್ತಾರೆ. ಆದರೆ ಅದು ತಪ್ಪು ಕಲ್ಪನೆ. ಈ ಬಗ್ಗೆ ನನ್ನ ಸ್ಪಷ್ಟವಾದ ಅಭಿಪ್ರಾಯವೆಂದರೆ,

ನಾವು ಕೃಷಿ ಕಾರ್ಮಿಕರಿಗೆ ಸಾಕಷ್ಟು ಪೌಷ್ಟಿಕ ಆಹಾರವನ್ನು ಕೊಟ್ಟರೆ, ಅವರು ಹೆಚ್ಚು ಶ್ರಮಪಟ್ಟು ಕೆಲಸ ಮಾಡುತ್ತಾರೆ. ಆಗ ಉತ್ಪಾದನೆ ಸಹ ಹೆಚ್ಚಾಗುತ್ತದೆ. ಈ ಕಾರಣದಿಂದ ಅವರಿಗೆ ಈಗ ಕೊಡುತ್ತಿರುವ ಸಹಾಯವನ್ನು ಇನ್ನೂ ಹೆಚ್ಚು ಮಾಡಬೇಕಾಗುತ್ತದೆ. ಅವರು ಹೆಚ್ಚು ತಿಂದರೆ ಹೆಚ್ಚು ಕೆಲಸ ಮಾಡುತ್ತಾರೆ. ಆದರೆ ಅವರಿಗೆ ಹೊಟ್ಟೆ ತುಂಬುವಷ್ಟು ಆಹಾರವನ್ನು ಕೊಡಲು ನಮಗೆ ಕಳೆದ ೪೦ ವರ್ಷಗಳಿಂದಲೂ ಸಹ ಸಾಧ್ಯವಾಗಿಲ್ಲ. ನಾವು ಅಧಿಕಾರಕ್ಕೆ ಬಂದು ೫ ವರ್ಷಗಳಾಯಿತು. ಆದರೆ ನಮ್ಮ ಕೈಯಲ್ಲಿ ಸಹ ಇದು ಇನ್ನೂ ಸಾಧ್ಯವಾಗಿಲ್ಲ. ನಾವು ಬಡವರಿಗೆ ರಿಯಾಯಿತಿ ಬೆಲೆಯಲ್ಲಿ ಕೊಡುತ್ತಿರುವ ಸೀರೆ ಮತ್ತು ಪಂಚೆ ಬಗ್ಗೆ ಸಹ ಟೀಕೆಗಳು ಕೇಳಿ ಬರುತ್ತಿದೆ. ಆದರೆ ಇದು ಮಲ್ಟಿ ಪರ್‌ಪಸ್ ಸ್ಕೀಮ್ ಆಗಿದೆ. ಹೇಗೆಂದರೆ ನಾವು ೨೫ ರೂಪಾಯಿಗಳಷ್ಟು ಬೆಲೆ ಬಾಳುವ ಸೀರೆಯನ್ನು ೧೫ ರೂಪಾಯಿಗಳಿಗೆ ಮತ್ತು ೨೫ ರೂಪಾಯಿಗಳಷ್ಟು ಬೆಲೆ ಬಾಳುವ ಪಂಚೆಯನ್ನು ಹತ್ತು ರೂಪಾಯಿಗಳಿಗೆ ಬಡವರಿಗೆ ಕೊಟ್ಟರೆ ಅವರಿಗೆ ಅನುಕೂಲವಾಗುತ್ತದೆ, ಅವರು ವರ್ಷಕ್ಕೆ ಎರಡು ಜೊತೆ ಬಟ್ಟೆಗಳನ್ನಾದರೂ ಇದರಿಂದ ಕೊಳ್ಳಲು ಸಾಧ್ಯವಾಗುತ್ತದೆ. ಈಗ ನಮ್ಮ ರಾಜ್ಯದಲ್ಲಿ ೩ ಲಕ್ಷ ನೇಕಾರರು ಇದ್ದಾರೆ. ಇವರು ಈಗ ಉತ್ಪಾದನೆ ಮಾಡುವಂತಹ ಎಲ್ಲ ಸೀರೆ ಮತ್ತು ಪಂಚೆಗಳನ್ನು ನಾವು ಕೊಳ್ಳುತ್ತಿದ್ದೇವೆ. ಇದಕ್ಕೂ ಮೊದಲು ಅವರು ನೇಯ್ದ ಬಟ್ಟೆಗಳನ್ನು ೬ ತಿಂಗಳವರೆಗೆ ಇಲ್ಲವೇ ಒಂದು ವರ್ಷದವರೆಗೆ ಮನೆಯಲ್ಲಿಯೇ ಇಟ್ಟಿರಬೇಕಾಗುತ್ತಿತ್ತು, ಏಕೆಂದರೆ, ಅವು ಸಕಾಲದಲ್ಲಿ ಮಾರಾಟವಾಗುತ್ತಿರಲಿಲ್ಲ. ಇದು ಮಾನ್ಯ ಪಾಟೀಲ್ ಅವರಿಗೂ ಸಹ ಗೊತ್ತಿದೆ. ಆದರೆ ಈಗ ನಾವು ಅವರು ನೇಯ್ದ ಎಲ್ಲ ಬಟ್ಟೆಗಳನ್ನು ಕೊಂಡುಕೊಳ್ಳುತ್ತಿದ್ದೇವೆ. ಇದೂ ಸಹ ಸಾಲದೆ ಹೊರಗಡೆಯಿಂದ ಸಹ ತರಿಸುತ್ತಿದ್ದೇವೆ. ಇದರ ಬದಲು ನಮ್ಮ ನೇಕಾರರಿಗೇ ಹೆಚ್ಚು ಮಗ್ಗಗಳನ್ನು ಕೊಟ್ಟು ಇಲ್ಲಿಯೇ ನಮಗೆ ಬೇಕಾದ ಬಟ್ಟೆಗಳನ್ನು ನೇಯಿಸಲು ವ್ಯವಸ್ಥೆ ಮಾಡಬೇಕಾಗಿದೆ. ಅದನ್ನು ನಾವು ಮಾಡುತ್ತಿದ್ದೇವೆ. ಈ ಯೋಜನೆಯಿಂದ ರೈತರಿಗೂ ಲಾಭವಾಗುತ್ತಿದೆ. ಹೇಗೆಂದರೆ ರೈತರು ಬೆಳೆದ ಹತ್ತಿಯನ್ನೆಲ್ಲಾ ನಮ್ಮ ಕೋ-ಆಪರೇಟಿವ್ ಸ್ಪಿನ್ನಿಂಗ್ ಮಿಲ್‌ನವರು ಕೊಳ್ಳುತ್ತಿದ್ದಾರೆ. ಆದ್ದರಿಂದ ಈ ಬಗ್ಗೆ ಟೀಕೆ ಮಾಡುವುದಕ್ಕೆ ಮೊದಲು ಇದನ್ನು ಸಮಗ್ರವಾಗಿ ನೋಡುವುದು ಒಳ್ಳೆಯದು, ಇದು ಕಡುಬಡವರಿಗೆ, ನೇಕಾರರಿಗೆ ಮತ್ತು ರೈತರಿಗೆ ಅನುಕೂಲವಾಗುವಂತಹ ಒಂದು ಮಲ್ಟಿ ಪರ್‌ಪಸ್ ಸ್ಕೀಮ್ ಆಗಿದೆ. ಇದರಿಂದ ನೇಕಾರರ ಒಂದು ಸಮಸ್ಯೆ ಸಹ ಪರಿಹಾರ ಆಗಿದೆ. ರೈತರಿಗೂ ಸಹಾಯ ಮಾಡಿದಂತೆ ಆಗಿದೆ. ಆದ್ದರಿಂದ ಈ ಬಗ್ಗೆ ಸುಮ್ಮನೆ ಟೀಕೆಗಾಗಿ ಟೀಕೆ ಮಾಡುವುದು ಸರಿಯಲ್ಲ. ನಮ್ಮ ಜನತಾ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ನಾವು ವಿಧವಾ ವೇತನ ಯೋಜನೆಯನ್ನು, ತಾಳಿ ಭಾಗ್ಯ ಯೋಜನೆಯನ್ನು ವಿದ್ಯಾವಿಕಾಸ ಯೋಜನೆಯನ್ನು, ಹಸಿರು ಕಾರ್ಡ್ ಯೋಜನೆಯನ್ನು, ತಾಳಿ ಭಾಗ್ಯ ಯೋಜನೆಯನ್ನು ಮತ್ತು ಹೆರಿಗೆ ಭತ್ಯ ಯೋಜನೆಯನ್ನು ಜಾರಿಗೆ ತಂದಿದ್ದೇವೆ. ವೃದ್ಧಾಪ್ಯ ವೇತನ ಯೋಜನೆ ಮೊದಲಿನಿಂದಲೂ ಜಾರಿಯಲ್ಲಿದೆ. ಈ ಯೋಜನೆಗೆ ೧೯೭೮ ರಿಂದ ೧೯೮೩ರವರೆಗೆ ೭೨.೨೫ ಕೋಟಿ ರೂಪಾಯಿಗಳು ಖರ್ಚಾಗಿದ್ದರೆ, ಅಲ್ಲಿಂದೀಚೆಗೆ ಇಲ್ಲಿಯವರೆಗೆ ೧೫೨.೯೯ ಕೋಟಿ ರೂಪಾಯಿಗಳು ಖರ್ಚಾಗಿದೆ. ಅದೇ ರೀತಿ ನಾವು ಅಧಿಕಾರಕ್ಕೆ ಬಂದಮೇಲೆ, ಇಲ್ಲಿಯವರೆಗೆ ವಿಧವಾ ವೇತನಕ್ಕಾಗಿ ೬೪ ಕೋಟಿ ರೂಪಾಯಿಗಳನ್ನು, ಹೆರಿಗೆ ಭತ್ಯಕ್ಕಾಗಿ ೧೪ ಕೋಟಿ ರೂಪಾಯಿಗಳನ್ನು. ತಾಳಿಭಾಗ್ಯ ಯೋಜನೆಗೆ ೬೫ ಲಕ್ಷ ರೂಪಾಯಿಗಳನ್ನು, ಗ್ರೀನ್ ಕಾರ್ಡ್ ಯೋಜನೆಗೆ ೮೦.೯೩ ಕೋಟಿ ರೂಪಾಯಿಗಳನ್ನು, ವಿದ್ಯಾವಿಕಾಸ ಯೋಜನೆಗೆ ೪೧ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ ಈ ಕೆಲವು ಯೋಜನೆಗಳ ಮೂಲಕ ನಾವು ಸಾಮಾಜಿಕ ನ್ಯಾಯವನ್ನು ಒದಗಿಸಿದಂತೆ ಆಗಲಿಲ್ಲವೇ ? ಇದರ ಒಂದು ಅವಶ್ಯಕತೆ ಇದೆಯೋ ಅಥವಾ ಇಲ್ಲವೋ ಎಂಬುದನ್ನು ತಾವೇ ಹೇಳಬೇಕು. ನಾನು ಹೆಚ್ಚಿನ ವಿವರಕ್ಕೆ ಹೋಗುವುದಿಲ್ಲ. ವೃದ್ಧಾಪ್ಯ ವೇತನ ಯೋಜನೆ ಹಿಂದಿನಿಂದಲೂ ಜಾರಿಯಲ್ಲಿದೆ. ಹೆರಿಗೆ ಭತ್ಯ ಕೊಡುವ ಬಗ್ಗೆ ಇಲ್ಲಿ ಸಾಕಷ್ಟು ಚರ್ಚೆ ಆಗಿದೆ. ಆದರೆ ಸಾಮಾಜಿಕ ನ್ಯಾಯವನ್ನು ಒದಗಿಸುವಂತಹ ಈ ಕೆಲವು ಯೋಜನೆಗಳು ಅತಿ ಅವಶ್ಯಕವಾಗಿದೆ. ಕಡುಬಡವರಿಗೆ ಕೊನೆಯಪಕ್ಷ ಸ್ವಲ್ಪವಾದರೂ ಸಹಾಯ ಮಾಡಬೇಕೆಂದು ನಾವು ಈ ಯೋಜನೆಗಳನ್ನು ಜಾರಿಗೆ ತಂದಿದ್ದು. ಕೇವಲ ಜನಪ್ರಿಯತೆಗೋಸ್ಕರವಾಗಿ ನಾವು ಇದನ್ನು ಜಾರಿಗೆ ತಂದಿಲ್ಲ. ಇವೆಲ್ಲಾ ಕಡುಬಡವರಿಗೆ ಸಹಾಯ ಮಾಡುವಂತಹ ಯೋಜನೆಗಳಾಗಿವೆ. ಈ ಯೋಜನೆಗಳ ಬಗ್ಗೆ ಇಲ್ಲಿ ಸಾಕಷ್ಟು ಟೀಕೆಗಳು ಬಂದಿದ್ದರಿಂದ ನಾನು ಇಷ್ಟು ವಿವರಕ್ಕೆ ಹೋಗಬೇಕಾಗಿ ಬಂತು.

ಮಾನ್ಯ ಅಧ್ಯಕ್ಷರೆ, ನೀರಾವರಿ ವಿಚಾರದಲ್ಲಿ ಹೇಳಿದ್ದೇನೆ. ಇನ್ನು ಕಾಡಾ ವಿಚಾರದಲ್ಲಿ ಒಂದು ವಿಚಾರ ಹೇಳಬೇಕು. ಮಾನ್ಯ ಶ್ರೀನಿವಾಸ್‌ರವರ ಇದರ ಬಗ್ಗೆ ಬಹಳ ಟೀಕೆ ಮಾಡಿದರು. ಅವರು ಟೀಕೆ ಮಾಡಿದ್ದು ಸರಿಯಿದೆ. ಇನ್ನೂ ಕಾನೂನು ಆಗಿಲ್ಲ. ಅವರು ಪ್ರಪೋಸ್ಡ್ ಅಮೆಂಡ್‌ಮೆಂಟನ್ನು ಓದಿ ಹೇಳಿದರು. ಅದರಲ್ಲಿ ಕ್ಲಾಸ್ ಇದೆ. ತಾವು ಆಜ್ಞೆಯಾಗಿದೆ ಎಂದು ಹೇಳಿದಿರಲ್ಲಾ ಅದು ಪ್ರಪೋಸ್ ಅಮೆಂಡ್‌ಮೆಂಟ್.

ಶ್ರೀ ಕೆ.ಹೆಚ್. ಶ್ರೀನಿವಾಸ್.— ಸರ್ಕಾರಿ ಆಜ್ಞೆ ಮಾಡಿದ್ದೀರಿ.

ಶ್ರೀ ಎಸ್. ಆರ್. ಬೊಮ್ಮಾಯಿ.— ಇನ್ನೂ ಆರ್ಡರ್ ಇಷ್ಯೂ ಆಗಿಲ್ಲ, ಅದು ಇನ್ನೂ ಕಾನೂನು ಆಗಿಲ್ಲ.

ಶ್ರೀ ಕೆ. ಹೆಚ್. ಶ್ರೀನಿವಾಸ್.— ಇನ್ನೂ ಕಾನೂನು ಆಗಿಲ್ಲ ಅಂದ ಮೇಲೆ ಅದನ್ನು ತಡೆಹಿಡಿಯಿರಿ.

ಶ್ರೀ ಎಸ್. ಆರ್. ಬೊಮ್ಮಾಯಿ.— ತಮ್ಮ ಸಲಹೆ ಹಾಗೂ ಪಬ್ಲಿಕ್ ಅಕೌಂಟ್ಸ್ ಕಮಿಟಿಯಲ್ಲಿ ಕೊಟ್ಟಂಥ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಮಾಡುತ್ತಾ ಇದ್ದೇವೆ. ಕಾಡಾ ವಿಚಾರದಲ್ಲಿ ಹಣ ಖರ್ಚಿನ ವಿಚಾರವನ್ನು ತಾವು ಹೇಳಿದಿರಿ. ಅದು ಒಳ್ಳೆಯ ಯೋಜನೆ, ಅದು ಯೋಜನಾ ಇಲಾಖೆಯ ಕೆಳಗೆ ಇತ್ತು, ಅದು ನೀರಾವರಿ ಇಲಾಖೆಯಲ್ಲಿ ಇದ್ದರೆ ಸ್ವಲ್ಪ ದಕ್ಷವಾಗಿ ಚೆನ್ನಾಗಿ ಆಗುತ್ತದೆ ಎನ್ನುವ ಇಚ್ಛೆಯಿಂದ ಅದಕ್ಕೆ ಕೊಟ್ಟಿದ್ದೇವೆ. ಅದು ನೀರಾವರಿಗೆ ಸಂಬಂಧಪಟ್ಟ ವಿಚಾರವೇ. ಅಲ್ಲೂ ಕೂಡ ತಾವು ಹೇಳಿದಂತೆ ಹೆಚ್ಚಿನ ಪ್ರಗತಿಯಾಗಿಲ್ಲ. ಅಲ್ಲಿ ಇನ್ನೂ ಅಲ್ಲಿ ಇನ್ನು ಹೆಚ್ಚಿನ ಒಂದು ಕೊ ಆರ್ಡಿನೇಷನ್ ಬೇಕಾಗಿದೆ ಮತ್ತು ಹೆಚ್ಚಿನ ಹಣ ಒದಗಿಸಿಕೊಡಬೇಕಾಗಿವೆ. ಆ ಬಗ್ಗೆ ಹೆಚ್ಚಿನ ಅಧಿಕಾರ ಕೊಡಬೇಕಾಗಿದೆ. ಅದು ಸರ್ಕಾರದ ಆಲೋಚನೆಯಲ್ಲಿದೆ.

SRI. K. H. SRINIVASA.— This CADA has drawn the attention of the Indian Express and they have written a beautiful Editorial after we had presented the PAC Report. I am sending this paper to you. I will just read some portions our of it.

> "The observations of the Karnataka Legislature P. A. C. on the working of the Command Area Development Authority in the State deserves close examinations. Moreso, because they provide yet another reminder of the fact that the CALAS have failed to come up to the expectations almost every where. The Karnataka PAC has expressed its dissatisfaction over the gap between irrigation potential and its utilisation, the poor progress in the construction of field channels, Ayakut roads, farm development works, violation of irrigation rules, and cropping pattern by farmers and more important the lack of co-ordianation and understanding among the personnel of various departments functioning in CALAS"

They say that our recommendations and study jointly undertaken in 1987 by the Union Ministry of water resources and Ahmedabad I.I.M. have pointed out the same drawback as mentioned in the Karnataka P.A.C. report ಇದರಲ್ಲಿ ಡೀಟೇಲಾಗಿ ಅವರು ಪ್ರಸ್ತಾಪ ಮಾಡಿದ್ದಾರೆ. ಆದ್ದರಿಂದ ಎಂಟೈರ್ ರಿಪೋರ್ಟ್ ಇಟ್ಟುಕೊಂಡು ಕಾಡಾದ ಬಗ್ಗೆ ತೀರ್ಮಾನ ಮಾಡಿ, ಅಲ್ಲಿಯವರೆಗೆ ತೀರ್ಮಾನ ಮಾಡಬೇಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.— ಪ್ರಪೋಸ್ಡ್ ಅಮೆಂಡ್‌ಮೆಂಟ್‌ನಲ್ಲಿ ಏನಿದೆ, ಅಂದರೆ Even in the proposed amendment we have said·

"All activities relating to agriculture, horticulture, fisheries, sericulture, marketing atc., In the command area shall be planned and carried out by the Z.P.s in consultation with CALAs."

ಶ್ರೀ ಕೆ. ಎಚ್. ಶ್ರೀನಿವಾಸ್.— ಜಿಲ್ಲಾ ಪರಿಷತ್ತು ತನ್ನ ಆಕ್ಟಿವಿಟೀಸ್‌ಗಳನ್ನು ಕಾಡಾ ಕೇಳಿಕೊಂಡು ಮಾಡಬೇಕೆನ್ನುವುದು ಸರಿ. ಆದರೆ ಇಲ್ಲಿ ಜಿಲ್ಲಾ ಪರಿಷತ್ತನ್ನು ಕೇಳಿಕೊಂಡು ಕಾಡಾ ತನ್ನ ಆಕ್ಟಿವಿಟೀಸ್‌ಗಳನ್ನು ಮಾಡಬೇಕೆಂದು ಇದೆ. Whatever now you say is altogether a different proposition and for that, I have no objection.

SRI S. R. BOMMAI.— I have read proposed amendment clause. I will read it again :

"All activities relating to Agriculture, Horticulture, Fisheries, Sericulture, 'Marketing etc., in the Command Area shall be planned and carried out by Zilla Parishad in consultation with..."

SRI K· H. SRINIVAS.— All activities that are being carried out by Zilla Parishad. This is what it says.

SRI S. R. BOMMAI.— If necessary, the clarity will be brought. That is the intention·

ಶ್ರೀ ಎಸ್. ಆರ್. ಬೊಮ್ಮಾಯಿ.— ಮಾನ್ಯ ಸಭಾಪತಿಗಳೇ, ಅನೇಕ ಸಲ ಈ ವಿಚಾರವನ್ನು ಹೇಳಿದ್ದಾರೆ. ಮಾನ್ಯ ದೇವೇಗೌಡರೂ ಸಹ ನೀರನ್ನು ಉಪಯೋಗ ಮಾಡುವ ವಿಚಾರದಲ್ಲಿ ಹೇಳಿದ್ದಾರೆ. ನೀರನ್ನು ಉಪಯೋಗ ಮಾಡುವ ವಿಚಾರದಲ್ಲಿ ಡ್ಯಾಮ್ ಹತ್ತಿರ ಇರುವವರು ಕಾಲುವೆ ಸಮೀಪ ಇರತಕ್ಕವರು ನೀರನ್ನು ಸರಿಯಾಗಿ ಬಳಸಬೇಕು. ನಮ್ಮ ರಾಜ್ಯದಲ್ಲಿ ನೀರನ್ನು ಹಿಡಿದಿಟ್ಟಿದ್ದೇವೆ. ಕಾಲುವೆ ಮಾಡತಕ್ಕ ಕೆಲಸ ಸ್ವಲ್ಪ ತಡವಾಗಿದೆ. ಎಲ್ಲಿ ಕಾಲುವೆಗಳು ಬಂದಿವೆಯೊ, ಅಲ್ಲಿ ರೈತರು ಕಬ್ಬು, ಬತ್ತವನ್ನು ಬೆಳೆದಿದ್ದಾರೆ. ಸಂಪೂರ್ಣವಾಗಿ ನೀರಿನ ಪ್ರಯೋಜನವನ್ನು ಪಡೆಯಬೇಕಾದರೆ ಅಚ್ಚುಕಟ್ಟುದಾರರಲ್ಲಿ ಪ್ರತಿಯೊಬ್ಬ ರೈತನಿಗೂ ನೀರು ಮುಟ್ಟಬೇಕಾದರೆ ನಮ್ಮ ನೀರಾವರಿ ಹಂಚಿಕೆಯ ವ್ಯವಸ್ಥೆಯಲ್ಲಿ ಸಮಗ್ರವಾದ ಬದಲಾವಣೆ ಆಗಬೇಕು.

SRI K. H. SRINIVAS.— It will be m re positive.

SRI S. R. BOMMAI.— That is the intention of the amendment. Then, cropping pattarn will have to be enforced. ಇದರ ಬಗ್ಗೆ ಒಂದು "ಪೊಲಿಟಿಕಲ್ ವಿಲ್" ಸರ್ಕಾರಕ್ಕೆ ಇರಬೇಕಾಗುತ್ತದೆ. ಈ ಒಂದು ಕೆಲಸವನ್ನು ಹಿಂದಿನಿಂದಲೂ ಮಾಡಿಲ್ಲ. ರಾಜಕೀಯ ಒತ್ತಡಕ್ಕಾಗಿ ಹಾಗೂ ಬೇರೆ ಬೇರೆ ಕಾರಣಗಳಿಂದಾಗಿ ಮುಂದೂಡುತ್ತಾ ಬಂದಿದ್ದಾರೆ. ಇನ್ನು ಇದು ಮುಂದುವರಿಯಕೂಡದು. ಸಂಪೂರ್ಣವಾಗಿ, ಯೋಜನಾ ಬದ್ಧವಾಗಿ ಶಾಸ್ತ್ರೀಯವಾಗಿ ನೀರನ್ನು ಹಂಚಿಕೆ ಮಾಡುವುದರ ಬಗ್ಗೆ ಸರ್ಕಾರದವರು ಆಲೋಚನೆ ಮಾಡಿದ್ದಾರೆ. ಅವಶ್ಯಕಬಿದ್ದರೆ ಯಾರು ನೀರಿನ ಹಂಚಿಕೆಯಲ್ಲಿ ದುರ್ಲಾಭ ಪಡೆಯುವುದಕ್ಕೆ ಪ್ರಯತ್ನ ಮಾಡುತ್ತಾರೋ ಮತ್ತೊಬ್ಬರ ನೀರನ್ನು ಕಳಿಸುವುದಕ್ಕೆ ಪ್ರಯತ್ನ ಮಾಡುತ್ತಾರೋ, ಅಂತಹವರ ವಿಚಾರದಲ್ಲಿ ಸರಿಯಾದ ಕ್ರಮವನ್ನು ತೆಗೆದುಕೊಳ್ಳಲು ಕಾಡಾಗೇ ಅಧಿಕಾರವನ್ನು ಕೊಡತಕ್ಕ ವ್ಯವಸ್ಥೆ ಮಾಡಿದ್ದೇವೆ. CADA should have powers relating to enforcement, distribution and recovery also· ಇಡೀ ನೀರಾವರಿ ಯೋಜನೆಯಿಂದ ಬಂದಿರತಕ್ಕ ಹಣ ೩೦-೪೦ ಕೋಟಿ ಮಾತ್ರ. ೨೦ ಸಾವಿರ ಕೋಟಿ ರೂಪಾಯಿ ಹಣವನ್ನು ಖರ್ಚು ಮಾಡಿ

ಆದಾಯ ೩೦_೪೦ ಕೋಟಿ, ಮೆಂಟೆನೆನ್ಸ್ ಚಾರ್ಜಸ್ ೩೦_೪೦ ಕೋಟಿಯಾದರೆ ಯಾವ ಸರ್ಕಾರವೂ ಹೆಚ್ಚಿನ ಯೋಜನೆಗಳನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಈ ವಿಚಾರದಲ್ಲಿ ಸ್ಪಷ್ಟವಾದಂತಹ ನಿಲುವನ್ನು ಸರ್ಕಾರ ತೆಗೆದುಕೊಳ್ಳುತ್ತದೆ. ಇದಕ್ಕೆ ನಿಮ್ಮೆಲ್ಲರ ಸಹಕಾರ ಅತ್ಯಾವಶ್ಯಕ. ಕಾಡಾಗೆ ಖರ್ಚು ಮಾಡಿದ ಹಣದ ವಿಚಾರದಲ್ಲಿ ಮಾನ್ಯ ಶ್ರೀನಿವಾಸ್‌ರವರು ಪ್ರಸ್ತಾಪ ಮಾಡಿದ್ದಾರೆ. ೧೯೭೭-೭೮ ರವರೆಗೆ ಗ್ರಾಂಟ್ ಕೊಟ್ಟಿದ್ದು, ೩೦.೫೯ ಕೋಟಿ, ಖರ್ಚಾದುದ್ದು ೨೩.೮೭ ಕೋಟಿ. ೭೩-೭೮ರವರೆಗೆ ಗ್ರಾಂಟ್ ಮಾಡಿದ ಹಣ ೧೦೨.೭೭ ಕೋಟಿ ಖರ್ಚಾದಂದ್ದು ೯೪.೦೪ ಕೋಟಿ ನೀರಾವರಿ ಪ್ರಯೋಜನ ಆಗಬೇಕಾದುದು ೧ ಲಕ್ಷ ೬೮ ಸಾವಿರ ಹೆಕ್ಟೇರ್ ಪ್ರದೇಶ. ಇವತ್ತು ೪೫೦೮೫ ಪ್ರದೇಶ ಮಾತ್ರ ಅಂದರೆ ಅರ್ಧದಷ್ಟು ಭೂಮಿಗೆ ಮಾತ್ರ ನೀರು ಕೊಡತಕ್ಕ ಕಾರ್ಯಕ್ರಮ ಮುಂಗಿದಿದೆ.

ಶ್ರೀ ಸಿ. ಎಂ. ರೇವಣಸಿದ್ದಯ್ಯ (ಸಿರಗುಪ್ಪ).—ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ನೀರಾವರಿಗೆ ಎಷ್ಟು ಖರ್ಚು ಮಾಡುತ್ತಿದ್ದೇವೆ ,ಆದರಿಂದ ಸರ್ಕಾರಕ್ಕೆ ಎಷ್ಟು ಆದಾಯ ಬರುತ್ತದೆ ಎಂಬುದರ ಹೇಳುತ್ತಿದ್ದಾರೆ ಅವರು ಕೇವಲ ವಾಟರ್ ರೇಟ್ ಮಾತ್ರ ಹೇಳುತ್ತಾರೆ. ಸ್ವಾಮಿ, ಅದಲ್ಲ, ಬೈ ಪ್ರಾಡಕ್ಟ್ಸ್ ಏನು ಬರುತ್ತದೆ, ಅವರು ಮಾಡತಕ್ಕ ಉತ್ಪಾದನೆಯ ಮೇಲೆ ಸೇಲ್ಸ್ ಟ್ಯಾಕ್ಸ್ ಮೂಲಕ ಬರತಕ್ಕ ಆದಾಯವನ್ನೂ ತೆಗೆದುಕೊಂಡು ಇವರು ಲೆಕ್ಕ ಹಾಕಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ನಾನು ಆಗಲೇ ಹೇಳಿದೆ, ಆದರೆ ಆಗ ಮಾನ್ಯ ಸದಸ್ಯರು ಇರಲಿಲ್ಲವೆಂದು ಕಾಣುತ್ತದೆ. ಯಾವ ರೀತಿಯ ಉತ್ಪಾದನೆ ಆಗುತ್ತದೆ, ಆದರಿಂದ ಎಷ್ಟು ಆದಾಯ ಬರುತ್ತದೆಂಬುದನ್ನು ನಾನು ಆಗಲೇ ಹೇಳಿದೆ. ನೀರಾವರಿಗೋಸ್ಕರ ನಾವು ಏನು ಹಣವನ್ನು ತೊಡಗಿಸುತ್ತೇವೋ ಅದಕ್ಕೆ ತಕ್ಕಂತೆ ಆದರೂ ಶಾಸ್ತ್ರೀಯ ಆಧಾರದ ಮೇಲೆ ನಮಗೆ ವರಮಾನ ಬರಬೇಕು. ಏಕೆಂದರೆ ನಾವು ನೀರಾವರಿಗಾಗಿ ಕನ್‌ಸಾಲಿಡೇಟೆಡ್ ಫಂಡ್‌ನಿಂದ ಹಣವನ್ನು ಖರ್ಚು ಮಾಡುತ್ತೇವೆ, ರಾಜ್ಯದ ಎಲ್ಲಾ ವರ್ಗದ ಜನರೂ ಕೊಟ್ಟಂಥ ಹಣದಿಂದ ನಾವು ಈ ನೀರಾವರಿಗಾಗಿ ಖರ್ಚು ಮಾಡುತ್ತೇವೆ. ಅದು ವ್ಯಾಪಾರ ಮಾಡತಕ್ಕವರಿರಬಹುದು, ಕೃಷಿ ಕಾರ್ಮಿಕರಿರಬಹುದು, ಅಥವಾ ಇನ್ನೂ ಬೇರೆ ಬೇರೆ ವೃತ್ತಿಯನ್ನು ಮಾಡತಕ್ಕವರಿರಬಹುದು, ಅವರೆಲ್ಲರೂ ಕೊಡತಕ್ಕ ಹಣದಿಂದ ನಾವು ಈ ನೀರಾವರಿಗೆ ತೊಡಗಿಸುತ್ತೇವೆ. ತಮ್ಮ ಮೂಲಕ ಒಂದು ಮಾತನ್ನು ಹೇಳುವುದಾದರೆ, ನಮ್ಮ ಪಕ್ಕದ ರಾಜ್ಯದಲ್ಲಿ ನೀರಾವರಿ ತೆರಿಗೆಯನ್ನು ಏನು ಕೊಡುತ್ತಿದ್ದಾರೆ, ಆದರ ಹತ್ತಿರ ಹತ್ತಿರವಾದರೂ ನಮ್ಮ ರಾಜ್ಯದ ರೈತರು ಕೊಡಬಾರದೇ ? ಪಕ್ಕದ ರಾಜ್ಯದಲ್ಲಿ ಕೊಡುವಷ್ಟು ಪೂರ್ತಿ ಕೊಡುವುದು ಬೇಡ, ಮಹಾರಾಷ್ಟ್ರ, ಗುಜರಾತ್, ಮುಂತಾದ ರಾಜ್ಯಗಳಲ್ಲಿ ಏನು ನೀರಾವರಿ ತೆರಿಗೆಯನ್ನು ಕೊಡುತ್ತಿದ್ದಾರೆ ಅದಕ್ಕಿಂತ ಸ್ವಲ್ಪ ಕಮ್ಮಿಯಾದರೂ ನಮ್ಮ ರಾಜ್ಯದವರು ಕೊಡಬೇಕು. ಇದನ್ನು ಮಾನ್ಯ ಸದಸ್ಯರ ಜೊತೆ ಚರ್ಚೆ ಮಾಡಿದ್ದೇವೆ. ಇನ್ನೊಂದು ಸಾರಿ ಚರ್ಚೆ ಮಾಡೋಣ.

ಶ್ರೀ ಆರ್. ವೆಂಕಟರಾಮಯ್ಯ.—ನಾವು ಹೇಳಿದ್ದನ್ನು ತಾವು ಒಪ್ಪಿಕೊಂಡಿದ್ದೀರಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ನೋಡುತ್ತೇವೆಂದು ಹೇಳಿದ್ದೇವೆ. ನೀವು ಹೇಳಿದ್ದನ್ನು ನಾವು ಒಪ್ಪಿಕೊಂಡಿಲ್ಲ. ಮಾನ್ಯ ಅಧ್ಯಕ್ಷರೆ, ನಿಮಗೆ ಇನ್ನೂ ಎಷ್ಟು ಹಣ ಬೇಕಾಗುತ್ತದೆಂದು ಮಾನ್ಯ ಕೆ. ಹೆಚ್. ಪಾಟೀಲ್‌ರವರು ಕೇಳಿದರು. ಇದಕ್ಕೆ ಹೇಳುವುದಾದರೆ, ಈಗ ಒಂದು ರೀತಿಯ ಗಂಭೀರವಾದ ಆರ್ಥಿಕ ಇಕ್ಕಟ್ಟಿನಲ್ಲಿ ನಾವಿದ್ದೇವೆ ಕಾವೇರಿ ವಲಯದ ನೀರನ್ನು ಇನ್ನು ೪-೫ ವರ್ಷಗಳಲ್ಲಿ ಪೂರ್ಣವಾಗಿ ಉಪಯೋಗ ಮಾಡಿಕೊಳ್ಳಬೇಕಾಗಿದೆ. ಇದಕ್ಕೆ ೯೮೪ ಕೋಟಿ ರೂಪಾಯಿ ಬೇಕಾಗುತ್ತದೆ. ಕೃಷ್ಣಾ ನೀರನ್ನು ೨೦೦೦ನೇ ಇಸವಿಯೊಳಗೆ ನಾವು ಉಪಯೋಗ ಮಾಡಿಕೊಳ್ಳ ಬೇಕಾಗುತ್ತದೆ, ಇದಕ್ಕೆ ೨೬೦೭ ಕೋಟಿ ರೂಪಾಯಿ ಬೇಕಾಗುತ್ತದೆ. ಇದೇ ರೀತಿ ಗೋದಾವರಿ ನೀರನ್ನೂ ಉಪಯೋಗ ಮಾಡಿಕೊಳ್ಳಬೇಕಾದರೆ ೯೭ ಕೋಟಿ ರೂಪಾಯಿಗಳು ನಮಗೆ ಬೇಕಾಗುತ್ತದೆ. ನಾವು ಪ್ರತಿವರ್ಷ ನೀರಾವರಿಗಾಗಿ ಸುಮಾರು ೪೫೦ ಕೋಟಿ ರೂಪಾಯಿಗಳನ್ನು ಒದಗಿಸಬೇಕಾಗುತ್ತದೆ. ಹೀಗೆ ಒದಗಿಸಿದರೆ ಮಾತ್ರ ನಮ್ಮ ಗುರಿಯನ್ನು ನಾವು ಸಾಧನೆ ಮಾಡುವುದಕ್ಕೆ ಅನುಕೂಲವಾಗುತ್ತದೆ

ಶ್ರೀ ಬಿ. ಬಸವಲಿಂಗಪ್ಪ.—ನೀವು, ನಿಮ್ಮ ಗುರಿಯನ್ನು ಹೇಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಇನ್ನು ೫ ವರ್ಷದೊಳಗೆ ಕಾವೇರಿ ನೀರನ್ನು ನಾವು ಸಂಪೂರ್ಣವಾಗಿ ಉಪಯೋಗ ಮಾಡಿಕೊಳ್ಳಬೇಕು, ೨೦೦೦ನೇ ಇಸವಿಯೊಳಗೆ.........

ಶ್ರೀ ಬಿ. ಬಸವಲಿಂಗಪ್ಪ.—ನೀವು ಅಲ್ಲಿಯವರೆಗೂ ಇರುತ್ತೀರಾ ? ನಾನು ಆಗಲೇ ಹೇಳಿದೆ. ೯೩೭ ಕೋಟಿ ರೂಪಾಯಿಯ ಪ್ಲಾನಿಂಗ್ ಸ್ಕೀಂನಲ್ಲಿ ೨೦೦ ಕೋಟಿ ರೂಪಾಯಿಗಳನ್ನು ಕಡಿಮೆ ಮಾಡಿದ್ದೀರಿ. ನೀರಾವರಿ ಇಲ್ಲ, ವಿದ್ಯುಚ್ಛಕ್ತಿ ಇಲ್ಲ, ಮಿನಿಮಂ ನೀಡ್ಸ್ ಪ್ರೋಗ್ರಾಂ ಇಲ್ಲ, ಏನೂ ಇಲ್ಲ. ಅಂದ ಮೇಲೆ ನೀವು ಹೇಗೆ ೨೦೦೦ನೇ ವರ್ಷದವರೆಗೂ ಇರುತ್ತೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಪದೇ ಪದೇ ಈ ಮಾತನ್ನು ಹೇಳುತ್ತಿದ್ದಾರೆ. ನೀವು ಹೇಗಿರುತ್ತೀರಿ ? ನೀವು ಹೇಗಿರುತ್ತೀರಿ ಅಂತ ಹೇಳುತ್ತಲೇ ಇರುತ್ತಾರೆ. ಸ್ವಾಮಿ, ಜನರು ನಮಗೆ ಆಶೀರ್ವಾದ ಮಾಡುತ್ತಾರೆ. ನಾವು ಇರುತ್ತೇವೆ. ಈ ಮಾತನ್ನು ನಾನು ಎಷ್ಟು ಸಾರಿ ಅವರಿಗೆ ಹೇಳಬೇಕು ? ನಮ್ಮ ಯೋಜನೆಗಳಿಗೆ ನಾವು ಯಾವ ರೀತಿ ಹಣವನ್ನೊದಗಿಸಬೇಕೆಂಬುದಕ್ಕೆ ನಾನು ಕೆಲವು ವಿಚಾರಗಳನ್ನು ಈ ಮನೆಯ ಮುಂದಿಡಬಯಸುತ್ತೇನೆ.

ಪ್ರತಿವರ್ಷ ಸುಮಾರು ೪೫೦ ಕೋಟಿ ರೂಪಾಯಿಗಳನ್ನು ಒದಗಿಸಬೇಕಾದರೆ ನಾವು ಈ ಬಗ್ಗೆ we should think in practical and programatic way of finding resources, ಎಲ್ಲೆಲ್ಲಿ ನಾವು ಮಿತವ್ಯಯ ಸಾಧಿಸಬೇಕೋ, ಅದನ್ನು ಮಾಡಬೇಕಾಗುತ್ತದೆ. ಬೇರೆ ಬೇರೆ ಇಲಾಖೆಗಳಲ್ಲಿ ಉಳಿತಾಯ ಮಾಡಬೇಕಾಗುತ್ತದೆ. ಉಳಿತಾಯ ಮಾಡುವ ಬಗ್ಗೆ ಒಂದು ನಿರ್ದಿಷ್ಟವಾದ ನಿಲುವನ್ನು ಸರ್ಕಾರ ತೆಗೆದುಕೊಳ್ಳಬೇಕಾಗಿದೆ. ಈ ಬಗ್ಗೆ ಕೆಲವು ಸಲಹೆಗಳನ್ನು ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳಿಗೆ, ಕೊಟ್ಟಿದ್ದೇವೆ. ಅದರ ಜೊತೆಗೆ ಹಣ ಖರ್ಚಾಗುತ್ತಿದೆ, ಎಸ್ಟಿಮೇಟ್‌ನಲ್ಲಿಯೇ ತಪ್ಪಾಗುತ್ತದೆ, ರಿವೈಸ್ಡ್ ಆಗುತ್ತದೆ, ಮುಂದೆ ಕಂಟ್ರಾಕ್ಟರು ಕೋರ್ಟಿಗೆ ಹೋಗುತ್ತಾರೆ ಎಂದೆಲ್ಲಾ ಟೀಕೆ ಮಾಡಿದ್ದಾರೆ. ಅವುಗಳ ಬಗ್ಗೆ ಹೇಳುತ್ತೇನೆ. ಈಗ ನಾವು ಏನು ಮಾಡಲು ಯೋಜನೆ ಮಾಡಿದ್ದೇವೆ ಎಂಬುದನ್ನು ಹೇಳುತ್ತೇನೆ. ಮೊದಲನೆಯದಾಗಿ, ನೀರಾವರಿ ಯೋಜನೆಗಳಿಗೆ ನಿಗದಿತ ಅವಧಿಯಲ್ಲಿ ನಿರ್ದಿಷ್ಟವಾದ ದರದಲ್ಲಿ ಮುಕ್ತಾಯ ಮಾಡುವುದಕ್ಕೆ ಆಲೋಚನೆ ಮಾಡಿದ್ದೇವೆ, ನಿರ್ದಿಷ್ಟವಾದ ಹಣದಲ್ಲಿ ನಿಗದಿತ ವೇಳೆಯಲ್ಲಿ ಯೋಜನೆಗಳು ಮುಕ್ತಾಯವಾಗಬೇಕಾಗಿದೆ. ಅದಕ್ಕೆ ಪ್ರತಿ ತಿಂಗಳು ಮಾನಿಟರ್ ಮಾಡತಕ್ಕಂಥ ವ್ಯವಸ್ಥೆ ಇರುತ್ತದೆ. ಪ್ರತಿಯೊಂದು ತಿಂಗಳೂ ಸಿಮೆಂಟ್, ಕಬ್ಬಿಣ, ಮುಂತಾದವುಗಳ ಬೆಲೆಗಳು ಜಾಸ್ತಿಯಾಗುತ್ತಲೇ ಇರುತ್ತದೆ. ಮೊದಲು ಏನು ೧೦೦ ಕೋಟಿ ರೂಪಾಯಿಗಳಿಗೆ ಮುಕ್ತಾಯವಾಗುತ್ತಿದ್ದುದು ಈಗ ಎರಡು ಸಾವಿರ ಕೋಟಿ ರೂಪಾಯಿಗಳಾಗುತ್ತಿದೆ. ಮಲಪ್ರಭಾ ಯೋಜನೆಗೆ ಲ್ಯಾಂಡ್ ಅಕ್ವಿಸಿಷನ್ ಸಲುವಾಗಿ ಪ್ರೊವೈಡ್ ಮಾಡಿದ್ದು ೩೦ ಕೋಟಿ ರೂಪಾಯಿಗಳು. ಆದರೆ ಈವತ್ತು ೩೦೦ ಕೋಟಿ ರೂಪಾಯಿಗಳನ್ನು ಕೊಟ್ಟರೂ ಅದರ ಅರ್ಧ ಹಣವನ್ನು ಕೊಟ್ಟಂತಾಗುತ್ತಿದೆ. ಸಮಯ ಹೆಚ್ಚು ಹೋದರೆ ಪರಿಣಾಮ ಯೋಜನೆಯ ಮೇಲೆ ಆಗುತ್ತದೆನ್ನುವುದನ್ನು ನಾವು ಅರ್ಥ ಮಾಡಿಕೊಂಡಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—ಈವಾಗ ಕಂಟ್ರಾಕ್ಟರ್ಸ್ ಕೋರ್ಟಿಗೆ ಹೋಗುತ್ತಾರೆ, ಅದರ ಮೇಲೆ ಬದಲಾವಣೆಯಾಗುತ್ತದೆ ಹೆಚ್ಚಾಗುತ್ತದೆ ಎಂದೆಲ್ಲಾ ಮಾನ್ಯ ಸಚಿವರು ಹೇಳಿದರು, ಮಾನ್ಯ ಅಧ್ಯಕ್ಷರೇ, ನನ್ನ ಅನುಭವಕ್ಕೆ ಬಂದುದು ಹೇಳುತ್ತೇನೆ. ಟೆಂಡರ್ ಇದೆ, ಟೆಂಡರ್‌ನಲ್ಲಿ ಸಾಕಷ್ಟು ಪ್ರಾವಿಷನ್ ಇದೆ, ಕಂಟ್ರಾಕ್ಟರ್ ಆಕ್ಟ್‌ನ ಪ್ರಕಾರ ಏನೇನು ಇರಬೇಕೋ ಅದೆಲ್ಲಾ ಇದೆ. ಯಾರು ವಯಲೇಟ್ ಮಾಡುತ್ತಾರೆ, ಯಾರು ವಯಲೇಟ್ ಮಾಡುವುದಿಲ್ಲ. ಅದೆಲ್ಲಾ ಇದೆ. ತಮ್ಮ ಅನುಭವಕ್ಕೆ ಬರುವರೆಗೂ ಸುಮ್ಮನೆ ಇದ್ದು, ತಪ್ಪಿದ್ದರೆ ಹೋಗುತ್ತಾರೆ, ಡ್ಯಾಮೇಜ್ ಕೇಳುತ್ತಾರೆ ಕೋರ್ಟಿಗೆ ಹೋಗುತ್ತಾರೆಂದರೆ ಹೇಗೆ ? ಸರಿಯಾದ ಸಮಯದಲ್ಲಿ ಟೆಂಡರ್ ಕರೆಯದೆ ಎಸ್ಟಿಮೇಟ್ ಸರಿಯಾಗಿ ಮಾಡಿದೆ ಎಸ್ಕಲೇಷನ್‌ಗೆ ಅವಕಾಶವಾಗುತ್ತದೆ. ಇದರಿಂದ ದುಡ್ಡು ಹೊಡೆಯಲು ಅವಕಾಶವಾಗುತ್ತದೆ. ಇಂಥದಕ್ಕೆಲ್ಲಾ ಏನು ಮಾಡುತ್ತೀರೆಂದು ಕೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದು ನಡೆದು ಬಂದ ದಾರಿ. ಇದರಲ್ಲಿ ಬದಲಾವಣೆಯಾಗಬೇಕೆಂದು ಪಿ. ಎ. ಸಿ, ಯವರು ಕೆಲವು ಸೂಚನೆಗಳನ್ನು ಕೊಟ್ಟಿದ್ದಾರೆ. ಇದು ಈಗಿನದಲ್ಲ ಕಳೆದ ೪೦ ವರ್ಷಗಳಿಂದಲೂ ನಡೆದುಕೊಂಡು ಬಂದಿದೆ, ಕಂಟ್ರಾಕ್ಟ್, ಟೆಂಡರ್ ಇದೇನೂ ಹೊಸದೇನೂ ಅಲ್ಲ. ಇದನ್ನು ಸರಿಪಡಿಸಬೇಕೆಂದು ನಾನು ಕೂಡ ಹೇಳುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಅದನ್ನು ಇಂಪ್ಲಿಮೆಂಟ್ ಮಾಡಿದರೆ ನಿಮಗೆ ವಂದಿಸುತ್ತೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಶ್ರೀ ರಾಜಗೋಪಾಲಚಾರ್‌ರವರ ಕಾಲದಿಂದಲೂ ಹೇಳಿಕೊಂಡು ಬಂದಿದ್ದಾರೆ. ನಮ್ಮಲ್ಲಿ ಅಧಿಕಾರಿಗಳು ಬುದ್ಧಿವಂತರಿದ್ದಾರೆ. ನಷ್ಟವಾಗುತ್ತದೆ, ಎಲ್ಲ ಸಂದರ್ಭಗಳಲ್ಲೂ ಸರಿಯಾಗಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಈಗಿರತಕ್ಕಂಥ ಸಿಸ್ಟಮ್‌ನಲ್ಲಿ ಸ್ವಲ್ಪ ಬದಲಾವಣೆ ಮಾಡಬೇಕೆಂದು ಆಲೋಚನೆ ಮಾಡುತ್ತಿದ್ದೇವೆ,

ಹಣ ಕ್ರೋಢೀಕರಿಸುವುದರಿಂದ, ರಿಸೋರ್ಸಸ್ ಮೊಬಿಲೈಸೇಷನ್‌ನಿಂದ ಈಗಿರತಕ್ಕ ನೀರಾವರಿ ದರಗಳನ್ನು .....

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವು ಹೊಸ ಸಿಸ್ಟಂ ಅನ್ನು ಹೇಳಿದಿರಿ. ಅದಕ್ಕೂ ಎಲ್.ಓ.ಸಿ. ಸಿಸ್ಟಂಗೂ ಏನೂ ವ್ಯತ್ಯಾಸ ಇಲ್ಲ. ತಾವು ಇದರ ಬಗ್ಗೆ ಆಲೋಚನೆ ಮಾಡಿ. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟಿನವರು ಹೇಳಿರಬಹುದು. ಆದರೆ ಎಲ್.ಓ.ಸಿ. ಇಶ್ಯೂ ಮಾಡುವಾಗ ಏನು ವರ್ಕ್ ಆಗಿರುತ್ತದೆ ಅದನ್ನು ಪರಿಶೀಲನೆ ಮಾಡಿ ಎಲ್.ಓ.ಸಿ.ಯನ್ನು ಇಷ್ಯೂ ಮಾಡುವುದು. That is the system which has been adopted throughout and it is an accepted system. ತಾವು ಪರ್ ಸಿಸ್ಟಂ ಅಂಥ ಮಾಡಿದ್ದೀರಿ. ಈ ಸಿಸ್ಟಂ ಬೇರೆ ಆಗುತ್ತದೆ. ಇದರ ಬಗ್ಗೆ ತಾವು ಆಲೋಚನೆ ಮಾಡಿ. ಏನೋ ಒಂದು ಸಲಹೆ ಬಂತು ಎಂದು ಸಿಸ್ಟಂನೊಳಗೆ ಸಿಸ್ಟಂ ಮಾಡಿ ತೊಂದರೆ ಮಾಡಬೇಡಿ. ಎಲ್.ಓ.ಸಿ. ಸಿಸ್ಟಂನಲ್ಲಿ ಲೋಪದೋಷಗಳಿವೆ. ಅದನ್ನು ಪರಿಹಾರ ಮಾಡತಕ್ಕ ಕ್ರಮವನ್ನು ಆಲೋಚನೆ ಮಾಡಿದರೆ ಹೆಚ್ಚು ವ್ಯವಹಾರಿಕವಾಗುತ್ತದೆ, ಪ್ರಯೋಜನವಾಗುತ್ತದೆ ಆದ್ದರಿಂದ, ಹೇಳಿಕೆ ಕೊಡುವುದಕ್ಕೆ ಅಡ್ಡಿಯಿಲ್ಲ, ಆದರೆ ಹೇಳಿಕೆ ಕೊಡುವ ಮೊದಲು ಪರಿಶೀಲಿಸುತ್ತೇವೆಂದು ಹೇಳುವುದು ಒಳ್ಳೆಯದು. ಅನುಷ್ಠಾನ ಮಾಡುತ್ತೇವೆಂದು ಆಶ್ವಾಸನೆ ಕೊಡುತ್ತೀರಿ, Officers will take it as a direction and you will get into problems. I am giving you as a matter of caution.

ಶ್ರೀ ಆರ್. ವೆಂಕಟರಾಮಯ್ಯ.—ಮೊದಲಿನದನ್ನು ಅಬಾಲಿಷ್ ಮಾಡಿದರೆ ನೀವು ಹೇಳಿದ ಸ್ಕೀಮನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಸಾಧ್ಯ. ಎಲ್.ಓ.ಸಿ. ಇಲ್ಲದಿದ್ದರೆ ಮಾಡಿದ ಕೆಲಸಕ್ಕೆ ದುಡ್ಡು ಕೊಡುವುದಕ್ಕಾಗುವುದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಎಲ್.ಓ.ಸಿ. ಮೇಲೆ ಡಿಸಿಷನ್ ತೆಗೆದುಕೊಳ್ಳಿ ಎಂದು ಅಲ್ಲ. ಬರೀ ಎಲ್.ಓ.ಸಿ.ಯಿಂದ ಏನೂ ಆಗುವುದಿಲ್ಲ. ಈ ಬಗ್ಗೆ ಸರ್ಕಾರ ತೀವ್ರವಾಗಿ ಆಲೋಚನೆ ಮಾಡುತ್ತಿದೆ. ಕೆಲಸ ಆದಮೇಲೆ ಹಣ ಕೊಡುತ್ತೇವೆ. ಕೆಲಸ ಆಗದಿದ್ದರೆ ಹಣ ಇಲ್ಲ. ಕೆಲವೊಮ್ಮೆ ಯಾವುದೋ ಕಾರಣಕ್ಕಾಗಿ ಮುಂದೆ ಹಾಕುತ್ತಾರೆ. ಟೆಕ್ನಿಕಲ್ ಆಗಿ ಹಾಕಬಹುದು, ಕಬ್ಬಿಣ ಇಲ್ಲ, ಸಿಮೆಂಟ್ ಇಲ್ಲವೆಂದು ಹಾಕಬಹುದು. ಹಣ ಕೊಟ್ಟಷ್ಟು ಕೆಲಸ ಮಾಡುತ್ತಾರೆ, ಕೆಲಸ ಮಾಡಿದಷ್ಟು ಹಣ ಕೊಡುತ್ತೇವೆ. ಹಣಕಾಸಿನ ಇಲಾಖೆಯವರು ಕೆಲಸ ಆದಮೇಲೆ ಇಂಜಿನಿಯರ್‌ಗಳಿಂದ ಏನು ಬಿಲ್ ಬರುತ್ತದೆ ಅದನ್ನು ಕೊಡುತ್ತಾರೆ. ಆ ಕೆಲಸವನ್ನು ಇಲಾಖೆ ಮಾಡುತ್ತದೆ. ಇಲ್ಲವೆಂದು ಅಲ್ಲ. ಪ್ಲಾನ್ ಇದೆ, ಪ್ರೋಗ್ರಾಂ ಇದೆ ಅದರಂತೆ ಮಾಡುತ್ತಾರೆ. ಆದರೆ ಒಂದು ಟೈಂ ಬೌಂಡ್ ಹಾಕತಕ್ಕದ್ದು ಪರ್ ಸಿಸ್ಟಂನಲ್ಲಿ ಇದೆ. ಅದನ್ನು ಆಲೋಚನೆ ಮಾಡುತ್ತಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಕ್ಷಮಿಸಬೇಕು, ವಿಚಾರ ಬಂದಿದ್ದರಿಂದ ಹೇಳುತ್ತೇನೆ, ಮತ್ತೆ ಕ್ಲಾರಿಫಿಕೇಷನ್ ಕೇಳತಕ್ಕ ಪ್ರಶ್ನೆ ಇರುವುದಿಲ್ಲ. ಎಲ್.ಓ.ಸಿ. ಸಿಸ್ಟಂನಲ್ಲಿ ಒಂದು ಮಾಡಿ. ಅದನ್ನು ಡೀಸೆಂಟ್ರಲೈಸ್ ಮಾಡುವುದಕ್ಕೆ ಆಲೋಚನೆ ಮಾಡಿ, ಮುಖ್ಯ ಇಂಜಿನಿಯರ್ ಇರುತ್ತಾರೆ ಅಥವಾ ಇಲಾಖೆಯ ಮುಖ್ಯಸ್ಥರು ಇರುತ್ತಾರೆ, ಅವರಿಗೆ ಈ ಅಧಿಕಾರವನ್ನು ವಿಕೇಂದ್ರೀಕರಣ ಮಾಡಿಕೊಡಬೇಕೇ ಹೊರತು ಎಲ್.ಓ.ಸಿ. ಸಿಸ್ಟಂ ಅನ್ನು ಸೆಕ್ರೆಟರಿಯೇಟ್‌ನಲ್ಲಿಟ್ಟುಕೊಂಡು ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿಯವರಿಗೆ ಅಧಿಕಾರ ಕೊಟ್ಟಿರುವುದರಿಂದ ಎಲ್.ಓ.ಸಿ. ಸಿಸ್ಟಂನಲ್ಲಿ ತೊಂದರೆ ಬಂದಿದೆ. ಮುಖ್ಯ ಇಂಜಿನಿಯರ್ ಕೆಲಸ ಆಗಿದೆಯೋ ಇಲ್ಲವೇ ಎಂಬುದನ್ನು ನೋಡಿ ಎಲ್.ಓ.ಸಿ. ಇಷ್ಯೂ ಮಾಡಬೇಕೆಂದು ಮಾಡಿದರೆ ಎಲ್.ಓ.ಸಿ. ಸಿಸ್ಟಂನಿಂದ ಅನುಕೂಲವಾಗುತ್ತದೆ. ಅದನ್ನು, ತಾವು ಆಲೋಚನೆ ಮಾಡುವುದು ಒಳ್ಳೆಯದು. ಈಗ ಏನಾಗಿದೆ ಎಂದರೆ ಎಲ್.ಓ.ಸಿ. ಸಿಸ್ಟಂ ಅನ್ನು ಫೈನಾನ್ಸ್ ಸೆಕ್ರೆಟರಿ ಹತ್ತಿರ ಇಟ್ಟುಕೊಂಡಿದ್ದಾರೆ. Earlier it was with respective Departmental Secretaries. ಈಗ ಅದೂ ಇಲ್ಲ. ನಾನು ಹೇಳುವುದು ಸಂಬಂಧಪಟ್ಟ

ಇಲಾಖೆಯ ಕಾರ್ಯದರ್ಶಿ ಹತ್ತಿರ ಅಥವಾ ಫೈನಾನ್ಸ್ ಸೆಕ್ರೆಟರಿ ಹತ್ತಿರ ಇರಬಹುದು. But that should be given for the man in the spot. He may be an executive Engineer or Superintending Engineer of the project. Then L.O.C. system can definitely work. ಅದರಿಂದ ಸರಿಯಾಗಿ ಕೆಲಸ ಮಾಡುವುದಕ್ಕೆ ಬರುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ತಮ್ಮ ಸಲಹೆಯನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ. ರಿಸೋರ್ಸಸ್ ಮೊಬಿಲೈಶನ್ ಬಗ್ಗೆ ಗಂಭೀರವಾಗಿ ಆಲೋಚನೆ ಮಾಡತಕ್ಕ ಮಾತನ್ನು ಹೇಳಿದ್ದಾರೆ. ಈಗ ನಮಗೆ ಬರತಕ್ಕ ಆದಾಯದಲ್ಲಿ ಹೆಚ್ಚಿನ ಹಣವನ್ನು ನೀರಾವರಿ ಮತ್ತು ವಿದ್ಯುಚ್ಛಕ್ತಿಗೆ ಕೊಡತಕ್ಕ ಆಲೋಚನೆಯ ಜೊತೆಗೆ ನಾವು ಪವರ್ ಕಾರ್ಪೊರೇಷನ್ ಪರವಾಗಿ ಪವರ್ ಬಾಂಡುಗಳನ್ನು ಇಷ್ಯೂ ಮಾಡುವುದಕ್ಕೆ ಕೇಂದ್ರ ಸರ್ಕಾರಕ್ಕೆ ಕೇಳಿದ್ದೇವೆ. ಅದೇರೀತಿ ಇರಿಗೇಷನ್ ಬಾಂಡ್ಸ್ ಇಷ್ಯೂ ಮಾಡತಕ್ಕ ಒಂದು ವಿಚಾರವನ್ನೂ ಸರ್ಕಾರ ಮಾಡುತ್ತಿದೆ. ಇದಕ್ಕೆ ಕೇಂದ್ರ ಸರ್ಕಾರದ ಒಪ್ಪಿಗೆ ಬೇಕಾಗುತ್ತದೆ. ವರ್ಲ್ಡ್ ಬ್ಯಾಂಕ್ ಅಸಿಸ್ಟೆನ್ಸ್ ಅಲ್ಲದೆ ನಮ್ಮ ರಾಜ್ಯದಲ್ಲಿ ಮತ್ತು ನಮ್ಮ ರಾಷ್ಟ್ರದಲ್ಲಿರತಕ್ಕ ಬೇರೆ ಬೇರೆ ಆರ್ಥಿಕ ಸಂಸ್ಥೆಗಳ ಮುಖಾಂತರ ಹಣ ಪಡೆಯುವುದಕ್ಕೆ ಸಾಧ್ಯವಿದೆ. ಈ ವಿಚಾರದಲ್ಲಿ ಮಾನ್ಯ ಮೊಯಿಲಿಯವರ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ಮತ್ತು ವಿರೋಧಪಕ್ಷದ ನಾಯಕರ ಸಹಕಾರ ಇರಿಗೇಷನ್ ಬಾಂಡ್ಸ್ ಬಗ್ಗೆ ಬೇಕು. ಪವರ್ ಬಾಂಡ್ಸ್ ಬಗ್ಗೆ ಹೇಳುವುದಾದರೆ ಟಾಟಾರವರಿಗೆ ಕೇಂದ್ರ ಸರ್ಕಾರದವರು ಅನುಮತಿ ಕೊಟ್ಟಿದ್ದಾರೆ. ನ್ಯಾಷನಲ್ ಎಲೆಕ್ಟ್ರಿಸಿಟಿ ಕಾರ್ಪೊರೇಷನ್‌ನವರಿಗೂ ಕೊಟ್ಟಿದ್ದಾರೆ. ಪ್ರತಿವರ್ಷ ೪೫೦ ಕೋಟಿ ರೂಪಾಯಿಗಳನ್ನು ನೀರಾವರಿಗೆ ಖರ್ಚು ಮಾಡಬೇಕಾದರೆ ಇರಿಗೇಷನ್ ಬಾಂಡ್ಸ್ ಮಾಡುವ ವಿಚಾರ ಸರ್ಕಾರದ ಮುಂದಿದೆ. ಇದಕ್ಕೆ ಕೇಂದ್ರಸರ್ಕಾರದ ಒಪ್ಪಿಗೆ ಬೇಕಾಗುತ್ತದೆ. ಹಣ ಪಡೆಯುವುದಕ್ಕೆ ಇದೂ ಒಂದು ದಾರಿ. ಇಲ್ಲದೇ ಹೋದರೆ ಸಾಮಾನ್ಯವಾದ ಆದಾಯದಲ್ಲಿ ಯೋಜನೆಗಳನ್ನು ಮುಕ್ತಾಯ ಮಾಡತಕ್ಕದ್ದು ಕಷ್ಟ ಇದೆ. ತಾವು ಹೇಳಬಹುದು, ಕಾವೇರಿ ಯೋಜನೆಯನ್ನು ಐದು ವರ್ಷದಲ್ಲಿ ಮುಕ್ತಾಯ ಮಾಡಿದರೆ ಮುಂದೆ ೧೦ ವರ್ಷಗಳಲ್ಲಿ ಅಪ್ಪರ್ ಕೃಷ್ಣ ಬೇಸಿನ್‌ಗೆ ಹಣ ಕೊಡತಕ್ಕ ಆಲೋಚನೆ ಮಾಡಬಹುದು ಎಂದು. ಇರಿಗೇಷನ್ ಬಾಂಡ್ಸ್ ಮೂಲಕ ಪ್ರತಿ ವರ್ಷ ಅವಶ್ಯಕವಾಗಿರತಕ್ಕ ಹಣವನ್ನು ಬೇರೆ ಬೇರೆ ಹಣಕಾಸು ಸಂಸ್ಥೆಗಳಿಂದ ತರುವುದಕ್ಕೆ ಸಾಧ್ಯವಿರುವುದರಿಂದ ಇದನ್ನು ಮಾಡುತ್ತಿದ್ದೇವೆ. ಇದಕ್ಕೆ ಕೇಂದ್ರ ಸರ್ಕಾರದ ಒಪ್ಪಿಗೆ ಬೇಕಾಗುತ್ತದೆ. ಇದಕ್ಕೆ ಈ ಸದನದ ಹಿರಿಯ ಸದಸ್ಯರ, ನಮ್ಮ ರಾಜ್ಯದ ಲೋಕಸಭಾ ಸದಸ್ಯರ ಸಹಾಯ ಬೇಕಾಗುತ್ತದೆ. ಇದು ಸರ್ಕಾರ ಗಂಭೀರವಾಗಿ ಆಲೋಚನೆ ಮಾಡುತ್ತಿರತಕ್ಕ ವಿಚಾರ. ಇನ್ನೊಂದು ವಿಚಾರ ಅನೇಕ ಸದಸ್ಯರು ಹೇಳಿದ್ದಾರೆ. ಹಿಂದೆ ಗೆಳೆಯರಾದ ದೇವೇಗೌಡರೂ ಹೇಳಿದ್ದರು. ನೀರಾವರಿ ಸೌಲಭ್ಯ ಪಡೆಯತಕ್ಕ ರೈತರಿಂದ ಹಣ ಪಡೆಯತಕ್ಕ ವಿಚಾರ ಹೇಳಿದ್ದರು. ಬಾಬುರೆಡ್ಡಿ ತುಂಗಳ್ ಅವರು ನೀರು ಒದಗಿಸುತ್ತೇವೆ ಎಂದರೆ ರೈತರು ಮುಂಗಡ ಹಣ ಕೊಡುವುದಕ್ಕೆ ಮುಂದಾಗುತ್ತಾರೆ ಎಂದು ಹೇಳಿದರು. ಅದರ ಬಗ್ಗೆಯೂ ನಾವು ಆಲೋಚನೆ ಮಾಡಬೇಕಾಗುತ್ತದೆ. ಆದಷ್ಟು ಬೇಗ ನಾನು ಈ ಮನೆಯ ಎಲ್ಲ ಪಕ್ಷಗಳ ಸದಸ್ಯರ ಅದರಲ್ಲೂ ನೀರಾವರಿ ಪ್ರದೇಶದಿಂದ ಬರತಕ್ಕ ಶಾಸಕರ ಸಭೆ ಕರೆದು ನಿರ್ಣಯ ತೆಗೆದುಕೊಳ್ಳುತ್ತೇನೆ. ಈ ಬಗ್ಗೆ ಒಮ್ಮತದ ನಿರ್ಣಯ ತೆಗೆದುಕೊಳ್ಳೋಣ. ಒಂದು ಇರಿಗೇಷನ್ ಬಾಂಡ್, ಇನ್ನೊಂದು ವಾಲಂಟರಿ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ರೈತರಿಂದ ತೆಗೆದುಕೊಳ್ಳುವುದು ......

ಶ್ರೀ ಎಂ. ವೀರಪ್ಪ ಮೊಯಿಲಿ.—ಅಡ್ವಾನ್ಸ್ ವಾಟರ್ ರೇಟಿಗೆ ಮಾಡಬಹುದು,

ಶ್ರೀ ಎಸ್. ಆರ್. ಬೊಮ್ಮಾಯಿ.—ಹೌದು, ಅದಕ್ಕೆ. ವರ್ಲ್ಡ್ ಬ್ಯಾಂಕ್ ವಿಚಾರ ಈಗಾಗಲೇ ಹೇಳಿದ್ದೇನೆ, ಯು.ಕೆ.ಪಿ ಗೆ ಇದೇ ವರ್ಷದಿಂದ ಪುನಃ ಹಣ ಸಿಗತಕ್ಕ ಆಸೆ ಇದೆ ಎರಡು ಮೂರು ತಿಂಗಳುಗಳಲ್ಲಿ ಹಣ ದೊರೆಯಬಹುದು. ಇನ್ನೊಂದು ಸಲಹೆ ಇದೆ. ಅದನ್ನು ಈ ಮನೆಯ ಮುಂದೆ ಇಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.—ಉಪಾಧ್ಯಕ್ಷರೆ, ತಮ್ಮ ಪರ್ಮಿಷನ್‌ನಿಂದ ಒಂದು ಹೇಳುತ್ತೇನೆ. ರಿಸೋರ್ಸಸ್ ಮೊಬಲೈಸೇಷನ್‌ಗೆ ಸರ್ಕಾರದವರು ಒಂದು ಕಮಿಟಿ ಮಾಡಿದ್ದೀರಿ. ಇರಿಗೇಷನ್‌ಗೆ ರಿಸೋರ್ಸಸ್ ಮೊಬಿಲೈಸ್ ಮಾಡುವ ಬಗ್ಗೆ ವಿಚಾರ ಮಾಡುವುದಕ್ಕೆ ಮಾಡಿತು. ಅದು ಒಂದು ಬಾರಿಯೂ ಸಭೆ ಸೇರಲಿಲ್ಲ. ತಮ್ಮ ಆಸಕ್ತಿ ಎಷ್ಟಿದೆ ಎಂಬುದಕ್ಕೆ ಇದನ್ನು ಹೇಳುತ್ತಿದ್ದೇನೆ. ಈಗ

ಬಾಂಡ್ ವಿಚಾರ ಮಾತನಾಡುತ್ತೀರಿ. ತಮಗೆ ಗೊತ್ತಿದೆ, When it comes to the approval of the Central Government, if it is within the parameters of the plan then only they will approve. ಡಿಬೆಂಚರ್ಸ್ ಆಗಲೀ, ಬಾಂಡ್ಸ್ ರೈಸ್ ಮಾಡುವುದಾಗಲೀ it will not go beyond that in excess of the plan they will not give. ಬಾಂಡ್ ಮಾಡುತ್ತೇವೆ ಎಂದರೆ ಕೇಳುವವರಿಗೆ ಚೆನ್ನಾಗಿ ಇರುತ್ತದೆ, ಆದರೆ ವ್ಯವಹಾರಿಕವಾಗಿ that will never happen. Nothing can go beyond your plan or in excess of your plan.

ನನ್ನ ಸೂಚನೆ ಏನೆಂದರೆ ಕರ್ನಾಟಕ ರಾಜ್ಯದಲ್ಲಿ ತಮ್ಮ ಪರಿಮಿತಿಯಲ್ಲಿ ತಾವು ಆಲೋಚನೆ ಮಾಡಿ. ರಿಸೋರ್ಸಸ್ ಯಾವ ರೀತಿ ಮೊಬಿಲೈಸ್ ಮಾಡುವುದು ಆಲೋಚನೆ ಮಾಡಿ ಆದ್ಯತೆ ಕ್ಷೇತ್ರ ಮೊದಲು ನಿಷ್ಕರ್ಷೆ ಆಗಬೇಕು. ಯಾವುದಕ್ಕೆ ಆದ್ಯತೆ ಕೊಡಬೇಕು, ಟೈಮ್ ಬೌಂಡ್ ಪ್ರೋಗ್ರಾಂ ಯಾವ ರೀತಿ ಮಾಡಬೇಕು ಈ ವಿಚಾರವನ್ನು ಸ್ಪೆಸಿಫಿಕ್ಕಾಗಿ ಹೇಳಬೇಕು. ಅದನ್ನು ಹೇಳದೇ ಕೇಂದ್ರ ಸರ್ಕಾರದ ಅಪ್ರೂವಲ್ ಕಾಯುತ್ತೇವೆಂದರೆ ಅದು ಬರೀ ಆಕಾಶ ಪುಷ್ಪ ಆಗುತ್ತದೆಯೇ ಹೊರತು ಬೇರೆ ಅಲ್ಲ. ಮತ್ತೊಂದು, you can always think of advance collection of 20 years. No approval is necessary from the Government of India.

ಇಂತಹದ್ದನ್ನು ಮಾಡಿದರೆ, ಅದಕ್ಕೆ ಕೇಂದ್ರ ಸರ್ಕಾರದ ಒಪ್ಪಿಗೆ ಬೇಕಾಗಿಲ್ಲ. ಎರಡು ಪ್ಯಾಕೇಜ್ ಇರುತ್ತವೆ. ಒಂದು ಕೇಂದ್ರ ಸರ್ಕಾರದಿಂದ ಅಪ್ರೂವಲ್ ಆಗಿ ಬರಬೇಕಾದುದು, ಅಂದರೆ ಪ್ಲಾನಿಂಗ್ ಕಮಿಷನ್‌ನಿಂದ ಅಪ್ರೂವಲ್ ಆಗುವಂತಹದ್ದು ಅದೊಂದು ಪ್ಯಾಕೇಜ್. ಇನ್ನೊಂದು ಪ್ಯಾಕೇಜ್ ಯಾವುದೆಂದರೆ, ನಮ್ಮ ರಾಜ್ಯದ ಆರ್ಥಿಕ ಮಟ್ಟವನ್ನು ಮತ್ತು ನಿಮ್ಮ ಪ್ಯಾರಾಮೀಟರ್ ಒಳಗೆ ಏನು ಕಾರ್ಯಕ್ರಮ ಹಾಕಬಹುದು ಎಂಬುದನ್ನು ಹೇಳಿ. If you can positively come out that we are here to help, it is better. ಅದನ್ನು ಬಿಟ್ಟು ಕೇಂದ್ರ ಸರ್ಕಾರದ ಮೇಲೆ ಏನೇ ಪ್ರಭಾವ ಬೀರಿದರೂ ಕೂಡ he have got to work with in the financial limits, within the planning parameters of the Government of India.

ನಿಮ್ಮ ಸರ್ಕಾರ ರಿಸೋರ್ಸಸ್ ಮೊಬಿಲೈಜೇಷನ್‌ಗೋಸ್ಕರ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳಬಹುದು ಅಂದರೆ You come out positively. Then we can extend positive help.

ಶ್ರೀ ಎಸ್.ಆರ್. ಬೊಮ್ಮಾಯಿ.—ಒಂದು ಒಳ್ಳೆಯ ಸಲಹೆ ಬಂದಾಗ ಅದರಲ್ಲಿ ಕೊಕ್ಕೆ ಹಾಕತಕ್ಕ ಪ್ರಯತ್ನ ಬೇಡ. ಟಾಟಾದವರಿಗೆ ಪವರ್ ಬಾಂಡ್ಸನ್ನು ಕೊಟ್ಟಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ರಿಸೋರ್ಸಸ್ ಮೊಬಿಲೈಜೇಷನ್ ಮಾಡುವುದಕ್ಕೋಸ್ಕರ ಪ್ರಾಮಾಣಿಕವಾದ ಆಸಕ್ತಿ ನಿಮಗಿಲ್ಲ. ರಿಸೋರ್ಸಸ್ ಮೊಬಿಲೈಜೇಷನ್‌ಗೋಸ್ಕರ ಇರುವಂತಹ ಸಮಿತಿಯ ಸಭೆಯನ್ನು ಕರೆಯುವುದಕ್ಕೆ ನಿಮಗೆ ಪುರಸೊತ್ತು ಇಲ್ಲದಿದ್ದರೆ ಏನು ಮಾಡಬೇಕು? ಇದರಲ್ಲಿ ಟಾಟಾದವರ ಹೆಸರನ್ನು ಏಕೆ ಹೇಳುತ್ತೀರಿ? Nobody, i.e. even any Public Limited Company can raise bonds or raise debentures without the permission of Reserve Bank of India, ಅದೇನೂ ಹೊಸದಲ್ಲ.

ಶ್ರೀ ಎಸ್.ಆರ್. ಬೊಮ್ಮಾಯಿ.—ಒಂದು ವಿಚಾರವನ್ನು ಹೇಳಿದಾಗ ಅದರ ಬಗ್ಗೆ ಮತ್ತೊಂದು ರೀತಿಯಲ್ಲಿ ಹೇಳುವಂತಹ ಪ್ರಯತ್ನವನ್ನು ಯಾವಾಗಲೂ ಶ್ರೀಮಾನ್ ಮೊಯಿಲಿಯವರು ಮಾಡುತ್ತಾರೆ. ಪವರ್ ಬಾಂಡ್ಸ್‌ಗೆ ಪರ್ಮಿಷನ್ ಕೊಟ್ಟಿದ್ದಾರಲ್ಲಾ, ಅದು ಕೇಂದ್ರ ಸರ್ಕಾರದ ಹಣ ಅಲ್ಲ. ಅದಕ್ಕೆ ರಾಜ್ಯ ಸರ್ಕಾರವೇ ಗ್ಯಾರಂಟಿ ಕೊಡುತ್ತದೆ ನಾವೇ ಹಣವನ್ನು ತೆಗೆದುಕೊಳ್ಳುತ್ತೇವೆ, ನಾವೇ ಕೊಡುತ್ತೇವೆ. ಇದಕ್ಕೆ ಕೇಂದ್ರ ಸರ್ಕಾರದ ಪರ್ಮಿಷನ್ ಬೇಕು ಅಷ್ಟೆ. ಆ ಆಲೋಚನೆಯನ್ನು ಗಮನದಲ್ಲಿಟ್ಟುಕೊಂಡೇ ಮಾಡುತ್ತೇವೆ. ರಾಜ್ಯದ ಆದಾಯ ತಮ್ಮ ಮುಂದೆ ಇದೆ. ಆ ಎಲ್ಲಾ ವಿಚಾರಗಳನ್ನು ತಾವು ಬರುವುದಕ್ಕಿಂತ ಮೊದಲೇ ಹೇಳಿದ್ದೇನೆ. ಏಕಾನಮಿ ಮೇಷರ್ಸ್ ಬಗ್ಗೆ ಎಲ್ಲೆಲ್ಲಿ

ಕಡಿಮೆ ಮಾಡಲಾಗಿದೆ ಎಂಬ ವಿಚಾರವನ್ನು ಹೇಳಿಯೇ ಇಲ್ಲಿಗೆ ಬರುತ್ತಿದ್ದೇನೆ. ರಿಸೋರ್ಸಸ್ ಮೊಬಿಲೈಜೇಷನ್ ಬಗ್ಗೆ ವಿಚಾರ ಮಾಡುವುದಕ್ಕಿಂತ ಮೊದಲೇ ತನ್ನ ಆದಾಯವನ್ನು ಎಲ್ಲೆಲ್ಲಿ ಉಳಿಸಬಹುದು ಎಂಬುದನ್ನು ಹೇಳಿದ್ದೇನೆ. ಹೆಚ್ಚು ಆದಾಯವನ್ನು ಮಾಡುವುದಕ್ಕಿಂತಹದ್ದು ಒಂದು, ಅದರ ಜೊತೆಗೆ ಪ್ರತಿ ವರ್ಷ ೪೫೦ ಕೋಟಿ ರೂಪಾಯಿಗಳನ್ನು ನೀರಾವರಿಗಾಗಿ ಖರ್ಚು ಮಾಡಬೇಕಾದರೆ ಯಾವ ರೀತಿ ಮಾಡಬೇಕೆಂಬುದು ಮುಖ್ಯವಾದ ವಿಚಾರ. ಇದರಲ್ಲಿ ಇರಿಗೇಷನ್ ಬಾಂಡ್ ಮತ್ತೊಂದು ವಿಚಾರ. ಇನ್‌ಸ್ಟಿಟ್ಯೂಷನಲ್ ಫೈನಾನ್ಸ್‌ದವರು ಹಣ ಸಹಾಯವನ್ನು ಕೊಡುವುದಕ್ಕೆ ಮುಂದೆ ಬಂದಿದ್ದಾರೆ. ಲಿಫ್ಟ್ ಇರಿಗೇಷನ್‌ಗಾಗಿ ಹಣವನ್ನು ಕೊಡುವುದಕ್ಕೆ ಬ್ಯಾಂಕಿನವರು ಮುಂದೆ ಬರುತ್ತಿದ್ದಾರೆ. ೧೦ ಪರ್ಸೆಂಟ್ ಹಣವನ್ನು ರೈತರು ಒದಗಿಸಿಕೊಂಡರೆ, ಇನ್ನುಳಿದ ೯೦ ಪರ್ಸೆಂಟ್ ಹಣವನ್ನು ಬ್ಯಾಂಕಿನವರು ಕೊಡುವಂತಹ ವ್ಯವಸ್ಥೆ ಮಹಾರಾಷ್ಟ್ರದಲ್ಲಿ ಮಾಡಿದ್ದಾರೆ. ಅದೇ ರೀತಿ ನಮ್ಮ ಬೆಳಗಾಂ ಜಿಲ್ಲೆಯಲ್ಲಿ ಇದೇ ರೀತಿಯ ಯೋಜನೆಯೊಂದನ್ನು ಮಾಡಲಾಗಿದೆ. ಈ ವಿಚಾರವನ್ನು ಹೇಳುತ್ತಿದ್ದೇನೆ. ಮತ್ತೆ ಇನ್‌ಸ್ಟಿಟ್ಯೂಷನಲ್ ಫೈನಾನ್ಸ್‌ದವರು ಮುಂದೆ ಬರುತ್ತಿದ್ದಾರೆ. ತಾಂತ್ರಿಕವಾಗಿ ಇದಕ್ಕೆ ಕೇಂದ್ರ ಸರ್ಕಾರದ ಪರ್ಮಿಷನ್ ಬೇಕು ಅಷ್ಟೆ. ಆ ಹಣವನ್ನು ಇದಕ್ಕಾಗಿ ಇನ್ವೆಸ್ಟ್ ಮಾಡಿದರೆ ಒಳ್ಳೆಯದು. ಅಡ್ವಾನ್ಸ್ ಆಗಿ ವಾಟರ್ ರೇಟನ್ನು ಕಲೆಕ್ಟ್ ಮಾಡತಕ್ಕದ್ದು ಮತ್ತೊಂದು ವಿಚಾರ, ಅದನ್ನೂ ಕೂಡ ಆಲೋಚನೆ ಮಾಡುತ್ತಿದ್ದೇವೆ. ಇನ್ನೊಂದು ವಿಚಾರವನ್ನು ಈ ಮನೆಯ ನಾಯಕರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಶ್ರೀಮಾನ್ ಎಂ. ವೈ. ಘೋರ್ಪಡೆಯವರು ಆ ಒಂದು ಸಲಹೆಯನ್ನು ಮಾಡಿದ್ದಾರೆ. ಅದನ್ನು ಈ ಮನೆಯ ಮುಂದೆ ಎಲ್ಲರ ಗಮನಕ್ಕಾಗಿ ಮಂಡಿಸುತ್ತಿದ್ದೇನೆ. ಅದೇನೆಂದರೆ, ಯು.ಕೆ.ಪಿ. ರೀತಿಯ ಯೋಜನೆಗಳನ್ನು ರಾಷ್ಟ್ರೀಯ ಯೋಜನೆಗಳೆಂದು ಕೇಂದ್ರ ಸರ್ಕಾರ ಟ್ರೀಟ್ ಮಾಡಬೇಕೆಂಬ ಸಲಹೆ ನೀಡಿದ್ದಾರೆ. ಆ ಬಗ್ಗೆ ಪ್ರಧಾನ ಮಂತ್ರಿಗಳಿಗೂ ಪತ್ರ ಒಂದನ್ನು ಬರೆದಿದ್ದಾರೆ. ನಮಗೂ ಪತ್ರ ಬರೆದಿದ್ದಾರೆ. ಕೇಂದ್ರ ಸರ್ಕಾರವೇ ಇಂತಹ ಯೋಜನೆಗಳನ್ನು ತೆಗೆದುಕೊಂಡು ಮಾಡಿಕೊಡತಕ್ಕ ವಿಚಾರವನ್ನು ಅವರೇ ಇಟ್ಟಿದ್ದಾರೆ. ಇದು ಬಹಳ ವಿವಾದಾತ್ಮಕವಾದ ವಿಚಾರ. ಅವರ ಈ ವಿಚಾರವನ್ನು ಏಕೆ ಹೇಳುತ್ತಿದ್ದೇನೆಂದರೆ, ಇದರ ಬಗ್ಗೆ ಅಂತಿಮವಾಗಿ ನಿರ್ಣಯವನ್ನು ತೆಗೆದುಕೊಳ್ಳುವುದಕ್ಕಿಂತ ಮುಂಚಿತವಾಗಿ ಆಳವಾಗಿ ಆಲೋಚನೆ ಮಾಡಬೇಕಾಗುತ್ತದೆ. ಆ ಒಂದು ವಿಚಾರವನ್ನು ಇಲ್ಲಿ ವ್ಯಕ್ತ ಮಾಡತಕ್ಕಂತಹ ನನ್ನ ಉದ್ದೇಶವೇನೆಂದರೆ, ಅದರ ಬಗ್ಗೆ ಇಲ್ಲಿ ಚರ್ಚೆಯಾಗಲಿ ಎನ್ನುವ ದೃಷ್ಟಿಯಿಂದ ಹೇಳಿದ್ದೇನೆ.

ಮಾನ್ಯ ಅಧ್ಯಕ್ಷರೇ, ನೀರಾವರಿ ಇಲಾಖೆ ವಿಚಾರವಾಗಿ ಅವಶ್ಯಕವಾಗಿರತಕ್ಕ ವಿಚಾರಗಳನ್ನು ನಾನು ಹೇಳಿದ್ದೇನೆ. ವೈಯುಕ್ತಿಕವಾಗಿ ಸದಸ್ಯರು ಹೇಳಿದ ವಿಚಾರಗಳ ಬಗ್ಗೆ ಅದು ಅವರ ಕ್ಷೇತ್ರದ ವಿಷಯ ಇರಬಹುದು ಯಾವುದೇ ಒಂದು ಪ್ರಾಜೆಕ್ಟ್ ವಿಷಯ ಇರಬಹುದು ಆ ಬಗ್ಗೆ ನಾನು ಉತ್ತರ ಕೊಟ್ಟಿಲ್ಲ. ನಾನು ಇಷ್ಟೇ ಹೇಳುತ್ತೇನೆ. ಇನ್ನೂ ಎರಡು ಇಲಾಖೆಗಳ ಬಗ್ಗೆ ನಾನು ಉತ್ತರ ಕೊಡಬೇಕಾಗಿರುವುದರಿಂದ ಅವರು ಕೊಟ್ಟಿರತಕ್ಕ ಸಲಹೆಗಳಿಗೆ ಸೂಕ್ತ ಕ್ರಮ ತೆಗೆದುಕೊಂಡು ಅವರಿಗೆ ಪ್ರತ್ಯೇಕವಾಗಿ ತಿಳಿಸತಕ್ಕ ಒಂದು ಭರವಸೆಯನ್ನು ಕೊಡುತ್ತಾ ಈ ನೀರಾವರಿ ವಿಚಾರದಲ್ಲಿ ಪುನಃ ಸದನದ ಒಂದು ಸಹಕಾರವನ್ನು ಕೇಳುತ್ತಿದ್ದೇನೆ. ಇದು ಅವಶ್ಯಕವಾಗಿದ್ದು ಸಮಯದ ಒಂದು ಒತ್ತಡ ಕೂಡಾ ಇದೆ. ೨೦೦೦ ಎ.ಡಿ. ಹೊತ್ತಿಗೆ ಕೃಷ್ಣಾ ನದಿ ನೀರಿನ ಬಳಕೆ ಮಾಡಿಕೊಳ್ಳಬೇಕು, ೫ ವರ್ಷದಲ್ಲಿ ಕಾವೇರಿ ವಲಯದಲ್ಲಿ ನೀರಿನ ಉಪಯೋಗ ಮಾಡಿಕೊಳ್ಳಬೇಕಾಗಿದೆ ಎಂದು ನಾನು ಈಗಾಗಲೇ ಹೇಳಿದ್ದೇನೆ. ಇದು ಸರ್ಕಾರ ಮತ್ತು ಸಂಬಂಧಪಟ್ಟ ರೈತರ ಸಹಕಾರದಿಂದ ಮಾತ್ರ ಸಾಧ್ಯ. ಆ ಬಗ್ಗೆ ಕೆಲವು ವಿಚಾರಗಳನ್ನು ನಾನು ಇಲ್ಲಿ ವ್ಯಕ್ತ ಮಾಡಿದ್ದೇನೆ. ಮಾನ್ಯ ಸಭೆ ಈ ಬೇಡಿಕೆಗಳನ್ನು ಒಪ್ಪಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅಧ್ಯಕ್ಷರೇ, ನಾನು ಹೇಳಿದ್ದನ್ನೇ ಅವರು ಪುನಃ ಪುನಃ ಬಿಚ್ಚಿಬಿಚ್ಚಿ ಹೇಳಿ ಸಮರ್ಥನೆ ಮಾಡಿಕೊಂಡಿದ್ದಾರೆ. ಆದರೆ ಮಾನ್ಯ ಮಂತ್ರಿಗಳ ಗಮನಕ್ಕೆ "A Picture of Karnataka Budget 1988-89" ಇದನ್ನು ತರುತ್ತೇನೆ. ಇದರಲ್ಲಿ ಮೇಜರ್ ಮತ್ತು ಮೀಡಿಯಂ ಇರಿಗೇಷನ್ ಬಗ್ಗೆ ೧೯೮೨ ರಿಂದ ಹಿಡಿದು ೧೯೮೮-೮೯ ರ ವರೆಗೆ ತೋರಿಸಿದ್ದೀರಿ. ಇದನ್ನು ನೋಡಿದರೆ ಅವರಿಗೇ ಗೊತ್ತಾಗುತ್ತದೆ. ಪುಟ ೩೨ ಹಾಗೂ ೩೪ನ್ನು ಈ ಬಗ್ಗೆ ನೋಡಿ. ಟೇಬಲ್ ೧೪ ಹಾಗೂ ೧೪ಎ ನಲ್ಲಿ ಮೇಜರ್ ಮತ್ತು ಮೀಡಿಯಂ ಇರಿಗೇಷನ್‌ಗೆ ಸರಾಸರಿ ಎಷ್ಟು ಎಷ್ಟು ಕೊಡಲಾಗಿದೆ ಎಂದು ತೋರಿಸಲಾಗಿದೆ. ಇದು ೧೯೮೧-೮೨ರಲ್ಲಿ ೬೧.೯೩, ೧೯೮೨-೮೩ರಲ್ಲಿ

೬೧.೩೪, ೧೯೮೩–೮೪ರಲ್ಲಿ ೫೨.೬೮, ೧೯೮೪–೮೫ರಲ್ಲಿ ೬೫.೧೮, ೧೯೮೫–೮೬ರಲ್ಲಿ ೫೫.೯೯, ೧೯೮೬–೮೭ ರಲ್ಲಿ ೫೧.೦೨, ೧೯೮೭–೮೮ರಲ್ಲಿ ೫೫.೫೪ ಹಾಗೂ ೧೯೮೮–೮೯ರಲ್ಲಿ ೬೦.೨೫ ಎಂದು ತೋರಿಸಿದ್ದೀರಿ. ಇಲ್ಲಿಯವರೆಗೆ ಏನು ಹಣವನ್ನು ಖರ್ಚು ಮಾಡಿದ್ದೀರಿ ಇದರಲ್ಲಿ ರಿಲೇಟೀವ್‌ಲಿ ನಿಮ್ಮ ಫಿಸಿಕಲ್ ಅಚೀವ್‌ಮೆಂಟ್ ಏನು ? ಇದರ ಪ್ರಕಾರ ನೀವು ಹಣವನ್ನು ಎಷ್ಟೇ ಖರ್ಚು ಮಾಡಿರಬಹುದು. ಆದರೆ ಅವತ್ತಿನದಿವಸ ಒಂದು ವಸ್ತುವಿನ ಬೆಲೆ ೧ ರೂಪಾಯಿ ಇದ್ದರ ಅದೇ ವಸ್ತುವಿನ ಬೆಲೆ ಇವತ್ತು ೩ ರೂಪಾಯಿ ಆಗುತ್ತದೆ. ಹಣವನ್ನು ಹೆಚ್ಚು ಖರ್ಚು ಮಾಡಿರುವುದರಿಂದ ಕೆಲಸ ಕೂಡಾ ಹೆಚ್ಚು ಆಗಿದೆ, ಫಿಸಿಕಲ್ ಅಚೀವ್‌ಮೆಂಟ್ ಹೆಚ್ಚು ಆಗಿದೆ ಎಂದು ಅರ್ಥವಲ್ಲ. ಇದು ಡ್ವಿಂಡಲ್ ಆಗುತ್ತದೆ ಎಂಬುದನ್ನು ತಾವು ಒಪ್ಪಿಕೊಳ್ಳುತ್ತೀರಾ ? ಕಡಿಮೆ ಆಗಿದೆ, ಮಾಡುವುದಕ್ಕೆ ಆಗಿಲ್ಲ, ಕ್ಯಾಪಿಟಲ್ ಎಕ್ಸ್‌ಪೆಂಡೀಚರ್‌ನಲ್ಲಿ, ಪ್ಲಾನ್ ಔಟ್‌ಲೇನಲ್ಲಿ ಪ್ರೈಯಾರಿಟಿ ಕಡಿಮೆ ಆಗಿದೆ ಎಂಬುದನ್ನು ತಾವು ಒಪ್ಪಿಕೊಳ್ಳುತ್ತೀರಾ ? ಸುಮ್ಮನೆ ಈ ಬಗ್ಗೆ ವಾದ ಮಾಡುವುದು ಬೇಡ. ಮುಂದೆ ಏನು ಮಾಡಬೇಕೆಂಬುದನ್ನು ಸ್ಪಷ್ಟವಾಗಿ ಹೇಳಿ. ೧೯೮೮–೮೯ರಲ್ಲಿ ಹೆಚ್ಚಿಗೆ ಮಾಡುತ್ತೇವೆಂದು ಹೇಳಿದ್ದೀರಿ. ಎರಡನೆಯದಾಗಿ, ಕೃಷ್ಣ ಮೇಲ್ದಂಡೆ ಯೋಜನೆ ಬಗ್ಗೆಯಾದರೂ ಪ್ರಯಾರಿಟಿ ಕೊಟ್ಟು ಮಾಡಬೇಕೆಂದು ಹೇಳಿದ್ದೇವೆ. ಒತ್ತಿ ಹೇಳಿಲ್ಲ ಎಂದರೆ ಹೇಗೆ ಒತ್ತಿ ಹೇಗೆ ಹೇಳಬೇಕೋ ನಮಗೆ ಗೊತ್ತಿಲ್ಲ. ಹೋದಸಲ ಈ ಬಗ್ಗೆ ಮಾನ್ಯ ದೇವೇಗೌಡರಿಗೆ ಕೇಳಿದಾಗ ಅವರು ಇದರ ಬಗ್ಗೆ ಹೇಳಿದ್ದರು. ಒತ್ತಿ ಎಂದರೆ ಶರ್ಟ್ ಹಿಡಿದು ಕೇಳಬೇಕೇ ? ಹೊಡೆದು ಕೇಳಬೇಕೇ ? ಬಡಿದು ಕೇಳಬೇಕೇ ? ಈಗಂತೂ ಇರಿಗೇಷನ್, ಪ್ಲಾನಿಂಗ್ ಎಲ್ಲಾ ನಿಮಗೇ ಸೇರಿದೆ. ಕೊನೇ ಪಕ್ಷ ನಿಮ್ಮ ಪ್ರಭಾವ ಬೀರಿ ಕೃಷ್ಣಾ ಮೇಲ್ದಂಡೆ ಹಾಗೂ ಕಾವೇರಿ ಬೇಸಿನ್‌ನಲ್ಲಿ ಬರತಕ್ಕ ಎಲ್ಲಾ ಪ್ರಾಜೆಕ್ಟ್‌ಗಳನ್ನು ಕಂಪ್ಲೀಟ್ ಮಾಡುವುದಕ್ಕೆ ಏನಾದರೂ ಹೊಸದಾಗಿ ರಿಸೋರ್ಸಸ್ ಮೊಬಲೈಸ್ ಮಾಡಿ ಕೆಲಸ ಸಂಪೂರ್ಣ ಮಾಡುತ್ತೀರೋ ಹೇಗೇ ಎನ್ನುವುದನ್ನು ಹೇಳಬೇಕು. ಸಣ್ಣ ನೀರಾವರಿ ಯೋಜನೆಗಾಗಿ ವಿಶ್ವಬ್ಯಾಂಕಿನಿಂದ ಹಣ ಸಹಾಯವನ್ನು ತೆಗೆದುಕೊಳ್ಳಲಾಗಿದೆ. ಹಳೆಯ ಸಣ್ಣ ನೀರಾವರಿ ಟ್ಯಾಂಕುಗಳು ಇವೆ. ಅವುಗಳಲ್ಲಿರತಕ್ಕ ಹೂಳನ್ನು ತೆಗೆಯುವುದಕ್ಕೆ ಪ್ರಾವಿಜನ್ ಇಲ್ಲ. ಬರಗಾಲದಲ್ಲಿ ಏನೋ ಅಲ್ಪಸ್ವಲ್ಪ ರೊಕ್ಕ ಕೊಟ್ಟು ಮಾಡಿರಿ ಯೆಂದು ಹೇಳಿದಾಗ ಅಸಿಸ್ಟೆಂಟ್ ಇಂಜಿನಿಯರ್ ಹಾಗೂ ಇನ್ನೂ ಕೆಲವರು ಕೆಲಸ ತೆಗೆದುಕೊಂಡು ಹಣವನ್ನು ನುಂಗಿ ಹಾಕುತ್ತಾರೆ. ಕೆರೆಗಳ ಹೂಳು ತೆಗೆಯುವುದನ್ನು ಬಿಟ್ಟು ಹೊಸ ಕೆರೆಗಳನ್ನು ಹಿಂದುಳಿದ ಪ್ರದೇಶಗಳಲ್ಲಿ ನಿರ್ಮಾಣ ಮಾಡುವ ಬಗ್ಗೆ ಏನು ಮಾಡಿದ್ದೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಪೊಟೆನ್ಷಿಯಲ್ ಬಗ್ಗೆ ಹೇಳಿದ್ದಾರೆ ಅದನ್ನು ನಾನು ಒಪ್ಪುತ್ತೇನೆ. ಆದರೆ ನೀರಾವರಿಗೆ ನೀರನ್ನು ಕೊಡತಕ್ಕದ್ದು ಕಡಿಮೆಯಾಗಿದೆ ಅದಕ್ಕೆ ಕಾರಣವೇನು ಎಂದು ಕೇಳಿದ್ದಾರೆ. ಹಣವನ್ನು ಅಡ್ವಾನ್ಸ್ ಆಗಿ ಇನ್‌ವೆಸ್ಟ್ ಮಾಡಬೇಕಾಗುತ್ತದೆ. ಹಣ ಅಡ್ವಾನ್ಸ್ ಆಗಿ ಅಲಮಟ್ಟಿ ಡ್ಯಾಮಿನಲ್ಲಿ ಖರ್ಚಾಗುತ್ತದೆ. ನಾರಾಯಣಪುರ ಡ್ಯಾಮ್ ಕಟ್ಟುವಾಗ ಸಬ್‌ಮರ್ಸ್ ಆಗಿರತಕ್ಕ ೮೦ ಹಳ್ಳಿಗಳಿಗೆ ಪರಿಹಾರವನ್ನು ಕೊಡತಕ್ಕ ವಿಚಾರವಿದೆ. ಡ್ಯಾಮ್ ಕಟ್ಟುವಾಗ ನೀರು ಹೋಗುವುದಿಲ್ಲ. ಇನ್‌ವೆಸ್ಟ್‌ಮೆಂಟ್‌ನಿಂದ ಇನ್‌ಫ್ರಾಸ್ಟ್ರಕ್ಚರ್ ಬಿಲ್ಡ್ ಆಗಿದೆ, ಅದೇರೀತಿ investment on canals, for full length of ಶಹಬಾದ್ ಬ್ರಾಂಚ್ ಇಂಡಿ ಕೆನಾಲ್‌ಗೆ ಹಣ ಕೊಟ್ಟಿದ್ದೇವೆ. ಹೇಮಾವತಿ ಡ್ಯಾಮ್ ಕಟ್ಟಿದ್ದೇವೆ, ನೀರು ಬಿಡತಕ್ಕದ್ದು ಕಡಿಮೆಯಾಗಿರಬಹುದು. ಟನಲ್ ವರ್ಕ್ಸ್ ಕಂಪ್ಲೀಟ್ ಆಗದಿದ್ದರೆ ನೀರು ಹೇಗೆ ಹೋಗುತ್ತದೆ ?

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಮಾನ್ಯ ಖರ್ಗೆಯವರ ಕಾಲದಲ್ಲಿ ಮಂತ್ರಿಮಂಡಲದ ಸಭೆಗಳನ್ನು ಬೆಳಗಾಂ, ಶಿವಮೊಗ್ಗ, ಗುಲ್ಬರ್ಗ ಜಿಲ್ಲೆಗಳಲ್ಲಿ ಮಾಡಿದ್ದೀರಿ. ಅಂದಿನ ಮುಖ್ಯಮಂತ್ರಿಗಳಾದ ಗುಂಡೂರಾವ್‌ರವರಿಗೆ ಬೆಳಗಾಂನಲ್ಲಿ ಮಂತ್ರಿಮಂಡಲದ ಸಭೆ ನಡೆಯುವಾಗ ಒಂದು ಪತ್ರವನ್ನು ಬರೆದಿದ್ದೇನೆ. ಕಡಬಘಟ್ಟ, ಮಾರ್ಕಂಡೇಯ, ಮುದಕವಿ ಟನಲ್‌ಗಳ ಬಗ್ಗೆ ನಾಲ್ಕು ವರ್ಷಗಳಿಂದ ಒಂದು ನಿರ್ಣಯ ಆಗಿರಲಿಲ್ಲ. ಕಂಟ್ರಾಕ್ಟರುಗಳ ಡಿಸ್‌ಪ್ಯೂಟ್ ಇತ್ತು, ಬೆಳಗಾಂನಲ್ಲಿ ಕ್ಯಾಬಿನೇಟ್ ಮೀಟಿಂಗ್‌ನಲ್ಲಿ ಒಂದು ನಿರ್ಣಯ ತೆಗೆದುಕೊಂಡು ಮಾಡಿರಿ ಎಂದು ಹೇಳಿದಾಗ ನಿರ್ಣಯ ಆಗಲಿಲ್ಲ ಮೂರು ವರ್ಷಗಳು ಡಿಸ್‌ಪ್ಯೂಟ್‌ನಲ್ಲಿಯೇ ಹೋಯಿತು.

Whether to terminate the contract or whether to give it to a new man or not, no decision was taken.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾಲ್ಕು ವರ್ಷದ ಪ್ರಶ್ನೆ ಇಲ್ಲಿ ಬರುವುದಿಲ್ಲ, ಬೆಳಗಾಂನಲ್ಲಿ ಕ್ಯಾಬಿನೇಟ್ ಮೀಟಿಂಗ್ ಆದದ್ದು ೧೯೮೨ರಲ್ಲಿ ಆಮೇಲೆ ನಾವು ಒಂದು ವರ್ಷ ಕೂಡ ಇರಲಿಲ್ಲ. ಆಮೇಲೆ ನೀವೇ ಅಧಿಕಾರಕ್ಕೆ ಬಂದಿದ್ದೀರಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ದಿವಂಗತ ದೇವರಾಜಅರಸ್‌ರವರ ಕಾಲದಿಂದಲೂ ನಡೆದಿದೆಯೆಂದು ಹೇಳುತ್ತಿದ್ದೇನೆ ಆದರೆ ತೀರ್ಮಾನಗಳನ್ನು ತೆಗೆದುಕೊಳ್ಳಲಿಲ್ಲ. ಬೇರೆ ಬೇರೆ ಡ್ಯಾಮ್‌ಗಳ ಟನಲ್‌ಗಳ ಬಗ್ಗೆ ಇನ್‌ವೆಸ್ಟ್ ಆಗಿದೆ. ಹಣ ಪೋಲಾಗಿಲ್ಲ. ಕೆಲಸ ನಡೆಯುತ್ತಿರುವುದರಿಂದ ನೀರು ಕೊಡಲಿಕ್ಕೆ ಆಗಿಲ್ಲ. ಕೆರೆಗಳ ಹೂಳು ತೆಗೆಯುತಕ್ಕ ವಿಚಾರಗಳಲ್ಲಿ ಹೇಳಿರತಕ್ಕ ಮಾತನ್ನು ತತ್ವಶಃ ಒಪ್ಪಿಕೊಳ್ಳುತ್ತೇವೆ. ಕೆರೆಗಳ ಹೂಳು ತೆಗೆಯುವುದು ಅವಶ್ಯಕವಿದೆ. ಜೊತೆಗೆ ಹಳೆಯ ನೀತಿಗಳು ಬದಲಾವಣೆಯಾಗಬೇಕು. ಆದಷ್ಟು ಬೇಗ ಇದರ ಬಗ್ಗೆ ನಿರ್ಣಯ ತೆಗೆದುಕೊಳ್ಳುತ್ತೇವೆ,

ಶ್ರೀ ಎಸ್. ಹೆಚ್, ಕೌಜಲಗಿ.—ಬೆಳಗಾಂ ಜಿಲ್ಲೆಯ ಚಿಕ್ಕಬುಂದನೂರು ಕೆರೆ ನಿರ್ಮಾಣ ಮಾಡುವ ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತೀರಿ? ಆ ಕೆರೆ ಮಾಡುವುದರಿಂದ ೧೫ ನೂರು ಎಕರೆ ಭೂಮಿ ನೀರಾವರಿಯಾಗುತ್ತದೆ. ಮೂರು ವರ್ಷದಿಂದ ಏನೂ ಕೆಲಸ ನಡೆದಿಲ್ಲ. ಹೋದ ವರ್ಷ ಸಹ ಇನ್ನು ಮೂರು ತಿಂಗಳುಗಳಲ್ಲಿ ಮಾಡುತ್ತೇವೆಂದು ಭರವಸೆ ಬಂತು. ಕಳೆದ ನಾಲ್ಕು ವರ್ಷಗಳಿಂದ ಅದರ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ. ಉತ್ತರ ಕರ್ನಾಟಕ ಭಾಗದ ಒಂದು ಕೆಲಸವನ್ನು ಪ್ರಾರಂಭ ಮಾಡಿಲ್ಲ. ಸರ್ವೆ ಕೆಲಸ ಕೂಡ ಆಗಿಲ್ಲ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದರ ಬಗ್ಗೆ ನಾನು ಈಗಾಗಲೇ ಮುಖ್ಯ ಇಂಜಿನಿಯರ್‌ರವರಿಗೆ ಆದೇಶ ಕೊಟ್ಟಿದ್ದೇನೆ.

ಶ್ರೀ ಕೆ.ಹೆಚ್. ಶ್ರೀನಿವಾಸ.—ನಾನು ತುಂಗಾ ಏತಾ ನೀರಾವರಿಯ ಬಗ್ಗೆ ಕೇಳಿದ್ದೆ. ಇತರೇ ಸದಸ್ಯರು ಆ ಬಗ್ಗೆ ಮಾತನಾಡಿದ್ದಾರೆ, ಭದ್ರಾ ಲೆಫ್ಟ್‌ಬ್ಯಾಂಕ್ ಕೆನಾಲ್‌ನ ಲೂಪ್ ಕೆನಾಲ್ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಏತಾ ನೀರಾವರಿ ಯೋಜನೆಗಳ ಬಗ್ಗೆ ಕಾರ್ಪೊರೇಷನ್ ಮಾಡಿದ್ದೇವೆ. ಆ ಕೆಲಸಗಳನ್ನು ನೋಡಲಿಕ್ಕೆ ಕಾರ್ಪೊರೇಷನ್ ಅಸ್ತಿತ್ವಕ್ಕೆ ಬಂದಿದೆ. ಆ ಕೆಲಸಗಳ ಬಗ್ಗೆ ಫೈನಾನ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಕ್ಲಿಯರ್ ಆಗಿದೆ. ಆದಷ್ಟು ಬೇಗ ಲಿಫ್ಟ್ ಇರಿಗೇಷನ್ ಸ್ಕೀಮ್‌ಗಳನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ಶ್ರೀನಿವಾಸ.—ಏತ ನೀರಾವರಿ ಕಾರ್ಪೊರೇಷನ್‌ನವರು ರೆಡಿ ಇದ್ದ ಕೆಲಸಗಳನ್ನು ತೆಗೆದುಕೊಂಡು ಮಾಡಬಹುದು. ಆ ಕಾರ್ಪೊರೇಷನ್ ಯಾವ ಕೆಲಸ ತೆಗೆದುಕೊಳ್ಳಬೇಕು ಯಾವುದನ್ನು ತೆಗೆದುಕೊಳ್ಳಬಾರದು ಎನ್ನುವುದನ್ನು ಡಿಸೈಡ್ ಮಾಡುವ ಶಕ್ತಿ ಶಕ್ತಿಸಾಮರ್ಥ್ಯ ಅದಕ್ಕೆ ಬರುವುದಿಲ್ಲ. ಆ ಬಗ್ಗೆ ಸರ್ಕಾರದ ಮಟ್ಟದಲ್ಲಿ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ತುಂಗ, ಅಪ್ಪರ್ ತುಂಗ, ಲೋಯರ್ ತುಂಗ ಅದಕ್ಕೆ ಏನೋ ಒಂದು ಹೆಸರಿಟ್ಟು ಇಂತಹ ಸ್ಕೀಮ್‌ಗಳನ್ನು ತೆಗೆದುಕೊಳ್ಳಬೇಕು ಎನ್ನುವ ತೀರ್ಮಾನ ಮಾಡಬೇಕು ಇದು ಆಗುತ್ತದೆ ಅಥವಾ ಇಲ್ಲವೆನ್ನುವುದಕ್ಕೆ ಒಂದು ತೀರ್ಮಾನ ತೆಗೆದುಕೊಳ್ಳುವುದಕ್ಕೆ ಒಂದು ಸಭೆಯನ್ನು ಕರೆಯಿರಿ ಎಂದು ನಾನು ಹೇಳಿದ್ದೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಸಭೆಯನ್ನು ಕರೆದಿದ್ದೇನೆ.

ಶ್ರೀ ಆರ್, ವೆಂಕಟರಾಮಯ್ಯ.—ಸನ್ಮಾನ್ಯ ಅಧ್ಯಕ್ಷರೇ, ಈಗ ಲ್ಯಾಂಡ್‌ರೆವಿನ್ಯೂ ಬಗ್ಗೆ ರಿಪ್ಲೈ ಮಾಡಿದ್ದಾರೋ ಗೊತ್ತಿಲ್ಲ.

ಶ್ರೀ ಎಸ್.ಆರ್. ಬೊಮ್ಮಾಯಿ.—ಇಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ನಾನು ಸ್ಪಷ್ಟವಾಗಿ ಕೇಳಿದ್ದೆ, ಬಯಲು ಸೀಮೆ ಪ್ರದೇಶವಾದ ಕೋಲಾರದ ಬಗ್ಗೆ ನಾನು ಹೇಳಿದಾಗ ತಾವು ಇರಲಿಲ್ಲ. ಕೋಲಾರ, ಬೆಂಗಳೂರು, ತುಮಕೂರು, ಚಿತ್ರದುರ್ಗ ಜಿಲ್ಲೆಗಳಲ್ಲಿ ಎಲ್ಲಿ ನೀರಾವರಿ ಯೋಜನೆಗಳು ಇಲ್ಲವೋ, ಅಂತಹ ಕಡೆ ಆದ್ಯತೆ ಮೇರೆಗೆ

ಮೈನರ್ ಇರಿಗೇಷನ್ ಪೊಟೆನ್ಷಿಯಲ್ ಇದೆಯೋ ಅಲ್ಲಿ ಸ್ವಲ್ಪ ದುಡ್ಡು ಕೊಡಬೇಕೆಂದು ಕೇಳಿದ್ದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ರಫರೆನ್ಸ್ ಮಾಡಲಿಲ್ಲ. ಇದರ ಬಗ್ಗೆ ಸ್ಪಷ್ಟವಾಗಿ ಹೇಳಬೇಕು. ಎರಡನೆಯದು ಈ ಟೈಮ್ ಬೌಂಡ್ ಪ್ರೋಗ್ರಾಮ್ ಹೇಳಬೇಕೆಂದರೆ ಎಲ್.ಓ.ಸಿ. ತಗೆದುಬಿಟ್ಟರೆ ಮಾತ್ರ ಅದು ಆಗುತ್ತದೆಯೋ ಹೊರತು ಎಲ್.ಓ.ಸಿ ತೆಗೆಯದೆ ಇದನ್ನು ಮಾಡುತ್ತೇವೆ ಎಂದು ಹೇಳಿದರೆ ಆಗುವುದಿಲ್ಲ. ದಯವಿಟ್ಟು ಎಲ್.ಓ.ಸಿ.ಯನ್ನು ತೆಗೆಯುತ್ತೀರಾ? ಕೋಲಾರ, ಬೆಂಗಳೂರು, ತುಮಕೂರು, ಚಿತ್ರದುರ್ಗ ಇಂತಹ ಜಿಲ್ಲೆಗಳಿಗೆ ತಾವು ಏನು ಅನುಕೂಲ ಮಾಡಿಕೊಡುತ್ತೀರಿ ? ದಯವಿಟ್ಟು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಎಸ್.ಆರ್. ಬೊಮ್ಮಾಯಿ —ಈಗ ಉತ್ತರ ಕೊಡುವುದಕ್ಕೆ ಕಷ್ಟವಾಗುತ್ತದೆ. ಮಾಡುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.— ಒಂದು ಮಾತನ್ನು ಶ್ರೀ ದೇವೇಗೌಡರು ಹೇಳಿದ್ದರು ಏನೆಂದರೆ ಇದಕ್ಕೆ ಒಂದು ಸ್ಪೆಷಲ್ ಕಮಿಟಿಯನ್ನು ಕರೆಯುತ್ತೇನೆ ಎಂದು. ಇದಕ್ಕೆ ಎಲ್ಲರನ್ನೂ ಕರೆಸಿ. ಎಂ.ಎಲ್.ಎ. ಗಳನ್ನು ಸೇರಿಸಿ ಒಂದು ಪ್ರೋಗ್ರಾಮ್ ಹಾಕುತ್ತೇವೆ, ಅನುಕೂಲ ಮಾಡಿಕೊಡುತ್ತೇವೆ ಎಂದು ಹೋದಸಲ ಬಜೆಟ್ ಸಂದರ್ಭದಲ್ಲಿ ಹೇಳಿದ್ದರು. ಹೋದವರ್ಷವಂತೂ ಈ ಕಮಿಟಿಯನ್ನು ಕರೆಯಲಿಲ್ಲ. ಈ ವರ್ಷವಾದರೂ ಇದನ್ನು ಕರೆದು ಈ ನಾಲ್ಕು ಜಿಲ್ಲೆಗಳ ಬಗ್ಗೆ ಅನುಕೂಲ ಮಾಡಿಕೊಡುತ್ತೀರಾ?

ಶ್ರೀ ಎಸ್.ಆರ್. ಬೊಮ್ಮಾಯಿ.— ಸಭೆ ಕರೆಯುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಕಲ್ಲೊಡ್ಡು ಯೋಜನೆ ಬಗ್ಗೆ ಅರಣ್ಯಾಧಿಕಾರಿಗಳು ಮುಳುಗಡೆಯಾಗಿರುವ ಪ್ರದೇಶದಲ್ಲಿ ಮರಗಳು ಏನು ಲಾಸ್ ಆಗುತ್ತವೆ. ಅದರ ವರದಿ ಕೊಡದೆ ಉದ್ದೇಶಪೂರ್ವಕವಾಗಿ ನಿಧಾನವಾಗುತ್ತಿದೆ. ನಿಮ್ಮ ಇರಿಗೇಷನ್ ಚೀಫ್ ಇಂಜಿನಿಯರ್ ಸಹ ಜೂನ್ ೬ನೇ ತಾರೀಕಿನ ಒಳಗಡೆ ವರದಿಯನ್ನು ಕಳಿಸಿಕೊಡದೇ ಇದ್ದರೆ ಇದನ್ನು ಡ್ರಾಪ್ ಮಾಡುವಂಥ ಸಂದರ್ಭ ಬರುತ್ತದೆ ಎಂದು ಪತ್ರ ಬರೆದಿದ್ದಾರೆ. ಈ ಸ್ಕೀಮ್‌ಗೆ ಸುಮಾರು ೧೦–೧೨ ಲಕ್ಷ ರೂಪಾಯಿಗಳು ಖರ್ಚಾಗಿದೆ. ಆದ್ದರಿಂದ ಯಾರು ಅರಣ್ಯ ಅಧಿಕಾರಿಗಳು ಇದನ್ನು ಉದ್ದೇಶಪೂರ್ವಕವಾಗಿ ಹಿಡಿದಿಟ್ಟುಕೊಂಡಿದ್ದಾರೆ ಅವರನ್ನು ಕರೆಸಿ ಇದನ್ನು ಸ್ಯಾಂಕ್ಷನ್ ಮಾಡುತ್ತೀರಾ ? ಎರಡನೆಯದು ಸನ್ಯಾಸಿಕೊಪ್ಪ ಲಿಫ್ಟ್ ಇರಿಗೇಶನ್‌ದ್ದು ಸರ್ವೆ ಆಗಿದೆ. ಇವೆರಡನ್ನು ಮಾಡಿದರೆ ಶಿಕಾರಿಪುರ ತಾಲ್ಲೂಕಿನ ಜನರಿಗೆ ತುಂಬಾ ಅನುಕೂಲವಾಗುತ್ತದೆ. ಹಿಂದಿನ ಸಚಿವರು ಇದನ್ನು ಮಾಡಿಕೊಡುತ್ತೇನೆ ಎಂದು ಒಪ್ಪಿಕೊಂಡಿದ್ದರು. ದಯವಿಟ್ಟು ಇವೆರಡರ ಬಗ್ಗೆ ಮಂಜೂರು ಮಾಡಿಕೊಡುತ್ತೇನೆ ಎಂದು ತಾವು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಎಸ್.ಆರ್. ಬೊಮ್ಮಾಯಿ.—ಕಲ್ಲೊಡ್ಡು ಯೋಜನೆಯನ್ನು ಸರ್ಕಾರ ಕೈಬಿಡಬೇಕೆಂದು ನಿರ್ಣಯ ಆಗಿತ್ತು. ಈಗ ಪುನಃ ಇದನ್ನು ಕೈಗೆತ್ತಿಕೊಂಡಾಗ ಈ ಬಗ್ಗೆ ಅರಣ್ಯ ಇಲಾಖೆಯ ಅಭಿಪ್ರಾಯ ಬಹಳ ವಿರೋಧವಾಗಿದೆ. ಇದನ್ನು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಮುಖ್ಯಮಂತ್ರಿಗಳು ಸಭೆಯನ್ನು ಕರೆದು ಅದರ ಅಭಿಪ್ರಾಯ ಕೇಳಿದಾಗ ಇದನ್ನು ಮಾಡುವುದಕ್ಕೆ ಆಗುವುದಿಲ್ಲವೆಂದು ಅಭಿಪ್ರಾಯ ಬಂದಿದೆ. ಪುನಃ ನಾವು ಫಾರೆಸ್ಟ್ ಡಿಪಾರ್ಟ್‌ಮೆಂಟಿನ ಅಧಿಕಾರಿಗಳನ್ನು ಕರೆದು ಮತ್ತು ನಮ್ಮ ಅಧಿಕಾರಿಗಳನ್ನು ಕರೆದು ಏನು ತೊಡಕಿದೆ ಎಂದು ತಿಳಿದುಕೊಂಡು ಇದನ್ನು ಮಾಡಲಿಕ್ಕೆ ಸಾಧ್ಯವೋ ಇಲ್ಲವೋ ಎನ್ನುವುದರ ಬಗ್ಗೆ ಆಲೋಚನೆ ಮಾಡುತ್ತೇನೆ. ಸನ್ಯಾಸಿಕೊಪ್ಪ ಲಿಫ್ಟ್ ಇರಿಗೇಷನ್ ಇನ್ನೂ ಮಾಡಿಲ್ಲ.

ಶ್ರೀ ಕೆ.ಬಿ. ಶಾಣಪ್ಪ —ಮಾನ್ಯ ಅಧ್ಯಕ್ಷರೇ, ನಾನು ಮಾತನಾಡುವಾಗ ನನ್ನ ಶಹಾಬಾದ್ ಕ್ಷೇತ್ರದಲ್ಲಿನ ಸನ್ನತಿ ಇರಿಗೇಷನ್ ಬಗ್ಗೆ ಹೇಳಿದ್ದೆ. ಹದಿನೈದು ವರ್ಷಗಳಾದರೂ ಇನ್ನೂ ನೀರನ್ನು ಕೊಟ್ಟಿಲ್ಲ. ಇದರ ಬಗ್ಗೆ ತಾವು ಹೇಳಿಲ್ಲ. ಇನ್ನು ಲಾಡಲಾಪುರದ ೧೯೮೬ರಿಂದಲೂ ಬಡ್ಜೆಟ್‌ನಲ್ಲಿ ಹಾಕುತ್ತಿದ್ದರು ಈಗ ಎರಡು ವರ್ಷಗಳಿಂದ ಬಿಟ್ಟಿದ್ದಾರೆ. ಇದನ್ನು ಮಾಡಿದರೆ ಸಾವಿರಾರು ಎಕರೆ ಪ್ರದೇಶಕ್ಕೆ ನೀರು ಸಿಗುತ್ತದೆ. ಇನ್ನೊಂದು ವಿಚಾರ ಎಂದರೆ ಟ್ಯಾಂಕ್ ಇರಿಗೇಷನ್ ಬಗ್ಗೆ ನಾನು ಹೇಳಿದ್ದೆ. ವರ್ಲ್ಡ್ ಬ್ಯಾಂಕ್ ಸಹಾಯದಿಂದ ಇದನ್ನು ೧೯೮೪ರಲ್ಲಿ ತೆಗೆದುಕೊಂಡು ೧೯೮೮ರಲ್ಲಿ ಮುಗಿಸಬೇಕಿತ್ತು. ಆದರೆ ಇದು ಏಕೆ ನಿಧಾನ ಆಗಿದೆ. ಇದಕ್ಕೆ ಕಾರಣ ಏನು ಎಂದು ತಿಳಿಸುತ್ತೀರಾ ?

ಶ್ರೀ ಎಸ್.ಆರ್. ಬೊಮ್ಮಾಯಿ.—ವಿವರಗಳನ್ನು ನಾನು ತರಿಸಿಕೊಡುತ್ತೇನೆ.

ಶ್ರೀ ಬಿ.ಜಿ. ಜಮಖಂಡಿ.—ನಮ್ಮ ಕಡೆ ಸುತ್ತಮುತ್ತ ಐದಾರು ತಾಲ್ಲೂಕುಗಳಲ್ಲಿ ಘಟಪ್ರಭ ಕೆನಲ್‌ನಿಂದ ರೈತರು ನೀರನ್ನು ತೆಗೆದುಕೊಳ್ಳುತ್ತಾರೆ ಇದರಲ್ಲಿ ಏನಾಗಿದೆ ಎಂದರೆ ಒಂದು ಎಕರೆಗೆ ಸುಮಾರು ೧೫ ನೂರು ರೂಪಾಯಿಗಳನ್ನು ಈ ಕಬ್ಬಿಗೆ ನೀರು ತೆಗೆದುಕೊಂಡು ನಿಯಮ ಉಲ್ಲಂಘನೆ ಮಾಡಿದ್ದಾರೆ ಎಂದು ವಾಟರ್‌ಟ್ಯಾಕ್ಸ್ ಪೆನಾಲ್ಟಿ ಹಾಕುತ್ತಿದ್ದಾರೆ. ಇಲ್ಲಿ ಸಾಕಷ್ಟು ಓಪನ್ ವೆಲ್‌ಗಳು ಇವೆ ಓಪನ್‌ವೆಲ್ ಇಲ್ಲದರೈತರು ಕಬ್ಬಿಗೆ ನೀರನ್ನು ತೆಗೆದುಕೊಳ್ಳುತ್ತಾರೆ. ಇದರಿಂದ ಕ್ಯಾನಲ್‌ನಿಂದ ನೀರು ಯಾರು ತೆಗೆದುಕೊಳ್ಳುತ್ತಾರೆ ಎನ್ನುವುದರ ಬಗ್ಗೆ ಕೋಡ್ ಸಿಸ್ಟಂ ಅಂತ ಹೇಳಿ ಇದುವರೆಗೂ ಮಾಡಿಲ್ಲದೇ ಇರುವುದರಿಂದ ರೈತರಲ್ಲಿ ಗೊಂದಲ ಪರಿಸ್ಥಿತಿ ಉಂಟಾಗಿದೆ. ಈ ವಾಟರ್‌ಟ್ಯಾಕ್ಸ್ ಬಗ್ಗೆ ರೈತರು ಚಳುವಳಿ ಮಾಡಬೇಕೆಂದು ಮಾಡಿದ್ದಾರೆ.

ಆದುದರಿಂದ, ದಯಮಾಡಿ ಈ ಆಕ್ಟನ್ನು ಬದಲಾವಣೆ ಮಾಡಬೇಕು. ವೈಜ್ಞಾನಿಕ ದೃಷ್ಟಿಯಿಂದ ಮಾಡಿದರೆ ಒಳ್ಳೆಯದು. ಮುಧೋಳ ತಾಲ್ಲೂಕಿನಲ್ಲಿ ಮುದ್ದಾಪುರ ಎಂಬಲ್ಲಿ ೧೯೭೭ರಲ್ಲಿ ಒಂದು ಬ್ಯಾರೇಜ್ ಸ್ಯಾಂಕ್ಷನ್ ಆಗಿತ್ತು, ೨೨ ಲಕ್ಷ ರೂಪಾಯಿಗಳ ಅಂದಾಜು ಮಾಡಲಾಗಿತ್ತು. ಅದಕ್ಕೆ ಈಗಾಗಲೇ ೮ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಕಳೆದ ಸಲ ನಾವು ಕೇಳಿದಾಗ ಪ್ರಾರಂಭ ಮಾಡಲಾಗುವುದು, ಬೇಕಾದ ಸೌಲಭ್ಯವನ್ನು ಒದಗಿಸಲಾಗುವುದು ಎಂದು ಹಿಂದಿನ ನೀರಾವರಿ ಮಂತ್ರಿಗಳು ಹೇಳಿದ್ದರು. ಈಗ ಇದನ್ನು ಕ್ಯಾನ್ಸಲ್ ಮಾಡಿದ್ದಾರೆಂದು ತಿಳಿದು ಬಂದಿದೆ. ಇದನ್ನು ಏಕೆ ಕ್ಯಾನ್ಸಲ್ ಮಾಡಿದ್ದೀರಿ ? ಇದಕ್ಕೆ ೭-೮ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿತ್ತು. ಆ ಭಾಗದ ರೈತರು ನೀರಾವರಿಗೆ ಅನುಕೂಲವಾಗುತ್ತದೆ ಎಂಬ ನಿರೀಕ್ಷಣೆಯಲ್ಲಿದ್ದರು. ಈಗ ಏಕೆ ಕ್ಯಾನ್ಸಲ್ ಮಾಡಿದಿರಿ ಎಂಬುದನ್ನು ಮಾನ್ಯ ನೀರಾವರಿ ಮಂತ್ರಿಗಳು ಹೇಳಬೇಕು.

ಶ್ರೀ ಎಸ್.ಆರ್. ಬೊಮ್ಮಾಯಿ —ಒಂದನೆಯದು ವಾಟರ್ ರೇಟ್ ಬಗ್ಗೆ ಹೇಳಿದ್ದಾರೆ. It is genuine problem. ಇದನ್ನು ಸರ್ಕಾರ ಆಲೋಚನೆ ಮಾಡುತ್ತಾ ಇದೆ. ವಿಶೇಷವಾದ ಪರಿಸ್ಥಿತಿ ಅಲ್ಲಿ ಇದೆ. ಈ ಬಗ್ಗೆ ಸೂಕ್ತವಾದ ಸೂಚನೆಯನ್ನು ಆದಷ್ಟು ಬೇಗ ಕೊಡುತ್ತೇನೆ. ಇನ್ನು ಯೋಜನೆ ಕೈಬಿಟ್ಟಿರುವ ಬಗ್ಗೆ ಹೇಳಿದ್ದಾರೆ, ಈ ಬಗ್ಗೆ ಪುನರ್ ಪರಿಶೀಲನೆ ಮಾಡುತ್ತೇನೆ.

SRI MOHAMAD LAIAUDDIN BURANUDDIN.—In Bidar District, the Karanja Project has been under construction for the last 14 to 15 years. In the House, it was promised in 1986 that the project would be commissioned and water would be given in 1986. But even after 1987–88, water is not given and canal work is not completed. The villages which are going to be submerged are not rehabilitated. Will the Hon. Minister kindly give a definite date on which this project will be commissioned and water will be given to the farmers ? Secondly, in Bidar Taluk and District, for the last three years, not a single new tank has been sanctioned under minor irrigation. In my own constituency, for two minor irrigation tanks at Samistapur and Chitalgera, it is stated every year that invitations for laying the foundation stone are going to be printed and the Hon. Ministers will be laying the foundation Stone. Though we are in 1988, so far the foundation stone has not been laid, I would like to know when is it going to be laid. Every formality has been completed. The budget has been sanctioned So I want to know specifically when these two tanks will be taken up. Please give the dates.

ಶ್ರೀ ಎಸ್.ಆರ್. ಬೊಮ್ಮಾಯಿ.—ಕಾರಂಜಾ ಯೋಜನೆ ಬಗ್ಗೆ ಈಗಾಗಲೇ ಹೇಳಿದ್ದೇನೆ. ಇದು ೧೦ ವರ್ಷದಿಂದ ನಿಂತು ಹೋಗಿತ್ತು. ಈಗ್ಗೆ ೨-೩ ವರ್ಷದಿಂದ ಪ್ರತಿ ವರ್ಷ ೮-೯ ಕೋಟಿ ರೂಪಾಯಿಗಳನ್ನು ಕೊಟ್ಟು ಕೆಲಸ ಮಾಡುತ್ತಿದ್ದೇವೆ. ಆದಷ್ಟು ಬೇಗ ನೀರು ಕೊಡುತ್ತೇನೆ. ಇನ್ನು ಮೈನರ್ ಇರಿಗೇಷನ್ ಬಗ್ಗೆ ಬಜೆಟ್‌ನಲ್ಲಿ ಇನ್‌ಕ್ಲೂಡ್ ಆಗಿದೆ ಎಂದು ಹೇಳಿದ್ದಾರೆ. ಇದನ್ನು ಆದಷ್ಟು ಬೇಗ ಮಾಡುತ್ತೇವೆ.

ಶ್ರೀ ಕೆ. ಮಲ್ಲಪ್ಪ.—ಶಿವಮೊಗ್ಗ ಮತ್ತು ಚಿತ್ರದುರ್ಗ ಜಿಲ್ಲೆಗಳನ್ನು ಬಿಜಾಪುರ ಜಿಲ್ಲೆ ಏತ ನೀರಾವರಿ ಯೋಜನೆಗೆ ಸೇರಿಸಿದ್ದೀರಿ. ಆದ್ದರಿಂದ ಇದನ್ನು ಬಿಜಾಪುರದಿಂದ ಬದಲಾಯಿಸಿ ಮೈಸೂರು ವಿಭಾಗಕ್ಕೆ ಬದಲಾಯಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾಯಕೊಂಡ, ಜರಗನಹಳ್ಳಿ, ಕುರ್ಕಿ ಏತ ನೀರಾವರಿ ಯೋಜನೆಗಳನ್ನು ಕೂಡಲೇ ಪ್ರಾರಂಭಿಸುವ ಬಗ್ಗೆ ಮಾನ್ಯ ಸಚಿವರು ಭರವಸೆ ಕೊಡಬೇಕು. ಭದ್ರಾ ಜಲಾಶಯಕ್ಕೆ ಹೆಚ್ಚಿನ ಹಣ ನೀಡಬೇಕು, ಅಲ್ಲಿನ ರೈತರಿಗೆ ಆಗತಕ್ಕಂಥ ತೊಂದರೆಯನ್ನು ತಪ್ಪಿಸುವ ಸಲುವಾಗಿ, ಈ ಜಲಾಶಯಕ್ಕೆ ಹೆಚ್ಚಿನ ಹಣ ಬಿಡುಗಡೆ ಮಾಡುವ ಬಗ್ಗೆ ಮಾನ್ಯ ಸಚಿವರು ಭರವಸೆ ಕೊಡಬೇಕು.

ಶ್ರೀ ಎಸ್.ಆರ್. ಬೊಮ್ಮಾಯಿ.—ಮೇಲ್ಕಂಡ ಜಿಲ್ಲೆಗಳನ್ನು ಕಾವೇರಿ ಲಿಫ್ಟ್ ಇರಿಗೇಷನ್ ವಲಯಕ್ಕೆ ಸೇರಿಸಬೇಕೆಂಬ ವಿಚಾರ ಹೇಳಿದ್ದಾರೆ. ಅದನ್ನು ಪರಿಶೀಲನೆ ಮಾಡಿ ನಿರ್ಣಯ ತೆಗೆದುಕೊಳ್ಳುತ್ತೇವೆ ಇನ್ನು ಭದ್ರಾ ಯೋಜನೆಗೆ ಹೆಚ್ಚು ಹಣ ಕೊಡತಕ್ಕದ್ದನ್ನು ಹೇಳಿದ್ದಾರೆ, ಅವರ ಕ್ಷೇತ್ರದ ವಿಚಾರ ಇದೆ, ಇದನ್ನು ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಎಂ.ಎಲ್, ಉಸ್ತಾದ್.—ಸನ್ಮಾನ್ಯ ಅಧ್ಯಕ್ಷರೇ, ೮ನೇ ಡಿಸೆಂಬರ್ ೧೯೮೬ ರಂದು ಸನ್ಮಾನ್ಯ ಮುಖ್ಯಮಂತ್ರಿಗಳು ಬಿಜಾಪುರ ಜಿಲ್ಲೆಗೆ ಬಂದು ಮುಳುವಾಡ ಏತ ನೀರಾವರಿ ಯೋಜನೆಗೆ ಅಡಿಗಲ್ಲು ಸಮಾರಂಭವನ್ನು ಮಾಡಿ ಬಂದರು. ಅದರ ವೆಚ್ಚ ನಾನು ಕೇಳಿದ ಪ್ರಕಾರ ಐದುನೂರು ಕೋಟಿ ರೂಪಾಯಿಗಳು ಇದಕ್ಕೆ ಟೆಕ್ನಿಕಲ್ ಸ್ಯಾಂಕ್ಷನ್ ಕೊಡಲಾಗಿದೆ. ಈ ಬಡ್ಜೆಟ್‌ನಲ್ಲಿ ಇದರ ಸಲುವಾಗಿ ಒಂದು ೧೦ ಪೈಸೆಯನ್ನಾದರೂ ತೆಗೆದಿಟ್ಟಿದ್ದಾರೋ ಇಲ್ಲವೋ, ಇದಕ್ಕೆ ಈಗ ಬಜೆಟ್‌ಪ್ರೊವಾಯ್ಡ್ ಮಾಡಿಲ್ಲ ಎಂದರೆ ಮುಂದೆ ಮಾಡುವುದಕ್ಕೆ ಏನಾದರೂ ಅವಕಾಶ ಕಲ್ಪಿಸಿ ಕೊಡುತ್ತೀರಾ ಎಂದು ಹೇಳಬೇಕು.

ಶ್ರೀ ಎಸ್.ಆರ್, ಬೊಮ್ಮಾಯಿ.—ಮುಳುವಾಡ ಏತ ನೀರಾವರಿ ಯೋಜನೆಯ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ನೀಡಿರತಕ್ಕ ಭರವಸೆಯನ್ನು ಈಡೇರಿಸುತ್ತೇವೆ.

ಶ್ರೀ ಎಸ್,ಎಸ್. ಕಡಪಟ್ಟಿ.—ಮಾನ್ಯ ಅಧ್ಯಕ್ಷರೇ, ನಾರಾಯಣಪುರ ಜಲಾಶಯದಲ್ಲಿ ನೀರನ್ನು ಸಂಗ್ರಹಿಸಲಾಗಿದೆ. ಈ ನೀರು ಸಂಪೂರ್ಣವಾಗಿ ಎರೆಮಣ್ಣಿನ ಭೂಮಿಯಿಂದ ಬರುತ್ತಿದ್ದು ಪ್ರತಿವರ್ಷ ಜಲಾಶಯದಲ್ಲಿ ಹೂಳು ತುಂಬುದಕ್ಕೆ ಪ್ರಾರಂಭವಾಗಿದೆ. ಕಳೆದ ಎರಡು ವರ್ಷಗಳಲ್ಲಿ ಜಲಾಶಯದ ಫೋರ್ ಶೋರ್‌ನಲ್ಲಿ ಸಸಿಗಳನ್ನು ಹಚ್ಚಿ ಗಿಡಮರಗಳನ್ನು ನೆಟ್ಟು ಹೂಳು ತುಂಬುದನ್ನು ಕಡಿಮೆ ಮಾಡುವಂತೆ ವಿನಂತಿಸಿಕೊಳ್ಳಲಾಗಿತ್ತು, ಈವರೆಗೂ ಸರಕಾರ ಇಂತಹ ಯಾವುದೋ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ತಿಳಿದು ಬಂದಿಲ್ಲ. ಈ ಬಗ್ಗೆ ತೀವ್ರಗತಿಯಲ್ಲಿ ಸರಕಾರ ವಿಚಾರ ಮಾಡಿ ಹೂಳು ತುಂಬುವುದನ್ನು ತಡೆಗಟ್ಟಲಿಕ್ಕೆ ಏನು ಕ್ರಮ ಕೈಗೊಂಡಿದೆ ಎಂಬುದನ್ನು ನಿರ್ದಿಷ್ಟವಾಗಿ ತಿಳಿಸಬೇಕು. ಪ್ರತಿ ವರ್ಷ ಇರಿಗೇಷನ್‌ಗೆ ೪೫೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ. ಇರಿಗೇಷನ್ ಬಾಂಡ್‌ಗಳನ್ನು ಫ್ಲೋಟ್ (ಬಿಡುಗಡೆ) ಮಾಡುತ್ತೇವೆ ಎಂದರು ಇರಿಗೇಷನ್ ಬಾಂಡ್ ಫ್ಲೋಟ್ ಮಾಡುವುದು ಎಂದರೆ ಸುಮ್ಮನೆ ಏನೋ ಹೇಳಿದಹಾಗೆ ಇರಿಗೇಷನ್ ಬಾಂಡ್ ಬರುವುದಿಲ್ಲ. ಇರಿಗೇಷನ್ ಬಾಂಡ್‌ಗೆ ಗೌರ್ನಮೆಂಟ್ ಆಫ್ ಇಂಡಿಯಾದ ರು ಪರ್ಮಿಷನ್ ಕೊಡುವುದಿಲ್ಲ ನಿಮಗೆ ಇರುವಂತಹ ಸ್ಥಿತಿಯಲ್ಲಿ ನೀರಾವರಿಗೆ ಹೆಚ್ಚು ಹಣವನ್ನು ಕೊಡುವುದಕ್ಕೆ ಏನಾಗುತ್ತದೆ ? ಏನು ಎನ್ನುವುದನ್ನು ನಿರ್ದಿಷ್ಟವಾಗಿ ತಾವು ಸದನಕ್ಕೆ ತಿಳಿಸಬೇಕು ಇಷ್ಟು ವರ್ಷದ ಒಳಗೇ ಕೃಷ್ಣಾ ಕಣಿವೆ ನೀರನ್ನು ಉಪಯೋಗ ಮಾಡುತ್ತೇವೆಂದು ತಾವು ಟೈಮ್ ಬೌಂಡ್ ಪ್ರೋಗ್ರಾಂ ಹಾಕಬೇಕು, ಇಲ್ಲ ೨೦೦೦ನೇ ಇಸವಿಯ ಒಳಗೆ ಆ ನೀರನು ಸಂಪೂರ್ಣವಾಗಿ ಉಪಯೋಗ ಮಾಡುವುದಕ್ಕೆ ಏನಾದರೂ ಒಂದು ಕಾರ್ಯಕ್ರಮ ಹಾಕಿಕೊಂಡು ಸದನಕ್ಕೆ ಕೊಟ್ಟರೆ ನಮಗೆನಾದರೂ ಸ್ವಲ್ಪಮಟ್ಟಿಗೆ ತೃಪ್ತಿಯಾಗುತ್ತದೆ, ಇಲ್ಲದೇ ಹೋದರೆ ನೀರನ್ನು ನಾವು ಸಂಪೂರ್ಣವಾಗಿ ನಷ್ಟ ಮಾಡಿಕೊಳ್ಳುತ್ತೇವೆ. ಈ ದೃಷ್ಟಿಯಿಂದ ೨೦೦೦ನೇ ಇಸವಿಯ ವೇಳೆಗೆ ನಮ್ಮ ಫೇಟ್ ಕಂಪ್ಲೀಟ್ ಬ್ಲಾಕ್ ಆದಹಾಗೆ ಆಗುತ್ತದೆ. ನಿರ್ದಿಷ್ಟವಾಗಿ

ಏನು ಮಾಡುತ್ತೀರಿ ಏನು ಮಾಡುವುದಕ್ಕೆ ಶಕ್ಯ ಇದೆಯೋ, ಇಲ್ಲವೋ ಎನ್ನುವುದನ್ನು ಹೇಳಬೇಕು. ಇನ್ನು ಹುನಗುಂದ್ ತಾಲ್ಲೂಕಿನ ಹಿರೇಮ್ಯಾಗಿ ಏತನೀರಾವರಿ ಯೋಜನೆಗೆ ಅಡಿಗಲ್ಲು ಹಾಕಿದ್ದು ಸರಕಾರದಲ್ಲಿ ಏನಾದರೂ ದಾಖಲೆ ಇದ್ದರೆ, ದಯವಿಟ್ಟು ಯಾವಾಗ ಆ ಕಾರ್ಯವನ್ನು ಪ್ರಾರಂಭ ಮಾಡುತ್ತೀರಿ ಎಂಬುದನ್ನು ತಿಳಿಸಬೇಕು.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಕಡಪಟ್ಟಿಯವರು ಸ್ವಲ್ಪ ಸ್ಪಷ್ಟವಾದಿಗಳು, ನಿರ್ದಿಷ್ಟವಾದಿಗಳು. ನಾರಾಯಣಪುರ ಜಲಾಶಯದ ಫೋರ್‌ಶೋರ್‌ನಲ್ಲಿ ಗಿಡಮರಗಳನ್ನು ಬೆಳೆಸಬೇಕೆಂಬ ವಿಚಾರ ಹೇಳಿದ್ದಾರೆ. ಇದು ಸರಕಾರದ ಯೋಜನೆ ಇದೆ, ಆದಷ್ಟು ಬೇಗ ಪ್ರಾರಂಭ ಮಾಡುತ್ತೇವೆ.

ಶ್ರೀ ಎಸ್. ಎಸ್. ಕಡಪಟ್ಟಿ;—ಬೇಗ ಎಂದರೆ ಯಾವಾಗ, ಯಾವ ವರ್ಷದಿಂದ ಎಂಬುದನ್ನು ಹೇಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ ;— ಇನ್ನು ಆರು ತಿಂಗಳಲ್ಲಿ ಪ್ರಾರಂಭ ಮಾಡುತ್ತೇವೆ.

ಶ್ರೀ ಎಸ್.ಎಸ್. ಕಡಪಟ್ಟಿ.—ಜೂನ್-ಜುಲೈ ತಿಂಗಳಲ್ಲಿ ಹಚ್ಚಿದರೆ ಗಿಡ ನಿಂತುಕೊಳ್ಳುತ್ತವೆ. ಬೇಸಿಗೆಯಲ್ಲಿ ಹಚ್ಚಿದರೆ ನಿಂತುಕೊಳ್ಳುವುದಿಲ್ಲ ಆದುದರಿಂದ ಈಗ ಹಚ್ಚಬೇಕು.

ಶ್ರೀ ಎಸ್.ಆರ್. ಬೊಮ್ಮಾಯಿ.—ರೈನಿ ಸೀಸನ್‌ನಲ್ಲಿ ಪ್ರಾರಂಭ ಮಾಡುತ್ತೇವೆ. ಮಳೆಗಾಲದಲ್ಲೇ ಪ್ರಾರಂಭ ಮಾಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಈ ಕಡೆಯವರು ಕೇಳಿದರೆ ಪರಿಶೀಲನೆ ಮಾಡುತ್ತೇವೆ ಎಂದು ಹೇಳುತ್ತೀರಿ, ಆ ಕಡೆಯವರು ಕೇಳಿದರೆ ಇಷ್ಟೇ ದಿವಸದಲ್ಲಿ ಮಾಡುತ್ತೇವೆ ಎಂದು ಹೇಳುತ್ತೀರಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅವರು ಕೇಳಿದ್ದು ಅಫಾರ್‌ಸ್ಟೇಷನ್ ಬಗ್ಗೆ ಅದನ್ನು ಪ್ರಾರಂಭ ಮಾಡತಕ್ಕ ಯೋಜನೆ ಇದೆ, ಪ್ರಾರಂಭ ಮಾಡುತ್ತೇವೆ ಎಂದು ಹೇಳಿದ್ದೇನೆ. ಮರಗಿಡಗಳನ್ನು ಬೆಳೆಸುವ ಬಗ್ಗೆ ಹೇಳಿದ್ದಾರೆ. ಅದರ ಬಗ್ಗೆ ಹೇಳಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಬಗ್ಗೆ ಕೇಳುತ್ತಿದ್ದಾರೆ, ಅದನ್ನಾದರೂ ಮಾಡಿ.

ಶ್ರೀ ಎಸ್.ಆರ್. ಬೊಮ್ಮಾಯಿ.—ಕೃಷ್ಣಾ ಬೇಸಿನ್ ಯೋಜನೆಗಳ ಬಗ್ಗೆ ಅವರು ಸ್ಪಷ್ಟವಾಗಿ ನಿರ್ದಿಷ್ಟವಾಗಿ ಕೇಳಿದ್ದಾರೆ. ನಾನು ಇದರ ಬಗ್ಗೆ ಸ್ಪಷ್ಟವಾದ ನಿರ್ದಿಷ್ಟವಾದ ಉತ್ತರ ಕೊಟ್ಟಿಲ್ಲ. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಟೈಮ್ ಬೌಂಡ್ ಪ್ರೋಗ್ರಾಂ ಮಾಡುತ್ತೇವೆ ಎಂದು ನಾನು ಹೇಳಲಿಲ್ಲ. ಈ ಬಗ್ಗೆ ಆಲೋಚನೆ ಮಾಡುತ್ತಿದ್ದೇವೆ. ಆದಷ್ಟು ಬೇಗ, ನಿರ್ದಿಷ್ಟವಾದ ವಿಚಾರಗಳನ್ನು ತೆಗೆದುಕೊಂಡು ನಾನು ಈ ಸಭೆಯ ಮುಂದೆ ಬರುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ರೆಸಲ್ಯೂಷನ್ ತೆಗೆದುಕೊಂಡು ಮಾನ್ಯ ದೇವೇಗೌಡರು ಬಂದಹಾಗೆ ಬನ್ನಿ.

ಶ್ರೀ ಎಸ್.ಆರ್. ಬೊಮ್ಮಾಯಿ.—ರೆಸಲ್ಯೂಷನ್ ಬಗ್ಗೆ ಹೇಳುವುದಾದರೆ, ಅದರ ಬಗ್ಗೆ ಒಂದು ದೊಡ್ಡ ವಿವಾದ ಬಂದಿತ್ತು.

ಇನ್ನು ೩೦೦ ಕೋಟಿ ರೂಪಾಯಿಗಳನ್ನು ಕೃಷ್ಣಾ ಬೇಸಿನ್‌ಗೂ ೧೦೦ ಕೋಟಿ ರೂಪಾಯಿಗಳನ್ನು ಕಾವೇರಿ ಬೇಸಿನ್‌ಗೂ ಕೊಡಿಸಬೇಕೆಂದು ಠರಾವು ಮಾಡಿದ್ದೆವು ಆದರೆ ಠರಾವು ಬೇರೆ ಅದನ್ನು ಕಾರ್ಯಗತ ಮಾಡತಕ್ಕಂಥ ವಿಚಾರ ಬೇರೆ ಈ ಸಭೆಯ ಮುಂದೆ ನಿರ್ದಿಷ್ಟವಾದ ಒಂದು ವಿಚಾರವನ್ನು ತೆಗೆದುಕೊಂಡು ಬರುವವನಿದ್ದೇನೆ...

ಶ್ರೀ ಕೆ ಹೆಚ್. ಪಾಟೀಲ್,—ಠರಾವು ಬೇರೆ ಅದನ್ನು ಕಾರ್ಯಗತ ಮಾಡುವುದು ಬೇರೆ ಎಂದು ತಾವು ಈಗ ಹೇಳಿದಿರಿ ಆದರೆ ಈ ಸಭೆ ಮುಂದೆ ತಾವು ಒಂದು ಠರಾವು ತಂದಾಗ ಅದನ್ನು ನಾವೆಲ್ಲಾ ಒಮ್ಮತದಿಂದ ಒಪ್ಪಿಗೆ ಕೊಟ್ಟಿದ್ದರ ಅರ್ಥವೇನು ? ನಾವು ಒಪ್ಪಿಗೆ ಕೊಟ್ಟಂತಹ ಠರಾವನ್ನು ನೀವು ಕಾರ್ಯಗತ ಮಾಡಲು ಏನೇನು ಕಾರ್ಯಕ್ರಮ ಹಾಕಿಕೊಳ್ಳಬೇಕೋ ಅದನ್ನು ಮಾಡುವುದು

ಎಕ್ಸಿಕ್ಯೂಟೀವ್‌ಗೆ ಸೇರಿದ್ದು ನಾವು ನೀವೇನು ಮಾಡುತ್ತೀರೋ ಅದನ್ನು ನೋಡುತ್ತಿರುವುದು. ತಪ್ಪು ಮಾಡಿದಾಗ ಅದನ್ನು ಕೇಳುವುದು.

ಶ್ರೀ ಎಸ್. ಆರ್. ಬೊಮ್ಮಾಯಿ.—ನಿರ್ದಿಷ್ಟವಾಗಿ ಯಾವ ರೀತಿ ಮಾಡಬೇಕೆನ್ನುವ ಬಗ್ಗೆ ನಾನು ಈಗಾಗಲೇ ಕೆಲವು ವಿಚಾರಗಳನ್ನು ಹೇಳಿದ್ದೇನೆ ಇನ್ನು ಇರಿಗೇಷನ್ ಬಾಂಡ್ಸ್ ಬೇರೆ ವಿಚಾರ ಇದೆ ಗೌರ್ನಮೆಂಟ್ ಆಫ್ ಇಂಡಿಯಾದವರು ಕ್ಲಿಯರೆನ್ಸ್ ಕೊಡುವ ಬಗ್ಗೆ ನಾನು ಇಲ್ಲಿ ಭರವಸೆ ಕೊಡುವುದಕ್ಕೆ ಆಗುವುದಿಲ್ಲ. ಮುಳವಾಡಿ ವಿಚಾರವನ್ನು ನಾನು ಈಗಾಗಲೇ ಹೇಳಿದ್ದೇನೆ. ಕೊಟ್ಟ ಭರವಸೆಯನ್ನು ಉಳಿಸಿಕೊಳ್ಳುತ್ತೇವೆ.

ಶ್ರೀ ಪಿ.ಎಸ್. ರಾಣೆ.—ಮಾನ್ಯ ಅಧ್ಯಕ್ಷರೇ, ನಮ್ಮ ಉತ್ತರ ಕನ್ನಡ ಜಿಲ್ಲೆಯ ಗಜನಿ ಭೂಮಿ ಅಭಿವೃದ್ಧಿ ಬಗ್ಗೆ ಏನಾದರೂ ಯೋಜನೆಯನ್ನು ಮಾಡಿದ್ದೀರಾ ಹೇಗೆ ? ಮತ್ತು ಈ ಹಿಂದೆ ಇಟ್ಟಂತೆ ಈ ಲ್ಯಾಂಡನ್ನು ಡೆವಲಪ್‌ಮೆಂಟ್ ಮಾಡುವ ಸಲುವಾಗಿ ಹಣವನ್ನು ಏನಾದರೂ ಕಾಯ್ದಿರಿಸಿದ್ದೀರಾ? ಆಮೇಲೆ ಲಿಫ್ಟ್ ಇರಿಗೇಷನ್ ಕಾರ್ಪೋರೇಷನ್ ವತಿಯಿಂದ ಉತ್ತರ ಕನ್ನಡ ಜಿಲ್ಲೆಯಲ್ಲಿ ಏತ ನೀರಾವರಿ ಯೋಜನೆಗಳಿಗೆ ರೈತರು ಕಾಂಟ್ರಿಬ್ಯೂಷನ್ ಕೊಡಬೇಕೆನ್ನುವ ಕಂಡೀಷನ್ ಹಾಕಿರುವುದರಿಂದ ಒಂದು ಯೋಜನೆಯೂ ಪ್ರಾರಂಭವಾಗಿಲ್ಲ ಈ ಬಗ್ಗೆ ಸರ್ಕಾರವೇನಾದರೂ ಒಂದು ತೀರ್ಮಾನ ಕೈಗೊಳ್ಳುತ್ತೀರಾ ?

ಶ್ರೀ ಎಸ್.ಆರ್. ಬೊಮ್ಮಾಯಿ.—ರೈತರು ಕೊಡಬೇಕಾದಂತಹ ಪಾಲನ್ನು ಕೊಡಬೇಕು. ಕೆಲಸ ಬೇಗ ಆಗುತ್ತದೆ ಕೊಡಲಿಕ್ಕೆ ಆಗದಿರುವ ಕಡೆ ಸರ್ಕಾರ ಕೊಡಬಹುದಾ ಎನ್ನುವುದನ್ನು ಆಲೋಚನೆ ಮಾಡುತ್ತಿದ್ದೇವೆ. "Government to contribute the share of the farmers" ಎಂಬುದರ ಬಗ್ಗೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ.—ಸನ್ಮಾನ್ಯ ಅಧ್ಯಕ್ಷರೇ, ನಾವು ಕಾವೇರಿ ಬೇಸಿನ್‌ನಲ್ಲಿ ಬರುವುದಿಲ್ಲ. ಕೃಷ್ಣಾ ಬೇಸಿನ್‌ನಲ್ಲಿ ಬರುವುದಿಲ್ಲ. ಗೋದಾವರಿ ಬೇಸಿನ್‌ನ ತಳಭಾಗದಲ್ಲಿ ಬರುತ್ತೇವೆ. ಔರಾದ್ ಮತ್ತು ಮಾಂಜ್ರಲಿಫ್ಟ್ ಇರಿಗೇಷನ್‌ನ್ನು ಮಾಡುತ್ತೇವೆಂದು ಮಾನ್ಯ ಮಾಜಿ ಸಚಿವರಾದ ಶ್ರೀ ದೇವೇಗೌಡರು ಹೇಳಿದ್ದರು. ಆ ಯೋಜನೆಯನ್ನು ಸರ್ಕಾರದವರು ತಕ್ಷಣ ಮಂಜೂರು ಮಾಡಿ ಕೆಲಸ ಪ್ರಾರಂಭ ಮಾಡುತ್ತೀರಾ ? ಮತ್ತು ಔರಾದ್ ತಾಲ್ಲೂಕಿನ ೮ ಕೆರೆಗಳು ಹೋದ ಸಾರಿ ಬಡ್ಜೆಟ್‌ನಲ್ಲಿ ಬಂದಿದ್ದವು. ಈ ಸಾರಿ ಒಂದೂ ಬಂದಿಲ್ಲ. ಏತಕ್ಕೆ ಬರಲಿಲ್ಲವೋ ಕಾರಣ ಗೊತ್ತಾಗಲಿಲ್ಲ. ಆಮೇಲೆ ಬಚಾವತ್ ಅವಾರ್ಡ್ ಪ್ರಕಾರ ಗೋದಾವರಿಯಿಂದ ನಮಗೆ ಎಷ್ಟು ಟಿ. ಎಂ. ಸಿ. ನೀರು ಬರುತ್ತದೆ ? ಅದರಲ್ಲಿ ನಾವೀಗ ಎಷ್ಟು ಟಿ. ಎಂ. ಸಿ. ನೀರನ್ನು ಉಪಯೋಗಿಸಿ ಕೊಳ್ಳುತ್ತಿದ್ದೇವೆ ಎನ್ನುವುದನ್ನು ದಯಮಾಡಿ ತಿಳಿಸಬೇಕು.

ಶ್ರೀ ಎಸ್ ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ಈಗ ಅನೇಕ ಪ್ರಶ್ನೆಗಳನ್ನು ಕೇಳಿದ್ದಾರೆ. ಮೊದಲನೆಯದಾಗಿ ಲಿಫ್ಟ್ ಇರಿಗೇಷನ್ ಬಗ್ಗೆ, ಪ್ಲಾನ್ ಮತ್ತು ಎಸ್ಟಿಮೇಟ್ ರೆಡಿಯಾಗಿದ್ದರೆ ಆ ಬಗ್ಗೆ ಈ ವರ್ಷವೇ ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ.—ಹೋದ ವರ್ಷ ಆಗಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ನೋಡುತ್ತೇನೆ. ಮೈನರ್ ಇರಿಗೇಷನಲ್ಲಿರತಕ್ಕಂಥ ಯೋಜನೆಗಳು ಹಿಂದಿನ ವರ್ಷ ಬಡ್ಜೆಟ್‌ನಲ್ಲಿ ಬಂದಿದ್ದವು ಈ ವರ್ಷ ಬಂದಿಲ್ಲವೆಂದು ಹೇಳಿದರು. ಈ ಸಲ ಮಾನ್ಯ ಸದಸ್ಯರಿಗೆ ಸ್ವಲ್ಪ ಅಲಕ್ಷ್ಯ ಮಾಡಿದಂತೆ ಕಾಣಿಸುತ್ತದೆ. ಆದರೂ ಪರಿಶೀಲನೆ ಮಾಡಿ ಅವುಗಳನ್ನು ಇನ್‌ಕ್ಲೂಡ್ ಮಾಡುವುದಕ್ಕೆ ಸಾಧ್ಯವಿದ್ದರೆ ಪ್ರಯತ್ನ ಮಾಡುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ.—ಎಷ್ಟು ಟಿ. ಎಂ. ಸಿ. ನೀರು ಬರುತ್ತದೆ ಎನ್ನುವುದು ಹೇಳಲಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಆ ಬಗ್ಗೆ ಈಗ ನನ್ನ ಹತ್ತಿರ ವಿವರ ಇಲ್ಲ. ನೋಡಿ ಹೇಳುತ್ತೇನೆ.

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೇ, ಬಡ್ಜೆಟ್‌ನಲ್ಲಿ ಮಂಜೂರಾತಿಯಾಗಿರತಕ್ಕಂಥ ರಾಜ್ಯದ ಎಲ್ಲಾ ಲಿಫ್ಟ್ ಇರಿಗೇಷನ್‌ಗಳಿಗೆ ಫಲಾನುಭವಿಗಳು ಅಂದರೆ ರೈತರು ಯಾರಿದ್ದಾರೆ ಅವರಿಗೆ ಲಿಫ್ಟ್

ಇರಿಗೇಷನ್ ಇಲಾಖೆಯಿಂದ ನೋಟೀಸ್‌ಗಳು ಬಂದಿವೆ. ಈ ನೋಟಿಸನ್ನು ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್‌ನವರು ಕಳುಹಿಸಿದ್ದಾರೆ. ಈ ಯೋಜನೆಯ ಅಂದಾಜು ವೆಚ್ಚದಲ್ಲಿ ೧೫ ಪರ್ಸೆಂಟ್ ರೈತರು ೧೦ ಪರ್ಸೆಂಟ್ ಸರ್ಕಾರ ಇನ್ನು ಉಳಿದ ೭೫ ಪರ್ಸೆಂಟ್ ಬ್ಯಾಂಕ್‌ಗಳು ಕೊಡಬೇಕೆಂದು ನೋಟೀಸ್ ಕೊಟ್ಟಿದ್ದಾರೆ. ಈ ಹಣವನ್ನು ಇನ್ನು ೧೫ ದಿವಸದಲ್ಲಿ ಕಟ್ಟದಿದ್ದರೆ ಆಗಿರುವ ಮಂಜೂರಾತಿಯನ್ನು ರದ್ದು ಮಾಡಿ ಬೇರೆ ಕಡೆ ವರ್ಗಾ ಮಾಡುತ್ತೇವೆಂದು ಹೇಳಿದ್ದಾರೆ. ರೈತರು ಆ ಹಣವನ್ನು ಕಟ್ಟುವುದಕ್ಕೆ ಆಗುವುದಿಲ್ಲ. ಬರಗಾಲ ಬಂದಿರುವುದರಿಂದ ಕಂದಾಯವನ್ನೇ ಕಟ್ಟಲು ಆಗದಿರುವ ರೈತರು ಈ ಹಣ ಕಟ್ಟುವುದಕ್ಕೆ ಸಾಧ್ಯವಿಲ್ಲದಂತಾಗಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾವು ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್ ಮಾಡಿದ್ದೇವೆ. ಅನೇಕ ಕಡೆ, ಲಿಫ್ಟ್ ಇರಿಗೇಷನ್ ಮಾಡುವುದಕ್ಕೆ ಪರ್ಮಿಷನ್ ಕೊಡಿ ಸಾಕು ನಾವೇ ಎಲ್ಲಾ ಹಣವನ್ನು ಹಾಕುತ್ತೇವೆಂದು ರೈತರುಗಳು ಮುಂದೆ ಬಂದಿದ್ದಾರೆ. ಒಂದೆರಡು ಕಡೆ ರೈತರುಗಳಿಗೆ ಹಣ ಕಟ್ಟುವುದಕ್ಕೆ ತೊಂದರೆ ಇರಬಹುದು ಅದರ ಬಗ್ಗೆ ಆಲೋಚನೆ ಮಾಡೋಣ. ಲಿಫ್ಟ್ ಇರಿಗೇಷನ್ ಮಾಡುವುದಕ್ಕೆ ಸರ್ಕಾರ ಪರ್ಮಿಷನ್ ಕೊಟ್ಟರೆ ಸಾಕು ನಾವೇ ಎಲ್ಲಾ ಮಾಡಿ ಕೊಳ್ಳುತ್ತೇವೆಂದು ಕೇಳುವ ರೈತರುಗಳೂ ಇದ್ದಾರೆ. ಕೋ-ಆಪರೇಟಿವ್ ಸೊಸೈಟಿಗಳು ಲಿಫ್ಟ್ ಇರಿಗೇಷನ್ ಮಾಡುವ ರೈತರುಗಳಿಗೆ ಸಾಲ ಕೊಡುವುದಕ್ಕೂ ಸಹ ಮುಂದೆ ಬಂದಿವೆ. ಬೆಳಗಾಮ್ ಜಿಲ್ಲೆಯ ಕೆಲವು ಕಡೆ ರೈತರುಗಳು ಲಿಫ್ಟ್ ಇರಿಗೇಷನ್‌ಗೆ ಪರ್ಮಿಷನ್ ಕೊಡಿ ಅದಕ್ಕೆ ತಗಲುವ ಖರ್ಚನ್ನೆಲ್ಲಾ ನಾವೇ ಹಾಕಿಕೊಳ್ಳುತ್ತೇವೆಂದು ಹೇಳಿದ್ದಾರೆ.

ಶ್ರೀ ಡಿ. ಟಿ. ಜಯಕುಮಾರ್.—ಮಾನ್ಯ ಅಧ್ಯಕ್ಷರೇ, ನಾನು ಮಾತನಾಡುವಾಗ ರಾಮಪುರ ಮತ್ತು ಹುಲ್ಲಹಳ್ಳಿ ಚಾನಲ್‌ಗಳು ಸರಿಯಾದ ರೀತಿಯಲ್ಲಿ ಇಲ್ಲವೆಂದು ಮಾನ್ಯ ಸಚಿವರ ಗಮನಕ್ಕೆ ತಂದಿದ್ದೆ. ಈ ಚಾನಲ್‌ಗಳು ಸುಮಾರು ೧೦೦ ವರ್ಷಗಳ ಹಳೆಯ ಕಾಲುವೆಗಳು. ಈ ಚಾನಲ್‌ಗಳನ್ನು ಈಗ ದುರಸ್ತಿ ಮಾಡದೇ ಇದ್ದರೆ ನೂರಾರು ಕೋಟಿ ರೂಪಾಯಿಗಳು ನಷ್ಟವಾಗತಕ್ಕಂಥ ಸಂದರ್ಭ ಬರುತ್ತದೆ. ಆದ್ದರಿಂದ, "ಪ್ರಿವೆನ್‌ಷನ್ ಈಸ್ ಬೆಟರ್ ದ್ಯಾನ್ ಕ್ಯೂರ್" ಎನ್ನುವ ಹಾಗೆ ತಕ್ಷಣ ಹಣವನ್ನು ಬಿಡುಗಡೆ ಮಾಡಿ ಚಾನಲ್‌ಗಳನ್ನು ರಿಪೇರಿ ಮಾಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರ ಸಲಹೆ ಏನು ಇದೆ ಅದನ್ನು ಪರಿಶೀಲನೆ ಮಾಡಿ ಈ ವರ್ಷ ಈ ಕೆಲಸವನ್ನು ಮಾಡುವುದಕ್ಕೆ ಸಾಧ್ಯವೆ ಎಂದು ನೋಡುತ್ತೇನೆ.

ಶ್ರೀ ಎಂ. ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಕಳೆದ ೨೫ ವರ್ಷಗಳಲ್ಲಿ ಘಟಪ್ರಭಾ ಮತ್ತು ಮಲಪ್ರಭಾ ಯೋಜನೆಯಿಂದ ಮುಳುಗಡೆ ಹೊಂದಿದ ಪ್ರದೇಶಗಳ ಜನರುಗಳಿಗೆ ಒದಗಿಸಿ ಕೊಟ್ಟಿರುವ ಪುನರ್ ನಿವೇಶನ ಕೇಂದ್ರಗಳಲ್ಲಿ ಇನ್ನೂ ಯಾವ ಕೆಲಸವೂ ಆಗದೇ ಹಾಗೇ ಉಳಿದಿವೆ. ಈ ಜನರುಗಳಿಗೆ ಲಿಫ್ಟ್ ಇರಿಗೇಷನ್ ಮಾಡುವುದಕ್ಕೆ ಸರ್ಕಾರ ಹಣ ಬಿಡುಗಡೆ ಮಾಡಿಲ್ಲ. ಊರಿನಲ್ಲಿ ರಸ್ತೆಗಳಿಲ್ಲ. ಈ ಜನರ ತೊಂದರೆಗಳನ್ನು ಸರಿ ಮಾಡುವುದಕ್ಕೆ ರಾಜ್ಯ ಮಟ್ಟದ ಅಧಿಕಾರಿಗಳ ತಂಡ ಒಂದನ್ನು ಕಳುಹಿಸಿ ಸಮಸ್ಯೆಗಳನ್ನು ಬಗೆಹರಿಸಲಿಕ್ಕೆ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಇದರ ಬಗ್ಗೆ ಸರ್ಕಾರ ಏನು ಮಾಡುತ್ತದೆಂದು ಮಾನ್ಯ ಸಚಿವರು ಹೇಳಬೇಕು. ಆಮೇಲೆ, ಕಮ್ಯಾಂಡ್ ಏರಿಯಾ ಡೆವಲಪ್‌ಮೆಂಟ್ ಕಾರ್ಯಕ್ರಮವನ್ನು ತಾವು ತೆಗೆದುಕೊಂಡಿದ್ದೀರಿ. ಕೆಲವು ಎತ್ತರದಲ್ಲಿರುವ ಪ್ರದೇಶಗಳಿಗೆ ನೀರನ್ನು ಒಯ್ಯಲಿಕ್ಕೆ ಸಾಧ್ಯವಿಲ್ಲ. ಎತ್ತರದಲ್ಲಿರತಕ್ಕ ಪ್ರದೇಶಗಳಿಗೆ ನೀರನ್ನು ಒದಗಿಸುವ ಕಾರ್ಯಕ್ರಮವನ್ನು ಹಾಕಿಕೊಳ್ಳದೇ ಇದ್ದರೆ ಅಲ್ಲಿರತಕ್ಕ ರೈತರುಗಳು ಎಂದೆಂದಿಗೂ ಶ್ರೀಮಂತರಾಗಲಿಕ್ಕೆ ಸಾಧ್ಯವಿಲ್ಲ. ಆ ಬಗ್ಗೆ ಏನು ಮಾಡುತ್ತೀರಾ ಎಂದು ಹೇಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ಪುನರ್ವಸತಿ ಮತ್ತು ಲಿಫ್ಟ್ ಇರಿಗೇಷನ್ ಬಗ್ಗೆ ಹೇಳಿದ್ದಾರೆ. ಲಿಫ್ಟ್ ಇರಿಗೇಷನ್ ಕಾರ್ಯಕ್ರಮಗಳ ಬಗ್ಗೆ ನನ್ನ ಹತ್ತಿರ ಈಗ ಮಾಹಿತಿ ಇಲ್ಲ. ಆಮೇಲೆ ಪುನರ್ವಸತಿ ಮಾಡಿರುವ ಕಡೆ ಸರಿಯಾದ ಸವಲತ್ತುಗಳನ್ನು ಒದಗಿಸಿಲ್ಲವೆಂದು ಹೇಳಿದ್ದಾರೆ. ಅದರ ಬಗ್ಗೆ ಅಧಿಕಾರಿಗಳ ರಿಪೋರ್ಟ್ ಬರಬೇಕಾಗಿದೆ. ಆ ರಿಪೋರ್ಟ್ ಬಂದ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎನ್. ಎಸ್. ಖೇಡ್.—ಮಾನ್ಯ ಅಧ್ಯಕ್ಷರೇ, ನಾರಾಯಣಪುರ ಡ್ಯಾಮ್‌ನಲ್ಲಿ ಸುಮ್ಮನೆ ನೀರನ್ನು ಸಂಗ್ರಹಿಸಿ ಕೊಳಿಸುತ್ತಿದ್ದಾರೆ. ಈ ರೀತಿ ಸಂಗ್ರಹವಾದ ನೀರನ್ನು ಸಂಪೂರ್ಣವಾಗಿ ಉಪಯೋಗ ಮಾಡುವುದಕ್ಕೆ ಇಂಡಿ ಮತ್ತು ಜೇವರ್ಗಿ ತಾಲ್ಲೂಕುಗಳಿಗೆ ಕೆನಾಲ್‌ಗಳನ್ನು ಮಾಡಲಾಗುತ್ತಿದೆ. ಆದರೆ ಇದುವರೆಗೂ ಈ ಕೆನಾಲ್‌ಗಳ ಕೆಲಸ ತೀವ್ರವಾಗಿ ಮಾಡುತ್ತಿಲ್ಲ. ಕೆನಾಲ್ ಕೆಲಸಗಳಿಗೆ ಸರ್ಕಾರ ಇಡುವ ಹಣದಲ್ಲಿ ನೂರಕ್ಕೆ ಐವತ್ತರಷ್ಟು ಖರ್ಚು ಮಾಡಿಲ್ಲ. ಇದೇ ರೀತಿ ಕೆಲಸ ನಡೆದರೆ ಇನ್ನೂ ೧೦ ವರ್ಷಗಳಾದರೂ ಇಂಡಿ ಮತ್ತು ಜೇವರ್ಗಿ ತಾಲ್ಲೂಕುಗಳಿಗೆ ನೀರು ಕೊಡುವುದಕ್ಕಾಗುವುದಿಲ್ಲ. ಆದ್ದರಿಂದ, ಈ ಕೆನಾಲ್ ಕೆಲಸಗಳಿಗೆ ಬೇಕಾಗುವಷ್ಟು ಹಣವನ್ನು ಸರಿಯಾದ ಸಮಯಗಳಲ್ಲಿ ಕೊಟ್ಟು ನಿಗದಿಯಾದ ಅವಧಿಯೊಳಗೆ ಕೆಲಸವನ್ನು ಮುಗಿಸಿಕೊಡುತ್ತಾರೆಯೋ ಎಂದು ಕೇಳುತ್ತೇನೆ. ಆಮೇಲೆ ಇನ್ನೊಂದು ಪ್ರಶ್ನೆ ಎಂದರೆ, ರಾಜ್ಯದಲ್ಲಿ ಸುಮಾರು ೪೮೦ ಲಿಫ್ಟ್ ಇರಿಗೇಷನ್ ಪ್ರಾಜೆಕ್ಟ್‌ಗಳು ಇವೆ. ಅವುಗಳಲ್ಲಿ ನೂರಕ್ಕೆ ಎಂಬತ್ತರಷ್ಟು ಪ್ರಾಜೆಕ್ಟ್‌ಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲವಾದ್ದರಿಂದ ರಾಜ್ಯ ಸರ್ಕಾರಕ್ಕೆ ಹೊರೆಯಾಗಿದೆ. ಎಸ್ಟಿಮೇಟ್ ಕಮಿಟಿಯಲ್ಲೂ ಸಹ ಇದರ ಬಗ್ಗೆ ಚರ್ಚೆಯಾಗಿ ಸಂಬಂಧಪಟ್ಟ ಮಂತ್ರಿಯವರಿಗೆ ವಿಷಯವನ್ನು ತಿಳಿಸಲಾಗಿತ್ತು. ಮಾನ್ಯ ಮಂತ್ರಿಯವರು ಇದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆಂದು ಆಶ್ವಾಸನೆ ಕೊಟ್ಟಿದ್ದರು. ಆದರೆ ಇದರ ಬಗ್ಗೆ ಯಾವ ನಿಲುವನ್ನು ಇನ್ನೂ ತೆಗೆದುಕೊಂಡಿಲ್ಲ. ಇವೊತ್ತು ಅದರ ಬಗ್ಗೆ ಯಾವುದೇ ನಿಲುವನ್ನು ತೆಗೆದುಕೊಂಡಿಲ್ಲ ಮತ್ತು ಯಾವುದೇ ಪ್ರಸ್ತಾಪನೆಯೂ ಆ ಬಗ್ಗೆ ಬಂದಿಲ್ಲ. ಆ ಬಗ್ಗೆ ಮಾನ್ಯ ಸಚಿವರು ದಯಮಾಡಿ ಉತ್ತರ ಕೊಡಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಯು. ಕೆ. ಪಿ. ಯೋಜನೆಯಲ್ಲಿರತಕ್ಕಂಥ ಕಾಲುವೆಗಳನ್ನು ಅಂದರೆ ಅದು ಇಂಡಿ ಬ್ರ್ಯಾಂಚ್ ಇರಬಹುದು, ಅಥವಾ ಶಹಪೂರ್ ಬ್ರ್ಯಾಂಚ್ ಇರಬಹುದು, ಅವುಗಳನ್ನು ಆದಷ್ಟು ಬೇಗ ಮುಗಿಸಬೇಕೆಂದು ಹೇಳಿದ್ದೇವೆ. ಇನ್ನು ಈ ವರ್ಷ ಬಡ್ಜೆಟ್‌ನಲ್ಲಿ ಏನು ಹಣವನ್ನು ಒದಗಿಸಿಕೊಟ್ಟಿದ್ದೇವೋ ಅಷ್ಟು ಹಣವನ್ನು ಖರ್ಚು ಮಾಡತಕ್ಕಂಥ ಭರವಸೆಯನ್ನು ಮಾನ್ಯ ಸದಸ್ಯರಿಗೆ ಕೊಡುತ್ತೇನೆ. ಇನ್ನು ಮಾನ್ಯ ಸದಸ್ಯರು ಲಿಫ್ಟ್ ಇರಿಗೇಷನ್ ಬಗ್ಗೆ ಏನು ಹೇಳಿದ್ದಾರೆ ಅದು ನಿಜ. ಹಿಂದೆ ಆದಂಥ ಲಿಫ್ಟ್ ಇರಿಗೇಷನ್‌ನಲ್ಲಿ ಅದು ನಿರ್ಮಲ ಇಂಜನೀಯರಿಂಗ್ ಕಂಪನಿಯವರು ಮಾಡಿದ್ದು. ಎಲ್ಲೆಲ್ಲಿ ಮಾಡಿದ್ದಾರೋ ಅಲ್ಲಿ ಎಲ್ಲಾ ಕಡೆಗಳಲ್ಲಿಯೂ ಸಾಮಾನ್ಯವಾಗಿ ಕೆಟ್ಟಿದೆ. ಅದು ಧಾರವಾಡದ್ದು ಇರಲಿ ಅಥವಾ ವಿಜಾಪುರವೇ ಇರಲಿ ಅಲ್ಲಿ ಪರಿಸ್ಥಿತಿಯು ಆ ರೀತಿಯಲ್ಲಿ ಇದೆ. ಇವೊತ್ತು ಅದನ್ನು ದುರಸ್ತು ಮಾಡುವುದು ಕೂಡ ಸ್ವಲ್ಪ ಕಷ್ಟ ಸಾಧ್ಯವಾಗಿದೆ.

ಶ್ರೀ ಬಿ. ಬಸವಲಿಂಗಪ್ಪ.—ಆ ಕಂಪನಿಯವರ ಮೇಲೆ ಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಅದು ೨೦ ವರ್ಷಗಳ ಹಿಂದಿನ ವಿಚಾರ. ಹಾಗೆ ನಡೆದುಕೊಂಡು ಬಂದಿದೆ. ನಾನು ಆ ಬಗ್ಗೆ ಹಿಂದೆ ನಡೆದದ್ದು ಎಂದು ಹೇಳಲಿಲ್ಲ. ಇಂಥ ಕೆಲವು ವಿಚಾರಗಳು ಮುಗಿದು ಹೋದಮೇಲೆ ಏನು ಮಾಡುವುದಕ್ಕೆ ಆಗುತ್ತದೆ ? ಈಗ ನಾವು ಅಂತಹ ಕಡೆಗಳಲ್ಲಿ ಅವಶ್ಯಕ ದುರಸ್ತಿ ಕಾರ್ಯವನ್ನು ಮಾಡಬೇಕಾಗುತ್ತದೆ. ಒಟ್ಟಿನಲ್ಲಿ ಬಜೆಟ್‌ನಲ್ಲಿ ಎಷ್ಟು ಹಣವನ್ನು ಉದ್ದೇಶಿತ ಕಾರ್ಯಗಳಿಗೆ ಒದಗಿಸಿದ್ದೇವೊ ಅಷ್ಟು ಹಣವನ್ನು ಖರ್ಚು ಮಾಡುತ್ತೇವೆ.

ಶ್ರೀ ಎನ್. ಎಸ್. ಖೇಡ್.—ಅಧ್ಯಕ್ಷರೇ, ನನ್ನ ಪ್ರಶ್ನೆಯು ಅಪೂರ್ಣವಾಗಿದೆ. ನನಗೆ ಇನ್ನೊಂದು ನಿಮಿಷದ ಅವಕಾಶವನ್ನು ಕೊಡಿ. ಇದು ಸರಕಾರದವರಿಂದ ಸರಿಪಡಿಸುವುದಕ್ಕೆ ಆಗುವುದಿಲ್ಲ. ಇದು ರೈತರ ಯೋಜನೆಯಾದುದರಿಂದ ಆ ಪ್ರದೇಶದಲ್ಲಿರತಕ್ಕ ರೈತರಿಗೆ ಲೀಸ್‌ಬೇಸಿಸ್ ಮೇಲೆ ಮಾರಾಟ ಮಾಡಿದರೆ ಒಳ್ಳೆಯದೆಂದು ನಾನು ಅಭಿಪ್ರಾಯ ಪಡುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲನೆ ಮಾಡುತ್ತೇನೆ. ಇನ್ನೊಂದು ವಿಚಾರ ಆ ಪ್ರದೇಶದಲ್ಲಿನ ರೈತರು ತಾವು ಉಪಯೋಗ ಮಾಡಿದ ನೀರಿನ ವಿದ್ಯುತ್‌ಚಕ್ತಿ ಬಿಲ್‌ನ್ನು ಕೂಡ ತುಂಬಿಲ್ಲ. ನೀವು ಬಿಲ್ ತುಂಬಿ ಪವರ್ ತೆಗೆದುಕೊಳ್ಳಿ ಎಂದು ಹೇಳಿದರೆ ಇದು ತನಕವೂ ತುಂಬಿಲ್ಲ. ಈ ರೀತಿಯಾಗಿ ರೈತರೇ ವಾಲಂಟಿಯರ್ ಆಗಿ ಮುಂದೆ ಬರುವುದಿದ್ದರೆ ಅವರಿಗೆ ಹ್ಯಾಂಡ್ ಓವರ್ ಮಾಡುವ ಬಗ್ಗೆ ಸರಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ಎಂ. ವೀರಯ್ಯಸ್ವಾಮಿ.—ನಮ್ಮ ಚಿಂಚೋಳಿ ತಾಲ್ಲೂಕಿನಲ್ಲಿ ಲೋವರ್ ಮುಲ್ಲಾಮರಿ ಪ್ರಾಜೆಕ್ಟ್ ೧೯೬೨ರಲ್ಲಿ ಪ್ರಾರಂಭ ಆಯಿತು. ಆದರೆ ಇಲ್ಲಿಯವರೆಗೆ ಕೇವಲ ನಾಲ್ಕನೇ ಒಂದು

ಅಂಶದಷ್ಟು ಮಾತ್ರ ಕೆಲಸವಾಗಿದೆ. ಅದು ೨೦೦೦ದ ಎ.ಡಿ.ಯೊಳಗಾಗಿ ಮುಗಿಯಬೇಕಾದರೆ ಅದಕ್ಕೆ ಸಾಕಷ್ಟು ಹಣವೂ ಬೇಕು. ಅಂದರೆ ಸುಮಾರು ೫೫ ಕೋಟಿ ರೂಪಾಯಿಗಳು ಬೇಕು. ಹೋದ ವರ್ಷ ಕೇವಲ ಒಂದೂವರೆ ಕೋಟಿ ರೂಪಾಯಿಗಳಷ್ಟು ಇಟ್ಟು ೨೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅದೂ ಸಿಬ್ಬಂದಿ ವೆಚ್ಚಕ್ಕೋಸ್ಕರವಾಗಿ. ಈ ವರ್ಷವೂ ಒಂದೂ ಕಾಲು ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಅದೂ ಸಹ ಉಪಯೋಗ ಆಗುತ್ತದೋ, ಇಲ್ಲವೋ ಗೊತ್ತಿಲ್ಲ, ಒಟ್ಟಾರೆ ಆ ಯೋಜನೆಯನ್ನು ಯಾವಾಗ ಮುಗಿಸುತ್ತೀರಿ ಎಂದು ಹೇಳಬೇಕು. ಹಾಗೆಯೇ ಮೈನರ್ ಇರಿಗೇಷನ್ ಮಾಡಿ ಒಂದು ಜಿಲ್ಲಾ ಪರಿಷತ್ತಿಗೆ ಕೊಟ್ಟಿದ್ದೀರಿ, ಮತ್ತೊಂದನ್ನು ಸರಕಾರದ ಅಧೀನದಲ್ಲಿ ಇಟ್ಟುಕೊಂಡಿದೆ ಎಂದು ಕಾಣುತ್ತದೆ. ಹೀಗಾಗಿ ಎರಡು ಮೂರು ತಾಲ್ಲೂಕುಗಳಿಗೆ ಸೇರಿ ಒಂದು ತಾಲ್ಲೂಕಿನಲ್ಲಿ ಒಬ್ಬ ಜ್ಯೂನಿಯರ್ ಇಂಜಿನೀಯರ್ ಇರುತ್ತಾರೆ, ಅವರು ಒಬ್ಬರಿಗೆ ಅನೇಕ ಕೆರೆಗಳನ್ನು ನೋಡುವುದಕ್ಕೆ ಆಗುವುದಿಲ್ಲ ಆದುದರಿಂದ ಸರಿಯಾಗಿ ಇವುಗಳನ್ನು ನೋಡಿಕೊಳ್ಳುವುದಕ್ಕೆ ಒಂದು ಸೂಕ್ತ ವ್ಯವಸ್ಥೆಯನ್ನು ಮಾಡಬೇಕು.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ಹೇಳಿರತಕ್ಕಂಥ ಯೋಜನೆಯನ್ನು ೨೦೦೦ ಎ.ಡಿ.ಯೊಳಗಾಗಿ ಮುಕ್ತಾಯ ಮಾಡತಕ್ಕಂಥ ಒಂದು ಕಂಪಲ್‌ಷನ್ ಏನಿದೆ ಅದನ್ನು ಮಾಡೋಣ. ಇನ್ನು ಜ್ಯೂನಿಯರ್ ಇಂಜಿನೀಯರ್ಸ್ ವಿಚಾರ ಹೇಳಿದ್ದಾರೆ. ಈಗ ನಾವು ಜಿಲ್ಲಾ ಪರಿಷತ್ತಿಗೆ ಅಧಿಕಾರ ಕೊಟ್ಟ ಮೇಲೆ, ಅವರು ಅವಶ್ಯಕ ಸಿಬ್ಬಂದಿಯನ್ನು ಇಟ್ಟುಕೊಂಡು ಮಾಡುತ್ತಾರೆ. ಒಂದು ವೇಳೆ ಡಿವಿಜನ್ ಸರಿಯಾಗಿ ಇಲ್ಲದಿದ್ದರೆ ಅದನ್ನು ಮಾಡಬೇಕಾಗುತ್ತದೆ. ಇನ್ನು ಸರಕಾರದಲ್ಲಿರತಕ್ಕಂಥ ಮೈನರ್ ಇರಿಗೇಷನ್ ವಿಚಾರದಲ್ಲಿ ಇರತಕ್ಕಂಥ ಸ್ಟಾಫ್‌ಗೆ ಕೆಲಸ ಇಲ್ಲದಿದ್ದರೆ ಅದನ್ನು ಮರ್ಜ್ ಮಾಡತಕ್ಕಂಥಾದ್ದನ್ನು ನಾವು ಆಲೋಚನೆ ಮಾಡುತ್ತೇವೆ.

ಶ್ರೀ ಸಿ.ಎಂ. ಉದಾಸಿ.—ವರ್ಲ್ಡ್ ಬ್ಯಾಂಕ್ ಸ್ಕೀಮ್‌ನಲ್ಲಿ ಧರ್ಮಾ ಯೋಜನೆಗೆ ರೀ-ಮಾಡೆಲಿಂಗ್ ಮಾಡುವುದರ ಸಲುವಾಗಿ ಇದುವರೆಗೆ ಕಾರ್ಯ ಪ್ರಾರಂಭ ಆಗಿಲ್ಲ. ಯಾವಾಗ ಪ್ರಾರಂಭ ಮಾಡುತ್ತೀರಿ ಎಂದು ತಿಳಿಸಬೇಕು. ಹಾಗೆಯೇ ಲಿಫ್ಟ್ ಇರಿಗೇಷನ್ ಸ್ಕೀಮ್‌ನಲ್ಲಿ ಕಳೆದ ಐದು ವರ್ಷಗಳಿಂದ ಬಂದ ಸ್ಕೀಮ್‌ಗಳಲ್ಲಿ ಅನೇಕ ಯೋಜನೆಗಳಿಗೆ ಅಡಿಗಲ್ಲು ಸಮಾರಂಭವನ್ನು ಕೂಡ ನನ್ನ ಕ್ಷೇತ್ರದಲ್ಲಿ ಮಾಡಿದ್ದಾರೆ. ಮಾನ್ಯ ಅಧ್ಯಕ್ಷರ ಕ್ಷೇತ್ರದಲ್ಲಿಯೂ ಮಾಡಿದ್ದಾರೆ. ಈ ಕಾರ್ಯ ಇನ್ನೂ ಪ್ರಾರಂಭವಾಗಿಲ್ಲ, ಈ ಬಗ್ಗೆ ಏನು ನಿರ್ಧಾರ ತೆಗೆದುಕೊಂಡಿದ್ದೀರಿ ಎಂಬುದನ್ನು ದಯಮಾಡಿ ಹೇಳಬೇಕು. ಅಂತೆಯೇ ೧ ಕೋಟಿ ೬೦ ಲಕ್ಷ ರೂಪಾಯಿಗಳ ಒಂದು ಯೋಜನೆಗೆ ಅನುಮತಿ ಸಿಕ್ಕಿದ್ದು ಅದನ್ನು ಯಾವಾಗ ತೆಗೆದುಕೊಳ್ಳುತ್ತೀರಿ ಎಂಬ ಬಗ್ಗೆ ಹೇಳಬೇಕು. ಹಾವೇರಿ ತಾಲ್ಲೂಕಿನ ನಾಗನೂರು ಬ್ರಿಜ್ಡ್ ಕಮ್ ಬ್ಯಾರೇಜ್ ಮತ್ತು ಹಾನಗಲ್ ತಾಲ್ಲೂಕಿನ ಅರೇರಪ್ಪ ಬ್ರಿಜ್ಡ್ ಕಮ್ ಬ್ಯಾರೇಜ್‌ಗಳನ್ನು ಮಾಡಿ, ಕಬ್ಬು ಬೆಳೆಯುವ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಲಿಫ್ಟ್ ಇರಿಗೇಷನ್ ಕಾರ್ಪೋರೇಷನ್‌ನವರು ತಡವಾಗಿ ಕೆಲಸ ಮಾಡುತ್ತಿದ್ದಾರೆ, ಏಕೆಂದರೆ ಕೆಲವು ವಿಧಿವಿಧಾನಗಳು ಇವೆ ಈಗಾಗಲೇ ಬ್ಯಾಂಕಿಗೆ ಕೆಲವು ಯೋಜನೆಗಳನ್ನು ನಾವು ಕಳಿಸಿಕೊಟ್ಟಿದ್ದು ಪತ್ರವ್ಯವಹಾರ ನಡೆಯುತ್ತಿದೆ. ಅಲ್ಲದೆ ನಾಲ್ಕಾರು ಸ್ಕೀಮ್‌ಗಳು ಪ್ರಾರಂಭವಾಗಿದೆ. ವಿಶ್ವಬ್ಯಾಂಕ್ ಸಹಾಯದಿಂದ ಧರ್ಮಾ ಕೆನಾಲ್ ಪ್ರಾರಂಭಿಸುವ ಬಗ್ಗೆ ವಿವರಗಳನ್ನು ಪಡೆದುಕೊಂಡು ಆದಷ್ಟು ಬೇಗನೆ ಮಾಡುತ್ತೇನೆ.

ಶ್ರೀ ಯು. ಭೂಪತಿ.—ತುಂಗಭದ್ರಾ ಬೋರ್ಡ್ ಕಾರ್ಯವೈಖರಿ ಬಗ್ಗೆ ನಮ್ಮ ಅಯಕಟ್ಟಿನ ಜನರಿಗೆ ತುಂಬಾ ಅಸಮಾಧಾನವಿದ್ದು, ಆಂಧ್ರಪ್ರದೇಶದ ಮಂತ್ರಿಗಳಾದ ಶ್ರೀ ಕೃಷ್ಣಮೂರ್ತಿ ಯೆಂಬುವರು ತುಂಗಭದ್ರಾ ರಿಸರ್ವಾಯರ್‌ನಿಂದ ಕರ್ನಾಟಕ ಜಾಸ್ತಿ ನೀರು ಬಿಟ್ಟುಕೊಳ್ಳುತ್ತಿದೆ ಎಂದೂ ಆರೋಪಣೆ ಮಾಡಿದ್ದರು ಈ ಹಿನ್ನೆಲೆಯಲ್ಲಿ ಸದರಿ ಬೋರ್ಡ್‌ನ್ನು ಅಬಾಲಿಷ್ ಮಾಡಬೇಕೆಂದು ಸ್ಥಳೀಯ ಜನರಿಂದ ಬೇಡಿಕೆಯೂ ಬಂದಿರಬಹುದು. ಇದರ ಬಗ್ಗೆ ಕೇಂದ್ರದ ಜೊತೆ ವ್ಯವಹರಿಸುವಿರಾ?

ಶ್ರೀ ಎಸ್.ಆರ್. ಬೊಮ್ಮಾಯಿ.—ಅಬಾಲಿಷನ್ ಬಗ್ಗೆ ನಾವು ಯೋಚನೆ ಮಾಡಿಲ್ಲ. ಅವಶ್ಯಕತೆ ಬಿದ್ದರೆ ಆಲೋಚಿಸುತ್ತೇವೆ.

ಶ್ರೀ ಬಿ.ಆರ್. ನೀಲಕಂಠಪ್ಪ.—ಹುಚ್ಚಿ ಮದುವೇಲಿ ಉಂಡೋನೆ ಜಾಣ ಎಂಬ ಗಾದೆಯಂತಾಗಿದೆ ನಮ್ಮ ಸರ್ಕಾರದ ಕಾರ್ಯ ವಿಧಾನ. ಯಾರ್ಯಾರು ಪ್ರಭಾವಶಾಲಿಗಳಿದ್ದಾರೋ ಅವರ ಕೆಲಸ ಆಗುತ್ತದೆ,

ನಮ್ಮ ಜಿಲ್ಲೆಯ ಮೂಡಿಗೆರೆಗೆ ಹೇಮಾವತಿ, ಯಗಚಿ ನೀರು ಕಡೂರಿಗಾಯಿತು, ನಮ್ಮ ತರೀಕೆರೆ ತಾಲ್ಲೂಕಿನ ಯೋಜನೆಗಳನ್ನು ಮೈನರ್ ಇರಿಗೇಷನ್‌ಗೆ ಸೇರಿಸುತ್ತೇವೆ ಎಂದರು, ಆಮೇಲೆ ದುಡ್ಡಿಲ್ಲ ಎನ್ನುತ್ತಾರೆ. ಬಸವನಹಳ್ಳಿ, ಕೆರೆಹಳ್ಳಿ, ಜಂಬದಹಳ್ಳಿ ಮುಂತಾದ ಟ್ಯಾಂಕ್‌ಗಳಿಗೆ ವಿಶ್ವಬ್ಯಾಂಕ್‌ನಿಂದಾದರೂ ಹಣ ಪಡೆದು ನೀರನ್ನು ವಿವಿಧ ಕಡೆ ಒದಗಿಸುವ ಬಗ್ಗೆ ಯೋಚನೆ ಮಾಡುತ್ತೀರಾ? ನಮ್ಮ ಜಿಲ್ಲೆಯಲ್ಲಿ ಯಥೇಚ್ಛವಾಗಿರುವ ಜಲವನ್ನು ಬೇರೆ ಕಡೆಗೆಲ್ಲಾ ಹರಿಸಿ ಸ್ವಾಮಿ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ನೀಲಕಂಠಪ್ಪನವರು ತಮ್ಮ ಜಿಲ್ಲೆಯಲ್ಲಿ ಸಮೃದ್ಧಿಯಾದ ನೀರಿದೆ ಎನ್ನುತ್ತಿದ್ದಾರೆ. ನೀರಿಲ್ಲದಿರುವುದು, ಅತಿ ನೀರಿರುವುದು ಎರಡೂ ಸಮಸ್ಯೆಗಳೇ. ಅವರು ಕೊಟ್ಟಿರುವ ಸಲಹೆಗಳನ್ನು ವಿಚಾರ ಮಾಡಿ ನೋಡುತ್ತೇನೆ.

ಶ್ರೀ ಆರ್. ರಾಮಯ್ಯ.—ಕೃಷ್ಣಾ ಬೇಸಿನ್‌ನಲ್ಲಿ ಬಚಾವತ್ ಅವಾರ್ಡ್ ಪ್ರಕಾರ ನಮ್ಮ ಪಾಲಿನ ನೀರನ್ನು ಬಳಸಲೆಂದು ಅಪ್ಪರ್ ಭದ್ರಾ ಪ್ರಾಜೆಕ್ಟ್ ಮಾಡಲು ಒತ್ತಾಯ ಇತ್ತು, ಅದು ಎಲ್ಲಿಯವರೆಗೆ ಬಂತು ಸ್ವಾಮಿ?

ಶ್ರೀ ಎಸ್.ಆರ್. ಬೊಮ್ಮಾಯಿ.—ಅಪ್ಪರ್ ಭದ್ರಾ, ತುಂಗಾ ಬಗ್ಗೆ ಇನ್ನೂ ಅಂತಿಮ ನಿರ್ಣಯ ಆಗಿಲ್ಲ.

ಶ್ರೀ ಐ.ಬಿ. ಶಂಕರ್.—ಬಹಳ ಸದಸ್ಯರು ಭದ್ರಾ ಮೇಲ್ದಂಡೆ ಬಗ್ಗೆ ಮಾತಾಡಿದ್ದಾರೆ. ನಾನು ಪ್ರಾರ್ಥನೆ ಮಾಡುತ್ತೇನೆ. ಈಗಾಗಲೇ ಕಟ್ಟಿರುವ ಡ್ಯಾಮ್ ಎಷ್ಟು ಸಲ ತುಂಬಿದೆ ಸ್ವಾಮಿ? ನನಗೆ ತಿಳಿದಂತೆ ಹಲವಾರು ವರ್ಷಗಳಲ್ಲಿ ಎರಡು ಮೂರು ಸಲ ಮಾತ್ರ ತುಂಬಿದೆ ಅಷ್ಟೇ. ಒಂದು ಡ್ಯಾಮೇ ತುಂಬದಿರುವಾಗ ಇನ್ನೊಂದು ಡ್ಯಾಮ್ ಕಟ್ಟುವುದು ವಿವೇಕವೇ ಎಂದು ಕೇಳುತ್ತೇನೆ. ಇದರ ಬಗ್ಗೆ ತಜ್ಞರ ಅಭಿಪ್ರಾಯವೇನಾದರೂ ಬಂದಿದೆಯೇ? ಕೇಂದ್ರ ಸರಕಾರದ ಒಪ್ಪಿಗೆ ಇದಕ್ಕೆ ಇದೆಯೇ? ಎಲ್ಲಿ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳು ಇಲ್ಲ ಅಲ್ಲಿ ಸಣ್ಣ ಕೆರೆಕಟ್ಟೆಗಳನ್ನು ಕಟ್ಟಲು ಹೆಚ್ಚಿನ ಸಹಾಯವನ್ನು ಒದಗಿಸುತ್ತೀರಾ? ಈಗಾಗಲೇ ರಾಮೇಶ್ವರ ಟ್ಯಾಂಕ್ ಕೆರೆ ಕೆಲಸ ಏನು ಪ್ರಾರಂಭವಾಗಿದೆ ಅದನ್ನು ನಿಲ್ಲಿಸದೆ ಕಂಪ್ಲೀಟ್ ಮಾಡಿಕೊಡುತ್ತೀರಾ?

ಶ್ರೀ ಎಸ್.ಆರ್. ಬೊಮ್ಮಾಯಿ.—ಅಪ್ಪರ್ ಭದ್ರಾ, ಅಪ್ಪರ್ ತುಂಗಾ ಬಗ್ಗೆ ಒತ್ತಾಯ ಇದೆ ಇದನ್ನು ಮಾಡಬೇಕೆನ್ನುವ ಒತ್ತಾಯ ಇದೆ. ಕೆಲವು ಪ್ರದೇಶದ ರೈತರು ಭದ್ರಾ ಯೋಜನೆಯ ಬಗ್ಗೆ ವಿರೋಧ ಮಾಡುತ್ತಿದ್ದಾರೆ. ಸರಕಾರ ತನಗೆ ದೊರೆಯತಕ್ಕ ನೀರಿನ ಉಪಯೋಗವನ್ನು ಮಾಡಿಕೊಳ್ಳುತ್ತದೆ. ಬಚಾವತ್ ಆಯೋಗದಲ್ಲಿ ನಮ್ಮ ಪಾಲಿನ ನೀರು ಎಷ್ಟು ಅಪ್ಪರ್ ತುಂಗಾ, ಅಪ್ಪರ್ ಭದ್ರಾಕ್ಕೆ ಎಷ್ಟು ಬೇಕಾಗುತ್ತದೆ ಎಂಬುದನ್ನು ಪರಿಶೀಲನೆ ಮಾಡಿ ನಿರ್ಣಯ ತೆಗೆದುಕೊಳ್ಳುತ್ತೇವೆ.

ಶ್ರೀ ಐ.ಬಿ. ಶಂಕರ್.—ಈಗಿರುವ ಡ್ಯಾಮ್‌ಗಳಲ್ಲಿ ನೀರು ತುಂಬಿಲ್ಲ. ೧೨–೧೪ ವರ್ಷವಾದರೂ ಭದ್ರಾ ಡ್ಯಾಂನಲ್ಲಿ ಒಂದೆರಡು ಬಾರಿ ಮಾತ್ರ ನೀರು ತುಂಬಿದೆ. ಈ ಪ್ರಾಜೆಕ್ಟ್ ಅನ್ನು ಏಕೆ ಇಟ್ಟುಕೊಂಡಿದ್ದೀರೋ ಗೊತ್ತಿಲ್ಲ. ಭದ್ರಾ ಡ್ಯಾಂ ಹಾಳು ಬಿದ್ದಿದೆ.

ಶ್ರೀ ಡಿ.ಎ. ಚಿನ್ನಪ್ಪ.—ಬರಪೊಳೆ ಯೋಜನೆ ಸುಮಾರು ೧೦–೧೨ ವರ್ಷಗಳಾದರೂ ಕೂಡ ಹಾಗೇ ಉಳಿದಿದೆ. ಕಳೆದ ಸಲ ಇದನ್ನು ತೆಗೆದುಕೊಳ್ಳತಕ್ಕಂತಹ ಕಾಲದಲ್ಲಿ ಜನರು ತೊಂದರೆ ಮಾಡಿದರು ಎಂದು ಇದನ್ನು ನಿಲ್ಲಿಸಿದ್ದಾರೆ. ಈಗ ಇದನ್ನು ಕೈ ಬಿಟ್ಟಿದ್ದೀರಾ ಇಲ್ಲವೇ ಪುನಃ ಹಾಗೇ ಉಳಿಸಿಕೊಂಡಿದ್ದೀರಾ? ಚಿಕನಾಳಾ ಪ್ರಾಜೆಕ್ಟ್ ಹಾಗೇ ಅರ್ಧದಲ್ಲಿ ಉಳಿದು ಹೋಗಿದೆ. ಅದನ್ನು ಕೂಡಲೇ ತೆಗೆದುಕೊಳ್ಳಬೇಕು.

ಶ್ರೀ ಎಸ್.ಆರ್. ಬೊಮ್ಮಾಯಿ.—ಅದನ್ನು ಬೇಕಾದರೆ ತೆಗೆದುಕೊಳ್ಳೋಣ. ಮತ್ತೊಂದು ವಿಚಾರದಲ್ಲಿ ವಿವಾದವಿದೆ ಅದರ ಬಗ್ಗೆ ಏನೂ ಹೇಳುವುದಕ್ಕೆ ಇಷ್ಟಪಡುವುದಿಲ್ಲ.

ಶ್ರೀ ಎಚ್. ವಿಶ್ವನಾಥ ಪಾಟೀಲ್.—ಗುಲ್ಬರ್ಗಾ ಜಿಲ್ಲೆಯಲ್ಲಿ ಬೆಣ್ಣೆತೊರೆ ಪ್ರಾಜೆಕ್ಟ್, ಅಮರ್ಜಾ ಯೋಜನೆ ಮತ್ತು ಇನ್ನೂ ಬೇರೆ ಬೇರೆ ಯೋಜನೆಗಳು ಏನು ಇವೆ ಅವುಗಳಿಗೆ ಬಜೆಟ್ಟಿನಲ್ಲಿ ಏನು ಹಣವನ್ನು ಇಟ್ಟಿದ್ದೀರಿ ಅಷ್ಟು ಹಣವನ್ನು ಪೂರ್ತಿಯಾಗಿ ಬಿಡುಗಡೆ ಮಾಡಿಲ್ಲ. ಒಂದು ವರ್ಷ ಕೂಡ ಪೂರ್ತಿ ಹಣವನ್ನು ಕೊಟ್ಟಿಲ್ಲ. ಹೋದ ವರ್ಷ ಕೂಡ ಅತಿ ಕಡಿಮೆ ಹಣವನ್ನು ಇದಕ್ಕೆ ಬಿಡುಗಡೆ ಮಾಡಿದ್ದೀರಿ. ಅದರ ಬಗ್ಗೆ ಮಾನ್ಯ ಮಂತ್ರಿಗಳು ಏನೂ ಹೇಳಲಿಲ್ಲ. ಈ ವರ್ಷ ಅಂದರೆ

೧೯೮೮_೮೯ರಲ್ಲಿ ನಾಲ್ಕೂವರೆ ಕೋಟಿ ರೂಪಾಯಿಯನ್ನು ಏನು ಒದಗಿಸಿದ್ದೀರಿ ಅದನ್ನು ಪೂರ್ತಿಯಾಗಿ ಬಿಡುಗಡೆ ಮಾಡುತ್ತೀರಾ? ಎಂಬುದನ್ನು ಸ್ಪಷ್ಟವಾಗಿ ತಿಳಿಸಬೇಕು. ಗುಲ್ಬರ್ಗಾ ಜಿಲ್ಲೆಯಲ್ಲಿ ವಿಶ್ವ ಬ್ಯಾಂಕ್ ನೆರವಿನಿಂದ ಕೆಲವು ಕೆರೆಗಳನ್ನು ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಿದ್ದು ಅದನ್ನು ನಂತರ ಕೈ ಬಿಟ್ಟಿರಿ, ಏಕೆ ಕೈ ಬಿಟ್ಟಿರೋ ಗೊತ್ತಿಲ್ಲ. ನಮ್ಮ ಗುಲ್ಬರ್ಗ ಜಿಲ್ಲೆ ಹಿಂದುಳಿದ ಜಿಲ್ಲೆ. ವಿಶ್ವ ಬ್ಯಾಂಕ್ ನೆರವಿನಿಂದ ಕೆರೆಗಳ ಕಾರ್ಯ ಆಗುತ್ತದೆಂದು ಅಂದುಕೊಂಡಿದ್ದೆವು. ಅದನ್ನು ಯಾವ ರೀತಿಯಾಗಿ ಕಂಪ್ಲೀಟ್ ಮಾಡುತ್ತೀರಿ? ಗಾಜಿಕಟನೂರು, ಅಲೀಪುರ ಕೆರೆಗಳು ಇವೆ. ಗುಲ್ಬರ್ಗ ಜಿಲ್ಲೆಯಲ್ಲಿ ಪರ್‌ಕೊಲೇಷನ್ ಟ್ಯಾಂಕ್ ಕಟ್ಟುವುದಕ್ಕೆ ದುಡ್ಡು ಕೊಡಬೇಕೆಂದು ನಾನು ಕೇಳಿದ್ದೆ ಅದರ ಬಗ್ಗೆ ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಎಸ್.ಆರ್. ಬೊಮ್ಮಾಯಿ.—ಈ ವರ್ಷ ಬೆಣ್ಣೆತೊರೆ ಯೋಜನೆಗೆ ಏನು ಹಣವನ್ನು ಒದಗಿಸಿದೆ ಅದನ್ನು ಖರ್ಚು ಮಾಡುತ್ತೇವೆ. ನಾನು ವಿವರಗಳಿಗೆ ಹೋಗಲಿಲ್ಲ. ಹೈದರಾಬಾದ್ ಕರ್ನಾಟಕಕ್ಕೆ ಹೆಚ್ಚಿನ ಹಣವನ್ನು ಖರ್ಚು ಮಾಡಿಲ್ಲವೆಂದು ಹೇಳುತ್ತಿದ್ದಾರೆ. ಅದರ ಬಗ್ಗೆ ಹೇಳುತ್ತೇನೆ. ಈಗ ನೀರಾವರಿ ಇಲಾಖೆಗೆ ಸಂಬಂಧಪಟ್ಟಂತೆ ಮಾತ್ರ ಹೇಳುತ್ತೇನೆ. ಆ ಬಗ್ಗೆ ಕಂದಾಯ ಇಲಾಖೆಯ ಮೇಲೆ ಚರ್ಚೆಗೆ ಬಂದಾಗ ಉತ್ತರ ಕೊಡುತ್ತೇನೆ. ಹೈದರಾಬಾದ್ ಕರ್ನಾಟಕದಲ್ಲಿ ೫ ವರ್ಷದಲ್ಲಿ ಇರಿಗೇಷನ್‌ಗೆ ಖರ್ಚು ಮಾಡಿದ್ದು ೩೨೬.೫೮ ಕೋಟಿ, ಬಾಂಬೆ ಕರ್ನಾಟಕದಲ್ಲಿ ೧೯೮.೨೪ ಲಕ್ಷ ಓಲ್ಡ್ ಮೈಸೂರ್‌ಗೆ ೩೨೬ ಲಕ್ಷ ಹೈದರಾಬಾದ್ ಕರ್ನಾಟಕ ೧೭೭.೫೭ ಲಕ್ಷ, ಕೊಡಗು, ದಕ್ಷಿಣ ಕನ್ನಡ ಜಿಲ್ಲೆಗೆ ೩ ಕೋಟಿ ೩೦ ಲಕ್ಷ. ಇದು ಈ ಅವಧಿಯಲ್ಲಿ ಖರ್ಚಾದಂತಹ ಹಣ. ಬೆಣ್ಣೆತೊರೆ ಯೋಜನೆಗೆ ಏನು ಹಣವನ್ನು ಇಟ್ಟಿದ್ದೇವೆ ಅದನ್ನು ಖರ್ಚು ಮಾಡುತ್ತೇವೆ. ಇನ್ನು ಪರ್‌ಕೊಲೇಷನ್ ಟ್ಯಾಂಕ್ ಬಗ್ಗೆ ಹೇಳಿದ್ದಾರೆ ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಪಟಮಕ್ಕಿ ರತ್ನಾಕರ್.—ಮಲೆನಾಡಿನ ಕೆರೆಗಳು ದುರಸ್ತಿಯಾಗದೇ ಹಾಗೇ ೧೦ ವರ್ಷಗಳು ಕಳೆದಿದೆ. ಇದು ತಮಗೆಲ್ಲಾ ಗೊತ್ತಿರತಕ್ಕಂತಹ ವಿಚಾರ. ನಿಮ್ಮ ಸರಕಾರ ಬಂದ ಮೇಲೆ ಕೆರೆಗಳು ಕೋಡಿ ಬಿದ್ದಿದೆ. ಅಭಿವೃದ್ಧಿಯಾಗಿಲ್ಲ. ನೀರನ್ನು ಶೇಖರಣೆ ಮಾಡುವುದಕ್ಕೆ ಆ ನೀರನ್ನು ಉಪಯೋಗಿಸುವುದಕ್ಕಾಗುತ್ತಿಲ್ಲ. ಇತ್ತೀಚೆಗೆ ವಾಟರ್ ಸೆಸ್ ಅನ್ನು ವಸೂಲು ಮಾಡತಕ್ಕಂತಹ ನೋಟೀಸುಗಳನ್ನು ತಮ್ಮ ಇಲಾಖೆಯಿಂದ ರೈತರಿಗೆ ಬಂದಿದೆ. ಅದು ಜಾರಿಯಾಗಿದೆ. ಇದರ ಬಗ್ಗೆ ಮಂತ್ರಿಗಳು ಹೇಳಿಕೆ ನೀಡಬೇಕು.

ಶ್ರೀ ಎಸ್.ಆರ್. ಬೊಮ್ಮಾಯಿ.—ಎಲ್ಲಿ ನೀರು ಕೊಟ್ಟಿಲ್ಲವೋ ಅಲ್ಲಿ ತೆರಿಗೆಯನ್ನು ವಸೂಲು ಮಾಡುವುದಕ್ಕೆ ಕಾನೂನು ಪ್ರಕಾರ ಬರುವುದಿಲ್ಲ. ಆ ಬಗ್ಗೆ ಏನಾದರೂ ವಸೂಲು ಮಾಡಿದ್ದರೆ ಅದರ ಬಗ್ಗೆ ಆದೇಶ ಕೊಡುತ್ತೇನೆ.

ಶ್ರೀ ಪಟಮಕ್ಕಿ ರತ್ನಾಕರ್.—ಅಲ್ಲಿ ಮಳೇನೇ ಬಂದಿಲ್ಲ.

ಶ್ರೀ ಎಸ್.ಆರ್. ಬೊಮ್ಮಾಯಿ.—ನಿಮ್ಮ ತೀರ್ಥಹಳ್ಳಿಯಲ್ಲಿ ಮಳೆ ಬಂದಿಲ್ಲ ಎಂದು ಹೇಳಿದರೆ ಕಷ್ಟವಾದೀತು. ಕಡಿಮೆ ಮಳೆ ಹೋದ ವರ್ಷ ಆಗಿದೆ. ಕೆರೆಯಿಂದ ನೀರನ್ನು ತೆಗೆದುಕೊಂಡಿದ್ದರೆ ತೆರಿಗೆ ಕೊಡಲಿ. ನೀರನ್ನು ಪಡೆದುಕೊಂಡಿಲ್ಲ ಎಂದು ಹೇಳಿದರೆ ತೆರಿಗೆಯನ್ನು ಕೊಡುವುದು ಬೇಡ. ಯಾರು ಕೆರೆಯಿಂದ ನೀರನ್ನು ಪಡೆದುಕೊಂಡಿದ್ದಾರೆ ಅವರು ತೆರಿಗೆಯನ್ನು ಕೊಡಲೇಬೇಕಾಗುತ್ತದೆ. ಕೆರೆಯಲ್ಲಿ ನೀರು ಇದೆ. ಇದರ ಬಗ್ಗೆ ಸ್ಪಷ್ಟವಾದ ಆದೇಶವನ್ನು ಕೊಡುತ್ತೇನೆ.

ಶ್ರೀ ಪಟಮಕ್ಕಿ ರತ್ನಾಕರ್.—ಈ ರೀತಿಯಾಗಿ ನಿಮ್ಮ ಇಲಾಖೆಯವರು ಒಂದು ಸೆಸ್‌ನ್ನು ಮಾಡಿಲ್ಲ. ಸರಿಯಾದ ರೀತಿಯಲ್ಲಿ ವಾಟರ್ ರೇಟನ್ನು ಫಿಕ್ಸ್ ಮಾಡಿಲ್ಲ, ಯಾರು ನೀರು ಪಡೆದು ಕೊಂಡಿದ್ದಾರೆ ಯಾರು ಪಡೆದುಕೊಂಡಿಲ್ಲ ಎನ್ನುವ ಬಗ್ಗೆ ಪರಿಶೀಲನೆ ಮಾಡಿಲ್ಲ. ಅಲ್ಲಿ ಮಳೆ ಕೂಡಾ ಇಲ್ಲ. ನಿಮ್ಮ ಡಿಸ್ಟ್ರಿಕ್ಟ್ ಬರಗಾಲದ ಡಿಸ್ಟ್ರಿಕ್ಟ್ ಎಂದೇನೋ ಘೋಷಣೆಯನ್ನು ಮಾಡಿದ್ದೀರಿ. ಕೊನೆಯ ಪಕ್ಷ ಮೂರು ವರ್ಷದ ಮಟ್ಟಿಗಾದರೂ ವಾಟರ್ ಸೆಸ್‌ನ್ನು ಮನ್ನಾ ಮಾಡಿದರೆ ಅಲ್ಲಿ ಬಡವರಿಗೆ ಅನುಕೂಲವಾಗುತ್ತದೆ ಎಂದು ನನ್ನ ಭಾವನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ನೀರು ಪಡೆದುಕೊಂಡಿದ್ದರೆ ತೆರಿಗೆಯನ್ನು ಕೊಡಬೇಕಾಗುತ್ತದೆ. ನೀರು ಪಡೆದುಕೊಂಡಿಲ್ಲ ಎಂದರೆ ತೆರಿಗೆಯನ್ನು ಕೊಡುವುದು ಬೇಡ. ಅಲ್ಲಿ ಮನ್ನಾ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಜಿ. ರಾಜುಗೌಡ.—ಅಧ್ಯಕ್ಷರೇ, ನಾನು ಸರ್ಕಾರಕ್ಕೆ ಒಂದು ಸಲಹೆಯನ್ನು ಕೊಟ್ಟಿದ್ದೆ. ಪ್ರತಿ ವರ್ಷ ಯೋಜನಾ ವೆಚ್ಚದಲ್ಲಿ ಕನಿಷ್ಟ ಪಕ್ಷ ೪೦ ರಷ್ಟಾದರೂ ನೀರಾವರಿಗಾಗಿ ಮತ್ತು ಪ್ರವಾಹ ನಿಯಂತ್ರಣಕ್ಕಾಗಿ ಮೀಸಲಿಡಬೇಕು ಎಂದು ಸಲಹೆ ಕೊಟ್ಟಿದ್ದೆ. ಇದರ ಬಗ್ಗೆ ತಾವು ಏನು ಹೇಳಲಿಲ್ಲ. ಎರಡನೆಯದಾಗಿ, ನನ್ನ ತಾಲ್ಲೂಕಿನಲ್ಲಿ ಈಗಾಗಲೇ ನೀರಾವರಿಗಾಗಿ ೧೫ ಕೋಟಿ ರೂಪಾಯಿ ಖರ್ಚು ಮಾಡಿ ಸಣ್ಣ ನೀರಾವರಿ, ಮಧ್ಯಮ ನೀರಾವರಿ, ಲಿಫ್ಟ್ ಇರಿಗೇಷನ್ ಮಾಡಿದರೂ ಕೂಡಾ ಒಂದು ಹೆಕ್ಟೇರ್ ಪ್ರದೇಶ ಕೂಡಾ ನೀರಾವರಿಗೆ ಒಳಪಡಲಿಲ್ಲ. ಮೂರನೆಯದಾಗಿ, ೧೯೭೭ರಲ್ಲಿ ಮಾನ್ಯ ದೇವರಾಜ ಅರಸ್ ಅವರು ಮುಡುಕುತೊರೆ ಯೋಜನೆ ಜಲಾಶಯಕ್ಕೆ ಅಸ್ತಿಭಾರವನ್ನು ಹಾಕಿದ್ದರು. ಅಲ್ಲಿ ಇನ್ನೂ ಟೆಂಡರ್ ಕರೆದಿಲ್ಲ. ನಾಲ್ಕನೆಯದು ಕಬಿನಿಯಿಂದ ತಾಲ್ಲೂಕಿನಲ್ಲಿ ಮೂವತ್ತು ಸಾವಿರ ಎಕರೆ ನೀರಾವರಿಯಾಗುತ್ತದೆ, ೮೩–೮೪ರಲ್ಲಿ ಟೈಮ್ ಬೌಂಡ್ ಪ್ರೋಗ್ರಾಮ್ ಕೊಡಬೇಕು ಎಂದು ಇದೆ. ಈ ತನಕ ಒಂದು ಎಕರೆಗೂ ಕೂಡಾ ಕೊಟ್ಟಿಲ್ಲ. ದಯಮಾಡಿ ಇದರ ಬಗ್ಗೆ ಹೇಳಬೇಕು.

ಶ್ರೀ ಎಸ್ ಆರ್. ಬೊಮ್ಮಾಯಿ.—ತಾವು ಕೇಳುವಂಥ ಪ್ರಶ್ನೆ ಅಂದರೆ ಏನೇನು ಹಣವನ್ನು ಒದಗಿಸಿದ್ದೇವೆಯೋ ಅವುಗಳನ್ನು ಖರ್ಚು ಮಾಡುತ್ತಿದ್ದೇವೆ. ಹಣ ಒದಗಿಸದಿದ್ದರೆ ಒದಗಿಸತಕ್ಕಂಥ ಪ್ರಯತ್ನವನ್ನು ಮಾಡುತ್ತಿದ್ದೇವೆ.

ಶ್ರೀ ಬಸವರಾಜ ಪಾಟೀಲ್.—ಅಧ್ಯಕ್ಷರೇ. ಬೀದರ್ ಜಿಲ್ಲೆಯಲ್ಲಿ ಈ ಕಾರಂಜಾ ಪ್ರಾಜೆಕ್ಟ್ ಕೆಲಸ ಮುಗಿಯುತ್ತಾ ಬಂದಿದೆ. ಅಲ್ಲಿ ಒಂದು ಪ್ರಾಬ್ಲಮ್ ಏನು ಬಂದಿದೆ ಎಂದರೆ ಈ ವರ್ಷ ಗೇಟನ್ನು ಬಂದ್ ಮಾಡಿ ನೀರು ನಿಲ್ಲಿಸಬೇಕು ಎಂದು ನಿರ್ಣಯ ಮಾಡಿರುವುದರಿಂದ ಅಲ್ಲಿ ಕೆಲವು ಹಳ್ಳಿಗಳು ಮುಳುಗಡೆಯಾಗಿವೆ, ಆ ಹಳ್ಳಿಗಳಿಗೆ ಜಾಗವನ್ನು ಕೊಟ್ಟಿಲ್ಲ. ಅಲ್ಲಿ ಅವರಿಗೆ ಕುಡಿಯುವ ನೀರು ರೋಡ್, ಹಾಗೂ ಯಾವ ರೀತಿ ಅನುಕೂಲ ಕೂಡಾ ಮಾಡಿಕೊಟ್ಟಿಲ್ಲ. ಅಲ್ಲಿ ಎಂಜಿನಿಯರ್ಸ್ ಏನು ಮಾಡಿದ್ದಾರೆ ಅಂದರೆ ಕೆಲವು ಪಾಂಪ್ಲೆಟ್ಸ್ ಹೊರಡಿಸಿ ಸರ್ಕಾರ ಜನರಿಗೆಲ್ಲಾ ಸವಲತ್ತುಗಳನ್ನು ಒದಗಿಸಿದ್ದೇವೆ, ಆದ್ದರಿಂದ ಆ ಹಳ್ಳಿಯೆಲ್ಲಾ ಖಾಲಿ ಮಾಡಬೇಕು ಎಂದು ತಿಳಿಸುತ್ತಿದ್ದಾರೆ. ಹಾಗೆ ಮುಳುಗಡೆ ಕಮಿಟಿಯಲ್ಲಿ ಡೆಪ್ಯುಟಿ ಕಮಿಷನರ್ ಅಧ್ಯಕ್ಷರು. ಎಕ್ಸಿಕ್ಯೂಟಿವ್ ಇಂಜಿನಿಯರ್ ಹಾಗೂ ನಾವೆಲ್ಲರೂ ಸದಸ್ಯರು ಇದ್ದೇವೆ. ಅಲ್ಲಿ ಪರಿಶೀಲನೆ ಮಾಡಿ ನೋಡಿದಾಗ ಯಾವ ರೈತರಿಗೂ ಅಲ್ಲಿ ಅನುಕೂಲವಾಗಿಲ್ಲ. ಮುಳುಗಡೆ ಆಗಿರತಕ್ಕಂಥ ಜನರಿಗೆ ಯಾವ ಸವಲತ್ತುಗಳೂ ಕೂಡಾ ಕೊಟ್ಟಿಲ್ಲ. ಇದರ ಬಗ್ಗೆ ಒಂದು ರೆಸಲ್ಯೂಷನ್ ಮಾಡಿದ್ದೇವೆ ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಒಂದು ರಿಪೋರ್ಟನ್ನು ಕಳುಹಿಸುತ್ತೇವೆಂದು, ಈ ಕಮಿಟಿಯಲ್ಲಿ ಆಶ್ವಾಸನೆಯನ್ನು ಕೂಡಾ ಕೊಟ್ಟಿದ್ದರು. ಆ ಜಿಲ್ಲಾಧಿಕಾರಿಗಳಿಂದ ಸರ್ಕಾರಕ್ಕೆ ರಿಪೋರ್ಟ್ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ, ತಾವು ಯಾರಿಂದಲಾದರೂ ಎನ್‌ಕ್ವೈರಿ ಮಾಡಿಸಿ ಅಧಿಕಾರಿಗಳು ತಪ್ಪು ರಿಪೋರ್ಟ್‌ನ್ನು ಕೊಟ್ಟಿದ್ದರೆ ಕ್ರಮ ತೆಗೆದುಕೊಳ್ಳಬೇಕು. ಸುದೈವದಿಂದ ರೆವಿನ್ಯೂ ಮಿನಿಸ್ಟರ್ ತಾವು ಇದ್ದೀರಿ. ಎರಡು ಮೂರು ಹಳ್ಳಿಯವರಿಗೆ ಯಾವ ಸ್ಥಳವನ್ನು ಕೊಟ್ಟಿಲ್ಲ, ಯಾವ ಜಾಗವನ್ನೂ ಕೂಡಾ ಇದುವರೆಗೆ ತೋರಿಸಿಲ್ಲ. ಇಂಥ ಸಮಯದಲ್ಲಿ ಅವರನ್ನು ಅಲ್ಲಿಂದ ಬಿಟ್ಟು ಹೋಗು ಅಂದರೆ ಅವರಿಗೆ ಬಹಳ ತೊಂದರೆಯಾಗುತ್ತದೆ. ಎಕ್ಸಿಕ್ಯೂಟಿವ್ ಇಂಜಿನಿಯರ್ ನಮಗೆ ಪ್ರಾಮಿಸ್ ಕೂಡಾ ಮಾಡಿದ್ದಾರೆ. ಈ ವರ್ಷ ಗೇಟ್ ಮುಚ್ಚುವುದಿಲ್ಲ ಇದರಿಂದ ಒಂದೇ ಊರಿಗೆ ಮಾತ್ರ ತೊಂದರೆಯಾಗುತ್ತದೆ, ಉಳಿದಂಥ ಜನರಿಗೆ ತೊಂದರೆಯಾಗುವುದಿಲ್ಲ ಎಂದು ಕಮಿಟಿಯಲ್ಲಿ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ನಾವೂಕೂಡಾ ಇದರ ಬಗ್ಗೆ ಎಷ್ಟೋಸಲ ಹೋರಾಡಿದ್ದೇವೆ. ಬೇಗ ಬೇಗ ಆಗಬೇಕು ಎಂದು ಹೇಳಿ. ಅಲ್ಲಿರತಕ್ಕಂಥ ಜನರಿಗೆ ಕೂಡಾ ತೊಂದರೆಯಾಗಬಾರದು. ಮಳೆಗಾಲದಲ್ಲಿ ಅವರನ್ನು ಖಾಲಿ ಮಾಡಿ ಎಂದು ಹೇಳಿದರೆ ಆ ಜನರಿಗೆ ತೊಂದರೆಯಾಗುತ್ತದೆ. ಇದರ ಬಗ್ಗೆ ಸಚಿವರು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಕಮಿಟಿ ಸಭೆ ಸೇರಿದೆ. ಡೆಪ್ಯುಟಿ ಕಮಿಷನರ್ ರಿಪೋರ್ಟ್ ಕಳುಹಿಸಿದ್ದಾರೆ ಆ ರಿಪೋರ್ಟನ್ನು ಪರಿಶೀಲನೆ ಮಾಡಿ ಇದರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ ಆ ಜನರಿಗೆ ಬೇರೆ ವ್ಯವಸ್ಥೆ ಮಾಡದೇ ಅವರನ್ನು ಊರು ಬಿಡಿಸುವುದು ಸರಿಯಾದುದಲ್ಲ. ಅವರಿಗೆ ಬೇರೆ ವ್ಯವಸ್ಥೆಯನ್ನು ಮಾಡಿಕೊಡುತ್ತೇವೆ ಮತ್ತು ನೀರನ್ನು ಆದಷ್ಟು ಬೇಗ ಕೊಡಿಸುತ್ತೇವೆ.

ಶ್ರೀ ಬಸವರಾಜ್ ಪಾಟೀಲ್.—ಅಧ್ಯಕ್ಷರೇ,

ಅಧ್ಯಕ್ಷರು.—ಅವರು ಹೇಳಿದಂಥ ಉತ್ತರ ತಿಳಿಯಲಿಲ್ಲವೇ ?

ಶ್ರೀ ಬಸವರಾಜ್ ಪಾಟೀಲ್.—ಯಾರಿಂದಲಾದರೂ ಎನ್‌ಕ್ವೈರಿ ಮಾಡಿಸಿ ನೋಡಿ. ಮೂರು ನಾಲ್ಕು ಹಳ್ಳಿಗಳವರಿಗೆ ಸ್ಥಳ ಕೊಟ್ಟಿಲ್ಲ. ಸ್ಥಳವನ್ನು ಅವರಿಗೆ ಕೊಡದೇ ಖಾಲಿ ಮಾಡಿ ಎಂದು ಹೇಳುವುದು ಯಾವ ನ್ಯಾಯ ? ಇದರ ಬಗ್ಗೆ ಮಾನ್ಯ ಮಂತ್ರಿಗಳು ಆಶ್ವಾಸನೆಯನ್ನು ಕೊಡಬೇಕು.

ಶ್ರೀ ಎಸ್.ಆರ್. ಬೊಮ್ಮಾಯಿ.—ಅಲ್ಲಿ ಆಲ್ಟರ್‌ನೇಟೀವ್ ಅರೇಂಜ್‌ಮೆಂಟ್ ಇಲ್ಲದೆ ಅವರನ್ನು ಎವಿಕ್ ಮಾಡಿಸುವುದಿಲ್ಲ. ಪೂರಾ ನೀರು ತುಂಬುವುದಿಲ್ಲ, ಸ್ವಲ್ಪ ನೀರನ್ನು ತುಂಬಿ ಇಡುತ್ತೇವೆ. ಇದರ ಬಗ್ಗೆ ಒಂದು ಪೂರ್ಣವಾದ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಬಿ.ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ, ಮೊನ್ನೆ ನಾನು ವಿಷಯ ಪ್ರಸ್ತಾಪ ಮಾಡುವಾಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೆಂದ ಪ್ರದೇಶಗಳು, ಕಣಿವೆ ಪ್ರದೇಶಗಳನ್ನು ಮರಳು ಪ್ರದೇಶಗಳು ಇತರ ಎಲ್ಲಾ ಪ್ರದೇಶಗಳನ್ನು ಕೃಷಿ ಪ್ರದೇಶಗಳೆಂದು ಮಾಡಿದ್ದಾರೆ, ಇದರಿಂದ ಕೃಷಿಕಾರರಿಗೆ ತೊಂದರೆ ಆಗಿದೆ, ಕೃಷಿ ಭೂಮಿಯನ್ನು ಕನ್‌ವರ್ಷನ್ ಮಾಡಬೇಕು ಎಂದು ಕೇಳಿದ್ದೆ, ಹಾಗೂ ಜನ ಸಂಪರ್ಕ ವನ್ನು ಕಲ್ಪಿಸುವ ಬಗ್ಗೆ ಕೇಳಿದ್ದೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಅದನ್ನು ರೆವಿನ್ಯೂ ಇಲಾಖೆಯ ಚರ್ಚೆಗೆ ಬಂದಾಗ ಕೇಳಿ.

ಅಧ್ಯಕ್ಷರು.—ನಾನು ಪ್ರಸ್ತಾಪವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವವೇನೆಂದರೆ,

"೩೧-೩-೧೯೮೯ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆ ಸಂಖ್ಯೆ ೩೫, ೩೬ಗೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಭರಿಸಲು ಸರಕಾರಕ್ಕೆ ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗುಗಳನ್ನು ಮಂಜೂರು ಮಾಡಬೇಕು".

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ.)

ಅಭಿಯಾಚನೆ ಕ್ರಮಾಂಕ 35, ಸಣ್ಣ ನೀರಾವರಿ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೯ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಣ್ಣ ನೀರಾವರಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ. ರಾಜಸ್ವ ಖಾತೆಯಲ್ಲಿ ೩೬.೨೧.೧೪.೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨೪,೪೨,೯೨,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು".

ಅಭಿಯಾಚನೆ ಕ್ರಮಾಂಕ 36, ನೀರಾವರಿ, ಜಲ ಸಂಚಾರ, ಒಳಚರಂಡಿ ವ್ಯವಸ್ಥೆ ಮತ್ತು ಪ್ರವಾಹ ನಿಯಂತ್ರಣ ಯೋಜನೆಗಳು

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೯ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನೀರಾವರಿ, ಜಲಸಂಚಾರ, ಒಳ ಚರಂಡಿ ವ್ಯವಸ್ಥೆ ಮತ್ತು ಪ್ರವಾಹ ನಿಯಂತ್ರಣ ಯೋಜನೆಗಳು, ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು

ಸರಕಾರಕ್ಕೆ, ರಾಜಸ್ವ ಖಾತೆಯಲ್ಲಿ ೧,೭೬,೮೦,೮೬,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨.೪೮,೫೪,೦೨,೦೨೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು ".

ಅಧ್ಯಕ್ಷರು.—ಚರ್ಚೆಯನ್ನು ನಾಳೆಗೆ ಮುಂದೂಡೋಣ. ಈಗ ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅವರಿಗೂ ಸ್ವಲ್ಪ ರೆಸ್ಟ್ ಸಿಗುತ್ತದೆ, ನಾಳೆ ಚರ್ಚೆ ಮುಂದುವರಿಯಲಿ.

ಅಧ್ಯಕ್ಷರು.—ನಾಳೆ ಒಂಬತ್ತು ಗಂಟೆಗೆ ಉತ್ತರ ಕೊಡಿಸೋಣವೋ ಅಥವಾ ಹತ್ತು ಗಂಟೆಗೆ ಕೊಡಿಸೋಣವೋ ?

ಶ್ರೀ ಎಸ್. ಆರ್ ಬೊಮ್ಮಾಯಿ.—ನಾಳೆ ಬೆಳಿಗ್ಗೆ ಪಾರ್ಟಿ ಮೀಟಿಂಗ್ ಇದೆ, ೧೧ ಗಂಟೆಗೆ ಚರ್ಚೆ ಮುಂದುವರಿಯಲಿ.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ನೀಡಲಾದ ಬಾಯಿಮಾತಿನ ಉತ್ತರಗಳು

ಅಧ್ಯಕ್ಷರು.—ಪ್ರಶ್ನೆ ನಂ. ೫೫೨ (೧೮೫೫)ಕ್ಕೆ ಸಮಯ ಕೇಳಿದ್ದಾರೆ, ಅದನ್ನು ಮುಂದಕ್ಕೆ ಹಾಕಿದೆ.

ಹುಬ್ಬಳ್ಳಿ-ಧಾರವಾಡ ಮಹಾನಗರಸಭೆ ಸದಸ್ಯರು ನಿವೇಶನ ದುರುಪಯೋಗ ಮಾಡಿದ ಬಗ್ಗೆ.

೨೦೧೮ ಶ್ರೀ ಬಿ. ಎ. ಉಪ್ಪಿನ್ (ಕುಂದಗೋಳ್).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಸದಸ್ಯರು ತಮ್ಮ ಅಧಿಕಾರ ದುರುಪಯೋಗಪಡಿಸಿಕೊಂಡು ಖಾಲಿ ನಿವೇಶನ ಪಡೆದು ಅಕ್ರಮವಾಗಿ ಕಟ್ಟಡಗಳನ್ನು ಕಟ್ಟಿಸಿಕೊಂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಇವರ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಬಿ. ಎ. ಉಪ್ಪಿನ್.—ಮಾನ್ಯ ಅಧ್ಯಕ್ಷರೇ, ಸಚಿವರ ಉತ್ತರವನ್ನು ಕೇಳಿ ಆಳುವ ಪಕ್ಷದ ಸದಸ್ಯನಾದ ನನಗೂ ನಾಚಿಕೆ ಆಗಿ ತಲೆ ತಗ್ಗಿಸುವಂತೆ ಆಗಿದೆ. ಇಂತಹ ಹಾರಿಕೆ ಉತ್ತರವನ್ನು ಕೇಳಿ, ಕೇಳಿ, ನಾನು ಪ್ರಶ್ನೆಯನ್ನು ಕೇಳುವುದೇ ಬೇಡ ಎಂದು ಸುಮ್ಮನೆ ಆಗಿದ್ದೆ. ಆದರೆ ತಾವು ನನಗೆ ಪತ್ರ ಬರೆದು ಪ್ರಶ್ನೆಗಳನ್ನು ಕೇಳಿರಿ ಎಂದು ಸಮಾಜದಲ್ಲಿ ಆಗತಕ್ಕ ಹುಳುಕುಗಳನ್ನು ಎತ್ತಿ ತೋರಿಸುವುದಕ್ಕೆ ಪ್ರಶ್ನೆಗಳನ್ನು ಕೇಳಿ ಎಂದು ಕರ್ತವ್ಯಗಳ ಬಗ್ಗೆ ತಾವು ಜ್ಞಾಪಕ ಮಾಡಿಕೊಟ್ಟಿದ್ದೀರಿ. ನಾವು ಪ್ರಶ್ನೆಗಳನ್ನು ಕೇಳಿದರೆ ಅದಕ್ಕೆ ಹಾರಿಕೆ ಉತ್ತರವನ್ನು ಕೊಡುತ್ತಾರೆ ಸುಮಾರು ೧೪ ಜನ ಕಾರ್ಪೋರೇಟರ್